ಗುರುವಾರ, ಜುಲೈ 24, 2025| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಇನ್ಫೊಸಿಸ್ ಫಲಿತಾಂಶ

ಐ.ಟಿ. ಸೇವಾ ಕ್ಷೇತ್ರದ ದೈತ್ಯ ಇನ್ಫೊಸಿಸ್ ಲಿಮಿಟೆಡ್, ಜೂನ್ ತ್ರೈಮಾಸಿಕದಲ್ಲಿ ಮಾರುಕಟ್ಟೆ ತಜ್ಞರ ಅಂದಾಜನ್ನು ಮೀರಿದ ಹಣಕಾಸು ಫಲಿತಾಂಶ ಪ್ರಕಟಿಸಿದೆ.



ವೀನಸ್ ಪುನರಾಗಮನ

ಏಳು ಗ್ರ್ಯಾನ್‌ಸ್ಲಾಮ್ ಸಿಂಗಲ್ಸ್ ಪ್ರಶಸ್ತಿ ಗೆದ್ದಿರುವ ಅಮೆರಿಕದ 45 ವರ್ಷ ವಯಸ್ಸಿನ ಆಟಗಾರ್ತಿ ವೀನಸ್ ವಿಲಿಯಮ್ಸ್ ಅವರು 16 ತಿಂಗಳ ನಂತರ ಸ್ಪರ್ಧಾತ್ಮಕ ಟೆನಿಸ್‌ಗೆ ಮರಳಿದರು. ಡಬ್ಲ್ಯುಟಿಎ ಡಿಸಿ ಓಪನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನ ಪಂದ್ಯ ಗೆದ್ದರು





The brand names / logos shown herein are registered/proprietary trademarks of Abaran Timeless Jewellery Private Limited.

abaran TIMELESS JEWELLERY · ABHARAN® · ABHARAN 1935 · 90 YEARS OF ABHARAN · abaran FOUNDATION

MADHUKAR S KAMATH GROUP

M.G. ROAD: 45, Residency Cross Road, M. G. Road, Near Mayo Hall, Bengaluru – 560025, India. Phone: +91 80 25328600/01/02
RAJAJINAGAR: 192, West of Chord Road, Mahalaxmi Layout, Opp. ISKCON, Bengaluru – 560086, India. Phone: +91 80 2359 8600 / 2359 8888
J.P. NAGAR: 9, 15th Cross, 5th Phase, J.P. Nagar. Dr. Puneeth Rajkumar Road, Bengaluru – 560 078, India. Phone: +91 80 2990 8600 / 01

ಚಿಟಿಕೆ ಸುದ್ದಿ

ಎಸ್‌ಎಸ್‌ಎಲ್‌ಸಿ 42,085 ವಿದ್ಯಾರ್ಥಿಗಳು ಉತ್ತೀರ್ಣ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ–3 ಫಲಿತಾಂಶ ಬುಧವಾರ ಪ್ರಕಟವಾಗಿದ್ದು, 42,085 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಮೊದಲ ಮತ್ತು ಎರಡನೇ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಹಾಗೂ ಖಾಸಗಿಯಾಗಿ 2.09 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಪರೀಕ್ಷೆ ಉತ್ತಮಪಡಿಸಿಕೊಳ್ಳಲು ಮತ್ತೆ ಪರೀಕ್ಷೆ ಬರೆದಿದ್ದ 1,455 ವಿದ್ಯಾರ್ಥಿಗಳಲ್ಲಿ 455 ಮಂದಿ ಎರಡೂ ಪರೀಕ್ಷೆಗಳಿಗಿಂತ ಹೆಚ್ಚಿನ ಅಂಕ ಪಡೆದಿದ್ದಾರೆ.


ಕನ್ನಡ ಭಾಷಾ ಪರೀಕ್ಷೆ ಬರೆದಿದ್ದ 1.25 ಲಕ್ಷ ವಿದ್ಯಾರ್ಥಿಗಳಲ್ಲಿ 24,453, ಆಂಗ್ಲ ಭಾಷೆಯ ಪರೀಕ್ಷೆ ಬರೆದಿದ್ದ 47,360 ವಿದ್ಯಾರ್ಥಿಗಳಲ್ಲಿ 11,922 ಮಂದಿ ತೇರ್ಗಡೆಯಾಗಿದ್ದಾರೆ. ಸರ್ಕಾರಿ ಶಾಲೆಯ 16,363 ವಿದ್ಯಾರ್ಥಿಗಳು ಮೂರನೇ ಪ್ರಯತ್ನದಲ್ಲಿ ಯಶಸ್ಸು ಕಂಡಿದ್ದಾರೆ.

ಬ್ಯಾರಿ ಅಕಾಡೆಮಿ ಮೂವರಿಗೆ ಪ್ರಶಸ್ತಿ

ಮಂಗಳೂರು: ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಕೊಡಮಾಡುವ 2024ನೇ ಸಾಲಿನ 'ಗೌರವ ಪ್ರಶಸ್ತಿ'ಗೆ ಬೆಂಗಳೂರಿನ ಮಕ್ಸೂದ್ ಅಹ್ಮದ್ ಮೂಲ್ಕಿ (ಭಾಷೆ ಮತ್ತು ಸಂಘಟನೆ), ಕವಿ ಮತ್ತು ಬರಹಗಾರ ಹೈದರ್ ಅಲಿ ಕಾಟಿಪಳ್ಳ (ಸಾಹಿತ್ಯ) ಹಾಗೂ ಬ್ಯಾರಿ ಗಾಯಕ, ಕವಿ ಪಿ.ಎಂ. ಹಸನಬ್ಬ ಮೂಡುಬಿದಿರೆ (ಸಂಸ್ಕೃತಿ ಮತ್ತು ಕಲೆ) ಆಯ್ಕೆಯಾಗಿದ್ದಾರೆ.


ಮಕ್ಸೂದ್ ಅಹ್ಮದ್


ಹೈದರ್ ಅಲಿ


ಪಿ.ಎಂ. ಹಸನಬ್ಬ

ಪ್ರಶಸ್ತಿ ತಲಾ ₹50 ಸಾವಿರ ನಗದು, ಫಲಕ ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಸಮಾರಂಭ ಆ. 10ರಂದು ಮೈಸೂರಿನಲ್ಲಿ ನಡೆಯಲಿದೆ ಎಂದು ಅಕಾಡೆಮಿ ಅಧ್ಯಕ್ಷ ಉಮರ್ ಯು.ಎಚ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಖೋಟಾ ನೋಟು ವಶ: ನಾಲ್ವರ ಬಂಧನ

ದಾವಣಗೆರೆ: ಜಿಲ್ಲೆಯಲ್ಲಿ ಖೋಟಾ ನೋಟು ಚಲಾವಣೆಗೆ ಯತ್ನಿಸುತ್ತಿದ್ದ ನಾಲ್ವರನ್ನು ಬಂಧಿಸಿರುವ ಪೊಲೀಸರು, ₹500 ಹಾಗೂ ₹200 ಮುಖಬೆಲೆಯ, ಒಟ್ಟು ₹3.75 ಲಕ್ಷ ಮೌಲ್ಯ ತೋರಿಸುವ ಖೋಟಾ ನೋಟು ವಶಪಡಿಸಿಕೊಂಡಿದ್ದಾರೆ.

ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನ ನಡುವಿನ ತಾಂಡಾ ನಿವಾಸಿ ಸಂತೋಷಕುಮಾರ, ಕೊಟ್ಟೂರು ತಾಲ್ಲೂಕಿನ ಬೇವೂರು ಗ್ರಾಮದ ನಿವಾಸಿಗಳಾದ ವೀರೇಶ ಬಿ.ಪಿ., ಹನುಮಂತಪ್ಪ ಹಾಗೂ ದಾವಣಗೆರೆ ತಾಲ್ಲೂಕಿನ ಕುಕ್ಕವಾಡ ಗ್ರಾಮದ ಕುಬೇರಪ್ಪ ಬಂಧಿತರು.

ಕುಬೇರಪ್ಪ ವಿರುದ್ಧ ಹರಿಹರ, ಹೊಸಪೇಟೆ, ಮೈಸೂರು ಜಿಲ್ಲೆಯಲ್ಲಿ ಖೋಟಾ ನೋಟು ಹೊಂದಿರುವ ಪ್ರಕರಣ ದಾಖಲಾಗಿವೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಆ.5ರಿಂದ ಸಾರಿಗೆ ನೌಕರರ ಮುಷ್ಕರ

ಹುಬ್ಬಳ್ಳಿ: 'ನಾಲ್ಕು ಸಾರಿಗೆ ನಿಗಮಗಳ ನೌಕರರ 38 ತಿಂಗಳ ಬಾಕಿ ವೇತನ ಪಾವತಿ ಮತ್ತು 2024ರ ವೇತನ ಪರಿಷ್ಕರಣೆ ಜಾರಿಗೆ ಆಗ್ರಹಿಸಿ ಆಗಸ್ಟ್ 5ರ ಬೆಳಿಗ್ಗೆ 6ರಿಂದ ರಾಜ್ಯದಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರ ಮಾಡಲಾಗುವುದು' ಎಂದು ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾಮಂಡಳದ ಅಧ್ಯಕ್ಷ ಕೆ.ಎಸ್. ಶರ್ಮಾ ಇಲ್ಲಿ ಹೇಳಿದರು.

'ನಾಲ್ಕು ವರ್ಷಕ್ಕೊಮ್ಮೆ ಸಾರಿಗೆ ನೌಕರರ ವೇತನ ಪರಿಷ್ಕರಣೆ ಆಗಬೇಕು. 2016ರಿಂದ ಜಾರಿಯಲ್ಲಿದ್ದ ವೇತನ ಪರಿಷ್ಕರಣೆ 2019ರಲ್ಲಿ ಮುಕ್ತಾಯವಾಗಿತ್ತು. 2020ರಿಂದ ಹೊಸ ವೇತನ ಪರಿಷ್ಕರಣೆಯಾಗಿ ಜಾರಿ ಆಗಬೇಕಿತ್ತು' ಎಂದು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

'ಸರೋಜಾದೇವಿ ಹೆಸರಿನಲ್ಲಿ ಪ್ರಶಸ್ತಿ ಘೋಷಿಸಿ'

ಬೆಂಗಳೂರು: ಹಿರಿಯ ಕಲಾವಿದೆ ಬಿ. ಸರೋಜಾದೇವಿ ಅವರ ಹೆಸರಿನಲ್ಲಿ ಚಲನಚಿತ್ರ ಪ್ರಶಸ್ತಿ ಘೋಷಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಬಿಜೆಪಿ ನಾಯಕಿಯೂ ಆಗಿರುವ ನಟಿ ತಾರಾ ಅನುರಾಧ ಮನವಿ ಸಲ್ಲಿಸಿದರು.

ಸಿದ್ದರಾಮಯ್ಯ ಅವರನ್ನು 'ಕಾವೇರಿ' ನಿವಾಸದಲ್ಲಿ ಗುರುವಾರ ತಾರಾ ಅವರು ಭೇಟಿ ಮಾಡಿದರು.

ದಶಕವಾಯ್ತು... ನೀರು ಬರಲಿಲ್ಲ!

230 ಕಿ.ಮೀ ದೂರದ ಪಾವಗಡಕ್ಕೆ ನೀರು ಕೂಡ್ಲಿಗಿ ಗ್ರಾಮಗಳಿಗೆ 3 ದಿನಕ್ಕೊಮ್ಮೆ ಪೂರೈಕೆ

• ಎ.ಎಂ.ಸೋಮಶೇಖರಯ್ಯ

ಕೂಡ್ಲಿಗಿ (ಬಳ್ಳಾರಿ): ಸಮೀಪದ ತುಂಗಭದ್ರಾ ಜಲಾಶಯದಿಂದ ತಾಲ್ಲೂಕಿನ ವಿವಿಧ ಗ್ರಾಮಗಳ ಜನರಿಗೆ ಕುಡಿಯುವ ನೀರು ಪೂರೈಸುವ ಯೋಜನೆ ಪ್ರಾರಂಭವಾಗಿ ಹತ್ತು ವರ್ಷಗಳೇ ಕಳೆದಿವೆ. ಆದರೆ, ನೀರು ಸಿಗುವ ಕನಸು ಇನ್ನೂ ಸಾಕಾರಗೊಂಡಿಲ್ಲ.

'ತಾಲ್ಲೂಕಿಗೆ 230 ಕಿ.ಮೀ ದೂರದ ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನ ಗ್ರಾಮಗಳಿಗೆ ತುಂಗಭದ್ರಾ ಜಲಾಶಯದಿಂದ ನೀರು ಪೂರೈಕೆ ಆಗುತ್ತಿದೆ. ಆದರೆ, ಕೂಗಳತೆ ದೂರದಲ್ಲಿರುವ ನಮಗೆ ಏಕೆ ನೀರು ಸಿಗುತ್ತಿಲ್ಲ' ಎಂಬ ಪ್ರಶ್ನೆ ನಿವಾಸಿಗಳನ್ನು ಕಾಡುತ್ತಿದೆ.

'ಉಜ್ಜನಿ, ಇತರೆ 71 ಗ್ರಾಮಗಳಿಗೆ ನೀರು ಪೂರೈಸುವ ಪೈಪ್‌ಲೈನ್ ಕಾಮಗಾರಿ ನಡೆಯುತ್ತಿದೆ. ಯೋಜನೆ ಜಾರಿ ವಿಳಂಬವಾಗಲು ಇದೇ ಕಾರಣ. ಎರಡು ತಿಂಗಳೊಳಗೆ ಕಾಮಗಾರಿ ಕೊನೆಗೊಂಡು ನೀರು ಪೂರೈಸುವ ವಿಶ್ವಾಸವಿದೆ' ಎಂದು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ 'ಪ್ರಜಾವಾಣಿ'ಗೆ ತಿಳಿಸಿದರು.

'ಅಖಂಡ ಕೂಡ್ಲಿಗಿ ತಾಲ್ಲೂಕಿನ 216 ಹಳ್ಳಿಗಳಿಗೆ ಶುದ್ಧ ನೀರು ಪೂರೈಸುವ ಯೋಜನೆ ರೂಪಿಸಲಾಗಿದೆ. ಪಾವಗಡ ನೀರು ಪೂರೈಕೆ ಯೋಜನೆಯಲ್ಲಿ 145 ಗ್ರಾಮಗಳಲ್ಲಿ 213 ಮೇಲ್ಮಟ್ಟದ ಟ್ಯಾಂಕ್‌ಗಳಿದ್ದು, 180 ಟ್ಯಾಂಕ್‌ಗಳಿಗೆ ನೀರಿನ ಸಂಪರ್ಕ ಕಲ್ಪಿಸಲಾಗಿದೆ. 50 ಟ್ಯಾಂಕ್‌ಗಳಿಗೆ ಪ್ರಾಯೋಗಿಕವಾಗಿ ನೀರು ಹರಿಸಲಾಗುತ್ತಿದೆ. ಜೆಜೆಎಂ ಯೋಜನೆಯಲ್ಲಿ 77,340 ಮನೆಗಳಿಗೆ ನಳ ಸಂಪರ್ಕದ ಗುರಿ ಇದ್ದು, 57,611 ನಳ ಸಂಪರ್ಕ ಕಲ್ಪಿಸಲಾಗಿದೆ' ಎಂಬುದು ಅಧಿಕಾರಿಗಳ ವಿವರಣೆ.

ನೀರು ಪೂರೈಕೆಯ ನಿರೀಕ್ಷೆಯಲ್ಲಿರುವ, ಕೂಡ್ಲಿಗಿ ಪಟ್ಟಣ, ಗ್ರಾಮಗಳಿಗೆ ಸದ್ಯ ತುಂಗಭದ್ರಾ ನದಿಯ ಬನ್ನಿಗೋಳ ಜಾಕ್ವೆಲ್‌ನಿಂದ ಮೂರು ದಿನಕ್ಕೊಮ್ಮೆ ನೀರು ಪೂರೈಕೆ ಆಗುತ್ತಿದೆ. ಆದರೆ, ನೀರು ಪೂರೈಕೆ ಯೋಜನೆ ಪೂರ್ಣಗೊಳ್ಳದಿರುವುದಕ್ಕೆ ನಿವಾಸಿಗಳು ಆಕ್ಷೇಪಿಸುತ್ತಿದ್ದಾರೆ. ಪಾವಗಡಕ್ಕೆ ನೀರು ಹೋಗುತ್ತಿದೆ, ತಾಲ್ಲೂಕಿಗೆ ಏಕೆ ಸಿಗುತ್ತಿಲ್ಲ ಎಂಬುದು ನಿವಾಸಿಗಳ ಪ್ರಶ್ನೆಯಾಗಿದೆ.

ಮುಖ್ಯಾಂಶಗಳು

- ಉಜ್ಜನಿ ಭಾಗದಲ್ಲಿ ಪೈಪ್‌ಲೈನ್ ಕಾಮಗಾರಿ ಬಾಕಿ
- ಇದುವೇ ಇಡೀ ಯೋಜನೆ ವಿಳಂಬಕ್ಕೆ ಕಾರಣ
- ಎರಡು ತಿಂಗಳಲ್ಲಿ ನೀರು ಲಭಿಸುವ ಸಾಧ್ಯತೆ

ಉಜ್ಜನಿ ಹಾಗೂ ಇತರೆ ಗ್ರಾಮಗಳಿಗೆ ಪೈಪ್ ಲೈನ್ ಸಂಪರ್ಕ ಕಾರ್ಯ ಪ್ರಗತಿಯಲ್ಲಿದೆ. ಕೆರೆ ತುಂಬಿಸುವ, ಕುಡಿಯುವ ನೀರು ಯೋಜನೆಗೆ ಸಂಯೋಜನೆ ಕಾರ್ಯ ನಡೆಯಲಿದೆ
ಡಾ.ಎನ್.ಟಿ.ಶ್ರೀನಿವಾಸ್, ಶಾಸಕ, ಕೂಡ್ಲಿಗಿ

ಪಾವಗಡ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿ ಪೂರ್ಣಗೊಂಡಿದೆ. ಸಣ್ಣ ಪುಟ್ಟ ಕೆಲಸಗಳು ಬಾಕಿ ಉಳಿದಿದ್ದು, ಅವುಗಳು ಶೀಘ್ರವಾಗಿ ಮುಗಿಯಲಿವೆ
ಪ್ರಸನ್ನ, ಎಇಇ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕೂಡ್ಲಿಗಿ


ಕೂಡ್ಲಿಗಿ ತಾಲ್ಲೂಕಿನ ಶಿವಪುರ ಬಳಿ ಇರುವ ಪಾವಗಡ ಕುಡಿಯುವ ನೀರಿನ ಶುದ್ಧೀಕರಣ ಘಟಕ

ವೆಚ್ಚ: ₹2,529 ಕೋಟಿಗೆ ವಿಸ್ತರಣೆ

ಕೂಡ್ಲಿಗಿ ಕ್ಷೇತ್ರದ ಶಾಸಕರಾಗಿದ್ದ ಬಿ.ನಾಗೇಂದ್ರ ಅವರು ₹260 ಕೋಟಿ ವೆಚ್ಚದಲ್ಲಿ 217 ಹಳ್ಳಿಗಳಿಗೆ ತುಂಗಭದ್ರಾ ಜಲಾಶಯ ಹಿನ್ನೀರಿನಿಂದ ನೀರು ಸರಬರಾಜು ಮಾಡುವ ಯೋಜನೆ ರೂಪಿಸಿದ್ದರು. ಆದರೆ, ಈ ಯೋಜನೆಯ ಸ್ವರೂಪ ಬದಲಾಯಿತು.

2014ರಲ್ಲಿ ಅಂದಿನ ಕಾಂಗ್ರೆಸ್ ಸರ್ಕಾರ ವಿಜಯನಗರ ಜಿಲ್ಲೆ ಹೊಸಪೇಟೆ, ಕೂಡ್ಲಿಗಿ, ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು, ಚಳ್ಳಕೆರೆ, ಚಿತ್ರದುರ್ಗ ತಾಲ್ಲೂಕಿನ ಕೆಲ ಗ್ರಾಮಗಳು ಸೇರಿ ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿಗೆ ತುಂಗಭದ್ರಾ ಜಲಾಶಯ ಹಿನ್ನೀರಿನಿಂದ ನೀರು ಸರಬರಾಜು ಮಾಡಲು ₹2,529 ಕೋಟಿ ವೆಚ್ಚದ ಪಾವಗಡ ನೀರು ಕುಡಿಯುವ ನೀರು ಹೆಸರಿನಲ್ಲಿ ಯೋಜನೆ ರೂಪಿಸಿತು.

ಸುದ್ದಿ 2 ನಿಮಿಷ

ಶ್ರೀಕೃಷ್ಣ ಜನ್ಮಾಷ್ಟಮಿ ಮಂಡಲೋತ್ಸವಕ್ಕೆ ನಾಳೆ ಚಾಲನೆ

ಉಡುಪಿ: ಪರ್ಯಾಯ ಪುತ್ತಿಗೆ ಶ್ರೀಕೃಷ್ಣ ಮಠದ ವತಿಯಿಂದ ಆಗಸ್ಟ್ 1ರಿಂದ ಸೆ.17ರವರೆಗೆ ಶ್ರೀಕೃಷ್ಣ ಜನ್ಮಾಷ್ಟಮಿ ಮಂಡಲೋತ್ಸವ ನಡೆಯಲಿದೆ. ಇದೇ 25ರಂದು ಮಠದ ರಾಜಾಂಗಣದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಚಾಲನೆ ನೀಡಲಿದ್ದಾರೆ ಎಂದು ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರತೀರ್ಥ ಸ್ವಾಮೀಜಿ ಅವರು ಬುಧವಾರ ಇಲ್ಲಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಅವರು, ಅದಮಾರು ಮಠದ ವಿಶ್ವಪ್ರಿಯತೀರ್ಥ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ, ಶಾಸಕರಾದ ಯಶ್‌ಪಾಲ್ ಸುವರ್ಣ, ಗುರ್ಮೆ ಸುರೇಶ್ ಶೆಟ್ಟಿ ಮೊದಲಾದವರು ಪಾಲ್ಗೊಳ್ಳುವರು ಎಂದರು.

ಮಂಡಲೋತ್ಸವ 45 ದಿನ ನಡೆಯಲಿದೆ. ಆ.15ರಂದು ಚಾಂದ್ರ ಶ್ರೀಕೃಷ್ಣ ಜನ್ಮಾಷ್ಟಮಿ, ಸೆ. 14ರಂದು ಸೌರ ಶ್ರೀಕೃಷ್ಣ ಜನ್ಮಾಷ್ಟಮಿ, 15ರಂದು ಶ್ರೀಕೃಷ್ಣ ಲೀಲೋತ್ಸವ ನಡೆಯಲಿದೆ. ಸೆ. 14ರ ಕಾರ್ಯಕ್ರಮದಲ್ಲಿ ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಪಾಲ್ಗೊಳ್ಳುವರು ಎಂದರು.

ಅಂಗವಾಗಿ ಧ್ಯಾನ ಮಂಡಲೋತ್ಸವ, ಕೊಳಲು ಮಂಡಲೋತ್ಸವ, ಭಜನಾ ಮಂಡಲೋತ್ಸವ, ಸ್ಪರ್ಧಾ ಹಾಗೂ ಸಾಂಸ್ಕೃತಿಕ ಮಂಡಲೋತ್ಸವ ನಡೆಯಲಿದೆ. ನಾಟಕ, ಯಕ್ಷಗಾನ, ಭರತನಾಟ್ಯ, ಕ್ರೀಡಾ ಸ್ಪರ್ಧೆಗಳು, ಕೋಟಿ ಶ್ರೀಕೃಷ್ಣಮಂತ್ರ ಜಪ ಅಭಿಯಾನ ಜರುಗಲಿವೆ ಎಂದು ಹೇಳಿದರು.

ನವಿಲೆ ನಾಗೇಶ್ವರ ಕ್ಷೇತ್ರಕ್ಕೆ ಶಿವಕುಮಾರ್ ರಹಸ್ಯ ಭೇಟಿ



ನುಗ್ಗೇಹಳ್ಳಿ (ಹಾಸನ): ಹೋಬಳಿಯ ನವಿಲೆ ನಾಗೇಶ್ವರ ಕ್ಷೇತ್ರಕ್ಕೆ ಬುಧವಾರ ಸಂಜೆ ಖಾಸಗಿ ಭದ್ರತೆಯಲ್ಲಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದರು.

ಹಿಂದೆ ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗುವ ಮುನ್ನ ಕ್ಷೇತ್ರಕ್ಕೆ ಭೇಟಿ ನೀಡಿದ್ದರು. ಇದೀಗ ಡಿ.ಕೆ.ಶಿವಕುಮಾರ್ ಅವರು ಭೀಮನ ಅಮಾವಾಸ್ಯೆ ಮುನ್ನಾದಿನ ರಾತ್ರಿ ಭೇಟಿ ನೀಡಿ ಪೂಜೆ ಸಲ್ಲಿಸಿರುವುದು ಕುತೂಹಲಕ್ಕೆ ಕಾರಣವಾಗಿದೆ. ಭೇಟಿ ಕುರಿತು ಪೊಲೀಸ್ ಇಲಾಖೆಗೂ ಮಾಹಿತಿ ಇರಲಿಲ್ಲ.

ವಾರದ ಹಿಂದಷ್ಟೇ ನವಿಲೆ ಗ್ರಾಮದ ಶಿವಾನುಗ್ರಹ ಸೇವಾ ಟ್ರಸ್ಟ್ ವತಿಯಿಂದ ಬಾಳೆಹೊನ್ನೂರು ರಂಭಾಪುರಿ ಶ್ರೀಗಳ ಅಡ್ಡಪಲ್ಲಕ್ಕಿ ಉತ್ಸವ ನಡೆದಿತ್ತು. ಆಗ ಡಿ.ಕೆ. ಶಿವಕುಮಾರ್ ಪಾಲ್ಗೊಳ್ಳುವ ನಿರೀಕ್ಷೆ ಇತ್ತು. ಆದರೆ ಬಂದಿರಲಿಲ್ಲ. ಆ ಕಾರಣದಿಂದಲೂ ಭೇಟಿ ನೀಡಿರಬಹುದು ಎಂದು ಹೇಳಲಾಗುತ್ತಿದೆ.

ಕ್ಷೇತ್ರದಲ್ಲಿ ಪುನರ್ ನಿರ್ಮಾಣಗೊಂಡಿರುವ ಬಾಳೆಹೊನ್ನೂರು ರಂಭಾಪುರಿ ಜಗದ್ಗುರು ವೀರ ಸಿಂಹಾಸನ ಪೀಠಕ್ಕೆ ಡಿ.ಕೆ.ಶಿವಕುಮಾರ್ ವಿಶೇಷ ಪೂಜೆ ಸಲ್ಲಿಸಿದರು.

ನಾಲ್ಕು ತಾಸು ಬೈರತಿ ವಿಚಾರಣೆ

ರೌಡಿ ಶೀಟರ್ ಬಿಕ್ಲು ಶಿವ ಹತ್ಯೆ: ಮುಖ್ಯ ಆರೋಪಿ ನಾಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಹತ್ಯೆ ಪ್ರಕರಣದಲ್ಲಿ ಐದನೇ ಆರೋಪಿಯಾಗಿರುವ ಕೆ.ಆರ್. ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ್ ಅವರು ಎರಡನೇ ಬಾರಿಗೆ ವಿಚಾರಣೆಗೆ ಹಾಜರಾಗಿ ತನಿಖಾಧಿಕಾರಿಗಳ ಎದುರು ಹೇಳಿಕೆ ದಾಖಲಿಸಿದರು.

ತನಿಖಾಧಿಕಾರಿಯೂ ಆಗಿರುವ ಕೆ.ಜಿ. ಹಳ್ಳಿ ಉಪ ವಿಭಾಗದ ಎಸಿಪಿ ಪ್ರಕಾಶ್ ರಾಥೋಡ್ ಅವರು ಶಾಸಕರಿಗೆ ವಿವಿಧ ಆಯಾಮದಲ್ಲಿ ಪ್ರಶ್ನೆಗಳನ್ನು ಕೇಳಿ ವಿಡಿಯೊ ರೆಕಾರ್ಡ್ ಮಾಡಿಕೊಂಡರು.

ನಾಲ್ಕು ತಾಸು ನಡೆದ ವಿಚಾರಣೆಯಲ್ಲಿ ಮೊದಲ ಆರೋಪಿ ಜಗದೀಶ್ ಅಲಿಯಾಸ್ ಜಗ್ಗನ ನಂಟಿನ ಬಗ್ಗೆ ಪ್ರಶ್ನೆ ಕೇಳಲಾಯಿತು ಎಂದು ಮೂಲಗಳು ತಿಳಿಸಿವೆ.

'ಜಗ್ಗನಿಗೂ ತಮಗೂ ಸಂಬಂಧ ಇಲ್ಲ ಎಂದು ಈ ಹಿಂದೆ ನಡೆದಿದ್ದ ವಿಚಾರಣೆಯಲ್ಲಿ ಹೇಳಿಕೆ ನೀಡಿದ್ದೀರಿ. ಆದರೆ, ಸಾಮಾಜಿಕ ಜಾಲತಾಣಗಳಲ್ಲಿ ಜಗ್ಗನ ಜತೆಗಿರುವ ಫೋಟೊಗಳು ಹರಿದಾಡುತ್ತಿವೆ. ತಮ್ಮ ಜನ್ಮದಿನಾಚರಣೆಯಲ್ಲಿ ಜಗ್ಗ ಹೂಗುಚ್ಛ ನೀಡುತ್ತಿರುವ ಫೋಟೊಗಳಿವೆ ಎಂದು ಬೈರತಿ ಬಸವರಾಜ್ ಅವರನ್ನು ತನಿಖಾಧಿಕಾರಿ ಪ್ರಶ್ನೆ ಮಾಡಿದರು. ಆ ಫೋಟೊಕ್ಕೆ ಸಂಬಂಧಿಸಿದಂತೆ ಶಾಸಕರು ಸ್ಪಷ್ಟನೆ ನೀಡಿದ್ದಾರೆ' ಎಂದು ಗೊತ್ತಾಗಿದೆ.

'ಕೊಲೆ ಪ್ರಕರಣದಲ್ಲಿ ಸುಪಾರಿ ನೀಡಿದ್ದ ನಾಲ್ವರನ್ನು ಬಂಧಿಸಲಾಗಿದೆ. ತಮಗೆ ಅವರ ಪರಿಚಯವಿದೆಯೇ ಎಂದು ಪ್ರಶ್ನಿಸಿದರು. ಅವರೆಲ್ಲರೂ ಯಾರು ಎಂಬುದೇ ನನಗೆ ಗೊತ್ತಿಲ್ಲ. ಹತ್ಯೆಯಾದ ಬಿಕ್ಲು ಶಿವ ಅವರ ಪರಿಚಯವೂ ಇಲ್ಲ ಎಂಬುದಾಗಿ ಬೈರತಿ ಬಸವರಾಜ್ ಉತ್ತರಿಸಿದ್ದಾರೆ' ಎಂದು ಗೊತ್ತಾಗಿದೆ.

ಲುಕ್‌ಔಟ್ ನೋಟಿಸ್ ಜಾರಿಗೆ ಸಿದ್ಧತೆ: ಪ್ರಕರಣದ ಮೊದಲ ಆರೋಪಿ ಜಗದೀಶ್ ತಲೆಮರೆಸಿಕೊಂಡಿದ್ದು, ವಿಶೇಷ ಪೊಲೀಸ್ ತಂಡವು ತಮಿಳುನಾಡು ಹಾಗೂ ಕೇರಳದಲ್ಲಿ ಹುಡುಕಾಟ ನಡೆಸಿತ್ತು. ಆರೋಪಿಯ ಸುಳಿವು ಸಿಕ್ಕಿಲ್ಲ. ದುಬೈಗೆ ಪರಾರಿಯಾಗಿರುವ ಶಂಕೆಯಿದೆ. ಲುಕ್‌ಔಟ್ ನೋಟಿಸ್ ಜಾರಿಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಈ ಪ್ರಕರಣದಲ್ಲಿ ಇದುವರೆಗೂ 12 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.


'ಮುಂದೆಯೂ ತನಿಖೆಗೆ ಸಹಕರಿಸುತ್ತೇನೆ'



'ತನಿಖಾಧಿಕಾರಿಗಳ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿದ್ದೇನೆ. ಮತ್ತೊಮ್ಮೆ ವಿಚಾರಣೆಗೆ ಬರುವಂತೆಯೂ ಸೂಚಿಸಿದ್ದಾರೆ. ಆಗಲೂ ವಿಚಾರಣೆಗೆ ಹಾಜರಾಗಿ ತನಿಖೆಗೆ ಸಹಕರಿಸುತ್ತೇನೆ' ಎಂದು ಬೈರತಿ ಬಸವರಾಜ್ ಪ್ರತಿಕ್ರಿಯಿಸಿದರು.

'ಪ್ರಕರಣದಲ್ಲಿ ಬಂಧಿತರಾಗಿರುವ ಆರೋಪಿಗಳು ಯಾರು ಎಂಬುದೇ ಗೊತ್ತಿಲ್ಲ. ಸಾಕಷ್ಟು ಜನರು ಬಂದು ನನ್ನ ಜತೆಗೆ ಫೋಟೊ ತೆಗೆಸಿಕೊಳ್ಳುತ್ತಾರೆ. ಕೊಲೆಯಾದ ಶಿವಪ್ರಕಾಶ್ ಆಗಲಿ, ಜಮೀನು ವಿಚಾರಗಳಾಗಲಿ ನನಗೆ ಗೊತ್ತಿಲ್ಲ. ನಾನೊಬ್ಬ ಪ್ರಾಮಾಣಿಕ ರಾಜಕಾರಣಿ. ನನ್ನ ಮೇಲಿನ ಆರೋಪಗಳು ರಾಜಕೀಯ ಪ್ರೇರಿತವಾಗಿವೆ. ದುರುದ್ದೇಶಪೂರ್ವಕವಾಗಿ ನನ್ನನ್ನು ಸಿಲುಕಿಸುವ ಯತ್ನ ಮಾಡಿದ್ದಾರೆ' ಎಂದರು.

ಜಪಾನ್‌ಗೆ ತೆರಳಲಿವೆ ಬನ್ನೇರುಘಟ್ಟದ ನಾಲ್ಕು ಆನೆ


ಜಪಾನ್‌ಗೆ ತೆರಳಲಿರುವ ಆನೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿರುವ ನಾಲ್ಕು ಆನೆಗಳು ಗುರುವಾರ (ಜುಲೈ 24) ಬೆಂಗಳೂರಿನ ಕೆಂಪೇಗೌಡ ವಿಮಾನ ನಿಲ್ದಾಣದಿಂದ ಜಪಾನ್‌ಗೆ ಪ್ರಯಾಣ ಮಾಡಲಿವೆ.

ಅಂತರರಾಷ್ಟ್ರೀಯ ಪ್ರಾಣಿ ವಿನಿಮಯ ಯೋಜನೆ ಅಡಿ ಒಂದು ಗಂಡು ಹಾಗೂ ಮೂರು ಹೆಣ್ಣಾನೆ ತೆರಳಲಿವೆ. ಪ್ರತಿಯಾಗಿ ಜಪಾನ್‌ನಿಂದ ನಾಲ್ಕು ಚೀತಾ, ನಾಲ್ಕು ಪೂಮಾ (ಪರ್ವತ ಸಿಂಹ), ಮೂರು ಚಿಂಪಾಂಜಿ, ಎಂಟು ಕ್ಯಾಪುಚಿನ್ ಕೋತಿಗಳು ಬನ್ನೇರುಘಟ್ಟಕ್ಕೆ ಬರಲಿವೆ.

2021ರಲ್ಲಿ ಮೈಸೂರು ಮೃಗಾಲಯದ ಮೂರು ಆನೆಗಳನ್ನು ಜಪಾನ್‌ನ ಟೊಯೊಹಾಶಿ ಮೃಗಾಲಯಕ್ಕೆ ಕಳುಹಿಸಲಾಗಿತ್ತು.

ಸುರೇಶ್ (8 ವರ್ಷ), ಗೌರಿ (9), ಶ್ರುತಿ (7) ಹಾಗೂ ತುಳಸಿ (5) ಆನೆಗಳು ಕತಾರ್ ಏರ್‌ವೇಸ್ ಸರಕು ಸಾಗಣೆ ವಿಮಾನ ಏರಲಿವೆ. ಇದಕ್ಕಾಗಿ ವಿಮಾನದ ಒಳಗಡೆ ವಿನ್ಯಾಸ ಬದಲಾವಣೆ ಮಾಡಲಾಗಿದೆ.

ಎಂಟು ತಾಸು ಪ್ರಯಾಣದ ನಂತರ ಜಪಾನ್‌ನ ಒಸಾಕಾದ ಕನ್ಸೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತಲುಪಲಿವೆ. ಅಲ್ಲಿಂದ ಹಿಮೇಜಿ ಸೆಂಟ್ರಲ್ ಪಾರ್ಕ್‌ಗೆ ಕರೆದೊಯ್ಯಲಾಗುವುದು.

ವಿಮಾನ ಪ್ರಯಾಣ, ಆಹಾರ, ಹೊಸ ಪರಿಸರಕ್ಕೆ ಹೊಂದಾಣಿಕೆ ಕುರಿತು ಆರು ತಿಂಗಳಿನಿಂದ ಬನ್ನೇರುಘಟ್ಟದಲ್ಲಿ ಆನೆಗಳಿಗೆ ತರಬೇತಿಯನ್ನು ನೀಡಲಾಗಿದೆ.

ನಾಲ್ಕೂ ಆನೆಗಳು ಆರೋಗ್ಯದಿಂದ ಇದ್ದು, ಬೀಳ್ಕೊಡುಗೆಗೆ ಉದ್ಯಾನದ ಸಿಬ್ಬಂದಿ ಸಿದ್ಧರಾಗಿದ್ದಾರೆ ಎಂದು ಉದ್ಯಾನದ ಪ್ರಕಟಣೆ ತಿಳಿಸಿದೆ.

ವಿದ್ಯುತ್ ತಂತಿ ಸ್ಪರ್ಶ: ಮೂರು ಸಾವು

ಚಿಕ್ಕಜಾಜೂರು: ಸಮೀಪದ ಕಾಳಘಟ್ಟ ಗ್ರಾಮದ ತೋಟವೊಂದರಲ್ಲಿ ಬುಧವಾರ ಬೆಳಿಗ್ಗೆ ಶೆಡ್ ನಿರ್ಮಾಣದ ವೇಳೆ ವಿದ್ಯುತ್ ತಂತಿಗೆ ಕಬ್ಬಿಣದ ಕಂಬಿ ತಗುಲಿ ಮೂವರು ಮೃತಪಟ್ಟಿದ್ದಾರೆ.

ತೋಟದ ಮಾಲೀಕ ರಾಟೆರ ನಾಗರಾಜಪ್ಪ ಅವರ ಪುತ್ರ ಜಿ.ಎನ್. ಶ್ರೀನಿವಾಸ್ (35), ದಾವಣಗೆರೆ ತಾಲ್ಲೂಕಿನ ಎಂ.ನಾಸಿರ್ (34), ಕಾರ್ಮಿಕ ಮಹಮ್ಮದ್ ಫಾರೂಕ್ (32) ಮೃತರು.

ನಾಗರಾಜಪ್ಪ ಅವರು ಶೆಡ್ ನಿರ್ಮಿಸಲು, ಫೈರೋಜ್ ಎಂಬವರಿಗೆ ಗುತ್ತಿಗೆ ನೀಡಿದ್ದರು. ಶೆಡ್ ನಿರ್ಮಾಣದ ವೇಳೆ ಮೇಲೆ ಕಂಬಿ ಎತ್ತಿ ಇಡಲು ಮುಂದಾದಾಗ ಅವಘಡ ಸಂಭವಿಸಿದೆ.

ಬೆಸ್ಕಾಂ ಹೆಚ್ಚುವರಿ ಶಾಖಾಧಿಕಾರಿ ಪಾಲಯ್ಯ ಸ್ಥಳಕ್ಕೆ ಭೇಟಿ ನೀಡಿದ್ದು, 'ಶೆಡ್ ನಿರ್ಮಾಣ ಸಂಬಂಧ ಬೆಸ್ಕಾಂಗೆ ಮಾಹಿತಿ ನೀಡಿರಲಿಲ್ಲ. ಎಲ್.ಸಿ. ಪಡೆದಿರಲಿಲ್ಲ' ಎಂದು ತಿಳಿಸಿದ್ದಾರೆ.

'ಸಿ.ಎಂ ಬದಲು: ಚರ್ಚೆ ಅನಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಒಳ್ಳೆಯ ಆಡಳಿತ ನೀಡುತ್ತಿದ್ದೇವೆ. ಹೀಗಾಗಿ, ಮುಖ್ಯಮಂತ್ರಿ ಬದಲಾವಣೆ ಪ್ರಸ್ತಾಪದ ಅವಶ್ಯವೇ ಇಲ್ಲ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

'ಡಿಸೆಂಬರ್ ವೇಳೆಗೆ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಲಿದ್ದಾರೆ' ಎಂಬ ಶಾಸಕ ಬಸವರಾಜು ಶಿವಗಂಗಾ ಅವರ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಖಂಡ್ರೆ, 'ಈ ವಿಷಯದ ಬಗ್ಗೆ ನಮ್ಮ ವರಿಷ್ಠರು ಈಗಾಗಲೇ ಮಾತನಾಡಿದ್ದಾರೆ. ತುಟಿಕ್ ಪಿಟಿಕ್ ಎನ್ನದಂತೆ ಹೈಕಮಾಂಡ್ ಎಲ್ಲರಿಗೂ ತಾಕೀತು ಮಾಡಿದೆ' ಎಂದರು.

'ಕೊಟ್ಟ ಮಾತಿನಂತೆ ನಾವು ಒಳ್ಳೆಯ ಆಡಳಿತ ಕೊಡುತ್ತಿದ್ದೇವೆ. ಹೀಗಾಗಿ ಬೇರೆ ವಿಚಾರಗಳು ಈಗ ಅಪ್ರಸ್ತುತ. ಬಸವರಾಜು ಶಿವಗಂಗಾ ಅವರು ನೀಡಿರುವ ಹೇಳಿಕೆ ಬಗ್ಗೆ ಹೈಕಮಾಂಡ್‌ನವರು ನೋಡಿಕೊಳ್ಳುತ್ತಾರೆ' ಎಂದರು.

ನಮ್ಮ ಬೆಂಬಲವಿದೆ: 'ಜಾತಿವಾರು ಸಮೀಕ್ಷೆಗೆ ನಮ್ಮ ಬೆಂಬಲವಿದೆ. ಲಿಂಗಾಯತರಲ್ಲಿ ನೂರು ಒಳಪಂಗಡಗಳಿದ್ದು, ಗೊಂದಲಗಳಿವೆ. ಸಾಮಾಜಿಕ, ಶೈಕ್ಷಣಿಕ ಮೀಸಲಾತಿಗಾಗಿ ಸಮೀಕ್ಷೆಯಲ್ಲಿ ತಮ್ಮ ತಮ್ಮ ಜಾತಿ ನಮೂದಿಸುತ್ತಾರೆ. ಗೊಂದಲಗಳನ್ನು ಮಠಾಧೀಶರು ಸರಿ ಮಾಡಬೇಕು' ಎಂದರು.

ಅರಣ್ಯ ಪ್ರದೇಶದಲ್ಲಿ ಜಾನುವಾರುಗಳನ್ನು ಮೇಯಲು ಬಿಡುವುದನ್ನು ನಿಷೇಧಿಸಿರುವ ಕುರಿತು ಪ್ರತಿಕ್ರಿಯಿಸಿದ ಖಂಡ್ರೆ, 'ಅರಣ್ಯವಾಸಿಗಳಿಗೆ ಕಾನೂನಿನಲ್ಲಿ ಸಡಿಲಿಕೆಯಿದೆ. ಬೇರೆ ಕಡೆಯಿಂದ ಜಾನುವಾರುಗಳನ್ನು ತಂದು ಬಿಡಲು ಅವಕಾಶ ಇಲ್ಲ' ಎಂದೂ ಅವರು ವಿವರಿಸಿದರು.

ಸಿ.ಎಂ, ಡಿಸಿಎಂ ಇಂದು ದೆಹಲಿಗೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಗುರುವಾರ ಮಧ್ಯಾಹ್ನ ವಿಶೇಷ ವಿಮಾನದಲ್ಲಿ ದೆಹಲಿಗೆ ತೆರಳಲಿದ್ದಾರೆ.

ಇದೇ 25ರಂದು ನವದೆಹಲಿಯ ತಾಲ್‌ಕಟೋರ ಕ್ರೀಡಾಂಗಣದಲ್ಲಿ ನಡೆಯಲಿರುವ 'ಕಾಂಗ್ರೆಸ್ ಒಬಿಸಿ ನಾಯಕತ್ವ ಭಾಗೀದಾರಿ ನ್ಯಾಯ ಸಮ್ಮೇಳನ'ದಲ್ಲಿ ಮುಖ್ಯಮಂತ್ರಿ ಭಾಗವಹಿಸಲಿದ್ದಾರೆ.

ದೆಹಲಿ ಭೇಟಿಯ ಸಂದರ್ಭದಲ್ಲಿ ಉಭಯ ನಾಯಕರೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿ ಮಾಡಿ, ವಿಧಾನ ಪರಿಷತ್‌ನಲ್ಲಿ ಖಾಲಿ ಇರುವ ನಾಲ್ಕು ಸ್ಥಾನಗಳಿಗೆ ನಾಮನಿರ್ದೇಶನ ಮತ್ತು ನಿಗಮ-ಮಂಡಳಿ ಅಧ್ಯಕ್ಷರು, ಸದಸ್ಯರ ನೇಮಕ ಕುರಿತು ಚರ್ಚೆ ನಡೆಸಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಜೊತೆಗೆ, ರಾಜ್ಯ ರಾಜಕೀಯ ವಿದ್ಯಮಾನ, ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಸಲ್ಲಿಸಿದ್ದ ಮೇಲ್ಮನವಿ ವಜಾ ಸೇರಿ ಹಲವು ವಿಚಾರಗಳ ಕುರಿತು ವರಿಷ್ಠರ ಜೊತೆ ಚರ್ಚೆ ಸಾಧ್ಯತೆಯೂ ಇದೆ.

ಶಾಸಕ ಪ್ರಭು ಚವಾಣ್, ಪುತ್ರನ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಔರಾದ್ (ಬೀದರ್ ಜಿಲ್ಲೆ): ಶಾಸಕ ಪ್ರಭು ಚವಾಣ್ ಹಾಗೂ ಲೈಂಗಿಕ ದೌರ್ಜನ್ಯ ಆರೋಪ ಎದುರಿಸುತ್ತಿರುವ ಅವರ ಮಗ ಪ್ರತೀಕ್ ಚವಾಣ್ ಸೇರಿದಂತೆ ಇತರೆ ಎಂಟು ಜನರ ವಿರುದ್ಧ ಮಹಾರಾಷ್ಟ್ರದ ಸಂತ್ರಸ್ತ ಯುವತಿಯ ತಾಯಿ ತಾಲ್ಲೂಕಿನ ಹೊಕ್ರಾಣಾ ಪೊಲೀಸ್ ಠಾಣೆಗೆ ಬುಧವಾರ ದೂರು ನೀಡಿದ್ದಾರೆ.

'2023ರ ಡಿಸೆಂಬರ್ 25ರಂದು ಮಗಳ ನಿಶ್ಚಿತಾರ್ಥ ಶಾಸಕನ ಪುತ್ರ ಪ್ರತೀಕ್ ಚವಾಣ್ ಜತೆ ಔರಾದ್ ತಾಲ್ಲೂಕಿನ ಬೊಂತಿಯ ಘಮಸುಬಾಯಿ ತಾಂಡಾದಲ್ಲಿ ಆಗಿದೆ. ಜುಲೈ 5ರಂದು ಅವರ ಮನೆಗೆ ಹೋಗಿ ಮದುವೆ ಯಾವಾಗ ಮಾಡುತ್ತೀರಿ ಎಂದು ಕೇಳಿದಾಗ, ಶಾಸಕರು ಹಾಗೂ ಅವರ ಪತ್ನಿ, ಪುತ್ರ ಸೇರಿದಂತೆ ಎಂಟು ಜನರು ಸೇರಿ ನಮ್ಮನ್ನು ಹೀಯಾಳಿಸಿ ಹಲ್ಲೆ ಮಾಡಿದ್ದಾರೆ' ಎಂದು ದೂರಿದ್ದಾರೆ.

'ಆಗ ಮಗನ ಕೊರಳಲ್ಲಿದ್ದ ಚಿನ್ನದ ಸರ, ಮೊಬೈಲ್ ಫೋನ್ ಕಿತ್ತುಕೊಂಡಿದ್ದಾರೆ. ದೌರ್ಜನ್ಯ ಮಾಡಿದ ಅವರೇ ನನ್ನ ಹಾಗೂ ನನ್ನ ಪತಿ, ಮಗನ ಮೇಲೆ ಪ್ರಕರಣ ದಾಖಲಿಸಿ ಕಿರುಕುಳ ನೀಡುತ್ತಿದ್ದಾರೆ. ನಮ್ಮ ಕುಟುಂಬಕ್ಕೆ ಏನಾದರೂ ಆದರೆ ಶಾಸಕರೇ ನೇರ ಹೊಣೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಪ್ರತೀಕ್ ತಲೆಮರೆಸಿಕೊಂಡಿದ್ದು, ಅವರ ಬಂಧನಕ್ಕೆ ಪೊಲೀಸ್ ಇಲಾಖೆ 2 ತಂಡ ರಚಿಸಿದೆ.

ಜಾನುವಾರು ಮೇಯಿಸಲು ನಿರ್ಬಂಧ: ರೈತರ ಕಿಡಿ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ಹುಲಿಗಳ ಸಾವಿನ ವಿಚಾರವನ್ನೇ ನೆಪವಾಗಿಸಿಕೊಂಡು ಅರಣ್ಯಕ್ಕೆ ಜಾನುವಾರುಗಳ ಪ್ರವೇಶ ನಿರ್ಬಂಧಿಸಲು ಮುಂದಾಗಿರುವ ರಾಜ್ಯ ಸರ್ಕಾರ ಕಾಡಂಚಿನ ರೈತರನ್ನು ಒಕ್ಕಲೆಬ್ಬಿಸುವ ಹುನ್ನಾರ ಮಾಡುತ್ತಿದೆ' ಎಂದು ರೈತರು ಹಾಗೂ ಅರಣ್ಯವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ರೈತರು ಹಾಗೂ ಕಾಡು ಜೊತೆಯಾಗಿ ಬೆಳೆಯಬೇಕೇ ಹೊರತು ನಿರ್ಬಂಧ ವಿಧಿಸುವುದು ಸಲ್ಲದು' ಎಂದು ಸಾಮೂಹಿಕ ನಾಯಕತ್ವದ ರೈತ ಸಂಘ ಹಾಗೂ ಹಸಿರು ಸೇನೆಯ ಅಧ್ಯಕ್ಷೀಯ ಮಂಡಳಿ ಸದಸ್ಯ ಹೊನ್ನೂರು ಪ್ರಕಾಶ್ ಅಭಿಪ್ರಾಯಪಟ್ಟಿದ್ದಾರೆ.

'ಕಾಡಂಚಿನ ರೈತರು ಜೀವನೋಪಾಯಕ್ಕಾಗಿ ಕುರಿ, ಮೇಕೆ, ದನ ಸಾಕುತ್ತಿದ್ದಾರೆ. ತುಂಡು ಭೂಮಿಯಲ್ಲಿ ಜಾನುವಾರುಗಳಿಗೆ ಮೇವು ಒದಗಿಸಲಾಗದೆ ಕಾಡಿನೊಳಗೆ ಮೇಯಿಸುವುದು ರೂಢಿ. ಅರಣ್ಯದೊಳಗೆ ಜಾನುವಾರುಗಳ ಪ್ರವೇಶ ನಿರ್ಬಂಧಿಸಿದರೆ ದನ–ಕರುಗಳು ಮೇವಿಲ್ಲದೆ ಸಾಯಬೇಕಾಗುತ್ತದೆ' ಎಂದಿದ್ದಾರೆ.

'ಅರಣ್ಯ ಉಳಿಸುವ ಕಾಳಜಿ ಇದ್ದರೆ ಸರ್ಕಾರ ಪ್ರಾಣಿ ಬೇಟೆ ಹಾಗೂ ಮರಗಳ ಕಳ್ಳಸಾಗಾಟ ತಡೆಯಲಿ. 'ಪರಿಸರ ವಾದಿ'ಗಳ ಮುಖವಾಡ ಹಾಕಿಕೊಂಡವರ ಒತ್ತಡಕ್ಕೆ ಮಣಿದು ರೈತರ ಜೀವನದ ಜೊತೆ ಚೆಲ್ಲಾಟವಾಡಬಾರದು' ಎಂದಿದ್ದಾರೆ.

'ಹೂಗ್ಯಂ ವಲಯದಲ್ಲಿ ಇತ್ತೀಚೆಗೆ ಐದು ಹುಲಿಗಳ ಸಾವಿಗೆ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಚಿವ ಈಶ್ವರ ಖಂಡ್ರೆ ನೇರ ಹೊಣೆಗಾರರು. ಸರ್ಕಾರ ತನ್ನ ತಪ್ಪು ಮುಚ್ಚಿಕೊಳ್ಳಲು ಸ್ಥಳೀಯ ರೈತರ ಮೇಲೆ ಗದಾಪ್ರಹಾರ ಮಾಡುತ್ತಿದೆ' ಎಂದು ರೈತ ಮಾದೇಶ್ ಹೇಳಿದರು.

'26ರಂದು ಮುತ್ತಿಗೆ'

ಜುಲೈ 26ರಂದು ಕೊಳ್ಳೇಗಾಲದಲ್ಲಿ ಪ್ರತಿಭಟನಾ ರ್‍ಯಾಲಿ ನಡೆಸಲಿದ್ದು, ಅಂದು ಎಂ.ಎಂ ಹಿಲ್ಸ್, ಕಾವೇರಿ ವನ್ಯಧಾಮದ ಕಚೇರಿಗೆ ಮುತ್ತಿಗೆ ಹಾಕಲಾಗುವುದು. ಅರಣ್ಯದೊಳಗೆ ಜಾನುವಾರುಗಳ ಪ್ರವೇಶ ನಿರ್ಬಂಧಿಸುವ ಸರ್ಕಾರದ ಆದೇಶ ಪ್ರತಿ ಸುಡಲಾಗುವುದು' ಎಂದು ಸಾಮೂಹಿಕ ನಾಯಕತ್ವದ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಅಧ್ಯಕ್ಷೀಯ ಮಂಡಳಿ ಸದಸ್ಯ ಹೊನ್ನೂರು ಪ್ರಕಾಶ್ ತಿಳಿಸಿದರು.

ದೈಹಿಕ ತಪಾಸಣೆಯ ನೆಪದಲ್ಲಿ ಸ್ನೇಹಿತೆಯರಿಗೆ ಒಂಬತ್ತು ತಾಸು ದೌರ್ಜನ್ಯ

'ಡಿಜಿಟಲ್ ಅರೆಸ್ಟ್': ವಿವಸ್ತ್ರಗೊಳಿಸಿ ಕಿರುಕುಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣ ಅಕ್ರಮ ವರ್ಗಾವಣೆ, ಕಳ್ಳ ಸಾಗಣೆಯ ಆರೋಪದ ಹೆಸರಿನಲ್ಲಿ ಕರೆ ಮಾಡಿದ್ದ ಸೈಬರ್ ವಂಚಕನೊಬ್ಬ, ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ಬೆದರಿಸಿ ದೈಹಿಕ ತಪಾಸಣೆ ನೆಪದಲ್ಲಿ ಸ್ನೇಹಿತೆಯರನ್ನು ವಿವಸ್ತ್ರಗೊಳಿಸಿ ಕಿರುಕುಳ ನೀಡಿದ್ದು, ಈ ಸಂಬಂಧ ಪೂರ್ವ ವಿಭಾಗದ ಸೈಬರ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸಂತ್ರಸ್ತೆಯರು ನೀಡಿದ ದೂರಿನ ಮೇರೆಗೆ ಸೈಬರ್ ಠಾಣೆಯಲ್ಲಿ ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 318(4) ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪ್ರಕರಣದ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಇಬ್ಬರು ಮಹಿಳೆಯರಿಗೆ ಕಿರುಕುಳ ನೀಡುವ ಜತೆಗೆ ಅವರ ಬ್ಯಾಂಕ್ ಖಾತೆಯಿಂದ ₹58,477 ಹಣವನ್ನೂ ವಂಚಕ ವರ್ಗಾಯಿಸಿಕೊಂಡಿದ್ದಾನೆ. ಒಂಬತ್ತು ತಾಸು ವಂಚಕ ಕಿರುಕುಳ ನೀಡಿದ್ದ ಎಂದು ಸಂತ್ರಸ್ತೆಯರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಥಾಯ್ಲೆಂಡ್‌ನಲ್ಲಿ ಬೋಧಕಿಯಾಗಿರುವ ಮಹಿಳೆ, ತನ್ನ ಬಾಲ್ಯ ಸ್ನೇಹಿತೆಯನ್ನು ಭೇಟಿಯಾಗಲು ಬೆಂಗಳೂರಿಗೆ ಬಂದಿದ್ದರು. ಸ್ನೇಹಿತೆಯ ಮನೆಯಲ್ಲಿ ತಂಗಿದ್ದ ಮಹಿಳೆಗೆ ಜುಲೈ 17ರಂದು ಬೆಳಿಗ್ಗೆ 11ರ ಸುಮಾರಿಗೆ ಅನಾಮಧೇಯ ನಂಬರ್‌ನಿಂದ ಕರೆಯೊಂದು ಬಂದಿತ್ತು. ಕರೆ ಮಾಡಿದ್ದ ವ್ಯಕ್ತಿ, ತಾನು ಮುಂಬೈನ ಕೊಲಾಬಾ ಪೊಲೀಸ್ ಠಾಣೆಯ ಅಧಿಕಾರಿ ಎಂದು ಪರಿಚಯಿಸಿಕೊಂಡಿದ್ದ. 'ಜೆಟ್ ಏರ್‌ವೇಸ್'ಗೆ ಸಂಬಂಧಿಸಿದ ಹಣ ವರ್ಗಾವಣೆಯಲ್ಲಿ ತಾವು ಭಾಗಿಯಾಗಿದ್ದೀರಿ' ಎಂದು ಆರೋಪಿಸಿದ್ದ. ಅಲ್ಲದೇ ಅಕ್ರಮ ಹಣ ವರ್ಗಾವಣೆ, ಕಳ್ಳಸಾಗಣೆ ಹಾಗೂ ಹತ್ಯೆ ಪ್ರಕರಣದಲ್ಲೂ ತಮ್ಮ ಹೆಸರಿದೆ. ಅದಕ್ಕೆ ಸಂಬಂಧಿಸಿದಂತೆ ದಾಖಲೆಗಳು ತಮ್ಮ ಬಳಿಯಿವೆ ಎಂದು ಹೇಳಿದ್ದ. ಇದರಿಂದ ಆಘಾತಕ್ಕೆ ಒಳಗಾದ ಮಹಿಳೆ, ತಾನು ಕೆಲವು ದಿನಗಳ ಹಿಂದೆಯಷ್ಟೇ ಭಾರತಕ್ಕೆ ಭೇಟಿ ನೀಡಿದ್ದೇನೆ. ಆ ಪ್ರಕರಣಗಳಿಗೂ ತನಗೂ ಯಾವುದೇ ಸಂಬಂಧವಿಲ್ಲ ಎಂದು ವಿವರಿಸಿದ್ದರು. ಮಹಿಳೆಯ ಡೆಬಿಟ್ ಕಾರ್ಡ್ ನಂಬರ್ ಅನ್ನು ಸರಿಯಾಗಿ ಹೇಳಿದ್ದ ಆರೋಪಿ, ಇಬ್ಬರನ್ನೂ ಬಂಧಿಸುವುದಾಗಿ ಬೆದರಿಕೆ ಹಾಕಿದ್ದ' ಎಂದು ಮೂಲಗಳು ತಿಳಿಸಿವೆ.

ಬಂಧನದ ವಾರಂಟ್ ಕಳುಹಿಸಿ ಬೆದರಿಕೆ: 'ಅದಾದ ಕೆಲವೇ ಹೊತ್ತಿನಲ್ಲಿ ಮಹಿಳೆಯರಿಗೆ ನಕಲಿ ಬಂಧನದ ವಾರಂಟ್ ಕಳುಹಿಸಿದ್ದ ವಂಚಕ, ಬ್ಯಾಂಕ್ ಖಾತೆಗಳಲ್ಲಿರುವ ಹಣವನ್ನು ವರ್ಗಾವಣೆ ಮಾಡುವಂತೆಯೂ ಬೆದರಿಕೆ ಹಾಕಿದ್ದ. ಹೆದರಿದ ಮಹಿಳೆಯರು, ₹58,477 ಅನ್ನು ಆರೋಪಿ ಹೇಳಿದ್ದ ಖಾತೆಗೆ ಹಾಕಿದ್ದರು. ಈ ಪ್ರಕರಣದಿಂದ ಕೈಬಿಡಬೇಕಾದರೆ ದೈಹಿಕ ತಪಾಸಣೆ ನಡೆಸುವುದು ಅಗತ್ಯವಿದೆ ಎಂದು ಹೇಳಿ ವಿವಸ್ತ್ರಗೊಳ್ಳುವಂತೆ ಒತ್ತಾಯಿಸಿದ್ದ. ಮೈಮೇಲಿರುವ ಮಚ್ಚೆ ಅಥವಾ ಗುರುತುಗಳನ್ನು ತೋರಿಸುವಂತೆ ಸೂಚಿಸಿದ್ದ. ಸಂತ್ರಸ್ತೆಯರು ವಿವಸ್ತ್ರಗೊಂಡಿದ್ದರು' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಜಾಲತಾಣಗಳಲ್ಲಿ ಹರಿಯಬಿಡುವ ಬೆದರಿಕೆ

ಅಂದು ರಾತ್ರಿ 8 ಗಂಟೆಯ ಸುಮಾರಿಗೆ ತಮ್ಮ ಸ್ನೇಹಿತೆಯರಿಗೆ ಕರೆ ಮಾಡಿದ್ದ ಸಂತ್ರಸ್ತೆಯರು ಘಟನೆಯ ಕುರಿತು ತಿಳಿಸಿದ್ದರು. ಸೈಬರ್ ವಂಚಕನ ಕೃತ್ಯ ಎಂದು ಅವರು ಹೇಳಿದ್ದರು. ಎಚ್ಚೆತ್ತ ಮಹಿಳೆಯರು, ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ ಎಂದು ಗೊತ್ತಾಗಿದೆ.

'ದೈಹಿಕ ತಪಾಸಣೆಯ ನೆಪದಲ್ಲಿ ವಿವಸ್ತ್ರಗೊಂಡಿದ್ದನ್ನು ವಂಚಕ ರೆಕಾರ್ಡ್ ಮಾಡಿಕೊಂಡಿದ್ದಾನೆ. ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಾಕುವುದಾಗಿ ಬೆದರಿಸಿದ್ದಾನೆ. ವಂಚಕನಿಂದ ಒಂಬತ್ತು ತಾಸು ಭಯ ಮತ್ತು ಅವಮಾನ ಎದುರಿಸಿದ್ದೆವು' ಎಂದು ಮಹಿಳೆಯರು ದೂರಿನಲ್ಲಿ ವಿವರಿಸಿದ್ದಾರೆ.

ಮಹದಾಯಿ: ಕೇಂದ್ರದ ವಿರುದ್ಧ ಕನ್ನಡಿಗರೊಂದಿಗೆ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದಾಯಿ ಯೋಜನೆಗೆ ಅನುಮತಿ ನೀಡುವುದಿಲ್ಲ ಎಂಬ ಕೇಂದ್ರ ಸರ್ಕಾರದ ನಿರ್ಧಾರ ಕರ್ನಾಟಕದ ಜನತೆಗೆ ಬಗೆಯುವ ದ್ರೋಹ. ಇದರ ವಿರುದ್ಧ ಸಮಸ್ತ ಕನ್ನಡಿಗರೊಂದಿಗೆ ಹೋರಾಟ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಕೇಂದ್ರದ ನಿರ್ಧಾರ ಕರ್ನಾಟಕದ ಹಿತಾಸಕ್ತಿ ಮೇಲಿನ ಇನ್ನೊಂದು ಪ್ರಹಾರ. 2018ರಲ್ಲಿ ಮಹದಾಯಿ ಜಲವಿವಾದ ನ್ಯಾಯಮಂಡಳಿ 13.42 ಟಿಎಂಸಿ ಅಡಿ ನೀರನ್ನು ಕರ್ನಾಟಕ್ಕೆ ನಿಗದಿಪಡಿಸಿ ಐತೀರ್ಪು ನೀಡಿದ್ದರೂ ಕೇಂದ್ರದ ಧೋರಣೆಯಿಂದಾಗಿ ಯೋಜನೆ ಜಾರಿ ಸಾಧ್ಯವಾಗುತ್ತಿಲ್ಲ ಎಂದು ದೂರಿದ್ದಾರೆ.

ಬೆಳಗಾವಿ, ಹುಬ್ಬಳ್ಳಿ, ಧಾರವಾಡ, ಗದಗ, ಬಾಗಲಕೋಟೆ ಪ್ರದೇಶದ ಜನತೆಯ ಕುಡಿಯುವ ನೀರಿಗಾಗಿ 40 ಟಿಎಂಸಿ ಅಡಿ ನೀರು ಬಳಸಿಕೊಳ್ಳುವ ಕಳಸಾ-ಬಂಡೂರಿ ಯೋಜನೆ ಈಗಾಗಲೇ ಅನುಷ್ಠಾನಕ್ಕೆ ಸಿದ್ಧಗೊಂಡಿದೆ. ಗೋವಾ ಬಿಜೆಪಿ ನೇತೃತ್ವದ ಸರ್ಕಾರದ ಜತೆ ಶಾಮೀಲಾಗಿ ಕೇಂದ್ರ ಸರ್ಕಾರ ನಿರಂತರವಾಗಿ ಅಡ್ಡಗಾಲು ಹಾಕುತ್ತಿದೆ ಎಂದರು.

ರಾಜ್ಯದ ಬಿಜೆಪಿ ನಾಯಕರಾಗಲಿ, ಬಿಜೆಪಿ, ಜೆಡಿಎಸ್ ಸಂಸದರು ಅನ್ಯಾಯದ ವಿರುದ್ಧ ದನಿ ಎತ್ತಲಾಗದಷ್ಟು ನಿರ್ವೀರ್ಯರಾಗಿದ್ದಾರೆ. ಚುನಾವಣೆಯಲ್ಲಿ ಬಿಜೆಪಿ ತಿರಸ್ಕರಿಸಿದ ಕನ್ನಡಿಗರ ವಿರುದ್ಧ ಸೇಡು ತೀರಿಸಿಕೊಳ್ಳಲೆಂದೇ ಅನುಮತಿ ನಿರಾಕರಿಸಿರುವುದು ಸ್ಪಷ್ಟ ಎಂದು ದೂರಿದ್ದಾರೆ.


ಉತ್ತರ ಕರ್ನಾಟಕದ ಜನರ ಹಾಗೂ ರೈತರ ಹಿತಾಸಕ್ತಿ ಗಮನಿಸಿ ಕೇಂದ್ರ ಯೋಜನೆ ಜಾರಿಗೆ ತಕ್ಷಣ ಅನುಮತಿ ನೀಡಲಿ. ಮಹದಾಯಿ ಕುರಿತ ಗೋವಾ ಸಿ.ಎಂ ಹೇಳಿಕೆಯನ್ನು ಖಂಡಿಸುತ್ತೇವೆ
ಎಚ್.ಕೆ.ಪಾಟೀಲ, ಕಾನೂನು ಸಚಿವ

ಗುರುವಾರ, ಜುಲೈ 24, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 204 | ಪುಟ 18
prajavani.net prajavani www.prajavani.net
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಎಫ್‌ಐಆರ್‌ಗೆ ಆದೇಶ

'ಸ್ಮಾರ್ಟ್ ಮೀಟರ್ ಅಳವಡಿಕೆಗೆ ಸಂಬಂಧಿಸಿದ ಟೆಂಡರ್ ಕಾನೂನು ಬಾಹಿರವಾಗಿದೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಇಂಧನ ಸಚಿವ ಕೆ.ಜೆ.ಜಾರ್ಜ್ ವಿರುದ್ಧ ಎಫ್‌ಐಆರ್ ದಾಖಲಿಸಲು ಲೋಕಾಯುಕ್ತ ಪೊಲೀಸರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

▶3



ರಾಹುಲ್ 'ಸಹಸ್ರ ಸಾಧನೆ'

ಭಾರತ ಕ್ರಿಕೆಟ್ ತಂಡದ ಕೆ.ಎಲ್. ರಾಹುಲ್ ಅವರು ಇಂಗ್ಲೆಂಡ್ ನೆಲದಲ್ಲಿ ಒಂದು ಸಾವಿರಕ್ಕೂ ಹೆಚ್ಚು ರನ್ ಗಳಿಸಿದ ಭಾರತದ ಎರಡನೇ ಆರಂಭಿಕ ಆಟಗಾರನಾದರು. ಸುನಿಲ್ ಗಾವಸ್ಕರ್ ಮೊದಲಿಗರು



ಸೆನ್ಸೆಕ್ಸ್ 82,726 | ನಿಫ್ಟಿ 25,219 | $/₹ 86.41 | ಚಿನ್ನ (Std. 10g) ₹1,05,700 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,23,200 (ಬೆಂಗಳೂರು)

ಕೆ.ಜಿ ಹಳ್ಳಿ ಗಲಭೆ: ಮೂವರಿಗೆ ಏಳು ವರ್ಷ ಕಠಿಣ ಜೈಲು ಶಿಕ್ಷೆ

• ಬಿ.ಎಸ್.ಷಣ್ಮುಖಪ್ಪ

ಬೆಂಗಳೂರು: ನಗರದ ಕಾಡುಗೊಂಡನ ಹಳ್ಳಿ (ಕೆಜಿ ಹಳ್ಳಿ) ಪೊಲೀಸ್ ಠಾಣೆಯನ್ನು ಧ್ವಂಸಗೊಳಿಸಿ ಸುಟ್ಟುಹಾಕಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪೊಪ್ಪಿಕೊಂಡಿದ್ದ ಮೂವರು ಆರೋಪಿಗಳನ್ನು ಅಪರಾಧಿಗಳು ಎಂದು ತೀರ್ಮಾನಿಸಿರುವ ಎನ್‌ಐಎ (ರಾಷ್ಟ್ರೀಯ ತನಿಖಾ ಸಂಸ್ಥೆ) ವಿಶೇಷ ನ್ಯಾಯಾಲಯ ಎಲ್ಲರಿಗೂ ಏಳು ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ತಲಾ ₹36 ಸಾವಿರ ದಂಡ ವಿಧಿಸಿದೆ.

ಪ್ರಕರಣದ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್‌ನ ಎನ್‌ಐಎ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆಂಪರಾಜು ಅವರು ಪ್ರಕಟಿಸಿದರು.

ಪ್ರಕರಣದ 14ನೇ ಆರೋಪಿ ಸೈಯದ್ ಇಕ್ರಮುದ್ದೀನ್ ಅಲಿಯಾಸ್ ಸೈಯದ್ ಜಮಾಲುದ್ದೀನ್, 16ನೇ ಆರೋಪಿ ಸೈಯದ್ ಅಸೀಫ್ ಬಿನ್ ಸೈಯದ್ ಅಕ್ಬರ್ ಮತ್ತು 18ನೇ ಆರೋಪಿ ಮೊಹಮದ್ ಅತೀಫ್ ಬಿನ್ ಮೊಹಮದ್ ಗೌಸ್ ಶಿಕ್ಷೆಗೆ ಗುರಿಯಾದವರು.



ನ್ಯಾಯಾಧೀಶ ಕೆಂಪರಾಜು

ಎಲ್ಲಾ ಆಪಾದಿತರ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 120ಬಿ, 144, 148, 149,188, 353 ಮತ್ತು 427, ಕರ್ನಾಟಕ ಆಸ್ತಿ ನಾಶ ತಡೆ ಕಾಯ್ದೆ–1981ರ ಕಲಂ 2 ಹಾಗೂ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ–1967ರ ಕಲಂ 18ರ ಅಡಿಯಲ್ಲಿ ಶಿಕ್ಷೆ ವಿಧಿಸಲಾಗಿದೆ.

ಕೋವಿಡ್ ದಿನಗಳಲ್ಲಿ ನಡೆದಿದ್ದ ಈ ಘಟನೆಗೆ ಸಂಬಂಧಿಸಿದಂತೆ 2020ರ ಆಗಸ್ಟ್ 12ರಂದು ರಾಜ್ಯ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರೆ, ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) 2020ರ ಡಿಸೆಂಬರ್ 21ರಂದು ಎಫ್‌ಐಆರ್ ದಾಖಲಿಸಿತ್ತು. 2021ರ ಫೆಬ್ರುವರಿ 5ರಂದು ವಿಚಾರಣಾ ನ್ಯಾಯಾಲಯಕ್ಕೆ 138 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು.

ಪ್ರಕರಣದಲ್ಲಿ ಒಟ್ಟು 199 ಜನರನ್ನು ಆರೋಪಿಗಳು ಎಂದು ಗುರುತಿಸಲಾಗಿತ್ತು ಮತ್ತು 187 ಆರೋಪಿಗಳನ್ನು ಬಂಧಿಸಲಾಗಿತ್ತು. ಘಟನೆಯಲ್ಲಿ 12 ಸರ್ಕಾರಿ ಮತ್ತು ಖಾಸಗಿ ವಾಹನಗಳನ್ನು ಸುಟ್ಟು ಹಾಕಲಾಗಿತ್ತು. ಇವುಗಳಲ್ಲಿ 5 ದ್ವಿಚಕ್ರ, ಒಂದು ಇನ್ನೋವಾ ಕಾರು ಮತ್ತು ಇತರೆ ಆರು ವಾಹನಗಳು ಜಖಂಗೊಂಡಿದ್ದವು.

ವಿಚಾರಣೆಯಲ್ಲಿ ಎ–4 (ಆರೋಪಿ–4) ಹಬೀಬ್ ಉರ್ ರಹಮಾನ್, ಎ–5 ಪೀರ್ ಪಾಷ, 1–6 ಜಿಯಾ ಉರ್ ರಹಮಾನ್ ಮತ್ತು 1–7 ಇಮ್ರಾನ್ ಅಹಮದ್ 2021ರ ಸೆಪ್ಟೆಂಬರ್‌ನಲ್ಲಿ ಶರಣಾಗತರಾಗಿದ್ದರು. ಉಳಿದ 135 ಆರೋಪಿಗಳ ವಿರುದ್ಧದ ವಿಚಾರಣೆಯನ್ನು ಮುಂದೂಡಲಾಗಿದೆ.



ಪ್ರಕರಣವೇನು?: ವಾಹಿನಿಯೊಂದರಲ್ಲಿ ಪ್ರಸಾರವಾಗಿದ್ದ ಸುದ್ದಿಯೊಂದನ್ನು ಉಲ್ಲೇಖಿಸಿ ಫಿರೋಜ್ ಪಾಷಾ ಎಂಬವರು ಫೇಸ್‌ಬುಕ್‌ನಲ್ಲಿ ಪೋಸ್ಟ್ ಹಾಕಿದ್ದರು. ಇದಕ್ಕೆ ಪ್ರತಿಯಾಗಿ ಕಾವಲ್‌ಬೈರಸಂದ್ರ ನಿವಾಸಿ ನವೀನ್ ತಮ್ಮ ಫೇಸ್‌ಬುಕ್ ಅಕೌಂಟ್‌ನಲ್ಲಿ 2020ರ ಆಗಸ್ಟ್ 11ರ ಸಂಜೆ 6 ಗಂಟೆಗೆ ಕಮೆಂಟ್ (ಟೀಕೆ) ಮಾಡಿದ್ದರು. ಈ ಕಮೆಂಟ್‌ನಲ್ಲಿ ಪ್ರವಾದಿ ಮಹಮದ್ ಅವರನ್ನು ಅವಹೇಳನ ಮಾಡಲಾಗಿದೆ ಎಂದು ಆರೋಪಿಸಿ ಪ್ರಕರಣದ 14ನೇ ಆರೋಪಿ ಸೈಯದ್ ಇಕ್ರಮುದ್ದೀನ್ ನೇತೃತ್ವದಲ್ಲಿ 25ರಿಂದ 30 ಜನ 2020ರ ಆಗಸ್ಟ್ 11ರಂದು ರಾತ್ರಿ 7.30ರ ಸುಮಾರಿಗೆ ಕಾಡುಗೊಂಡನಹಳ್ಳಿ ಪೊಲೀಸ್ ಠಾಣೆ ಮುಂದೆ ಜಮಾಯಿಸಿದ್ದರು.

▶6

'ವಿಶ್ವಾಸ ಇಮ್ಮಡಿಯಾಗಿದೆ'



ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿದ ಆರೋಪಿಗಳ ದುಷ್ಕೃತ್ಯ ಸಾರ್ವಜನಿಕರ ವಿಶ್ವಾಸ ಮತ್ತು ಭದ್ರತೆಯ ಪ್ರಜ್ಞೆಯನ್ನೇ ಅಲುಗಾಡಿಸಿತ್ತು. ಪೊಲೀಸರ ದಕ್ಷತೆಯ ಬಗ್ಗೆ ಸಾರ್ವಜನಿಕರ ವಿಶ್ವಾಸ ಕುಸಿಯುವಂತೆ ಮಾಡಿತ್ತು. ಆದರೆ, ಈ ಪ್ರಕರಣ ದಲ್ಲಿ ನ್ಯಾಯಾಲಯ ಅಪರಾಧಿಗಳಿಗೆ ಸೂಕ್ತ ಶಿಕ್ಷೆ ವಿಧಿಸುವ ಮೂಲಕ ನ್ಯಾಯದ ವಿಶ್ವಾಸವನ್ನು ಇಮ್ಮಡಿಗೊಳಿಸಿದೆ. ಅಂತೆಯೇ, ಪಿಎಫ್‌ಐ (ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ) ಸಂಘಟನೆಯನ್ನು ಕಾನೂನುಬಾಹಿರ ಎಂದು ಘೋಷಿಸಿರುವ ಕೇಂದ್ರ ಸರ್ಕಾರದ ಕ್ರಮವನ್ನು ಈ ತೀರ್ಪು ಸಮರ್ಥಿಸಿದೆ

ಪಿ.ಪ್ರಸನ್ನ ಕುಮಾರ್,
ಎನ್‌ಐಎ ಪರ ವಾದ ಮಂಡಿಸಿದ್ದ ವಿಶೇಷ ಪ್ರಾಸಿಕ್ಯೂಟರ್

ಸಣ್ಣ ವರ್ತಕರ ಜಿಎಸ್‌ಟಿ ಮನ್ನಾ

₹40 ಲಕ್ಷ ವಹಿವಾಟು ದಾಟಿದರೆ ನೋಂದಣಿ ಕಡ್ಡಾಯ: ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ತೆರಿಗೆ ಇಲಾಖೆ ನೋಟಿಸ್ ನೀಡಿದ್ದ 9,000 ಸಣ್ಣ ವರ್ತಕರು ಇಲ್ಲಿಯವರೆಗೂ ಪಾವತಿಸಬೇಕಿದ್ದ ಜಿಎಸ್‌ಟಿ ಮನ್ನಾ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮತಿಸಿದ್ದಾರೆ.

ಯುಪಿಐ ಮೂಲಕ ವಾರ್ಷಿಕ ₹40 ಲಕ್ಷಕ್ಕಿಂತ ಹೆಚ್ಚಿನ ವಹಿವಾಟು ನಡೆಸಿದ್ದ ಬೇಕರಿ, ಹೋಟೆಲ್, ಬೀಡಾ ಅಂಗಡಿ ಮತ್ತು ಟೀ ಅಂಗಡಿ ಮಾಲೀಕರಿಗೆ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ನೋಟಿಸ್ ನೀಡಿದ್ದರು. ನೋಂದಣಿ ಮಾಡಿಸಿ ಮತ್ತು ಜಿಎಸ್‌ಟಿ ಪಾವತಿಸಿ ಎಂದು ಸೂಚಿಸಿದ್ದರು. ಈ ಕ್ರಮಕ್ಕೆ ಆಕ್ಷೇಪ ಎದುರಾಗಿತ್ತು. ವರ್ತಕರು ಪ್ರತಿಭಟನೆ ನಡೆಸಿದ್ದರು. ಜಿಎಸ್‌ಟಿ ಕೇಂದ್ರದ್ದು ಎಂದು ಕಾಂಗ್ರೆಸ್ ದೂರಿದ್ದರೆ, ಕರ್ನಾಟಕದಲ್ಲಿ ಮಾತ್ರ ಈ ರೀತಿ ವಸೂಲು ಮಾಡಲಾಗುತ್ತಿದೆ ಎಂದು ಬಿಜೆಪಿ ನಾಯಕರು ಆಪಾದಿಸಿದ್ದರು. ಇದು ರಾಜಕೀಯ ವಾಗ್ವಾದಕ್ಕೂ ಕಾರಣವಾಗಿತ್ತು.

ಈ ಬೆಳವಣಿಗೆಗಳ ಬೆನ್ನಲ್ಲೇ ಸಿದ್ದರಾಮಯ್ಯ ಅವರು, ಅಧಿಕಾರಿಗಳು ಮತ್ತು ಉದ್ಯಮಿಗಳ ಸಂಘಟನೆಗಳ ಜತೆ ಬುಧವಾರ ಸಭೆ ನಡೆಸಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸಣ್ಣ ವರ್ತಕರ ಹಿತಾಸಕ್ತಿ ಕಾಪಾಡಲು ಸರ್ಕಾರ ಬದ್ಧವಾಗಿದೆ. ಆದರೆ, ವಾರ್ಷಿಕ ₹40 ಲಕ್ಷ ವಹಿವಾಟು ದಾಟಿದವರು ನಿಯಮದಂತೆ ಜಿಎಸ್‌ಟಿ ಪಾವತಿಸುವುದು ಕಡ್ಡಾಯ. ಹಾಗಾಗಿ, ಎಲ್ಲ ವ್ಯಾಪಾರಿಗಳು ಇನ್ನು ಮುಂದೆ ಜಿಎಸ್‌ಟಿಗೆ ನೋಂದಣಿ ಮಾಡಿಸುವಂತೆ ಸೂಚಿಸಲಾಗಿದೆ' ಎಂದರು.

'ಸಣ್ಣ ವರ್ತಕರಲ್ಲಿ ಜಿಎಸ್‌ಟಿ ನೋಟಿಸ್ ಕುರಿತು ಗೊಂದಲ ಇದೆ. ಸಾಲದ ಮೊತ್ತ, ವೈಯಕ್ತಿಕ ವಹಿವಾಟು ಹಣ ಸಹ ಇದರಲ್ಲಿ ಸೇರಿದೆ ಎಂದು ವರ್ತಕರು ದೂರು ಸಲ್ಲಿಸಿದ್ದಾರೆ. ನೋಟಿಸ್ ನೀಡುವುದು ತಪ್ಪಲ್ಲ. ಮಧ್ಯವರ್ತಿಗಳಿಗೆ ಅವಕಾಶ ನೀಡದೆ, ವ್ಯಾಪಾರಿಗಳು ನೇರವಾಗಿ ಇಲಾಖೆಯನ್ನು ಸಂಪರ್ಕಿಸಿ ಸಮಸ್ಯೆ ಬಗೆಹರಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

'ಯುಪಿಐ ಅಡಿ ₹40 ಲಕ್ಷಕ್ಕೂ ಅಧಿಕ ವಹಿವಾಟು ಮಾಡಿರುವವರಿಗೆ ಮಾತ್ರ ನೋಟಿಸ್ ನೀಡಲಾಗಿದೆ. ಆರಂಭದಲ್ಲಿ ನೋಂದಣಿ ಮಾಡುವಂತೆ ನೋಟಿಸ್ ನೀಡಲಾಗಿತ್ತು. ಹಾಲು, ತರಕಾರಿ, ಮಾಂಸ, ಹಣ್ಣಿನಂತಹ ಅಗತ್ಯ ಆಹಾರ ವಸ್ತುಗಳಿಗೆ ತೆರಿಗೆ ವಿನಾಯಿತಿ ಇದ್ದು, ಅಂತಹ ವ್ಯಾಪಾರಿಗಳಿಗೆ ನೋಟಿಸ್ ಕೊಟ್ಟಿದ್ದರೂ ಅವರಿಂದ ತೆರಿಗೆ ವಸೂಲು ಮಾಡುವುದಿಲ್ಲ ಎಂದು ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ' ಎಂದು ಮುಖ್ಯಮಂತ್ರಿ ಹೇಳಿದರು.

'ಯುಪಿಐ ವಹಿವಾಟು ಕೈಬಿಟ್ಟರೆ ವಹಿವಾಟಿನ ಮೇಲೆ ಪರಿಣಾಮ ಬೀರಲಿದೆ. ರಾಜ್ಯದಲ್ಲಿ 9,000 ವರ್ತಕರಿಗೆ ಕಳೆದ 2-3 ವರ್ಷಗಳಲ್ಲಿ 18 ಸಾವಿರ ನೋಟಿಸ್ ನೀಡಲಾಗಿದೆ. ವ್ಯಾಪಾರ ವಹಿವಾಟುಗಳನ್ನು ಕಾನೂನು ಬದ್ಧವಾಗಿ ನಡೆಸುವವರಿಗೆ ಸರ್ಕಾರ ಎಲ್ಲಾ ನೆರವು ನೀಡಲಿದೆ. ತೊಂದರೆ ನೀಡುವುದು ಸರ್ಕಾರದ ಉದ್ದೇಶವಲ್ಲ' ಎಂದು ಸ್ಪಷ್ಟಪಡಿಸಿದರು.

'ವ್ಯಾಪಾರ ವಹಿವಾಟು ಬಂದ್‌ಗೆ ಯಾವುದೇ ಸಂಘಟನೆ ಬೆಂಬಲ ನೀಡಿಲ್ಲ ಎಂದು ಪ್ರತಿನಿಧಿಗಳು ಸ್ಪಷ್ಟಪಡಿಸಿದ್ದಾರೆ. ಪ್ರತಿಭಟನೆಗಳನ್ನೂ ಕೈಬಿಡಲಿದ್ದಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವರ್ತಕರಿಗೆ ಸರ್ಕಾರದ ಅಭಯ

ತೆರಿಗೆ ಸಂಗ್ರಹದಲ್ಲಿ ಸರ್ಕಾರ ಪಾರದರ್ಶಕವಾಗಿ ಕಾರ್ಯನಿರ್ವಹಿಸಲಿದ್ದು, ಯಾರಿಗೂ ತೊಂದರೆ ಆಗುವುದಿಲ್ಲ ಎಂಬುದನ್ನು ಸರ್ಕಾರ ಖಾತ್ರಿಪಡಿಸುತ್ತದೆ ಎಂದು ಸಿದ್ದರಾಮಯ್ಯ ಹೇಳಿದರು.

ಜಿಎಸ್‌ಟಿಯನ್ನು ಕೇಂದ್ರ ಹಣಕಾಸು ಸಚಿವರ ಅಧ್ಯಕ್ಷತೆಯ ಜಿಎಸ್‌ಟಿ ಕೌನ್ಸಿಲ್ ನಿರ್ಧರಿಸುತ್ತದೆ. ಈ ತೆರಿಗೆ ಸಂಗ್ರಹದಲ್ಲಿ ಶೇ 50ರಷ್ಟನ್ನು ರಾಜ್ಯಕ್ಕೆ ನೀಡಲಾಗುತ್ತದೆ. ದೇಶದಲ್ಲೇ ಕರ್ನಾಟಕ ಜಿಎಸ್‌ಟಿ ಸಂಗ್ರಹದಲ್ಲಿ ಎರಡನೇ ಸ್ಥಾನದಲ್ಲಿದೆ. ಇದು ರಾಜ್ಯದ ವರ್ತಕರ ಶ್ರಮದ ಫಲ ಎಂದು ಶ್ಲಾಘಿಸಿದರು.

ವರ್ತಕರಿಗೆ ನೆರವು ನೀಡಲು ಸಹಾಯವಾಣಿ ಇದ್ದು, ಇದನ್ನು ಪರಿಣಾಮಕಾರಿಯಾಗಿಸಬೇಕು ಎಂದು ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

- ಜಿಎಸ್‌ಟಿ ರಹಿತ ಸರಕುಗಳ ವಹಿವಾಟು ಮಿತಿ ₹40 ಲಕ್ಷ
- ಜಿಎಸ್‌ಟಿ ರಹಿತ ಸೇವಾ ವಹಿವಾಟು ಮಿತಿ ₹20 ಲಕ್ಷ
- ಹಾಲು, ಹಣ್ಣು, ತರಕಾರಿ, ಮಾಂಸ ಇತ್ಯಾದಿಗೆ ವಿನಾಯಿತಿ
- ₹15 ಕೋಟಿಗಿಂತ ಹೆಚ್ಚು ವಹಿವಾಟು ನಡೆಸಿದ್ದರೆ ರಾಜಿ ಪಂಚಾಯಿತಿಗೆ ಅವಕಾಶ
- ಪ್ರತಿ ವರ್ತಕರಿಗೂ ವೈಯಕ್ತಿಕ ಅಹವಾಲು ಸಲ್ಲಿಸಲು ಅವಕಾಶ
- ದಾಖಲೆಗಳ ಪರಿಶೀಲನೆಯ ನಂತರ ಜಿಎಸ್‌ಟಿ ನೋಂದಣಿ ನಿರ್ಧಾರ
- ವರ್ತಕರ ಅನುಕೂಲಕ್ಕೆ ಹಲವು ಸಹಾಯವಾಣಿ ಸಂಖ್ಯೆ ಬಿಡುಗಡೆ



ರಸಗೊಬ್ಬರಕ್ಕಾಗಿ ಪರದಾಟ

ಪ್ರಜಾವಾಣಿ ಚಿತ್ರ: ಭರತ್ ಕಂದಕೂರ



ಕೊಪ್ಪಳ ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘದ ಆವರಣದಲ್ಲಿ ಬುಧವಾರ ರಸಗೊಬ್ಬರ ಪಡೆಯಲು ಬೆಳಗಿನಿಂದಲೇ ರೈತರು ಸರತಿಯಲ್ಲಿ ನಿಂತಿದ್ದರು

ವರದಿ ▶7

ಕೆ–ರೈಡ್ ವಿಶೇಷ ಉಪ ಆಯುಕ್ತೆ ಮನೆಯಲ್ಲಿ ಶೋಧ

ವಾಸಂತಿ ₹9 ಕೋಟಿ ಒಡತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ–ರೈಡ್ ವಿಶೇಷ ಉಪ ಆಯುಕ್ತೆ ಬಿ.ವಿ. ವಾಸಂತಿ ಅಮರ್ ಅವರ ಮನೆಯಲ್ಲಿ ಶೋಧ ನಡೆಸಿರುವ ಲೋಕಾಯುಕ್ತ ಪೊಲೀಸರು ₹9.02 ಕೋಟಿ ಮೌಲ್ಯದ ಆಸ್ತಿ ಪತ್ತೆ ಮಾಡಿದ್ದಾರೆ.



ವಾಸಂತಿ ಅಮರ್

ವಾಸಂತಿ ಅವರೂ ಸೇರಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ 8 ಅಧಿಕಾರಿಗಳ ಮನೆಗಳಲ್ಲಿ ಶೋಧ ನಡೆಸಿ, ಒಟ್ಟು ₹37.41 ಕೋಟಿಯಷ್ಟು ಮೌಲ್ಯದ ಸಂಪತ್ತನ್ನು ಪತ್ತೆ ಮಾಡಲಾಗಿದೆ. ಎಂಟೂ ಅಧಿಕಾರಿಗಳ ಪೈಕಿ ವಾಸಂತಿ ಅವರು ಹೊಂದಿರುವ ಆಸ್ತಿಯ ಮೌಲ್ಯವೇ ಅತಿಹೆಚ್ಚು ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

'ನಗರದ ಆರ್.ಟಿ.ನಗರದಲ್ಲಿ ವಾಸಂತಿ ಪ್ರಸ್ತುತ ವಾಸವಿರುವ ಮನೆ, ರಾಜ್ಯದ ವಿವಿಧೆಡೆ ಅವರ ಆಪ್ತರ ಮನೆಗಳು ಸೇರಿ ಒಟ್ಟು ಐದು ಕಡೆ ಶೋಧ ನಡೆಸಲಾಗಿದೆ. ಅವರ ಹೆಸರಿನಲ್ಲಿ ₹7.40 ಕೋಟಿ ಮೌಲ್ಯದ 4 ವಾಸದ ಮನೆಗಳು, ಮೂರು ನಿವೇಶನಗಳು ಮತ್ತು 3 ಎಕರೆ ಕೃಷಿ ಜಮೀನು ಹೊಂದಿರುವುದು ಈ ವೇಳೆ ಪತ್ತೆಯಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

▶10

ಒಂದೇ ಮನೆಯಲ್ಲಿ ₹52 ಲಕ್ಷ ನಗದು

ಕೊಪ್ಪಳ ಜಿಲ್ಲಾ ಕೈಗಾರಿಕಾ ಕೇಂದ್ರದ ಉಪ ನಿರ್ದೇಶಕ ಶೇಖು ಚವ್ಹಾಣ್ ಅವರ ಮನೆಯಲ್ಲಿ ಶೋಧದ ವೇಳೆ ₹52 ಲಕ್ಷದಷ್ಟು ನಗದು ಪತ್ತೆಯಾಗಿದೆ. ನಗದನ್ನು ಎಣಿಕೆ ಮಾಡಲೇ ಹಲವು ತಾಸು ಬೇಕಾಯಿತು ಎಂದು ಲೋಕಾಯುಕ್ತ ಪೊಲೀಸರು ಮಾಹಿತಿ ನೀಡಿದ್ದಾರೆ.



ಕೊಪ್ಪಳ ಜಿಲ್ಲಾ ಕೈಗಾರಿಕಾ ಇಲಾಖೆಯ ಉಪನಿರ್ದೇಶಕ ಶೇಖು ಚವ್ಹಾಣ್ ಅವರ ಹುಬ್ಬಳ್ಳಿಯ ಮನೆಯಲ್ಲಿ ಸಿಕ್ಕ ಹಣ

'ಬುಧವಾರ ಶೋಧ ನಡೆಸಲಾದ ಎಂಟು ಅಧಿಕಾರಿಗಳ ಪೈಕಿ ಅತ್ಯಂತ ಕಡಿಮೆ ಆಸ್ತಿ ಹೊಂದಿರುವುದು ಶೇಖು ಚವ್ಹಾಣ್ (ಒಟ್ಟು ₹2.47 ಕೋಟಿ). ಆದರೆ ಶೋಧದ ವೇಳೆ ಪತ್ತೆಯಾದ ₹81.89 ಲಕ್ಷದಷ್ಟು ನಗದಿನಲ್ಲಿ, ಶೇಖು ಅವರದ್ದೇ ಸಿಂಹಪಾಲು' ಎಂದಿದ್ದಾರೆ.

ಶೇಖು ಅವರಿಗೆ ಸೇರಿದ ಬ್ಯಾಂಕ್ ಖಾತೆಗಳು ಮತ್ತು ಲಾಕರ್‌ಗಳ ವಿವರ ದೊರೆತಿದ್ದು, ಅವುಗಳಲ್ಲಿ ಏನೆಲ್ಲಾ ಇದೆ ಎಂಬುದರ ಬಗ್ಗೆ ತನಿಖೆ ಮುಂದುವರಿಸಲಾಗಿದೆ ಎಂದು ಹೇಳಿದ್ದಾರೆ.

8 ಅಧಿಕಾರಿಗಳ ಬಳಿ ಅಪಾರ ಪ್ರಮಾಣದ ಆಸ್ತಿ ಪತ್ತೆ

ಲೋಕಾಯುಕ್ತ ಪೊಲೀಸರು, ಎಂಟು ಅಧಿಕಾರಿಗಳಿಗೆ ಸೇರಿದ ಒಟ್ಟು 41 ಸ್ಥಳಗಳಲ್ಲಿ ಶೋಧ ನಡೆಸಿದ್ದಾರೆ. ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಸಂಬಂಧ ಈ ಎಲ್ಲ ಅಧಿಕಾರಿಗಳ ವಿರುದ್ಧ ರಾಜ್ಯದ ವಿವಿಧೆಡೆ ಲೋಕಾಯುಕ್ತ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿತ್ತು

- ₹26.36 ಕೋಟಿ — ಎಂಟೂ ಅಧಿಕಾರಿಗಳ ಬಳಿ ಪತ್ತೆಯಾದ ಸ್ಥಿರಾಸ್ತಿಗಳ ಮೌಲ್ಯ
- ₹81.89 ಲಕ್ಷ — ನಗದು
- ₹2.57 ಕೋಟಿ — ವಾಹನಗಳ ಮೌಲ್ಯ
- ₹4.85 ಕೋಟಿ — ಚಿನ್ನಾಭರಣಗಳ ಮೌಲ್ಯ
- ₹2.81 ಕೋಟಿ — ಗೃಹಬಳಕೆ ವಸ್ತುಗಳು, ಬ್ಯಾಂಕ್ ಠೇವಣಿ ಮತ್ತು ಹೂಡಿಕೆಗಳ ಮೌಲ್ಯ

'ಕರ್ನಾಟಕದಲ್ಲಿ ಭಾರಿ ಮತ ಕಳವು'

ಶೀಘ್ರದಲ್ಲೇ ಪ್ರಕರಣದ ಸಾಕ್ಷ್ಯ ಬಹಿರಂಗಪಡಿಸುವೆ: ರಾಹುಲ್

ನವದೆಹಲಿ (ಪಿಟಿಐ): 'ಕರ್ನಾಟಕದ ಲೋಕಸಭಾ ಕ್ಷೇತ್ರವೊಂದರಲ್ಲಿ ದೊಡ್ಡ ಪ್ರಮಾಣದಲ್ಲಿ ಚುನಾವಣಾ ಅಕ್ರಮ ನಡೆದಿದೆ. ಈ ಭಯಂಕರ ಮತ ಕಳ್ಳತನದ 'ಕಾರ್ಯ ವಿಧಾನ'ವನ್ನು ಶೀಘ್ರದಲ್ಲೇ ಯಥಾವತ್ತಾಗಿ ಚುನಾವಣಾ ಆಯೋಗ ಮತ್ತು ಜನರ ಮುಂದಿಡುತ್ತೇವೆ' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದರು.

ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ಸಂಸತ್ತಿನ ಹೊರಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾವು ಕರ್ನಾಟಕದಲ್ಲಿ ಒಂದು ಲೋಕಸಭಾ ಕ್ಷೇತ್ರವನ್ನು ಆಯ್ದುಕೊಂಡು ಆಳವಾದ ಅಧ್ಯಯನ ನಡೆಸಿದೆವು. ಇಡೀ ಕ್ಷೇತ್ರದ ಮತದಾರರ ಪಟ್ಟಿಯನ್ನು ತೆಗೆದುಕೊಂಡೆವು. ಸಮಸ್ಯೆ ಎಂದರೆ ಅವರು ನಮಗೆ ಕಾಗದದ ಮೇಲೆ ಇದ್ದ ಪಟ್ಟಿಯನ್ನು ಕೊಟ್ಟಿದ್ದರು. ಕಾಗದದ ಪಟ್ಟಿಯನ್ನು ಇರಿಸಿಕೊಂಡು ವಿಶ್ಲೇಷಣೆ ಸಾಧ್ಯವಿಲ್ಲ. ನಾವು ಅದನ್ನು ಡಿಜಿಟಲ್ ರೂಪಕ್ಕೆ ಪರಿವರ್ತಿಸಿ, ಅದನ್ನು ವಿಶ್ಲೇಷಣೆಗೆ ಒಳಪಡಿಸಿದೆವು. ಇದಕ್ಕೆ 6 ತಿಂಗಳು ಸಮಯ ಬೇಕಾಯಿತು' ಎಂದರು.

ಅಲ್ಲದೇ 'ಈ ವಿಶ್ಲೇಷಣೆಯ ಮೂಲಕ, 'ಅವರು' ಮತದಾರರ ಪಟ್ಟಿಯಲ್ಲಿ ಹೇಗೆ ಅಕ್ರಮ ಎಸಗುತ್ತಾರೆ, ಹೊಸ ಮತದಾರರನ್ನು ಹೇಗೆ ಸೇರ್ಪಡೆ ಮಾಡುತ್ತಾರೆ, ಅವರನ್ನು ಎಲ್ಲಿಂದ ಕರೆತರುತ್ತಾರೆ ಎಂಬುದು ಸೇರಿದಂತೆ 'ಅವರ' ಮತ ಕಳ್ಳತನದ ಸಂಪೂರ್ಣ ಕಾರ್ಯ ವಿಧಾನವನ್ನೇ ತಿಳಿದು ಕೊಂಡಿದ್ದೇವೆ' ಎಂದರು.

ಈ ಕುರಿತು ತಮ್ಮ 'ಎಕ್ಸ್' ಖಾತೆಯಲ್ಲೂ ರಾಹುಲ್ ಗಾಂಧಿ ಪೋಸ್ಟ್ ಮಾಡಿದ್ದಾರೆ. ಆದರೆ, ಕರ್ನಾಟಕದ ಯಾವ ಲೋಕಸಭಾ ಕ್ಷೇತ್ರವನ್ನು ಆಯ್ದುಕೊಂಡು ಅಧ್ಯಯನ ನಡೆಸಲಾಗಿದೆ ಎನ್ನುವುದನ್ನು ಬಹಿರಂಗಪಡಿಸಿಲ್ಲ.


'ಅವರ' ಆಟವನ್ನು ಕಾಂಗ್ರೆಸ್ ತಿಳಿದುಕೊಂಡಿದೆ ಎನ್ನುವುದು ಈಗ ಚುನಾವಣಾ ಆಯೋಗಕ್ಕೂ ಗೊತ್ತಾಗಿದೆ.

ಹೀಗಾಗಿಯೇ 'ಎಸ್‌ಐಆರ್' ಮೂಲಕ ಬಿಹಾರದಲ್ಲಿ ಮತದಾರರ ಪಟ್ಟಿಯಿಂದ ಹೆಸರನ್ನು ಅಳಿಸಿ ಹಾಕುವ ಹೊಸ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಭಾರತದಲ್ಲಿ ಇಡೀ ಚುನಾವಣೆಯನ್ನೇ ಕದಿಯಲಾಗುತ್ತಿದೆ. ಇದು ಭಾರತದ ವಾಸ್ತವ' ಎಂದ ರಾಹುಲ್ ಗಾಂಧಿ, 'ಎಸ್‌ಐಆರ್' ವಿರುದ್ಧ ಸಂಸತ್ತಿನ ಒಳಗೆ ಮತ್ತು ಹೊರಗೆ ಹೋರಾಟ ನಡೆಸಲಾಗುವುದು' ಎಂದರು.

ಕಿವಿಗೊಡದ ಚುನಾವಣಾ ಆಯೋಗ

'ಮಹಾರಾಷ್ಟ್ರದ ಚುನಾವಣೆಗೆ ಸಂಬಂಧಿಸಿದಂತೆ ನಾವು ಚುನಾವಣಾ ಆಯೋಗದ ಬಳಿ ಮತದಾರರ ಪಟ್ಟಿ ಕೇಳಿದ್ದೆವು, ಮತದಾನದ ದಿನದ ವಿಡಿಯೊ ಚಿತ್ರೀಕರಣದ ದಾಖಲೆ ನೀಡುವಂತೆಯೂ ಮನವಿ ಮಾಡಿದ್ದೆವು. ಆದರೆ, ಆಯೋಗವು ನಮ್ಮ ಮನವಿಗೆ ಕಿವಿಗೊಡಲಿಲ್ಲ. ಮಾಹಿತಿ ನೀಡಲು ನಿರಾಕರಿಸಿದ್ದಲ್ಲದೆ, ಇದಕ್ಕೆ ಸಂಬಂಧಿಸಿದ ನಿಯಮಗಳನ್ನೇ ಬದಲಿಸಿತು' ಎಂದು ರಾಹುಲ್ ಗಾಂಧಿ ದೂರಿದರು.

'ಮಹಾರಾಷ್ಟ್ರದಲ್ಲಿ ಮತದಾರರ ಪಟ್ಟಿಯಲ್ಲಿ ಸುಮಾರು ಒಂದು ಕೋಟಿಯಷ್ಟು ಹೊಸ ಮತದಾರರು ಸೇರ್ಪಡೆಗೊಂಡರು. ಬಿಹಾರದಲ್ಲಿ ಮನೆ ಭೇಟಿಯ ವೇಳೆ, ವಿಳಾಸದಲ್ಲಿ ಲಭ್ಯವಿಲ್ಲದ 52 ಲಕ್ಷ ಮತದಾರರನ್ನು ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ. ಪಟ್ಟಿಯಲ್ಲಿ ಇದ್ದವರಲ್ಲಿ 18 ಲಕ್ಷ ಮತದಾರರು ಮೃತಪಟ್ಟಿರುವ ಅಂಶವೂ ಪರಿಷ್ಕರಣೆ ವೇಳೆ ಗಮನಕ್ಕೆ ಬಂದಿದೆ. ಈ ವಿಷಯ ಬಿಹಾರಕ್ಕೆ ಸೀಮಿತವಲ್ಲ. ಈ ಸಂಖ್ಯೆ ಕೇವಲ 52 ಲಕ್ಷವೂ ಅಲ್ಲ. ಮಹಾರಾಷ್ಟ್ರದಲ್ಲೂ ಅವರು ಈ ರೀತಿಯಲ್ಲೇ ಅಕ್ರಮ ಎಸಗಿದ್ದಾರೆ. ದೇಶದಲ್ಲಿ 'ಮತ ಕಳ್ಳತನ' ಹೇಗೆ ನಡೆಯುತ್ತಿದೆ ಎನ್ನುವುದನ್ನು ಇದು ಹೇಳುತ್ತದೆ' ಎಂದಿದ್ದಾರೆ.



ಬಿಹಾರದಲ್ಲಿ 'ಎಸ್‌ಐಆರ್' ಹೆಸರಿನಲ್ಲಿ ಎಸ್.ಸಿ, ಎಸ್.ಟಿ, ಒಬಿಸಿ ಮತ್ತು ಅಲ್ಪಸಂಖ್ಯಾತ ಸಹೋದರ–ಸಹೋದರಿಯರ ಮತಗಳನ್ನು ಕದಿಯಲಾಗಿದೆ. ನಾವು ಕೈ ಕಟ್ಟಿಕೊಂಡು ಸುಮ್ಮನೆ ಕೂರುವುದಿಲ್ಲ

ರಾಹುಲ್ ಗಾಂಧಿ, ಲೋಕಸಭೆಯ ವಿರೋಧ ಪಕ್ಷದ ನಾಯಕ

₹1,654 ಕೋಟಿ ಅಕ್ರಮ ಮಿಂತ್ರಾ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿದ್ಧಉಡುಪು ಮಾರಾಟ ಕಂಪನಿ 'ಮಿಂತ್ರಾ'ವು ₹1,654 ಕೋಟಿ ಮೊತ್ತದಷ್ಟು ವಿದೇಶಿ ನೇರ ಬಂಡವಾಳವನ್ನು ಅಕ್ರಮವಾಗಿ ವರ್ಗಾವಣೆ ಮಾಡಿದೆ ಎಂದು ಜಾರಿ ನಿರ್ದೇಶನಾಲಯವು (ಇ.ಡಿ) ಪ್ರಕರಣ ದಾಖಲಿಸಿದೆ.

'ಕಂಪನಿಯು ವಿದೇಶಿ ನೇರ ಬಂಡವಾಳ (ಎಫ್‌ಡಿಐ) ನಿಯಮಗಳ ಅಡಿಯಲ್ಲಿ 'ಹೋಲ್‌ಸೇಲ್ ಕ್ಯಾಷ್ ಅಂಡ್ ಕ್ಯಾರಿ' ಎಂದು ನೋಂದಣಿ ಮಾಡಿದೆ. ಕಂಪನಿಯು ಈವರೆಗೆ ₹1,654 ಕೋಟಿಯಷ್ಟು ಎಫ್‌ಡಿಐ ಪಡೆದಿದೆ. ಈ ಬಂಡವಾಳವನ್ನು ಬಳಸಿಕೊಂಡು ನಡೆಸಿದ ವಹಿವಾಟಿನಲ್ಲಿ ಎಫ್‌ಡಿಐ ನಿಯಮಗಳ ಉಲ್ಲಂಘನೆ ಯಾಗಿದೆ. ಈ ಸಂಬಂಧ ಮಿಂತ್ರಾ ಡಿಸೈನ್ಸ್ ಪ್ರೈವೆಟ್ ಲಿಮಿಟೆಡ್ ಮತ್ತು ಅದರ ನಿರ್ದೇಶಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಇ.ಡಿ ಮಾಹಿತಿ ನೀಡಿದೆ.

'ಎಫ್‌ಡಿಐ ನಿಯಮಗಳ ಪ್ರಕಾರ ನೇರ ಮಾರಾಟದಲ್ಲಿ ತೊಡಗಿರುವ ಕಂಪನಿ ಮಾತ್ರವೇ ಈ ರೀತಿಯ ಬಂಡವಾಳ ಪಡೆಯಬಹುದು. ಮಿಂತ್ರಾ ಡಿಸೈನ್ಸ್ ಎಫ್‌ಡಿಐ ನಿಯಮಗಳಲ್ಲಿ 'ಹೋಲ್‌ಸೇಲ್ ಕ್ಯಾಷ್ ಅಂಡ್ ಕ್ಯಾರಿ' ಎಂದು ನೋಂದಣಿ ಮಾಡಿದ್ದರೂ ಗ್ರಾಹಕರಿಗೆ ನೇರವಾಗಿ ಉತ್ಪನ್ನಗಳನ್ನು ಮಾರಾಟ ಮಾಡಿಲ್ಲ. ಬದಲಿಗೆ 'ವೆಕ್ಟರ್ ಇ–ಕಾಮರ್ಸ್' ಎಂಬ ಕಂಪನಿಗೆ ತನ್ನ ಅಷ್ಟೂ ಸರಕನ್ನು ಮಾರಾಟ ಮಾಡಿದೆ' ಎಂದು ಇ.ಡಿ ವಿವರಿಸಿದೆ.



'ಮಿಂತ್ರಾ ಮತ್ತು ವೆಕ್ಟರ್ ಕಂಪನಿಗಳು ಒಂದೇ ಸಮೂಹದ ಕಂಪನಿಗಳು. ಸರಕುಗಳು ಮಿಂತ್ರಾದಿಂದ ವೆಕ್ಟರ್‌ಗೆ ಮಾರಾಟವಾಗಿದ್ದರೂ ಬಳಕೆದಾರರಿಗೆ ನೇರವಾಗಿ ಮಾರಾಟ ಮಾಡಿದಂತಾಗಿಲ್ಲ. ಈ ಮೂಲಕ ಮಿಂತ್ರಾ ಕಂಪನಿಯು ಎಫ್‌ಡಿಐಯ ನಿಯಮವೊಂದನ್ನು ಉಲ್ಲಂಘಿಸಿದೆ' ಎಂದಿದೆ.

▶5

ಸೆ. 22ರಿಂದ 15 ದಿನ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ– ಸಿ.ಎಂ

ಜಾತಿವಾರು ಸಮೀಕ್ಷೆಗೆ ದಿನ ನಿಗದಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸೆಪ್ಟೆಂಬರ್ 22ರಿಂದ ಅಕ್ಟೋಬರ್ 7ರವರೆಗೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿವಾರು ಸಮೀಕ್ಷೆ) ನಡೆಸಲು ಸರ್ಕಾರ ನಿರ್ಧರಿಸಿದೆ.

ಸಮೀಕ್ಷೆ ನಡೆಸುವ ಕುರಿತು ಹಿಂದುಳಿದ ವರ್ಗಗಳ ಆಯೋಗವು ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ. ಈ ಪ್ರಸ್ತಾವ ಬಗ್ಗೆ ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಬುಧವಾರ ಪೂರ್ವಭಾವಿ ಸಭೆ ನಡೆಯಿತು.

ಅಕ್ಟೋಬರ್ ಅಂತ್ಯದ ಒಳಗೆ ಸಮೀಕ್ಷೆಯ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು. ಸಮೀಕ್ಷೆ ನಡೆಸಲು ಅಗತ್ಯವಾದ ತರಬೇತಿ ಸೇರಿದಂತೆ ಎಲ್ಲ ಪೂರ್ವಭಾವಿ ಸಿದ್ಧತೆಗಳನ್ನು ಈಗಲೇ ಆರಂಭಿಸಬೇಕು ಎಂದು ಆಯೋಗಕ್ಕೆ ಮುಖ್ಯಮಂತ್ರಿ ಸೂಚನೆ ನೀಡಿದರು.

ಈ ಬಾರಿ ಮೊಬೈಲ್ ಆ್ಯಪ್ ಬಳಸಿ ಸಮೀಕ್ಷೆ ನಡೆಸಲಾಗುವುದು. ತೆಲಂಗಾಣ ಸರ್ಕಾರ ಈಗಾಗಲೇ ನಡೆಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕುರಿತು ಅಧ್ಯಯನ ನಡೆಸಲು ಮತ್ತು ರಾಜ್ಯದಲ್ಲಿ ಸಮೀಕ್ಷೆಯ ಮೇಲುಸ್ತುವಾರಿಗೆ ಉನ್ನತಮಟ್ಟದ ಸಮಿತಿ ರಚಿಸಲು ಕೂಡಾ ಸಭೆಯಲ್ಲಿ ತೀರ್ಮಾನಿಸಲಾಗಿದೆ.



ಸಿದ್ದರಾಮಯ್ಯ

▶11

ಮುಖ್ಯಾಂಶಗಳು

- ಹಿಂದುಳಿದ ವರ್ಗಗಳ ಆಯೋಗದಿಂದ ಸಮೀಕ್ಷೆ
- ಪೂರ್ವಭಾವಿ ಸಿದ್ಧತೆ ಆರಂಭಿಸಲು ಸೂಚನೆ
- ಈ ಬಾರಿ ಸಮೀಕ್ಷೆಗೆ ಮೊಬೈಲ್ ಆ್ಯಪ್ ಬಳಕೆ

28ರಂದು ತೆಲಂಗಾಣಕ್ಕೆ ನಿಯೋಗ: ತಂಗಡಗಿ

'ಸಮೀಕ್ಷೆ ನಡೆಸುವ ಕುರಿತು ಗುರುವಾರ (ಜುಲೈ 24) ಅಧಿಕೃತ ಆದೇಶ ಹೊರಡಿಸಲಾಗುವುದು' ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ತಿಳಿಸಿದರು.



ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸಮೀಕ್ಷೆ ನಡೆಸುವ ಕುರಿತು ಮುಖ್ಯಮಂತ್ರಿಯ ನೇತೃತ್ವದಲ್ಲಿ ನಡೆದ ಉನ್ನತಮಟ್ಟದ ಸಭೆಯಲ್ಲಿ ಮಹತ್ವದ ವಿಚಾರಗಳ ಕುರಿತು ಚರ್ಚೆ ನಡೆದಿದೆ. ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರ ನೇತೃತ್ವದ ನಿಯೋಗವು ಮುಂದಿನ ಸೋಮವಾರ (ಜುಲೈ 28) ತೆಲಂಗಾಣಕ್ಕೆ ತೆರಳಿ ಅಲ್ಲಿನ ಸಮೀಕ್ಷೆಯ ಪದ್ಧತಿಯನ್ನು ಅಧ್ಯಯನ ನಡೆಸಲಿದೆ' ಎಂದರು.

'ದಸರಾ ರಜೆಯಲ್ಲಿ ಶಿಕ್ಷಕರನ್ನು ಬಳಕೆ ಮಾಡಿಕೊಂಡು 15 ದಿನಗಳಲ್ಲಿ ಸಮೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ. ಇತರ ಇಲಾಖೆಗಳ ಅಧಿಕಾರಿಗಳು ಇದಕ್ಕೆ ಕೈಜೋಡಿಸಲಿದ್ದಾರೆ. ಮುಂದಿನ ಹಂತಗಳಲ್ಲಿ ಸಮೀಕ್ಷೆಯ ಮಾದರಿ, ಶಿಕ್ಷಕರಿಗೆ ತರಬೇತಿ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಅಧಿಕಾರಿಗಳ ಮಟ್ಟದಲ್ಲಿ ಸಭೆಗಳು ನಡೆಯಲಿವೆ' ಎಂದರು.

'ಸಮೀಕ್ಷೆಯ ಮಾದರಿಯಲ್ಲಿ ಎಷ್ಟು ಮಾನದಂಡಗಳು ಇರಬೇಕು ಎಂಬುದರ ಬಗ್ಗೆ ನಿರ್ಧರಿಸಲು ತಜ್ಞರ ತಂಡ ರಚಿಸಲು ತೀರ್ಮಾನಿಸಲಾಗಿದೆ. ಈ ಎಲ್ಲ ಪ್ರಕ್ರಿಯೆಗಳು ಗುರುವಾರದಿಂದಲೇ (ಜುಲೈ 24) ಆರಂಭವಾಗಲಿವೆ. ಗಣತಿದಾರರು ಭೇಟಿ ನೀಡಿದ ಸಂದರ್ಭದಲ್ಲಿ ಮನೆಯಲ್ಲಿ ಲಭ್ಯ ಇಲ್ಲದಿದ್ದವರು ಸ್ವಯಂ ವಿವರಗಳನ್ನು ನಮೂದಿಸಲು ಆ್ಯಪ್ ಮುಂತಾದ ತಾಂತ್ರಿಕ ಸೌಲಭ್ಯಗಳ ವ್ಯವಸ್ಥೆ ಕಲ್ಪಿಸಲಾಗುವುದು' ಎಂದರು.

'ಸಮೀಕ್ಷೆಗೆ ಶಿಕ್ಷಕರು, ಇತರ ಸಿಬ್ಬಂದಿ ಬಳಕೆ'



'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಈ ಬಾರಿ 1.65 ಲಕ್ಷ ಗಣತಿದಾರರು ಸೇರಿದಂತೆ ಮಾನವ ಸಂಪನ್ಮೂಲ ಅವಶ್ಯವಿದೆ. ಸಮೀಕ್ಷೆ ಕೆಲಸಕ್ಕೆ ಶಿಕ್ಷಕರ ಜೊತೆಗೆ ಇತರ ಇಲಾಖೆಗಳ ಸಿಬ್ಬಂದಿಯನ್ನೂ ಬಳಸಿಕೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ತಿಳಿಸಿದರು.


'ಸಂಬಂಧಪಟ್ಟ ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ ಸಮೀಕ್ಷೆ ಕಾರ್ಯವನ್ನು ಯಶಸ್ವಿಗೊಳಿಸಬೇಕು. ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸಮೀಕ್ಷೆ ಯಶಸ್ವಿಗೊಳಿಸಲು ಯೋಜನೆ ರೂಪಿಸಿ ಕಾರ್ಯನಿರ್ವಹಿಸಬೇಕು' ಎಂದು ತಿಳಿಸಿದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ



ರಾಜೀನಾಮೆಗೂ ಮುನ್ನ ರಾಷ್ಟ್ರಪತಿ ಭೇಟಿ

ನವದೆಹಲಿ (ಪಿಟಿಐ): 'ಜಗದೀಪ್ ಧನಕರ್ ಅವರು ಉಪರಾಷ್ಟ್ರಪತಿ ಹುದ್ದೆಗೆ ದಿಢೀರ್ ರಾಜೀನಾಮೆ ಸಲ್ಲಿಸುವ ಮುನ್ನ ಸೋಮವಾರ ರಾತ್ರಿ ರಾಷ್ಟ್ರಪತಿ ಭವನಕ್ಕೆ ಭೇಟಿ ನೀಡಿದ್ದರು' ಎಂದು ಅಧಿಕೃತ ಮೂಲಗಳು ಖಚಿತಪಡಿಸಿವೆ.



ಜಗದೀಪ್ ಧನಕರ್

'ಧನಕರ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಸೋಮವಾರ ರಾತ್ರಿ 9 ಗಂಟೆ ವೇಳೆಗೆ ಭೇಟಿಯಾಗಿ ರಾಜೀನಾಮೆ ಪತ್ರವನ್ನು ಸಲ್ಲಿಸಿದ್ದರು. ಇದಾದ ಅರ್ಧ ಗಂಟೆಯ ಬಳಿಕ ತಮ್ಮ ರಾಜೀನಾಮೆ ಪತ್ರವನ್ನು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಬಹಿರಂಗಪಡಿಸಿದರು' ಎಂದು ಮೂಲಗಳು ತಿಳಿಸಿವೆ. 'ಆರೋಗ್ಯದ ಮೇಲೆ ಹೆಚ್ಚಿನ ಗಮನಹರಿಸಲು ಮತ್ತು ವೈದ್ಯಕೀಯ ಸಲಹೆಯನ್ನು ಪಾಲಿಸಲು ಈ ನಿರ್ಧಾರ ತೆಗೆದುಕೊಂಡಿದ್ದೇನೆ. ಸಂವಿಧಾನದ 67(ಎ) ವಿಧಿಗೆ ಅನುಗುಣವಾಗಿ, ತಕ್ಷಣ ಜಾರಿಗೆ ಬರುವಂತೆ ಭಾರತದ ಉಪರಾಷ್ಟ್ರಪತಿ ಹುದ್ದೆಗೆ ರಾಜೀನಾಮೆ ನೀಡುತ್ತಿದ್ದೇನೆ' ಎಂದು ರಾಷ್ಟ್ರಪತಿ ಅವರಿಗೆ ಬರೆದ ಪತ್ರದಲ್ಲಿ ಧನಕರ್ ತಿಳಿಸಿದ್ದರು.

▶6


ಬಡವರ ಬಂಧು, ದೀನದಲಿತರ ಆಶಾಕಿರಣ, ಆಧುನಿಕ
ಕೆಂಪೇಗೌಡ ಯಲಹಂಕ ವಿ.ಕ್ಷೇತ್ರದ ಜನಪ್ರಿಯ ಶಾಸಕರಾದ
ಶ್ರೀ ಎಸ್.ಆರ್. ವಿಶ್ವನಾಥ್ ರವರಿಗೆ
ಜನುಮದಿನದ
ಶುಭಾಶಯಗಳು
ಶುಭಕೋರುವವರು :
ಯಲಹಂಕ ವಿಧಾನಸಭಾ ಕ್ಷೇತ್ರದ ಬಿಜೆಪಿ
ಮುಖಂಡರು ಹಾಗೂ ಕಾರ್ಯಕರ್ತರು

‘ಎಲೆ ಮಲ್ಲಪ್ಪ ಶೆಟ್ಟಿ ಕೆರೆಗೆ ಬೇಲಿ ಹಾಕಿ’

ವಿಧಾನಮಂಡಲದ ಸ್ಥಳೀಯ ಸಂಸ್ಥೆ, ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯಿಂದ 10 ದಿನದ ಗಡುವು


ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆ ಮಲ್ಲಪ್ಪ ಶೆಟ್ಟಿ ಕೆರೆಗೆ 10 ದಿನದೊಳಗೆ ಬೇಲಿ ಹಾಕಬೇಕು ಎಂದು ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ ಸೂಚಿಸಿದೆ.

ಅಧ್ಯಕ್ಷ ರಿಜ್ವಾನ್ ಅರ್ಷದ್ ನೇತೃತ್ವದಲ್ಲಿ ಸಮಿತಿ ಸದಸ್ಯರು ಎಲೆ ಮಲ್ಲಪ ಶೆಟ್ಟಿ ಕೆರೆಗೆ ಬುಧವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಎಲೆ ಮಲ್ಲಪ್ಪ ಶೆಟ್ಟಿ ಕೆರೆಗೆ 9.5 ಕಿ.ಮೀ. ಫೆನ್ಸಿಂಗ್ ಹಾಕಲಾಗಿದೆ. ಇನ್ನೂ 4.5 ಕಿ.ಮೀ. ಬಾಕಿ ಇದೆ ಎಂದು ಅಧಿಕಾರಿಗಳು ಹೇಳಿದರು. ಪೊಲೀಸರ ನೆರವು ಪಡೆದು, ಮಾರ್ಕಿಂಗ್ ಮಾಡಿ, ಬೇಲಿ ಹಾಕಬೇಕು ಎಂದು ಗಡುವು ವಿಧಿಸಿದರು.

‘ಕೆರೆಗೆ ಹೊಂದಿಕೊಂಡಂತಿರುವ ಖಾಸಗಿ ಲೇಔಟ್‌ನವರು ಕೆರೆ ಜಾಗವನ್ನೇ ರಸ್ತೆಯನ್ನಾಗಿ ಮಾಡಿಕೊಂಡಿರುವ ಬಗ್ಗೆ ಮಾಹಿತಿ ನೀಡಬೇಕು’ ಎಂದು ಬಿಡಿಎ ಮತ್ತು ಜಿಲ್ಲಾಡಳಿತ ಅಧಿಕಾರಿಗಳಿಗೆ ಸೂಚಿಸಿದರು.



ವಿಧಾನಮಂಡಲದ ಸ್ಥಳೀಯ ಸಂಸ್ಥೆ, ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ ಸದಸ್ಯರು ಎಲೆ ಮಲ್ಲಪ್ಪ ಶೆಟ್ಟಿ ಕೆರೆಯ ಅಭಿವೃದ್ಧಿಯನ್ನು ಪರಿಶೀಲಿಸಿದರು

‘ವರ್ತೂರು ಕೆರೆಗೆ ಚರಂಡಿ ನೀರು ಸೇರದಂತೆ ಕ್ರಮ ಕೈಗೊಳ್ಳಲಾಗಿದೆ. ಮಳೆ ನೀರು ಮಾತ್ರ ಹರಿಯುತ್ತಿದೆ. ಯಾವುದೇ ಒತ್ತುವರಿ ಇರುವುದಿಲ್ಲ. ಬಿಬಿಎಂಪಿಗೆ ಕೆರೆ ನಿರ್ವಹಣೆಯನ್ನು ವರ್ಗಾಯಿಸುವ ಬಗ್ಗೆ ಮಾತುಕತೆ ನಡೆದಿದೆ’ ಎಂದು ಬಿಡಿಎ ಅಧಿಕಾರಿಗಳು ಮಾಹಿತಿ ನೀಡಿದರು.

ಕೆರೆಯ ಸುತ್ತಲಿನ ಸ್ವಚ್ಛತೆ ಕುರಿತಂತೆ ಬಿಡಿಎ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಸಮಿತಿ ಅಧ್ಯಕ್ಷರು, ಬಿಡಿಎ, ಬಿಬಿಎಂಪಿ, ಕಂದಾಯ ಹಾಗೂ ಕೆರೆಗಳಿಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳನ್ನು ಒಳಗೊಂಡ ಸಭೆಯನ್ನು ಶೀಘ್ರದಲ್ಲಿ ಹಮ್ಮಿಕೊಳ್ಳಬೇಕು ಬಿಡಿಎ ಎಂಜಿನಿಯರಿಂಗ್ ಸದಸ್ಯ ಶಾಂತರಾಜಣ್ಣ ಅವರಿಗೆ ಸೂಚಿಸಿದರು.

‘ಸರ್ಕಾರದಿಂದ ಪ್ರತಿ ವರ್ಷ ನೂರಾರು ಕೋಟಿ ವೆಚ್ಚ ಮಾಡಿದರೂ ಬೆಂಗಳೂರಿನ ಕೆರೆಗಳ ಸ್ಥಿತಿ ಬದಲಾಗದಿರುವ ವ್ಯವಸ್ಥೆಗೆ ವರ್ತೂರು ಕೆರೆ ಹಿಡಿದ ಕನ್ನಡಿಯಾಗಿದೆ’ ಎಂದರು.

‘ಬೆಳ್ಳಂದೂರು ಕೆರೆ ಅಭಿವೃದ್ಧಿ ಕಾರ್ಯವನ್ನು ಬಿಡಿಎ ಮುಂದಿನ ವರ್ಷದೊಳಗೆ ಮುಗಿಸಬೇಕು. ತ್ಯಾಜ್ಯ ನೀರು ಹೋಗದಂತೆ, ಒತ್ತುವರಿಯಾಗದಂತೆ ಬಿಬಿಎಂಪಿ, ಜಲಮಂಡಳಿ ಕ್ರಮ ಕೈಗೊಳ್ಳಬೇಕು’ ಎಂದು ಸೂಚಿಸಿದರು.

ಅಗರ ಕೆರೆಗೆ ಭೇಟಿ ನೀಡಿದ ಸಮಿತಿ ಸದಸ್ಯರು, ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು. ಸಮಿತಿ ಸದಸ್ಯರಾದ ರವಿಸುಬ್ರಹ್ಮಣ್ಯ, ಹರೀಶ್ ಪೂಂಜ, ವೆಂಕಟಶಿವಾ ರೆಡ್ಡಿ, ಗೋವಿಂದ ರಾಜು, ಶಶಿಕಲಾ ಜೊಲ್ಲೆ ಇದ್ದರು.

ಮುಖ್ಯಾಂಶಗಳು

- ನೂರಾರು ಕೋಟಿ ವೆಚ್ಚವಾದರೂ ಕೆರೆಗಳು ಸುಧಾರಿಸಿಲ್ಲ
- ಅಧಿಕಾರಿಗಳ ಕಾರ್ಯವೈಖರಿಗೆ ಸಮಿತಿ ಸದಸ್ಯರ ಅಸಮಾಧಾನ

ಕೆಎಸ್‌ಪಿಸಿಬಿ ಅಧಿಕಾರಿಗಳಿಗೆ ತರಾಟೆ

‘ವರ್ತೂರು, ಬೆಳ್ಳಂದೂರು ಕೆರೆಗಳ ಸುತ್ತಮುತ್ತ ನೂರಾರು ಅಪಾರ್ಟ್‌ಮೆಂಟ್‌ಗಳಿದ್ದು, ಅವರು ಬಳಸಿದ ನೀರು ಯಾವ ಪ್ರಮಾಣದಲ್ಲಿ ಸಂಸ್ಕರಿಸಲಾಗುತ್ತಿದೆ ಎಂಬ ದತ್ತಾಂಶವಿದೆಯೇ’ ಎಂಬ ವಿಧಾನ ಮಂಡಲದ ಸ್ಥಳೀಯ ಸಂಸ್ಥೆ, ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ ಪ್ರಶ್ನೆಗೆ ಉತ್ತರ ನೀಡಲು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಅಧಿಕಾರಿಗಳು ತಬ್ಬಿಬ್ಬಾದರು.

‘ಆರು ವರ್ಷಕ್ಕೊಮ್ಮೆ ತ್ಯಾಜ್ಯ ನೀರು ಸಂಸ್ಕರಣೆ ಘಟಕಗಳ (ಎಸ್‌ಟಿಪಿ) ಪರವಾನಗಿ ನವೀಕರಣ ಸಂದರ್ಭದಲ್ಲಿ ಪರಿಶೀಲನೆ ಮಾಡಲಾಗುತ್ತದೆ’ ಎಂದು ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ತಿಳಿಸಿದರು.

‘ಕೆರೆಗಳಿಗೆ ಕೊಳಚೆ ನೀರು ಹೋಗಲು ಬೆಂಗಳೂರು ಜಲಮಂಡಳಿ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳೇ ನೇರ ಹೊಣೆ. ಅಪಾರ್ಟ್‌ಮೆಂಟ್‌ಗಳಲ್ಲಿರುವ ಬಹುತೇಕ ಎಸ್‌ಟಿಪಿಗಳು ಕಾರ್ಯನಿರ್ವಹಿಸುತ್ತಿಲ್ಲ ಎಂಬುದು ಬಹಿರಂಗ ಸತ್ಯ. ಆದರೆ, ಈ ಎರಡೂ ಇಲಾಖೆ ಅಧಿಕಾರಿಗಳ ಬೇಜವಾಬ್ದಾರಿಯಿಂದ ಕೆರೆಗಳು ಮಲಿನವಾಗುತ್ತಿವೆ’ ಎಂದು ಸಮಿತಿ ಸದಸ್ಯ ರವಿ ಸುಬ್ರಹ್ಮಣ್ಯ ಅವರು ತರಾಟೆಗೆ ತೆಗೆದುಕೊಂಡರು.

‘ಆರು ತಿಂಗಳಿಗೆ ಒಮ್ಮೆಯಾದರೂ ಎಸ್‌ಟಿಪಿಯಿಂದ ಹೊರಬರುವ ನೀರಿನ ಗುಣಮಟ್ಟದ ಪರೀಕ್ಷೆಯಾಗಿ, ಅದನ್ನು ಮೇಲ್ವಿಚಾರಣೆ ಮಾಡಬೇಕು’ ಎಂದು ಬೆಂಗಳೂರು ಜಲಮಂಡಳಿ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಿಗೆ ಸೂಚಿಸಲಾಯಿತು.

ಜಾರ್ಜ್ ವಿರುದ್ಧ ಎಫ್‌ಐಆರ್ ದಾಖಲಿಸಲು ಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆಗೆ ಸಂಬಂಧಿಸಿದ ಟೆಂಡರ್ ಸಂಪೂರ್ಣ ಕಾನೂನು ಬಾಹಿರವಾಗಿದೆ’ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ (ಬೆಸ್ಕಾಂ) ಅಧ್ಯಕ್ಷರೂ ಆದ ಇಂಧನ ಸಚಿವ ಕೆ.ಜೆ.ಜಾರ್ಜ್ ವಿರುದ್ಧ ಎಫ್‌ಐಆರ್ ದಾಖಲಿಸಲು ಲೋಕಾಯುಕ್ತ ಪೊಲೀಸರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಆರೋಪಕ್ಕೆ ಸಂಬಂಧಿಸಿದ ಖಾಸಗಿ ದೂರಿನ ವಿಚಾರಣೆ ನಡೆಸುತ್ತಿರುವ ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಈ ಕುರಿತಂತೆ ಬುಧವಾರ ಆದೇಶಿಸಿದ್ದಾರೆ.

‘ಆರೋಪಿಗಳ ವಿರುದ್ಧದ ದೂರು ಸ್ವೀಕರಿಸಿ ಎಫ್‌ಐಆರ್ ದಾಖಲಿಸಿದ ವಸ್ತುಸ್ಥಿತಿ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ’ ಎಂದು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿಗೆ ನಿರ್ದೇಶಿಸಿರುವ ನ್ಯಾಯಾಧೀಶರು ವಿಚಾರಣೆ ಮುಂದೂಡಿದ್ದಾರೆ.

ದೂರಿನಲ್ಲಿ ಸಚಿವ ಕೆ.ಜೆ.ಜಾರ್ಜ್, ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ ಗುಪ್ತ, ಬೆಸ್ಕಾಂ ಮಾಜಿ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಹಾಗೂ ಬೆಸ್ಕಾಂನ ತಾಂತ್ರಿಕ ನಿರ್ದೇಶಕ ಎಚ್.ಜೆ.ರಮೇಶ್ ಅವರನ್ನು ಆರೋಪಿಗಳನ್ನಾಗಿ ಹೆಸರಿಸಲಾಗಿದೆ.

ಬಿಜೆಪಿಯ ಶಾಸಕ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಶಾಸಕರಾದ ಎಸ್. ಆರ್.ವಿಶ್ವನಾಥ್, ಧೀರಜ್ ಮುನಿರಾಜು ಈ ಖಾಸಗಿ ದೂರು ಸಲ್ಲಿಸಿದ್ದಾರೆ.

ದೂರುದಾರರ ಪರ ಪದಾಂಕಿತ ಹಿರಿಯ ವಕೀಲೆ ಲಕ್ಷ್ಮಿ ಅಯ್ಯಂಗಾರ್ ವಾದ ಮಂಡಿಸಿದ್ದಾರೆ.

ದೂರಿನಲ್ಲಿ ಏನಿದೆ?: ‘ಸ್ಮಾರ್ಟ್ ಮೀಟರ್ ಸೇವೆ ಒದಗಿಸುವ ನಿಟ್ಟಿನಲ್ಲಿ 2024ರ ಸೆಪ್ಟೆಂಬರ್ 26ರಂದು ಟೆಂಡರ್ ಕರೆಯಲಾಗಿತ್ತು. ಬಿಡ್‌ದಾರರಾದ ದಾವಣಗೆರೆಯ ರಾಜಶ್ರೀ ಎಲೆಕ್ಟ್ರಿಕಲ್ಸ್ ಎಂಬ ಶೆಲ್ ಕಂಪನಿಗೆ ಟೆಂಡರ್ ನೀಡಲಾಗಿದೆ. ಈ ಟೆಂಡರ್ ಅನ್ನು ರಾಜ್ಯದಲ್ಲಿ ವಿವಿಧ ಭಾಗಗಳ ವಿದ್ಯುತ್ ಸರಬರಾಜು ಕಂಪನಿಗಳಿಗೆ ಪ್ರತ್ಯೇಕ ಟೆಂಡರ್ ಕರೆಯದೆ ಬೆಸ್ಕಾಂ ಕಂಪನಿಯೊಂದಕ್ಕೇ ನೇರವಾಗಿ ನೀಡಲಾಗಿದೆ. ಈ ಕಾನೂನುಬಾಹಿರವಾದ ಒಟ್ಟು ಪ್ರಕ್ರಿಯೆ ಕರ್ನಾಟಕ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ ಅಧಿನಿಯಮ-2000 ಹಾಗೂ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ನಿಯಮಗಳಿಗೆ ವಿರುದ್ಧವಾಗಿದೆ’ ಎಂದು ಅರ್ಜಿದಾರರು ಆರೋಪಿಸಿದ್ದಾರೆ.

‘ದೂರಿಗೆ ಸಂಬಂಧಿಸಿದಂತೆ ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 314, 316 ಮತ್ತು 61 ಹಾಗೂ ಭ್ರಷ್ಟಾಚಾರ ನಿಗ್ರಹ ತಿದ್ದುಪಡಿ ಕಾಯ್ದೆ–2018ರ ಕಲಂ 13(1) ಎ ಮತ್ತು 13(1) ಬಿ ಅನ್ವಯ ಆರೋಪಿಗಳ ವಿರದ್ಧ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಎಫ್‌ಐಆರ್ ದಾಖಲಿಸಲು ಆದೇಶಿಸಬೇಕು’ ಎಂದು ಫಿರ್ಯಾದುದಾರರು ಕೋರಿದ್ದಾರೆ.

ಜಿಲ್ಲಾಸ್ಪತ್ರೆಗೆ ‘ಲೋಕಾ’ ದಾಳಿ ಬಿಸಿ

ಪ್ರಜಾವಾಣಿ ವಾರ್ತೆ

ರಾಮನಗರ: ನಗರದಲ್ಲಿರುವ ಜಿಲ್ಲಾಸ್ಪತ್ರೆಗೆ 4 ವರ್ಷಗಳ ಹಿಂದೆ ಖರೀದಿಸಿರುವ ಹಾಗೂ ಪೂರೈಕೆಯಾಗಿರುವ ಅವ್ಯವಹಾರ ನಡೆದಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ, ಲೋಕಾಯುಕ್ತ ಪೊಲೀಸರು ಆಸ್ಪತ್ರೆ ಮೇಲೆ ಬುಧವಾರ ದಾಳಿ ನಡೆಸಿ ಖರೀದಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದರು.

2021-22ನೇ ಸಾಲಿನಲ್ಲಿ ನಡೆದಿರುವ ಖರೀದಿ ಪ್ರಕ್ರಿಯೆಯಲ್ಲಿ ಅವ್ಯವಹಾರ ಆರೋಪ ಕೇಳಿಬಂದಿರುವ ಹಿನ್ನೆಲೆಯಲ್ಲಿ ಲೋಕಾಯುಕ್ತದಲ್ಲಿ ಸ್ವಯಂಪ್ರೇರಿತ ಪ್ರಕರಣ ದಾಖಲಾಗಿತ್ತು. ಎಸ್‌ಪಿ ಸ್ನೇಹ ಪಿ.ವಿ ಅವರ ಮಾರ್ಗದರ್ಶನದಲ್ಲಿ ಡಿವೈಎಸ್ಪಿಗಳಾದ ಶಿವಪ್ರಸಾದ್, ರಾಜೇಶ್, ಇನ್‌ಸ್ಪೆಕ್ಟರ್ ಸಂದೀಪ್ ನೇತೃತ್ವದ ತಂಡ ಬೆಳಿಗ್ಗೆ 11ಕ್ಕೆ ಆಸ್ಪತ್ರೆ ಮೇಲೆ ದಾಳಿ ನಡೆಸಿತು.

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಮಂಜುನಾಥ್, ಸ್ಥಾನಿಕ ವೈದ್ಯಾಧಿಕಾರಿ ಡಾ. ನಾರಾಯಣಸ್ವಾಮಿ ಸೇರಿದಂತೆ ಆಡಳಿತಾತ್ಮಕ ಅಧಿಕಾರಿಗಳು ಸೇರಿದಂತೆ ಸಿಬ್ಬಂದಿಯನ್ನು ತಂಡ ವಿಚಾರಣೆ ನಡೆಸಿತು.

ಕೆಪಿಎಂಇ ಉಲ್ಲಂಘನೆ • 14 ವೈದ್ಯಕೀಯ ಸಂಸ್ಥೆಗಳಿಗೆ ದಂಡ ವಿಧಿಸಿ ಆದೇಶ


ಐದು ಆಸ್ಪತ್ರೆ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆಯ (ಕೆಪಿಎಂಇ) ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಐದು ಆಸ್ಪತ್ರೆಗಳ ವಿರುದ್ಧ ಎಫ್‌ಐಆರ್ ದಾಖಲಿಸಲು ಹಾಗೂ 14 ಸಂಸ್ಥೆಗಳಿಗೆ ದಂಡ ವಿಧಿಸಲು ಸೂಚಿಸಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

ಕೆಪಿಎಂಇ ನೋಂದಣಿ ಮತ್ತು ಕುಂದು ಕೊರತೆ ಪ್ರಾಧಿಕಾರದ ಸಭೆಯಲ್ಲಿ ಆದೇಶಿಸಲಾಗಿದೆ. ಬುಧವಾರ ನಡೆದ ಸಭೆಯಲ್ಲಿ ಕೆಪಿಎಂಇ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ಆರೋಗ್ಯಾಧಿಕಾರಿಗಳು 58 ಪ್ರಕರಣಗಳ ಬಗ್ಗೆ ವಿವರ ಸಲ್ಲಿಸಿದ್ದರು. ಇವುಗಳಲ್ಲಿ ನಿಯಮ ಉಲ್ಲಂಘಿಸಿದ ವೈದ್ಯಕೀಯ ಸಂಸ್ಥೆಗಳು, ಆಸ್ಪತ್ರೆಗಳು, ಕ್ಲಿನಿಕ್‌ಗಳು ಹಾಗೂ ಪುನರ್ವಸತಿ ಕೇಂದ್ರಗಳ ಮೇಲೆ ಕ್ರಮಕೈಗೊಳ್ಳಲಾಗಿದೆ.

ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ವಿದ್ಯಾರಣ್ಯಪುರದಲ್ಲಿರುವ ಸನ್‌ರೈಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಕಮಲಾನಗರದಲ್ಲಿರುವ ಸರ್ವಶಕ್ತಿ ಸಲಹಾ ಕೇಂದ್ರ, ಸಿ.ಕೆ. ಪಾಳ್ಯದಲ್ಲಿರುವ ಮಾ ಕ್ಲಿನಿಕ್, ಶೇಷಾದ್ರಿಪುರದಲ್ಲಿರುವ ಶ್ರೀ ಶಕ್ತಿ ಹೆಲ್ತ್ ಕೇರ್ ಹಾಗೂ ದೊಡ್ಡಕನ್ನಳ್ಳಿಯಲ್ಲಿರುವ ಹೆಲ್ತ್‌ಲೈನ್ ಪಾಲಿ ಕ್ಲಿನಿಕ್ ವಿರುದ್ಧ ಎಫ್‌ಐಆರ್ ದಾಖಲಿಸಲು ಜಿಲ್ಲಾಧಿಕಾರಿ ಸೂಚಿಸಿದ್ದಾರೆ.



ಮುಖ್ಯಾಂಶಗಳು

- ಆರೋಗ್ಯಾಧಿಕಾರಿಗಳಿಂದ 58 ಪ್ರಕರಣಗಳ ಬಗ್ಗೆ ವಿವರ ಸಲ್ಲಿಕೆ
- ಆಸ್ಪತ್ರೆಗಳು, ಕ್ಲಿನಿಕ್‌ಗಳು, ಪುನರ್ವಸತಿ ಕೇಂದ್ರಗಳ ಮೇಲೆ ಕ್ರಮ
- 9 ಸಂಸ್ಥೆಗಳಿಗೆ ತಲಾ ₹ 50 ಸಾವಿರ ದಂಡ

14 ಸಂಸ್ಥೆಗಳಿಗೆ ₹6.15 ಲಕ್ಷ ದಂಡ

14 ಸಂಸ್ಥೆಗಳಿಗೆ ಒಟ್ಟು ₹ 6.15 ಲಕ್ಷ ದಂಡ ವಿಧಿಸಲಾಗಿದೆ. ಚಿಕ್ಕಬಾಣಾವರದಲ್ಲಿರುವ ಶ್ರೀನಿವಾಸ ಆಸ್ಪತ್ರೆಗೆ ₹ 75 ಸಾವಿರ ದಂಡ ಹಾಕಲಾಗಿದೆ. ತಿಗಳರಪಾಳ್ಯ ಮುಖ್ಯರಸ್ತೆಯಲ್ಲಿರುವ ಅಂದ್ರಹಳ್ಳಿಯ ಮಾರುತಿ ಕ್ಲಿನಿಕ್, ಕಲ್ಯಾಣನಗರದ ಎಚ್‌ಎಸ್‌ಬಿಆರ್ ಲೇಔಟ್‌ನಲ್ಲಿರುವ ಟ್ರೈಲೈಫ್ ಆಸ್ಪತ್ರೆ, ಮಾರುತಿನಗರದಲ್ಲಿರುವ ಹುಸೈನ್ ಪಾಲಿ ಕ್ಲಿನಿಕ್, ಸಿಂಥನ್ ನಗರದ ವಿದ್ಯಾಸಾಗರ ಕ್ರಾಸ್‌ನಲ್ಲಿರುವ ಸುರಕ್ಷಾ ಆಸ್ಪತ್ರೆ, ಪೀಣ್ಯದ ಬಾಲಾಜಿನಗರದಲ್ಲಿರುವ ರೈಟ್ ಟೈಮ್ ಫೌಂಡೇಷನ್, ಕೆಂಗೇರಿಯಲ್ಲಿರುವ ಸಹನಾ ಫೌಂಡೇಷನ್ (ಸ್ಮೈಲ್ ಫೌಂಡೇಷನ್) ಪುನರ್ವಸತಿ ಕೇಂದ್ರಕ್ಕೆ ತಲಾ ₹ 50 ಸಾವಿರ ದಂಡ ವಿಧಿಸಲಾಗಿದೆ.

ಕಾಮಾಕ್ಷಿಪಾಳ್ಯದಲ್ಲಿರುವ ಸಂಜೀವಿನಿ ಹೆಲ್ತ್ ಸೆಂಟರ್, ಕೋನಪ್ಪನ ಅಗ್ರಹಾರದ ಗೋವಿಂದಶೆಟ್ಟಿ ಪಾಳ್ಯದಲ್ಲಿರುವ ಇನ್ಫಿನಿಟಿ ಕ್ಲಿನಿಕ್ ಹಾಗೂ ಎಲೆಕ್ಟ್ರಾನಿಕ್ ಸಿಟಿಯ ಮುನಿಸ್ವಾಮಿ ಲೇಔಟ್‌ನಲ್ಲಿರುವ ಬಾಲಾಜಿ ಕ್ಲಿನಿಕ್‌ಗೆ ಕೂಡ ತಲಾ ₹ 50 ಸಾವಿರ ದಂಡ ಹಾಕಲಾಗಿದೆ.

ತಿಗಳರಪಾಳ್ಯದಲ್ಲಿರುವ ಶಾರದಾ ಕ್ಲಿನಿಕ್ (ಮೌಲ್ಯ ಕ್ಲಿನಿಕ್), ನಾಗಶೆಟ್ಟಿಹಳ್ಳಿಯ ರೈಲ್ವೆ ಗೇಟ್ ಬಳಿಯಿರುವ ಸ್ನೇಹ ಕ್ಲಿನಿಕ್ ಹಾಗೂ ಬಸವೇಶ್ವರ ಲೇಔಟ್‌ನಲ್ಲಿರುವ ಫಸ್ಟ್‌ಕೇರ್ ಸೂಪರ್ ಸ್ಪೆಷಾಲಿಟಿ ಹೆಲ್ತ್ ಕೇರ್ ಆ್ಯಂಡ್ ಡಯಾಗ್ನೋಸಿಸ್ ಸೆಂಟರ್‌ಗೆ ತಲಾ ₹ 25 ಸಾವಿರ ಮತ್ತು ಕನಕಪುರ ಮುಖ್ಯರಸ್ತೆಯಲ್ಲಿರುವ ಗಗನ ಡೆಂಟಲ್ ಕೇರ್ ಕ್ಲಿನಿಕ್‌ಗೆ ₹ 15 ಸಾವಿರ ದಂಡ ವಿಧಿಸಲಾಗಿದೆ ಎಂದು ಬೆಂಗಳೂರು ನಗರ ಜಿಲ್ಲೆ ಆರೋಗ್ಯಾಧಿಕಾರಿ ತಿಳಿಸಿದ್ದಾರೆ.

ಧ್ವಜ ವಿವಾದ: ಐವರ ಬಂಧನ

ತಿಪಟೂರು: ವಿಜಯನಗರ ಸಾಮ್ರಾಜ್ಯದ ಲಾಂಛನ ಹೋಲುವ ಧ್ವಜವನ್ನು ಇಂದಿರಾ ನಗರದಲ್ಲಿ ಹಾರಿಸಿ, ಅದನ್ನು ವಿಡಿಯೊ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದ ಸ್ಥಳೀಯ ಐವರನ್ನು ಬುಧವಾರ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕಾಣೆಯಾಗಿದ್ದಾರೆ



ಶಿವಕುಮಾರ್ ಎಂ ಆರ್.
ಸರ್ಜಾಪುರ ರಸ್ತೆಯ ಮುಳ್ಳೂರು ಗ್ರಾಮದ ನಿವಾಸಿ. ವಯಸ್ಸು 36, 18/07/2025 ರಂದು ಶುಕ್ರವಾರ ಸಂಜೆ 6 ಗಂಟೆ ಸುಮಾರಿಗೆ ಹೊರಗಡೆ ಹೋದವರು ಮರಳಿ ಬರಲಿಲ್ಲ. ಇವರು ಎಲ್ಲಿಯಾದರೂ ಕಂಡುಬಂದರೆ, ಈ ನಂಬರಿಗೆ ಹಾಗೂ ವರ್ತೂರು ಪೊಲೀಸ್ ಸ್ಟೇಷನ್‌ಗೆ ಸಂಪರ್ಕಿಸಿ **9972802559/9738856258.**
ಹುಡುಕಿಕೊಟ್ಟವರಿಗೆ **2,00,000 ರೂ. ಬಹುಮಾನ** ನೀಡಲಾಗುವುದು.

SBI
ಭಾರತೀಯ ಸ್ಟೇಟ್ ಬ್ಯಾಂಕ್
ಕೇಂದ್ರ ನೇಮಕಾತಿ ಮತ್ತು ಪದೋನ್ನತಿ ವಿಭಾಗ
ಕಾರ್ಪೊರೇಟ್ ಕೇಂದ್ರ, ಮುಂಬೈ
ದೂರವಾಣಿ: 022-22820427

ಅರ್ಜಿ ಸಲ್ಲಿಸಲು QR ಸ್ಕ್ಯಾನ್ ಮಾಡಿರಿ

ನಿಯಮಿತ / ಗುತ್ತಿಗೆ ಆಧಾರದ ಮೇಲೆ ಸ್ಪೆಷಲಿಸ್ಟ್ ವರ್ಗದ ಅಧಿಕಾರಿಗಳ ನೇಮಕಾತಿ

ನಿಯಮಿತ/ಗುತ್ತಿಗೆ ಆಧಾರದ ಮೇಲೆ ಈ ಕೆಳಗಿನ ಹುದ್ದೆಗಳಿಗೆ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

ಜಾಹೀರಾತು ನಂ. CRPD/SCO/2025-26/05

ಕ್ರ. ಸಂ	ಹುದ್ದೆಯ ಹೆಸರು	ಖಾಲಿ ಹುದ್ದೆ	ವಿಧ
1	ಜನರಲ್ ಮ್ಯಾನೇಜರ್ (ಐಎಸ್ ಆಡಿಟ್)	01	ಗುತ್ತಿಗೆ
2	ಎವಿಪಿ (ಐಎಸ್ ಆಡಿಟ್)	14	ಗುತ್ತಿಗೆ
3	ಡೆಪ್ಯುಟಿ ಮ್ಯಾನೇಜರ್ (ಐಎಸ್ ಆಡಿಟ್)	18	ನಿಯಮಿತ

ಅರ್ಹತಾ ಮಾನದಂಡ, (ವಯಸ್ಸು, ಅನುಭವ, ಕೆಲಸದ ವಿವರಣೆ ಇತ್ಯಾದಿ.) ಖಾತೆ ಹುದ್ದೆ ವಿವರಗಳು, ಅವಶ್ಯಕ ಶುಲ್ಕ ಮತ್ತು ಇತರೆ ವಿವರಗಳಿಗಾಗಿ, ಅರ್ಜಿಯ ಆನ್ ಲೈನ್ ಸಲ್ಲಿಕೆ ಮತ್ತು ಅರ್ಜಿ ಶುಲ್ಕದ ಆನ್ಲೈನ್ ಪಾವತಿಗಳಿಗಾಗಿ ಬ್ಯಾಂಕ್ ನ ವೆಬ್ ಸೈಟ್ https://bank.sbi/web/careers/current-openings ಗೆ ಲಾಗಿನ್ ಆಗಿ. ಅರ್ಜಿ ಸಲ್ಲಿಸುವ ಮತ್ತು ಶುಲ್ಕಗಳನ್ನು ಪಾವತಿಸುವ ಮೊದಲು ಅರ್ಹತೆಯನ್ನು ಖಾತ್ರಿಮಾಡಿಕೊಳ್ಳಲು ಮತ್ತು ಇತರ ವಿವರಗಳಿಗಾಗಿ ವಿವರವಾದ ಜಾಹೀರಾತನ್ನು ಉಲ್ಲೇಖಿಸಿರಿ. ಯಾವುದೇ ವಿಚಾರಣೆಗಳಿದ್ದಲ್ಲಿ ದಯಮಾಡಿ ಈ ಲಿಂಕ್ ಮೂಲಕ ನಮಗೆ ಬರೆಯಿರಿ: "CONTACT US" —> "Post Your Query" ಇದು ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಲಭ್ಯವಿದೆ (https://bank.sbi/web/careers/post-your-query).

- **ಆನ್‌ಲೈನ್ ಅರ್ಜಿ ಸಲ್ಲಿಸುವ ಮತ್ತು ಶುಲ್ಕಪಾವತಿಸುವ ದಿನಾಂಕ: 11.07.2025 ರಿಂದ 31.07.2025**

ಸ್ಥಳ: ಮುಂಬೈ
ದಿನಾಂಕ: 11.07.2025
ಪ್ರಧಾನ ವ್ಯವಸ್ಥಾಪಕರು (ಆರ್‌ಪಿ ಮತ್ತು ಪಿಎಮ್)



ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆ ಬೀಳುವ ಸಾಧ್ಯತೆ ಇದೆ.

ಶೌಚದ ಗುಂಡಿಗೆ ಬಿದ್ದ ಕಾಡಾನೆ ಪಾರು

ಪ್ರಜಾವಾಣಿ ವಾರ್ತೆ

ನಾಪೋಕ್ಲು (ಕೊಡಗು): ಆಹಾರ ಅರಸಿ ಬಂದ ಕಾಡಾನೆ ಕರಡ ಗ್ರಾಮದಲ್ಲಿ ಮಂಗಳವಾರ ರಾತ್ರಿ ಶೌಚಾಲಯದ ಗುಂಡಿಗೆ ಬಿದ್ದು, ಬೆಳಿಗ್ಗೆ ಪಾರಾಗಿ ಓಡಿ ಹೋಗಿದೆ. ತಾಯಿಯನ್ನು ಕಳೆದುಕೊಂಡ ಮರಿಯಾನೆಯು ಅತಂತ್ರವಾಗಿದೆ.

ಇಲ್ಲಿಗೆ ಸಮೀಪದ ಚೇಲಾವರ ಗ್ರಾಮದ ನಿವಾಸಿ ಪಟ್ರಪಂಡ ಜಗದೀಶ್ ಎಂಬುವವರಿಗೆ ಸೇರಿದ ರೆಸಾರ್ಟ್ ಸಮೀಪ ಮರಿಯೊಂದಿಗೆ ಅಡ್ಡಾಡುತ್ತಿದ್ದ ತಾಯಿ ಆನೆಯು ಶೌಚಾಲಯದ ಗುಂಡಿಯ ಸ್ಲಾಬ್ ಮುರಿದು ಗುಂಡಿಗೆ ಬಿದ್ದಿತ್ತು. ರಾತ್ರಿಯಿಡೀ ಗುಂಡಿಯಲ್ಲೇ ಒದ್ದಾಡಿದ ಆನೆಗೆ ಮೇಲೆರಲು ಸಾಧ್ಯವಾಗಿರಲಿಲ್ಲ. ಬುಧವಾರ ಬೆಳಿಗ್ಗೆ ಅದನ್ನು ಕಂಡ ನಾಯಿಗಳು ಬೊಗಳಿದ ವೇಳೆ, ಮರಿ ಆನೆಯ ರಕ್ಷಣೆಗೆ ಇನ್ನಿಲ್ಲದ ಪ್ರಯತ್ನಪಟ್ಟು ಗುಂಡಿಯಿಂದ ಮೇಲೇರಿ ಓಡಿಹೋಯಿತು.

ತಾಯಿ ಮತ್ತು ಮರಿಯಾನೆ ಈಗ ಬೇರೆ ಬೇರೆಯಾಗಿದ್ದು, ತಾಯಿ ಆನೆ ಕೀಮಲೆಕಾಡಿನ ಮೇಲೆ ಬೆಪ್ಪುಡಿಯಂಡ ಕಾಡಿನಲ್ಲಿ ಸುತ್ತಾಡುತ್ತಿದೆ. ಇತ್ತ ಚೇಲಾವರ ಬಾಚಮಂಡ ಕುಟುಂಬಸ್ಥರ ತೋಟದಲ್ಲಿ ಮರಿ ಆನೆ ತಾಯಿಗಾಗಿ ಹಂಬಲಿಸಿ ಘೀಳಿಡುತ್ತಾ ರಸ್ತೆಯಲ್ಲಿ ಓಡಾಡುತ್ತಿದ್ದು, ಗ್ರಾಮದಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ.



ಸಿಎಂಆರ್ ವಿಶ್ವವಿದ್ಯಾಲಯದ ಎಚ್‌ಬಿಆರ್ ಕ್ಯಾಂಪಸ್‌ನಲ್ಲಿ ಬುಧವಾರ ನಡೆದ 2025–26ನೇ ಮೊದಲ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಹಾಗೂ ವಿದ್ಯಾರ್ಥಿಗಳ ಪುನರ್‌ಮನನ ಕಾರ್ಯಕ್ರಮದಲ್ಲಿ ರಾಜೀವ್ ಗಾಂಧಿ ಸಾರ್ವಜನಿಕ ಆರೋಗ್ಯ ಸಂಸ್ಥೆ ಮತ್ತು ರೋಗ ನಿಯಂತ್ರಣ ಕೇಂದ್ರದ ಸಲಹಾ ಸಮಿತಿ ಅಧ್ಯಕ್ಷ ಡಾ.ಎಸ್. ಚಂದ್ರಶೇಖರ್ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. (ಎಡದಿಂದ) ಎಸ್‌ಒಎಲ್‌ಎಸ್‌ನ ಡೀನ್ ಲತಾ ಕೃಷ್ಣನ್, ಎಸ್‌ಒಎಂನ ವೈಥ್ಯನಾಥನ್ ಆರ್.ಕೆ, ವಿ.ವಿ. ಕುಲಸಚಿವ ಧನಂಜಯ, ಕುಲಪತಿ ಎಚ್.ಬಿ. ರಾಘವೇಂದ್ರ, ಅಕಾಡೆಮಿಕ್ ಡೀನ್ ಸುಧೀರ್, ಎಸ್‌ಒಇಸಿ ನಿರ್ದೇಶಕ ಬಿ.ಬಿ. ತಿವಾರಿ ಉಪಸ್ಥಿತರಿದ್ದರು

₹67.8 ಕೋಟಿ ಆದಾಯ ನಿರೀಕ್ಷೆ

ಬಿಎಂಟಿಸಿಯ 3,400 ಬಸ್‌ಗಳಲ್ಲಿ ಜಾಹೀರಾತು ಪ್ರದರ್ಶನ

● ಖಲೀಲಅಹ್ಮದ ಶೇಖ

ಬೆಂಗಳೂರು: ಬಸ್‌ಗಳ ಮೇಲೆ ಗರಿಷ್ಠ ಪ್ರಮಾಣದ ಜಾಹೀರಾತು ಪ್ರದರ್ಶಿಸುವ ಮೂಲಕ ಬಿಎಂಟಿಸಿಯು ಆದಾಯ ಹೆಚ್ಚಿಸಿಕೊಳ್ಳಲು ಮುಂದಾಗಿದೆ. ಆರ್ಥಿಕ ಸಂಕಷ್ಟದಿಂದ ಹೊರ ಬರಲು 3,400 ಬಸ್‌ಗಳ ಮೇಲೆ ಜಾಹೀರಾತು ಪ್ರದರ್ಶಿಸಲು ಅವಕಾಶ ನೀಡಿದ್ದು, ಇದರಿಂದ ವಾರ್ಷಿಕ ₹67.8 ಕೋಟಿ ಆದಾಯ ಬರಲಿದೆ.

ವರ್ಷ	ಆದಾಯ
2020-21	₹4.57 ಕೋಟಿ
2021-22	₹11.61 ಕೋಟಿ
2022-23	₹19.30 ಕೋಟಿ
2023-24	₹17.75 ಕೋಟಿ
2024-25	₹21.39 ಕೋಟಿ
ಒಟ್ಟು	₹74.64 ಕೋಟಿ

ಪ್ರಜಾವಾಣಿ ವಿಶೇಷ

ಬಿಎಂಟಿಸಿಯ ಎಸಿ ಬಸ್‌ಗಳಲ್ಲಿ ಮಾತ್ರ ಜಾಹೀರಾತು ಪ್ರದರ್ಶನಕ್ಕೆ ಹಿಂದೆ ಅವಕಾಶ ನೀಡಿತ್ತು. ಈಗ ಸಾಮಾನ್ಯ ಬಸ್‌ಗಳಲ್ಲೂ ಜಾಹೀರಾತು ಪ್ರದರ್ಶಿಸಲು ಬಿಎಂಟಿಸಿ ಅನುಮತಿ ನೀಡಿದೆ. ಬಸ್‌ನ ಮುಂಭಾಗ ಹಾಗೂ ಹಿಂಭಾಗದ ಗಾಜು ಹಾಗೂ ಕಿಟಕಿಗಳನ್ನು ಹೊರತುಪಡಿಸಿ ಉಳಿದೆಲ್ಲ ಜಾಗದಲ್ಲಿ ಜಾಹೀರಾತು ಅಳವಡಿಸಲು ಸ್ಥಳಾವಕಾಶ ಒದಗಿಸಿದೆ. ಸಾಮಾನ್ಯ ಬಸ್‌ನಲ್ಲಿ 350 ಚದರ ಅಡಿ ಹಾಗೂ ಎಸಿ ಬಸ್‌ನಲ್ಲಿ 430 ಚದರ ಅಡಿ ಸ್ಥಳಾವಕಾಶ ಇದೆ. ಒಂದು ತಿಂಗಳಿಗೆ ಸಾಮಾನ್ಯ ಬಸ್‌ನಲ್ಲಿ ಜಾಹೀರಾತು ಪ್ರದರ್ಶಿಸಲು ₹14,887 ಹಾಗೂ ಎಸಿ ಬಸ್‌ಗೆ ₹29,801 ನಿಗದಿಪಡಿಸಲಾಗಿದೆ.

‘400 ಎಸಿ ಬಸ್‌ಗಳಲ್ಲಿ ಜಾಹೀರಾತು ಪ್ರದರ್ಶನದಿಂದ ಒಂದು ತಿಂಗಳಿಗೆ ₹1.19 ಕೋಟಿ ಹಾಗೂ 3 ಸಾವಿರ ಸಾಮಾನ್ಯ ಬಸ್‌ಗಳಿಂದ ₹4.46 ಕೋಟಿ ಸೇರಿದಂತೆ ಒಟ್ಟು ₹5.65 ಕೋಟಿ ಆದಾಯ ಬಿಎಂಟಿಸಿಗೆ ಹರಿದು ಬರಲಿದೆ’ ಎಂದು ಬಿಎಂಟಿಸಿ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಬಸ್‌ನಲ್ಲಿ ಜಾಹೀರಾತಿನ ಅಳವಡಿಕೆಯು 350 ಚದರ ಅಡಿ ಮೀರುವಂತಿಲ್ಲ. ಬಿಎಂಟಿಸಿ ಲಾಂಛನ, ವಾಹನ ನೋಂದಣಿ ಸಂಖ್ಯೆ, ಡಿಪೊ ವಿವರ ಪ್ರದರ್ಶನಕ್ಕೆ ಅಡ್ಡಿಯಾಗಬಾರದು. ಜಾಹೀರಾತಿಗೆ ಬಳಸುವ ಸ್ಟಿಕ್ಕರ್‌ಗಳು ಮತ್ತು ವಸ್ತುಗಳು ಪರಿಸರ ಸ್ನೇಹಿಯಾಗಿರಬೇಕು. ಜಾಹೀರಾತುಗಳನ್ನು ಕಡ್ಡಾಯವಾಗಿ ಕನ್ನಡದಲ್ಲಿಯೇ ಪ್ರದರ್ಶಿಸಬೇಕು. ಅವಧಿ ಪೂರ್ಣಗೊಂಡ ನಂತರ ಎಲ್ಲ ಬಸ್‌ಗಳಿಗೆ ಬಣ್ಣ ಬಳಿದು ಕೊಡಬೇಕು ಎಂಬ ನಿಯಮವನ್ನು ಕಡ್ಡಾಯಗೊಳಿಸಲಾಗಿದೆ’ ಎಂದು ವಿವರಿಸಿದರು.


‘ಬಸ್‌ಗಳಲ್ಲಿ ಜಾಹೀರಾತು ಪ್ರದರ್ಶನ ಮಾಡಲು 2024ರ ಡಿಸೆಂಬರ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿತ್ತು. ಇದರಲ್ಲಿ ಹೆಚ್ಚು ಬಿಡ್ ಸಲ್ಲಿಸಿದ್ದ ಸಾಯಿ ಜಾಹೀರಾತು ಏಜೆನ್ಸಿಯೊಂದಿಗೆ ಮೂರು ವರ್ಷಗಳ ಒಪ್ಪಂದ ಮಾಡಿಕೊಳ್ಳಲಾಗಿದೆ. ಪರಿಸರಕ್ಕೆ ಮಾರಕವಾಗುವ, ಮದ್ಯಪಾನ, ಧೂಮಪಾನಕ್ಕೆ ಪ್ರಚೋದಿಸುವ ಜಾಹೀರಾತುಗಳನ್ನು ಪ್ರದರ್ಶಿಸುವಂತಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜಾಹೀರಾತು ನೀತಿಗಳನ್ನು ಪಾಲಿಸಬೇಕು. ಒಂದು ವೇಳೆ ನಿಯಮ ಉಲ್ಲಂಘಿಸಿದರೆ, ಜಾಹೀರಾತು ಏಜೆನ್ಸಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ನಿರ್ಬಂಧ ವಿಧಿಸಲಾಗಿದೆ’ ಎಂದು ಹೇಳಿದರು.



ಬಿಎಂಟಿಸಿಯ ಎಸಿ ಬಸ್‌ನಲ್ಲಿ ಜಾಹೀರಾತು ಪ್ರದರ್ಶನ ಮಾಡಿರುವುದು —ಪ್ರಜಾವಾಣಿ ಚಿತ್ರ: ಎಂ.ಎಸ್. ಮಂಜುನಾಥ್

‘ಜಾಹೀರಾತು ವಿಸ್ತರಿಸುವ ಯೋಜನೆ ಇಲ್ಲ’

ಬಿಎಂಟಿಸಿ ಬಸ್‌ಗಳಲ್ಲಿ ಜಾಹೀರಾತು ಪ್ರದರ್ಶನದಿಂದ ಸಂಸ್ಥೆಗೆ ಲಾಭವಾಗುತ್ತಿದೆ. ಆದರೆ ಈಗ ಪ್ರದರ್ಶಿಸುತ್ತಿರುವ ಜಾಹೀರಾತುಗಳ ಅವಧಿ ಮುಗಿದ ನಂತರ ಇದನ್ನು ವಿಸ್ತರಿಸುವ ಯೋಜನೆ ಇಲ್ಲ. ಬಿಎಂಟಿಸಿ ಬ್ರ್ಯಾಂಡ್‌ಗೆ ಯಾವುದೇ ರೀತಿಯ ಧಕ್ಕೆಯಾಗದಂತೆ ನಮ್ಮ ಬಸ್‌ಗಳು ಸಂಚರಿಸಲಿವೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.



ರಾಮಲಿಂಗಾ ರೆಡ್ಡಿ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

‘ಬುಡಕಟ್ಟು ಜನರ ಸಮಗ್ರ ಅಭಿವೃದ್ಧಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬುಡಕಟ್ಟು ಜನರು ವಾಸಿಸುವ ಪ್ರದೇಶಗಳ ಸಮಗ್ರ ಅಭಿವೃದ್ಧಿ ಹಾಗೂ ಸಮುದಾಯದ ಸಬಲೀಕರಣಕ್ಕೆ ಆದಿ ಕರ್ಮಯೋಗಿ ಅಭಿಯಾನ ಸಹಕಾರಿ’ ಎಂದು ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ವಿಭು ನಾಯರ್ ಅಭಿಪ್ರಾಯಪಟ್ಟರು.

ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯ ಹಾಗೂ ರಾಜ್ಯ ಬುಡಕಟ್ಟು ಕಲ್ಯಾಣ ಇಲಾಖೆ ಜಂಟಿಯಾಗಿ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವರ್ಚುವಲ್ ಮೂಲಕ ರಾಜ್ಯ ಪ್ರಕ್ರಿಯೆ ಪ್ರಯೋಗಾಲಯ ಉದ್ಘಾಟಿಸಿ, ಅವರು ಮಾತನಾಡಿದರು.

‘ಬುಡಕಟ್ಟು ಸಮುದಾಯಗಳನ್ನು ಸಬಲೀಕರಣಗೊಳಿಸಿ, ಅವರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಎಲ್ಲ ಯೋಜನೆಗಳನ್ನು ತಲುಪಿಸಲು ಅಧಿಕಾರಿಗಳು, ಸಿಬ್ಬಂದಿ ಕಾರ್ಯಪ್ರವೃತ್ತರಾಗಬೇಕು. ಬುಡಕಟ್ಟು ಪ್ರದೇಶದಲ್ಲಿ ಕೆಲಸ ನಿರ್ವಹಿಸುವವರು ತ್ವರಿತಗತಿಯಲ್ಲಿ ಜನರ ಬೇಡಿಕೆಗಳಿಗೆ ಸ್ಪಂದಿಸಿ, ಉತ್ತಮ ಆಡಳಿತ ನೀಡಬೇಕು. ಇದರಿಂದ ಸಮಾಜ ಪರಿವರ್ತನೆಯ ಜತೆಗೆ ದೇಶದ ಅಭಿವೃದ್ಧಿ ಸಹ ಸಾಧ್ಯವಾಗುತ್ತದೆ’ ಎಂದರು.

ರಾಜ್ಯ ಬುಡಕಟ್ಟು ಕಲ್ಯಾಣ ಇಲಾಖೆ ಕಾರ್ಯದರ್ಶಿ ರಂದೀಪ್ ಡಿ., ‘ಸರ್ಕಾರದ ಯೋಜನೆಯನ್ನು ಫಲಾನುಭವಿಗಳಿಗೆ ಸೂಕ್ತ ರೀತಿಯಲ್ಲಿ ತಲುಪಿಸಬೇಕು. ಆದಿ ಕರ್ಮಯೋಗಿ ಅಭಿಯಾನದಡಿ ರಾಜ್ಯದ ಏಳು ಜಿಲ್ಲೆಗಳಲ್ಲಿ, ಬುಡಕಟ್ಟು ಕಲ್ಯಾಣ ಇಲಾಖೆ ಸೇರಿ ಇತರ ಪ್ರಮುಖ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗೆ ಆಡಳಿತ, ವ್ಯಕ್ತಿತ್ವ ವಿಕಸನ ಸೇರಿ ವಿವಿಧ ವಿಷಯಗಳಲ್ಲಿ ತರಬೇತಿ ನೀಡಲಾಗುತ್ತದೆ’ ಎಂದು ಹೇಳಿದರು.

ಇಲಾಖೆಯ ನಿರ್ದೇಶಕ ಟಿ. ಯೋಗೇಶ್, ‘ರಾಜ್ಯದಲ್ಲಿ ಸುಮಾರು 50 ಬುಡಕಟ್ಟು ಪಂಗಡಗಳನ್ನು ಗುರುತಿಸಲಾಗಿದೆ. ಅವರಿಗೆ ವಿದ್ಯಾರ್ಥಿವೇತನದ ಜತೆಗೆ ಶಿಕ್ಷಣ, ವಸತಿಶಾಲೆ, ವಸತಿ ಹಾಗೂ ಇನ್ನಿತರ ಸೌಲಭ್ಯಕ್ಕೆ ವಿವಿಧ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ವಿಧವಾ ವಿವಾಹ, ಅಂತರ್ಜಾತಿ ವಿವಾಹಗಳಿಗೆ ಪ್ರೋತ್ಸಾಹ ಧನ ನೀಡಲಾಗುತ್ತದೆ. ಬುಡಕಟ್ಟು ಕಲ್ಯಾಣ ಇಲಾಖೆ ಜತೆಗೆ ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ ಇಲಾಖೆಗಳು ಕೈಜೋಡಿಸಿದರೆ, ಸಮುದಾಯದ ಅಭಿವೃದ್ಧಿ ತ್ವರಿತಗತಿಯಲ್ಲಿ ಆಗುತ್ತದೆ’ ಎಂದರು.



ಕಾರ್ಯಕ್ರಮದಲ್ಲಿ ಟಿ. ಯೋಗೇಶ್ ಮತ್ತು ರಂದೀಪ್ ಡಿ. ಸಮಾಲೋಚನೆ ನಡೆಸಿದರು —ಪ್ರಜಾವಾಣಿ ಚಿತ್ರ

ಆಗಸ್ಟ್ ಮೊದಲ ವಾರದಲ್ಲಿ ಬರಲಿದೆ ಮೆಟ್ರೊ ರೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊ’ ಹಳದಿ ಮಾರ್ಗದ ಸಂಚಾರಕ್ಕೆ ನಾಲ್ಕನೇ ರೈಲು ಆಗಸ್ಟ್ ಮೊದಲ ವಾರದಲ್ಲಿ ಪೂರೈಕೆಯಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಹಳದಿ ಮಾರ್ಗದಲ್ಲಿ ಚಾಲಕರಹಿತ ಚಾಲನಾ ಎಂಜಿನ್ ಹೊಂದಿರುವ ಮೆಟ್ರೊ ರೈಲುಗಳು ಸಂಚರಿಸಲಿವೆ. ಪ್ರೊಟೊಟೈಪ್ (ಮೂಲ ಮಾದರಿ) ಮೊದಲ ರೈಲು 2024ರ ಏಪ್ರಿಲ್‌ನಲ್ಲೇ ಬಂದಿತ್ತು. 2025ರ ಜನವರಿಯಲ್ಲಿ ಪ್ರೊಟೊಟೈಪ್ ಎರಡನೇ ರೈಲು, ಮೇ ತಿಂಗಳಲ್ಲಿ ಮೂರನೇ ರೈಲು ಪೂರೈಕೆಯಾಗಿತ್ತು.



ನಮ್ಮ ಮೆಟ್ರೊ ಹಳದಿ ಮಾರ್ಗದ ರೈಲು

ಆರ್.ವಿ.ರಸ್ತೆ– ಬೊಮ್ಮಸಂದ್ರ ನಡುವಿನ 19.15 ಕಿ.ಮೀ ಉದ್ದದ ಈ ಮಾರ್ಗದಲ್ಲಿ ಮೆಟ್ರೊ ರೈಲ್ವೆ ಸುರಕ್ಷತಾ ಆಯುಕ್ತರ ಅಧಿಕಾರಿಗಳ ತಂಡ ಪರೀಕ್ಷೆಗಳನ್ನು ಮಂಗಳವಾರ ಆರಂಭಿಸಿದೆ. ಜುಲೈ 25ಕ್ಕೆ ಪರೀಕ್ಷೆಗಳು ಮುಕ್ತಾಯಗೊಳ್ಳಲಿವೆ.

ಸಿಎಂಆರ್‌ಎಸ್ ತಂಡ ಪ್ರಾಥಮಿಕ ಹಂತದ ಪರೀಕ್ಷೆಗಳು ಪೂರ್ಣಗೊಳಿಸಿದ ಬಳಿಕ ರೈಲು ಸಂಚರಿಸಬಹುದಾದ ಗರಿಷ್ಠ ವೇಗ, ಕನಿಷ್ಠ ವೇಗ, ತಡೆಗಳು ಉಂಟಾದಾಗ ಕೈಗೊಳ್ಳಬೇಕಾದ ಕ್ರಮಗಳ ಪರಿಶೀಲನೆ, ಎಷ್ಟು ಭಾರ ಹೊತ್ತೊಯ್ಯಬಹುದು ಎಂದು ಪರೀಕ್ಷಿಸಲು ಸಿಮೆಂಟ್ ಚೀಲಗಳನ್ನು ಇಟ್ಟು ರೈಲು ಪರೀಕ್ಷಾ ಸಂಚಾರಗಳು ನಡೆಯಲಿವೆ. ದೋಷಗಳು ಕಂಡು ಬಂದರೆ ಪರಿಹರಿಸಲು ಪರೀಕ್ಷಾ ತಂಡ ಸೂಚಿಸಲಿದೆ. ಯಾವುದೇ ಲೋಪಗಳಿಲ್ಲದೇ ಇದ್ದರೆ ರೈಲು ಸಂಚಾರಕ್ಕೆ ಅನುಮತಿ ನೀಡಲು ಶಿಫಾರಸು ಮಾಡಲಿದೆ. ಈ ಬಾರಿಯ ಸ್ವಾತಂತ್ರ್ಯೋತ್ಸವದ ಸಂದರ್ಭಕ್ಕೆ ಹಳದಿ ಮಾರ್ಗದಲ್ಲಿ ರೈಲು ಓಡಾಡುವ ಸಾಧ್ಯತೆ ಇದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಆ.10ರಂದು ನಂದಿ ಬೆಟ್ಟಕ್ಕೆ ವಾಹನ ಸಂಚಾರ ನಿರ್ಬಂಧ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ರಾಜ್ಯದ ಕ್ರೀಡಾ ಬೆಳವಣಿಗೆಗೆ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾಗುವಂತೆ ಜೆ.ಜೆ. ಆಕ್ಟೀವ್ ಸಂಸ್ಥೆಯಿಂದ ನಂದಿ ಬೆಟ್ಟದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಭಾಗಿತ್ವದಲ್ಲಿ ಆಗಸ್ಟ್ 10ರಂದು ನಂದಿ ಹಿಲ್ ಮಾನ್ಸೂನ್ ರನ್ ಎಂಬ ಓಟದ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮ ನಂದಿ ಬೆಟ್ಟದ ಪ್ರಾರಂಭದಿಂದ ಬೆಟ್ಟದ ತುದಿಯವರೆಗಿನ ಪೂರ್ಣ ರಸ್ತೆಯಲ್ಲಿ ಆಯೋಜಿಸಿರುವ ಹಿನ್ನಲೆಯಲ್ಲಿ ಆಗಸ್ಟ್ 10 ರಂದು ಬೆಳಿಗ್ಗೆ 4 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ನಂದಿ ಬೆಟ್ಟದ ಪ್ರಾರಂಭದಿಂದ ಬೆಟ್ಟದ ತುದಿಯವರೆಗಿನ ಪೂರ್ಣ ರಸ್ತೆಯಲ್ಲಿ ಎಲ್ಲಾ ರೀತಿಯ ಸಾರ್ವಜನಿಕರ ವಾಹನಗಳ ಸಂಚಾರವನ್ನು ನಿರ್ಬಂಧಿಸಿ ಆದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ತಿಳಿಸಿದ್ದಾರೆ.

ಭಾರತೀಯ ತಂತ್ರಜ್ಞಾನ ಸಂಸ್ಥೆ ಜೋಧಪುರ
(ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ಸಂಸ್ಥೆ, ಶಿಕ್ಷಣ ಸಚಿವಾಲಯ, ಭಾರತ ಸರ್ಕಾರ)
ಎನ್‌ಎಚ್ 62, ನಾಗೌರ್ ರಸ್ತೆ, ಕಾರ್ವಾರ, ಜೋಧಪುರ, ರಾಜಸ್ಥಾನ – 342030

ಜಾಹೀರಾತು ಸಂ.: ಐಐಟಿಜೆ/ಒಆರ್(ಎನ್‌ಎಫ್)/2025–26/60
ರಿಜಿಸ್ಟ್ರಾರ್ ಹುದ್ದೆಗೆ ನೇಮಕಾತಿ

ರಿಜಿಸ್ಟ್ರಾರ್ ಹುದ್ದೆ ಭರ್ತಿ ಮಾಡಿಕೊಳ್ಳಲು ಅರ್ಹ ಭಾರತೀಯ ನಾಗರಿಕರಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆನ್‌ಲೈನ್ ಅರ್ಜಿ ಸಲ್ಲಿಕೆ ಪ್ರಕ್ರಿಯೆಯು 11 ಜುಲೈ 2025 ರಿಂದ ಪ್ರಾರಂಭವಾಗುತ್ತದೆ ಮತ್ತು 10 ಆಗಸ್ಟ್ 2025 ರಂದು ಮುಕ್ತಾಯಗೊಳ್ಳುತ್ತದೆ.

ವಿವರವಾದ ಜಾಹೀರಾತು ಮತ್ತು ಆನ್‌ಲೈನ್ ಅರ್ಜಿ ನಮೂನೆಯು, ಸಂಸ್ಥೆಯ www.iitj.ac.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ಸಹಿ/–
ರಿಜಿಸ್ಟ್ರಾರ್ (ಒಎಫ್‌ಎಫ್‌ಜಿ.)
CBC 21305/12/0001/2526

ಆರೋಪಿತ ವ್ಯಕ್ತಿಯ ಹಾಜರಾತಿ ಅವಶ್ಯಕತೆ ಕುರಿತಾದ ಘೋಷಣೆ
ಸಿಆರ್‌ಪಿಸಿ ಸೆಕ್ಷನ್ 82 ನೋಡಿರಿ

ನನ್ನ ಎದುರು ಒಂದು ದೂರು ದಾಖಲಾಗಿದ್ದು, ಸದರಿ ದೂರಿನಲ್ಲಿ **ಜುನೈದ್ ಉಲ್ಲಾ ಖಾನ್** ಬಿನ್ ಇನಾಯತ್ ಉಲ್ಲಾ ಖಾನ್, ವಿಳಾಸ 73, 1ನೇ ಮಹಡಿ, ಇನಾಮುಲ್ ಹಸನ್ ಮಸೀದಿ ಎದುರು, ರಷದ್ ನಗರ, ಬೆಂಗಳೂರು, ಉತ್ತರ ಬೆಂಗಳೂರು, ಕರ್ನಾಟಕ ಎಂಬ ಆರೋಪಿತ ವ್ಯಕ್ತಿಯ ವಿರುದ್ಧ **ದೆಹಲಿಯಲ್ಲಿನ ಐಜಿಐ ಏರ್‌ಪೋರ್ಟ್ ಪೊಲೀಸ್ ಠಾಣೆಯಲ್ಲಿ ಐಪಿಸಿ ಸೆಕ್ಷನ್ 417/447 ಅಡಿಯಲ್ಲಿ ದಾಖಲಾಗಿರುವ ಎಫ್‌ಐಆರ್ ನಂ. 427/2019ರ** ಮುಖೇನ ಅಪರಾಧ ಎಸಗಿರುತ್ತಾನೆ (ಅಥವಾ ಅಪರಾಧ ಎಸಗಿರುವ ಗುಮಾನಿ ಮೇರೆಗೆ) ಎಂದು ಪ್ರಕರಣ ದಾಖಲಾಗಿದ್ದು, ಈ ಪ್ರಕರಣದಲ್ಲಿ ಸದರಿ ಆರೋಪಿತ **ಜುನೈದ್ ಉಲ್ಲಾ ಖಾನ್** ಎಂಬ ಆಸಾಮಿಗೆ ಬಂಧನ ವಾರಂಟ್ ಹೊರಡಿಸಲಾಗಿದ್ದು, ಸದರಿ ವಾರಂಟ್ ಬಟವಾಡೆಗೊಳ್ಳದೆ ಹಿಂದಿರುಗಿ ಬಂದಿರುತ್ತದೆ ಮತ್ತು ಈ ಮೂಲಕ ಸದರಿ ಆರೋಪಿತ **ಜುನೈದ್ ಉಲ್ಲಾ ಖಾನ್** ಎಂಬ ಆಸಾಮಿ ತಲೆಮರೆಸಿಕೊಂಡಿದ್ದಾನೆ (ಅಥವಾ ಸದರಿ ವಾರಂಟ್ ಸ್ವೀಕೃತಿ ತಡೆಗಟ್ಟಲು ತನ್ನನ್ನು ತಾನು ಅಡಗಿಕೊಸಿಕೊಂಡಿದ್ದಾನೆ) ಎಂಬುದು ಸ್ಪಷ್ಟವಾಗಿದೆ.

ಆದ್ದರಿಂದ, ಈ ಮೂಲಕ ಘೋಷಿಸುವುದು ಏನೆಂದರೆ, **ಜುನೈದ್ ಉಲ್ಲಾ ಖಾನ್** ಎಂಬ, **ದೆಹಲಿಯಲ್ಲಿನ ಐಜಿಐ ಏರ್‌ಪೋರ್ಟ್ ಪೊಲೀಸ್ ಠಾಣೆಯಲ್ಲಿ ಐಪಿಸಿ ಸೆಕ್ಷನ್ 417/447** ಅಡಿಯಲ್ಲಿ ದಾಖಲಾಗಿರುವ **ಎಫ್‌ಐಆರ್ ನಂ. 427/2019ರ** ಪ್ರಕರಣದ ಆರೋಪಿಯು **27.09.2025** ರಂದು ಸದರಿ ನ್ಯಾಯಾಲಯಕ್ಕೆ ಹಾಜರಾಗಿ ಸದರಿ ದೂರಿಗೆ ಉತ್ತರ ನೀಡಬೇಕಾದುದು ಅಗತ್ಯವಾಗಿರುತ್ತದೆ.

ಆದೇಶದ ಮೇರೆಗೆ
ಪ್ರಣವ್ ಜೋಶಿ
ಅಡಿಷನಲ್ ಚೀಫ್ ಜುಡಿಷಿಯಲ್ ಮ್ಯಾಜಿಸ್ಟ್ರೇಟ್–01
ಕೋರ್ಟ್ ನಂ. 02, ಕರ್ಕರದೂಮ ಕೋರ್ಟ್, ದೆಹಲಿ
ಡಿಪಿ/9694/ಐಜಿಐಎ/2025 (ಕೋರ್ಟ್ ಮ್ಯಾಟರ್)

प्रवर्तन निदेशालय
भारत सरकार
DIRECTORATE OF ENFORCEMENT
Government of India
3rd Floor, B Block, BMTC, Shanthinagar - TTMC, K.H. Road, Shantinagar, Bengaluru - 560 027.

KABC01-002860-2024 Next Date: 29-08-2025
PROCLAMATION REQUIRING THE APPEARANCE OF A PERSON ACCUSED (See Section 82)
Form No. 4
IN THE COURT OF CCH34 XXXII ADDL. CITY CIVIL AND SESSIONS JUDGE-SPL.C/92/2024
DIRECTORATE OF ENFORCEMENT Vs A1 M/S DREAMZ INFRA INDIA LTD //

WHEREAS complaint has been made before me that **A8 SACHIN NAIK ALIAS YOGESH, Age 46 years, R/o. R/AT NO 307 RAJAPRAKRUTI APARTMENT 10TH MAIN 1ST BLOCK JAYANAGAR BENGALURU** has committed (or is suspected to have committed) the offence of punishable under section 3,P/U/SEC4 of the Prevention of Money Laundering Act, and it has been returned to a warrant of arrest thereupon issued that the said **A8 SACHIN NAIK ALIAS YOGESH cannot be found, and whereas It has been shown to my satisfaction that the said A8 SACHIN NAIK ALIAS YOGESH** has absconded (or is concealing himself to avoid the service of the said warrant);
Proclamation is hereby made that the said **A8 SACHIN NAIK ALIAS YOGESH, Age 46 R/o. R/AT NO 307 RAJAPRAKRUTI APARTMENT 10TH MAIN 1ST BLOCK JAYANAGAR BENGALURU** is required to appear at before to answer the said complaint on the day of **29.08.2025.**
Dated, this day of **08.07.2025**
CCH34 XXXII ADDL. CITY CIVIL AND SESSIONS JUDGE BENGALURU

प्रवर्तन निदेशालय
भारत सरकार
DIRECTORATE OF ENFORCEMENT
Government of India
3rd Floor, B Block, BMTC, Shanthinagar - TTMC, K.H. Road, Shantinagar, Bengaluru - 560 027.

KABC01-002860-2024 Next Date: 29-08-2025
PROCLAMATION REQUIRING THE APPEARANCE OF A PERSON ACCUSED (See Section 82)
Form No. 4
IN THE COURT OF CCH34 XXXII ADDL. CITY CIVIL AND SESSIONS JUDGE-SPL.C/92/2024
DIRECTORATE OF ENFORCEMENT Vs A1 M/S DREAMZ INFRA INDIA LTD //

WHEREAS complaint has been made before me that **A21 A VENKATESH, Age - 43 years, R/o. R/AT GK HERITAGE FLAT NO 201 2ND FLOOR 40TH CROSS 8TH BLOCK OPPOSITE SYNDICATE BANK INDIRANAGAR BENGALURU** has committed (or is suspected to have committed) the offence of punishable under section 3,P/U/SEC4 of the Prevention of Money Laundering Act, and it has been returned to a warrant of arrest thereupon issued that the said **A21 A VENKATESH** cannot be found, and whereas It has been shown to my satisfaction that the said **A21 A VENKATESH** has absconded (or is concealing himself to avoid the service of the said warrant);
Proclamation is hereby made that the said **A21 A VENKATESH, Age - 43 R/o. -R/AT GK HERITAGE FLAT NO 201 2ND FLOOR 40TH CROSS 8TH BLOCK OPPOSITE SYNDICATE BANK INDIRANAGAR BENGALURU** is required to appear at before to answer the said complaint on the day of **29.08.2025.**
Dated, this day of **08.07.2025**
CCH34 XXXII ADDL. CITY CIVIL AND SESSIONS JUDGE BENGALURU

प्रवर्तन निदेशालय
भारत सरकार
DIRECTORATE OF ENFORCEMENT
Government of India
3rd Floor, B Block, BMTC, Shanthinagar - TTMC, K.H. Road, Shantinagar, Bengaluru - 560 027.

KABC01-002860-2024 Next Date: 29-08-2025
PROCLAMATION REQUIRING THE APPEARANCE OF A PERSON ACCUSED (See Section 82)
Form No. 4
IN THE COURT OF CCH34 XXXII ADDL. CITY CIVIL AND SESSIONS JUDGE-SPL.C/92/2024
DIRECTORATE OF ENFORCEMENT Vs A1 M/S DREAMZ INFRA INDIA LTD //

WHEREAS complaint has been made before me that **A22 SANJAY, Age-52 years, R/o. -R/AT GODREZ APARTMENT NO 1302 OAK HEBBAL BENGALURU** has committed (or is suspected to have committed) the offence of punishable under section 3,P/U/SEC4 of the Prevention of Money Laundering Act, and it has been returned to a warrant of arrest thereupon issued that the said **A22 SANJAY** cannot be found, and whereas It has been shown to my satisfaction that the said **A22 SANJAY** has absconded (or is concealing himself to avoid the service of the said warrant);
Proclamation is hereby made that the said **A22 SANJAY, Age 52 R/o. R/AT GODREZ APARTMENT NO 1302 OAK HEBBAL BENGALURU** is required to appear at before to answer the said complaint on the day of **29.08.2025.**
Dated, this day of **08.07.2025**
CCH34 XXXII ADDE. CITY CIVIL AND SESSIONS JUDGE BENGALURU

प्रवर्तन निदेशालय
भारत सरकार
DIRECTORATE OF ENFORCEMENT
Government of India
3rd Floor, B Block, BMTC, Shanthinagar - TTMC, K.H. Road, Shantinagar, Bengaluru - 560 027.

KABC01-002860-2024 Next Date: 29-08-2025
PROCLAMATION REQUIRING THE APPEARANCE OF A PERSON ACCUSED (See Section 82)
Form No. 4
IN THE COURT OF CCH34 XXXII ADDL. CITY CIVIL AND SESSIONS JUDGE-SPL.C/92/2024
DIRECTORATE OF ENFORCEMENT Vs A1 M/S DREAMZ INFRA INDIA LTD //

WHEREAS complaint has been made before me that **A5 DISHA CHUDHARY ALIAS RANI, Age-36 years, R/o. - MANAGING DIRECTOR OF M/S DREAMZ INFRA INDIA PVT LTD R/AT NO 38 FF ONE BHK HOUSE FIRST FLOOR VAISHAKA KAVERI LAYOUT MARIYA ANNA PALYA H A FARM PAST BENGALURU** has committed (or is suspected to have committed) the offence of punishable under section 3,P/U/SEC4 of the Prevention of Money Laundering Act, and it has been returned to a warrant of arrest thereupon issued that the said **A5 DISHA CHUDHARY ALIAS RANI** cannot be found, and whereas It has been shown to my satisfaction that the said **A5 DISHA CHUDHARY ALIAS RANI** has absconded (or is concealing himself to avoid the service of the said warrant);
Proclamation is hereby made that the said **A5 DISHA CHUDHARY ALIAS RANI, Age 36 R/o. MANAGING DIRECTOR OF M/S DREAMZ INFRA INDIA PVT LTD R/AT NO 38 FF ONE BHK HOUSE FIRST FLOOR VAISHAKA KAVERI LAYOUT MARIYA ANNA PALYA H A FARM PAST BENGALURU** is required to appear at before to answer the said complaint on the day of **29.08.2025.**
Daled, this day of **08.07.2025**
CCH34 XXXII ADDL. CITY CIVIL AND SESSIONS JUDGE BENGALURU

प्रवर्तन निदेशालय
भारत सरकार
DIRECTORATE OF ENFORCEMENT
Government of India
3rd Floor, B Block, BMTC, Shanthinagar - TTMC, K.H. Road, Shantinagar, Bengaluru - 560 027.

KABC01-002860-2024 Next Date: 29-08-2025
PROCLAMATION REQUIRING THE APPEARANCE OF A PERSON ACCUSED (See Section 82)
Form No. 4
IN THE COURT OF CCH34 XXXII ADDL. CITY CIVIL AND SESSIONS JUDGE-SPL.C/92/2024
DIRECTORATE OF ENFORCEMENT Vs A1 M/S DREAMZ INFRA INDIA LTD //

WHEREAS complaint has been made before me that **A6 MANDEEP KAUR, Age - 33 years, R/o. R/AT MANAGING DIRECTOR OF M/S TGS CONSTRUCTIONS PVT LTD AND M/S SEND MY GIFT PVT LTD R/AT NO 97/A JP NAGAR 8TH PHASE LAYOUT 1ST A BLOCK BENGALURU** has committed (or is suspected to have committed) the offence of punishable under section 3,P/U/SEC4 of the Prevention of Money Laundering Act, and it has been returned to a warrant of arrest thereupon issued that the said **A6 MANDEEP KAUR** cannot be found, and whereas It has been shown to my satisfaction that the said **A6 MANDEEP KAUR** has absconded (or is concealing himself to avoid the service of the said warrant);
Proclamation is hereby made that the said **A6 MANDEEP KAUR, Age-33 R/o. - R/AT MANAGING DIRECTOR OF M/S TGS CONSTRUCTIONS PVT LTD AND M/S SEND MY GIFT PVT LTD R/AT NO 97/A JP NAGAR 8TH PHASE LAYOUT 1ST A BLOCK BENGALURU** is required to appear at before to answer the said complaint on the day of **29.08.2025.**
Dated, this day of **08.07.2025.**
CCH34 XXXII ADDL. CITY CIVIL AND SESSIONS JUDGE BENGALURU

ನೈಋತ್ಯ ರೈಲ್ವೆ
ಇ–ಟೆಂಡರು ಸೂಚನೆ ಸಂ. B/TRD.2025-26/13
ದಿನಾಂಕ: 17.07.2025
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ದೇವನಗೊಂಥಿ ನಿಲ್ದಾಣದಲ್ಲಿ ಮೆ. ಬಿಪಿಸಿಎಲ್ ಲಿಮಿಟೆಡ್ ಅವರ ಪ್ರಸ್ತಾವಿತ ಜಿಸಿಟಿ ಸೈಡಿಂಗ್ ಕಾಮಗಾರಿಗೆ ಸಂಬಂಧಿಸಿದಂತೆ ಓಹೆಚ್‌ಇ ಮೇಲಿನ ಮಾರ್ಪಾಡು ಕೆಲಸಗಳು.	ರೂ. 2,01,55,170.83

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 08.08.2025, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಟಿಆರ್‌ಡಿ ಬೆಂಗಳೂರು
PUB/317/AAF/PRB/SWR/2025-26
ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRAILWAYHQ | sw_railways

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Hospital & Medical Jobs

ST. MARTHA'S HOSPITAL
Bangalore – 560 001
We are hiring :
- Consultant - Radiology (MD/DNB)
- Consultant - General Surgery (MS/DNB)
- Senior Registrar/ Senior Consultant - Anaesthesia (MD/DNB)
- Senior Consultant - OBG
- Consultant - Emergency Medicine (MD/DNB)
- Consultant - Microbiology- (MD/DNB)
- Public Relation Officers
- Digital Marketing Executives
- Facility Supervisor

Interested candidates may mail to careers@stmarthas.in

Advertising Agency

MUMBAI BASED company wants sales representative / client servicing executive aged 25/30 for Bangalore. WhatsApp resume on 9769670322

BUSINESS

Business Offers

Finance

MSME LOANS Available for any startup companies,any existing companies NOTE:Also one approved loan available contact-7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

REAL ESTATE SELLING

Sites

Banashankari

BDA-SITES WANTED 30x40, 40X60, 50x80 Immediate Settlement BANASHANKARI VI STAGE, ANJANAPURA VISHWESHWARAIAH LAYOUT RAJESH: 9945610779

REAL ESTATE BUYING

Sites

Banashankari

BDA-SITES WANTED 30x40, 40X60, 50x80 Immediate Settlement BANASHANKARI VI STAGE, ANJANAPURA VISHWESHWARAIAH LAYOUT RAJESH: 9945610779

BUILDERS ESSENTIAL

Water Proofing

WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

PERSONAL

Change of Name

CHANGE OF NAME
I, **SAMUEL AUGUSTUS NORTON STANLEY, S.A. NORTON STANLEY, NORTON STANLEY S.A., NORTON STANLEY, NORTON SAMUEL AUGUSTUS STANLEY, NORTON SAMUEL STANLEY, NORTON SAMUEL AUGUSTUS,** residing at Flat # B1-301, 3rd Floor, Oriana Tower Mirabills, Kolte Patil Mirabilis, Horamavu, Bangalore-43, declare that the above names pertain to me and henceforth I shall be known as **SAMUEL AUGUSTUS NORTON STANLEY** vide affidavit dated 23.07.2025 before notary S.I. Balaguru, Bangalore.

CHANGE OF NAME
I, **S.SEMON S/o SUBRAMANYAM** Residing at # 18, Kadirayanapalya, Indiranagar, Bengaluru-560038. have changed my name to **S.SIMON S/o SUBRAMANI** vide affidavit dated 23.07.2025 before Notary Gangaraju B.N, Bengaluru. Henceforth I shall be known as **S. SIMON** only.

CHANGE OF NAME
I **Pushpa R Madival** aged 42 years Mother of **LAHARI RAJU NAIK** DOB 02/08/2010 residing at #1636, Pipe Line Road, Prashanth Nagar, T.Dasarahalli, Bangalore-560057 wrongly mentioned as **PUSHPA** in my daughter's school record instead of **PUSHPA R MADIVAL.** vide affidavit dated 02.07.2025 before Additional Civil Judge Bangalore Rural District, Bangalore, Henceforth I shall be known as **PUSHPA R MADIVAL.** for all purposes

CHANGE OF NAME
I, **Vasudeva Murthy Sathya Murthy** S/o Sathya Murthy residing at D-203, King Space Meadows, Thanisandra Main Road, Bengaluru-560077, have changed my name to **VASUDEVA MURTHY** vide affidavit dated 23-07-2025 sworn before notary I. Kanikha Raja, Bengaluru.

CHANGE OF NAME
I, **MANJULA,** residing at No. 7, Vinayaka Street, Kammanahalli Main Road, R S Palya, Bengaluru North, Bengaluru-560033, have changed my name to **MANJULA ELANGOVAN** vide affidavit dated 23-07-2025 before notary B.V. Nagabhushana, Bengaluru. Henceforth I shall be called as **MANJULA ELANGOVAN** only

DH DECCAN HERALD Classifieds More value, more impact
ಪ್ರಜಾವಾಣಿ
NAME CHANGE
Book your Name Change Ad in DH All Karnataka + Prajavani Bengaluru City All Days
@50/-* PER WORDS
www.dhclassifieds.com
BOOK NOW
For more details contact:
+91 7795158424
+91 9731810277 | +91 9900428036
*Conditions apply

ಕೆಪಿಸಿಎಲ್ ಹುದ್ದೆಗಳ ಶೀಘ್ರ ಭರ್ತಿ

ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಪಿಸಿಎಲ್‌ನಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ (ಕೆಪಿಸಿಎಲ್) 56ನೇ ಸಂಸ್ಥಾಪನಾ ದಿನಾಚರಣೆಯನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

ಖಾಲಿ ಹುದ್ದೆಗಳ ಸಂಖ್ಯೆ ಹೆಚ್ಚಿರುವುದರಿಂದ ಕೆಲಸಕ್ಕೆ ಸಮಸ್ಯೆಯಾಗುತ್ತಿದೆ ಎಂಬ ಮನವಿಗಳು ಬಂದಿವೆ. ಇಂಧನ ಸಚಿವರು ಮತ್ತು ಕೆಪಿಸಿಎಲ್ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಸಮಾಲೋಚನೆ ನಡೆಸಿ ಹುದ್ದೆ ಭರ್ತಿ ಮಾಡಲಾಗುವುದು' ಎಂದರು.

ಜಲ, ಉಷ್ಣ, ಸೌರ, ಪವನ, ಅನಿಲ ಮಾತ್ರವಲ್ಲ ತ್ಯಾಜ್ಯದಿಂದಲೂ ವಿದ್ಯುತ್ ಉತ್ಪಾದಿಸುವ ಮೂಲಕ ಕೆಪಿಸಿಎಲ್ ಅತ್ಯುತ್ತಮ ಸಾಧನೆ ಮಾಡಿದೆ. ಇದರಿಂದಾಗಿ ವಿದ್ಯುತ್ ಉತ್ಪಾದನೆಯಲ್ಲಿ ದೇಶದಲ್ಲಿಯೇ ಕರ್ನಾಟಕವು ಸ್ವಾವಲಂಬಿ ರಾಜ್ಯವಾಗಿದೆ. ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಯಾವ ಸಂದರ್ಭದಲ್ಲಿಯೂ ವಿದ್ಯುತ್ ಕೊರತೆ ಆಗದಂತೆ ಕ್ರಮ ವಹಿಸಲಾಗುವುದು' ಎಂದು ತಿಳಿಸಿದರು.

ಅಂಕಿ ಅಂಶಗಳು

37,009 ಯೂನಿಟ್
2024-25ನೇ ಸಾಲಿನಲ್ಲಿ ಉತ್ಪಾದನೆಯಾದ ದಾಖಲೆ ಪ್ರಮಾಣದ ವಿದ್ಯುತ್

40%
ರಾಜ್ಯದಲ್ಲಿರುವ ಬೇಡಿಕೆಯಲ್ಲಿ ಕೆಪಿಸಿಎಲ್ ಉತ್ಪಾದಿಸುವ ವಿದ್ಯುತ್ ಪ್ರಮಾಣ

₹20,000 ಕೋಟಿ
ಕೃಷಿ ಪಂಪ್‌ಸೆಟ್‌ಗಳಿಗೆ ಸರ್ಕಾರ ನೀಡುತ್ತಿರುವ ಸಬ್ಸಿಡಿ

ಇಂಧನ ಸಚಿವ ಕೆ.ಜೆ. ಜಾರ್ಜ್ ಮಾತನಾಡಿ, 'ವಿದ್ಯುತ್ ಉತ್ಪಾದನೆ ಬೇಕಾದಷ್ಟಿದ್ದರೂ ಸಂಗ್ರಹಣಾ ವ್ಯವಸ್ಥೆ ಇಲ್ಲ. ಹೀಗಾಗಿ ಶರಾವತಿಯಲ್ಲಿ 2,000 ಮೆಗಾವ್ಯಾಟ್ ಹಾಗೂ ವಾರಾಹಿಯಲ್ಲಿ 1,500 ಮೆಗಾವ್ಯಾಟ್ ಸಾಮರ್ಥ್ಯದ ಪಂಪ್ಡ್ ಸ್ಟೋರೇಜ್ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದೆ. ಆ ಮೂಲಕ ವಿದ್ಯುತ್ ಸಂಗ್ರಹಿಸಿ ಹೆಚ್ಚು ಬೇಡಿಕೆ ಸಂದರ್ಭದಲ್ಲಿ ಪೂರೈಸಲಾಗುವುದು. ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ರಾಜ್ಯ ಮತ್ತು ಕೇಂದ್ರ ವನ್ಯಜೀವಿ ಮಂಡಳಿಗಳಿಂದ ಈಗಾಗಲೇ ಅನುಮತಿ ಸಿಕ್ಕಿದೆ' ಎಂದು ಹೇಳಿದರು.



ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಸಂಸ್ಥಾಪನಾ ದಿನಾಚರಣೆಯಲ್ಲಿ ಸಿದ್ದರಾಮಯ್ಯ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿದರು. ನಸೀರ್ ಅಹ್ಮದ್, ಕೆ.ಜೆ. ಜಾರ್ಜ್, ಗೌರವ್ ಗುಪ್ತ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಸೀಮೆಎಣ್ಣೆ ದೀಪದಡಿ ಓದು

'ನಮ್ಮೂರಲ್ಲಿ ವಿದ್ಯುತ್ ಇರಲಿಲ್ಲ. ಸೀಮೆ ಎಣ್ಣೆ ದೀಪ ಇಟ್ಟುಕೊಂಡು ಓದಿದ್ದೆವು. 7-8ನೇ ತರಗತಿಯಲ್ಲಿರುವಾಗ ನಮ್ಮ ಊರಿಗೆ ವಿದ್ಯುತ್ ಬಂತು. ಕೆಪಿಸಿಎಲ್ ಪ್ರಮುಖ ಪಾತ್ರ ವಹಿಸಿದ್ದರಿಂದ ಇಂದು ವಿದ್ಯುತ್ ಸಂಪರ್ಕ ಇಲ್ಲದ ಗ್ರಾಮವೇ ಇಲ್ಲ. ಕೆಪಿಸಿಎಲ್‌ನ ಅಧ್ಯಕ್ಷನಾಗಿ ನಾನೂ ನಿಮ್ಮವನಾಗಿದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕೆಪಿಸಿಎಲ್‌ನಲ್ಲಿ 25 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವವರನ್ನು ಅಭಿನಂದಿಸಲಾಯಿತು. ನಿವೃತ್ತ ಸಿಬ್ಬಂದಿಯನ್ನು ಗೌರವಿಸಲಾಯಿತು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ 90ಕ್ಕಿಂತ ಹೆಚ್ಚು ಅಂಕ ಗಳಿಸಿದ ನಿಗಮದ ಸಿಬ್ಬಂದಿಯ ಮಕ್ಕಳಿಗೆ ಚಿನ್ನದ ನಾಣ್ಯ ನೀಡಿ ಪುರಸ್ಕರಿಸಲಾಯಿತು.

ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಶಾಸಕರಾದ ಬಸವನಗೌಡ ದದ್ದಲ್, ಪ್ರಸಾದ್ ಅಬ್ಬಯ್ಯ, ಕೆಪಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಗೌರವ್ ಗುಪ್ತ, ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಅಧ್ಯಕ್ಷ ಮನೋಹರ್, ಕೆಪಿಸಿಎಲ್ ಹಣಕಾಸು ನಿರ್ದೇಶಕ ಆರ್. ನಾಗರಾಜ, ತಾಂತ್ರಿಕ ನಿರ್ದೇಶಕ ಎಸ್.ಕೃಷ್ಣಮೂರ್ತಿ, ಮುಖ್ಯ ಜಾಗೃತ ಅಧಿಕಾರಿ ಟಿ.ಪಿ. ಶಿವಕುಮಾರ್ ಭಾಗವಹಿಸಿದ್ದರು.

'ಸತತ ಪರಿಶ್ರಮದಿಂದ ಯಶಸ್ಸು'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಅಧಿಕಾರಕ್ಕಾಗಿ ಕುರುಬ ಸಮಾಜದ ಹೆಸರನ್ನು ಬಳಸಿಕೊಂಡು ರಾಜಕೀಯ ಮಾಡುವ ನಾವು, ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಿಂದ ದೂರ ಉಳಿಯುವುದು ಎಷ್ಟು ಸರಿ' ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಪ್ರಶ್ನಿಸಿದರು.

'ಕಾಗಿನೆಲೆ ಮಹಾಸಂಸ್ಥಾನ ವತಿಯಿಂದ ಹಮ್ಮಿಕೊಂಡಿದ್ದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿವೇತನ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಂದಿಲ್ಲ ಎಂಬ ಕಾರಣಕ್ಕೆ ಕುರುಬ ಸಮಾಜದ ಅನೇಕ ನಾಯಕರು, ಇತ್ತ ಮುಖ ಮಾಡಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಹೆಚ್ಚು ಪ್ರತಿಭಾವಂತ ಹೆಣ್ಣುಮಕ್ಕಳು ಕುರುಬ ಸಮಾಜದಲ್ಲಿದ್ದಾರೆ. ತಾವು ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ತೋರಿಸಬೇಕಾಗಿದ್ದು, ಸತತ ಪರಿಶ್ರಮದಿಂದ ಎಲ್ಲಾ ರಂಗಗಳಲ್ಲಿಯೂ ಮುಂದೆ ಬರಬೇಕು. ಮುಂದಿನ ವಿಧಾನಸಭೆ ಚುನಾವಣೆ ವೇಳೆಗೆ 70 ಕ್ಷೇತ್ರಗಳು ಮಹಿಳಾ ಮೀಸಲಾಗಲಿದ್ದು, ಆ ಕ್ಷೇತ್ರದಲ್ಲಿಯೂ ಸ್ಪರ್ಧಿಸಿ ಸಾಧನೆ ಮಾಡಬೇಕು. ರಾಜಕೀಯ ಯಾರ ಮನೆಯ ಸ್ವತ್ತಲ್ಲ, ಎಲ್ಲರೂ ಸ್ಪರ್ಧಿಸಬಹುದು' ಎಂದು ಹೇಳಿದರು.

'ಕುರುಬ ಸಮಾಜದಲ್ಲಿ ಹುಟ್ಟಿರುವ ನಾವುಗಳೇ ಪುಣ್ಯವಂತರು. ಹೆಮ್ಮೆಯಿಂದ ನಾವು ಕುರುಬರು ಎಂದು ಹೇಳಿಕೊಳ್ಳಬೇಕು. ಸಮಾಜದ ಋಣವನ್ನು ತೀರಿಸುವ ಜೊತೆಗೆ, ಶೋಷಿತ, ದಲಿತ, ಹಿಂದುಳಿದ ಜನಾಂಗದ ಎಲ್ಲಾ ವರ್ಗಗಳನ್ನು ಒಗ್ಗೂಡಿಸಿ ಜೊತೆಯಲ್ಲಿ ಕರೆದುಕೊಂಡು ಹೋಗುವ ಮೂಲಕ ಸಮಸಮಾಜವನ್ನು ನಿರ್ಮಾಣ ಮಾಡಬೇಕಾಗಿದೆ' ಎಂದು ಕಾಗಿನೆಲೆ ಮಹಾಸಂಸ್ಥಾನ ಕನಕಗುರುಪೀಠಾಧ್ಯಕ್ಷ ನಿರಂಜನಾ ನಂದಪುರಿ ಸ್ವಾಮೀಜಿ ಹೇಳಿದರು.

ಬಿಬಿಎಂಪಿ ಮಾಜಿ ಸದಸ್ಯ ಡಾ.ಎಸ್. ರಾಜು, ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ, ಭೋವಿಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಹೊಸದುರ್ಗ ಕನಕಧಾಮದ ಈಶ್ವರಾನಂದಪುರಿ ಸ್ವಾಮೀಜಿ, ಕುಂಚಿಟಿಗ ಮಠದ ಶಾಂತವೀರ ಸ್ವಾಮೀಜಿ, ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಬಿ.ಕೆ.ರವಿ, ಲೋಕೋಪಯೋಗಿ ಇಲಾಖೆಯ ರಿಜಿಸ್ಟ್ರರ್ ಸೋಮಶೇಖರ್ ಉಪಸ್ಥಿತರಿದ್ದರು.

ಕೆ.ಆರ್.ಪುರ: ದೇಗುಲದಲ್ಲಿ ಮಂಡಲ ಪೂಜೆ

ಕೆ.ಆರ್.ಪುರ: ಸರ್ವಜ್ಞನಗರ ಸಮೀಪದ ಲಿಂಗರಾಜಪುರದಲ್ಲಿ ಶ್ರೀ ಸಂತಾನ ವೇಣುಗೋಪಾಲಸ್ವಾಮಿ ಮತ್ತು ಶ್ರೀ ಮುತ್ಯಾಲಮ್ಮ ದೇವಿಯ 48ನೇ ದಿನದ ಮಂಡಲ ಪೂಜೆ, ಕಾರ್ಯಕ್ರಮವು ಶ್ರದ್ಧಾ-ಭಕ್ತಿಯಿಂದ ನಡೆಯಿತು.

ಸಮಿತಿ ಶಿಫಾರಸು: ಬೆಂಗಳೂರು ಉತ್ತರ ವಿ.ವಿ ಪತ್ರಿಕೋದ್ಯಮ ವಿಭಾಗ ಬಂದ್

ಪ್ರಜಾವಾಣಿ ವಾರ್ತೆ

ಕೋಲಾರ: ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರನ್ನು ಒಳಗೊಂಡ ಸಮಿತಿ ಶಿಫಾರಸ್ಸಿನಂತೆ ಪತ್ರಿಕೋದ್ಯಮ ಸ್ನಾತಕೋತ್ತರ ಅಧ್ಯಯನ ವಿಭಾಗವನ್ನು ಮುಚ್ಚಲು ನಿರ್ಧರಿಸಲಾಗಿದೆ ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ನಿರಂಜನ ವಾನಳ್ಳಿ ಸ್ಪಷ್ಟಪಡಿಸಿದ್ದಾರೆ.


ಪ್ರೊ.ನಿರಂಜನ

'ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಮೂರು ವರ್ಷಗಳಿಂದ ವಿದ್ಯಾರ್ಥಿಗಳ ಕೊರತೆ ಎದುರಿಸುತ್ತಿದೆ. ಐವರು ಅತಿಥಿ ಉಪನ್ಯಾಸಕರಿದ್ದಾರೆ. 10ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಪ್ರವೇಶ ಪಡೆದು ಪರೀಕ್ಷೆ ಹೊತ್ತಿಗೆ ಅವರೂ ಗೈರಾಗುತ್ತಿರುವ ವಿಷಯ ವಿಶ್ವವಿದ್ಯಾಲಯ ಗಮನಕ್ಕೆ ಬಂದಿದ್ದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದಿದ್ದಾರೆ.

'ಅಂತಿಮ ಸೆಮಿಸ್ಟರ್‌ನಲ್ಲಿ ಕೇವಲ ಒಬ್ಬ ವಿದ್ಯಾರ್ಥಿ ತರಗತಿಗೆ ಹಾಜರಾದರೂ ತರಗತಿ ನಡೆಸಿ ವ್ಯಾಸಂಗಕ್ಕೆ ಅವಕಾಶ ಕಲ್ಪಿಸಲಾಯಿತು. ಆದರೆ, ಇದೀಗ ವಿದ್ಯಾರ್ಥಿಗಳಿಗೆ ಬೇಕಿಲ್ಲದ ವಿಭಾಗವನ್ನು ಮುಚ್ಚುವುದು ಅನಿವಾರ್ಯವಾಗಿದೆ' ಎಂದು ತಿಳಿಸಿದ್ದಾರೆ.

'ಕೋರ್ಸ್ ಮುಚ್ಚಲು ಏಕಪಕ್ಷೀಯ ನಿರ್ಧಾರ ತೆಗೆದುಕೊಂಡಿಲ್ಲ. ಸಮಿತಿ ರಚಿಸಿ ಅದರ ಶಿಫಾರಸ್ಸಿನಂತೆ ಈ ಶೈಕ್ಷಣಿಕ ಸಾಲಿನಲ್ಲಿ ಮುಂದುವರಿಸದಿರಲು ನಿರ್ಧಾರ ಕೈಗೊಳ್ಳಲಾಗಿದೆ. ವಿದ್ಯಾವಿಷಯಕ ಪರಿಷತ್ ಮತ್ತು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಕೂಡ ಪಡೆಯಲಾಗಿದೆ. ಈ ವಿಷಯವನ್ನು ಸರ್ಕಾರದ ಗಮನಕ್ಕೂ ತರಲಾಗಿದೆ' ಎಂದಿದ್ದಾರೆ.

'ವಿಶ್ವವಿದ್ಯಾಲಯ ಸ್ವಾಯುತ್ತ ಸಂಸ್ಥೆಯಾಗಿದೆ. ಕರ್ನಾಟಕ ವಿಶ್ವವಿದ್ಯಾಲಯಗಳ ಕಾಯ್ದೆಯಡಿ 2000ರ 34 (4)ನೇ ವಿಧಿಯ ಪ್ರಕಾರ ಯಾವುದೇ ಅಧ್ಯಯನ ವಿಭಾಗವನ್ನು ರದ್ದುಪಡಿಸುವ ಹಕ್ಕು ಹೊಂದಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯ ಪ್ರಜ್ಞಾಪೂರ್ವಕವಾಗಿಯೇ ಈ ಕ್ರಮ ಕೈಗೊಂಡಿದೆ. ನಿರಂತರವಾಗಿ ವಿದ್ಯಾರ್ಥಿಗಳ ಕೊರತೆ ಎದುರಿಸುತ್ತಿರುವ ಈ ವಿಭಾಗವನ್ನು ನಡೆಸಲು ಸಾಧ್ಯವಾಗುತ್ತಿಲ್ಲ' ಎಂದು ಅವರು ಪ್ರಕಟಣೆ ಮೂಲಕ ಸಾರ್ವಜನಿಕರಿಗೆ ಮನವರಿಕೆ ಮಾಡಿದ್ದಾರೆ.

ಪತ್ರಿಕೋದ್ಯಮ ವಿಭಾಗ ಮುಚ್ಚಲು ವಿದ್ಯಾರ್ಥಿಗಳ ಕೊರತೆಯೇ ಕಾರಣ ಎಂದು ವಿಶ್ವವಿದ್ಯಾಲಯದ ಕುಲಸಚಿವರು ಕೂಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಉತ್ತರ ವಿ.ವಿ ಪತ್ರಿಕೋದ್ಯಮ ವಿಭಾಗ ಬಂದ್' ಎಂಬ ವಿಶೇಷ ವರದಿ ಜುಲೈ 21ರಂದು 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿತ್ತು. ಆ ಬಳಿಕ ಪರ ವಿರೋಧ ಚರ್ಚೆಗಳು ನಡೆದಿದ್ದವು. ಈ ಹಿನ್ನೆಲೆಯಲ್ಲಿ ಅವರು ಈ ಸ್ಪಷ್ಟಣೆ ನೀಡಿದ್ದಾರೆ.

ಕಾಮಗಾರಿ ಚುರುಕುಗೊಳಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ತುಮಕೂರು: ಗಣಿ ಬಾಧಿತ ಪ್ರದೇಶಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಯೋಜನೆಗಳು ನಿಧಾನಗತಿಯಲ್ಲಿ ಸಾಗಿರುವುದಕ್ಕೆ ಗಣಿ ಪರಿಸರ ಪುನಶ್ಚೇತನಾ ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಂಜಯ್ ಬಿಜ್ಜೂರು ಆಕ್ಷೇಪ ವ್ಯಕ್ತಪಡಿಸಿದರು.

ನಗರದಲ್ಲಿ ಬುಧವಾರ ಗಣಿ ಬಾಧಿತ ಪ್ರದೇಶಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಯೋಜನೆಗಳ ಕುರಿತು ಪ್ರಗತಿ ಪರಿಶೀಲನೆ ನಡೆಸಿದರು.

ಹಲವು ತಿಂಗಳಿಂದ ಕೆಲವು ಕಾಮಗಾರಿಗಳು ಟೆಂಡರ್ ಹಂತದಲ್ಲೇ ಉಳಿದಿವೆ. ಮತ್ತೆ ಕೆಲವು ಕಾಮಗಾರಿಗಳು ಟೆಂಡರ್ ಕರೆಯಲು ಬಾಕಿಯಿದ್ದು, ಹಲವು ಕಾಮಗಾರಿಗಳಿಗೆ ಇನ್ನೂ ಟೆಂಡರ್ ಕರೆದಿಲ್ಲ. ಕಾಮಗಾರಿಗಳಿಗೆ ಕಾರ್ಯಾದೇಶ ನೀಡಿದ್ದರೂ ಕೆಲಸ ಪೂರ್ಣಗೊಂಡಿಲ್ಲ. ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಶೀಘ್ರವೇ ಪೂರ್ಣಗೊಳಿಸಬೇಕು ಎಂದರು.

ವಿದ್ಯಾರ್ಥಿನಿಲಯಗಳ ನಿರ್ಮಾಣ, ರಸ್ತೆ ಅಭಿವೃದ್ಧಿ, ಕುಡಿಯುವ ನೀರಿನ ಯೋಜನೆ, ಸಾರ್ವಜನಿಕರ ಜೀವನ ಮಟ್ಟ ಸುಧಾರಿಸಲು ರೂಪಿಸಿರುವ ಯೋಜನೆಗಳ ಅನುಷ್ಠಾನ ತ್ವರಿತಗೊಳಿಸಬೇಕು. ಗುಣಮಟ್ಟ ಕಾಯ್ದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಅರಣ್ಯ, ಕೃಷಿ, ತೋಟಗಾರಿಕೆ, ಮೀನುಗಾರಿಕೆ, ರೇಷ್ಮೆ, ಕುಡಿಯುವ ನೀರು, ಗ್ರಾಮೀಣ ರಸ್ತೆ, ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡಿರುವ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಿದರು. ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಶಶಿಧರ್, ಗಣಿ ಭೂ ವಿಜ್ಞಾನ ಇಲಾಖೆ ಉಪನಿರ್ದೇಶಕ ಲೋಕೇಶ್ ಕುಮಾರ್, ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರಕಟಣೆ

ಟಿಮ್‌ಕೆನ್ ಇಂಡಿಯಾ ನಿಯಮಿತ
CIN - L29130KA1996PLC048230
ನೋಂದಣಿ ಕಛೇರಿ: ಸಂಖ್ಯೆ. 39-42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು-560 100 ದೂರವಾಣಿ : 080 41362000
ಇ-ಮೇಲ್: tilinvestor@timken.com ವೆಬ್‌ಸೈಟ್ : www.timken.com/en-in

ಸೂಚನೆ

ಕಂಪನಿಯ 38ನೇ ವಾರ್ಷಿಕ ಸಾರ್ವತ್ರಿಕ ಸಭೆಯನ್ನು ('ಎಜಿಎಂ') 19 ನೇ ಆಗಸ್ಟ್, 2025 ಮಂಗಳವಾರ ಮಧ್ಯಾಹ್ನ 3.00 ಗಂಟೆಗೆ (ಐಎಸ್‌ಟಿ) ವಿಡಿಯೋಕಾನ್ಫರೆನ್ಸಿಂಗ್ ('ವಿಸಿ') / ಇತರೆ ಆಡಿಯೋ ವಿಷುಯಲ್ ಮೀನ್ಸ್ ಮೂಲಕ ('ಒಎವಿಎಂ') ಏರ್ಪಡಿಸಲಾಗಿದೆ ಎಂದು 2013 (ಸದರಿ ಕಾಯ್ದೆ) ರ ಕಂಪನಿ ಕಾಯ್ದೆಯಲ್ಲಿ ಅನ್ವಯಿಸುವ ಎಲ್ಲಾ ನಿಬಂಧನೆಗಳ ಪ್ರಕಾರ ಹಾಗೂ ಇದರ ನಿಯಮಾನುಸಾರ ಮತ್ತು ಸೆಕ್ಯೂರಿಟೀಸ್ ಆ್ಯಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದ (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ನಿಬಂಧನೆ 2015 (ಲಿಸ್ಟಿಂಗ್ ನಿಬಂಧನೆ) ಅನ್ನು ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯದ ('ಎಂಸಿಎ') ಹಾಗೂ ಸೆಕ್ಯೂರಿಟಿಸ್ ಆ್ಯಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದ ('ಸೆಬಿ') ಅನ್ವಯಿಸುವ ಸುತ್ತೋಲೆಗಳಿಗೆ ಅನುಗುಣವಾಗಿ ಸೂಚನೆಯಲ್ಲಿ ತಿಳಿಸಿರುವಂತೆ ವ್ಯವಹಾರಗಳ ಬಗ್ಗೆ ಕಾರ್ಯ ಕಲಾಪಗಳನ್ನು ನಡೆಸುವುದು ಇದರ ಉದ್ದೇಶ. 38ನೇ ವಾರ್ಷಿಕ ಸಾರ್ವತ್ರಿಕ ಸಭೆಯ ಸೂಚನೆ ಹಾಗೂ 2024–25 ರ ವಾರ್ಷಿಕ ವರದಿಯನ್ನು ಎಲ್ಲಾ ಸದಸ್ಯರಿಗೆ, ಕಂಪನಿ/ಭಾಗವಹಿಸುವ (ವವರ) ಡಿಪಾಸಿಟರಿ / ರಿಜಿಸ್ಟ್ರಾರ್ ಆ್ಯಂಡ್ ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ) ಗಳಲ್ಲಿ ನೋಂದಾಯಿಸಿರುವ ಇ–ಮೇಲ್ ಐಡಿಗಳಿಗೆ ಕಳುಹಿಸಲಾಗಿದೆ. ಹೆಚ್ಚುವರಿಯಾಗಿ, ಕಂಪನಿಯು ಕಂಪನಿ/ಭಾಗವಹಿಸುವ (ವವರ) ಡಿಪಾಸಿಟರ್ / ರಿಜಿಸ್ಟ್ರಾರ್ ಆ್ಯಂಡ್ ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ) ಗಳಲ್ಲಿ ತಮ್ಮ ಇ–ಮೇಲ್ ಐಡಿಗಳನ್ನು ನೋಂದಾಯಿಸದ ಸದಸ್ಯರಿಗೆ ಪತ್ರವನ್ನು ಕಂಪನಿಯ ವೆಬ್‌ಸೈಟ್ ಲಿಂಕ್ ಅನ್ನು ಒದಗಿಸಿ ಕಳುಹಿಸುವುದು ಹಾಗೆಯೇ ಇಲ್ಲಿ 2024–25 ರ ವಾರ್ಷಿಕ ವರದಿಯನ್ನು ಪ್ರಕ್ರಿಯಿಸಬಹುದು. ಹಣಕಾಸು ವಾರ್ಷಿಕ 2024–25 ವಾರ್ಷಿಕ ವರದಿಯು ಕಂಪನಿಯ ವೆಬ್‌ಸೈಟ್ <https://www.timken.com/en-in/investors/financial-report/> ನಲ್ಲಿ ಸಹ ಹಾಗೂ ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ ಅಂದರೆ ಕಂಪನಿಯ ಷೇರುಗಳ ಪಟ್ಟಿ ಇರುವಲ್ಲಿ ಲಭ್ಯವಿದೆ. 38ನೇ ಸಾರ್ವತ್ರಿಕ ಸಭೆಯ ಸೂಚನೆಯು ಕಂಪನಿಯ ವೆಬ್‌ಸೈಟ್ <https://www.timken.com/en-in/investors/statutory-compliances/> ನಲ್ಲಿ ಸಹ ಹಾಗೂ ನ್ಯಾಷನಲ್ ಸೆಕ್ಯೂರಿಟಿಸ್ ಡಿಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ವೆಬ್‌ಸೈಟ್ www.evoting.nsdl.com ನಲ್ಲಿ ಲಭ್ಯವಿದೆ.

ಸಮಯಕ್ಕೆ ಅನುಗುಣವಾಗಿ ಬದಲಾಯಿಸುವ ನಿಯಮಗಳು, 2014 ಮತ್ತು ನಿಬಂಧನೆ 44 ರ ಅನುಸಾರ ಸಂಸ್ಥೆಗಳ ನಿಯಮ 20 (ಆಡಳಿತ ವರ್ಗ ಹಾಗೂ ಆಡಳಿತ) ಸೆಕ್ಷನ್ 108 ರ ನಿಬಂಧನೆಗಳಿಗೆ ಅನ್ವಯ ಕಂಪನಿಯು ಎನ್‌ಎಸ್‌ಡಿಎಲ್‌ನೊಂದಿಗೆ 38ನೇ ವಾರ್ಷಿಕ ಸಾರ್ವತ್ರಿಕ ಸಭೆಯ ನಿರ್ಣಯಗಳಿಗಾಗಿ ಎಜಿಎಂ ದಿನದಂದು ರಿಮೋಟ್ ಇ–ಮತ ಚಲಾವಣೆ ಮತ್ತು ಇ–ಮತ ಚಲಾಯಿಸಲು ವ್ಯವಸ್ಥೆ ಮಾಡಿದೆ. ಎಜಿಎಂ ದಿನದಂದು ರಿಮೋಟ್ ಇ–ಮತ ಚಲಾವಣೆ ಮತ್ತು ಇ–ಮತ ಚಲಾವಣೆಯಲ್ಲಿ ಭಾಗವಹಿಸುವ ಸಂಪೂರ್ಣ ವಿಧಾನದ ಬಗ್ಗೆ ಎಜಿಎಂ ಸೂಚನೆಯಲ್ಲಿ ಒದಗಿಸಲಾಗಿದೆ. ಭೌತಿಕ ಅಥವಾ ಡಿ ಮೆಟೀರಿಯಲೈಸ್ಡ್ ರೂಪದಲ್ಲಿ ಕಟ್ಟ ಕಡೆಯ ದಿನವಾದ 12 ಆಗಸ್ಟ್, 2025 ರಂದು ಕಂಪನಿಯ ಷೇರುಗಳನ್ನು ಹೊಂದಿರುವ ಕಂಪನಿಯ ಸದಸ್ಯರು ತಮ್ಮ ಮತವನ್ನು ಎಲೆಕ್ಟ್ರಾನಿಕ್ ಯಂತ್ರದ ಮೂಲಕ ರಿಮೋಟ್ ಇ–ಮತ ಅಥವಾ ಇ–ಮತವನ್ನು ಎಜಿಎಂ ದಿನಾಂಕದಂದು ಚಲಾಯಿಸಬಹುದು. ಯಾವುದೇ ವ್ಯಕ್ತಿಯು ವಾರ್ಷಿಕ ಸಾರ್ವತ್ರಿಕ ಸಭೆಯ (ಎಜಿಎಂ) ಸೂಚನೆಯನ್ನು ರವಾನಿಸಿದ ನಂತರ ಕಂಪನಿಯ ಷೇರುಗಳನ್ನು ಹೊಂದಿ ಕಟ್ಟ ಕಡೆಯ ದಿನಾಂಕದಂದು ಅಂದರೆ 12ನೇ ಆಗಸ್ಟ್ 2025 ರಂದು ಸದಸ್ಯರಾದಲ್ಲಿ evoting.nsdl.co.in ಗೆ ತಮ್ಮ ಮನವಿಯನ್ನು ಕಳುಹಿಸಿ ಲಾಗಿನ್ ಐಡಿ ಹಾಗೂ ಪಾಸ್‌ವರ್ಡ್‌ಗಳನ್ನು ಪಡೆಯಬಹುದು. ಆದರೂ ಸಹ, ಯಾವುದೇ ಸದಸ್ಯರು ರಿಮೋಟ್ ಇ–ಮತ ಚಲಾವಣೆಗಾಗಿ ಈಗಾಗಲೇ ಎನ್‌ಎಸ್‌ಡಿಎಲ್‌ನೊಂದಿಗೆ ನೋಂದಾಯಿಸಿಕೊಂಡಿದ್ದಲ್ಲಿ ತಮ್ಮ ಮತ ಚಲಾವಣೆಗಾಗಿ ಹಾಲಿಯಿರುವ ಯುಸರ್ ಐಡಿ ಹಾಗೂ ಪಾಸ್‌ವರ್ಡ್ ಅನ್ನು ಉಪಯೋಗಿಸಬಹುದು.

ರಿಮೋಟ್ ಇ–ಮತ ಚಲಾವಣೆಯು 2025, 16 ನೇ ಆಗಸ್ಟ್ ಬೆಳಿಗ್ಗೆ 9.00 ಗಂಟೆಗೆ (ಐಎಸ್‌ಟಿ) ಪ್ರಾರಂಭವಾಗುವುದು ಹಾಗೂ 2025, 18ನೇ ಆಗಸ್ಟ್, ಸಂಜೆ 5.00 ಗಂಟೆಗೆ (ಐಎಸ್‌ಟಿ) ಮುಕ್ತಾಯಗೊಳ್ಳುವುದು. ನಂತರ ರಿಮೋಟ್ ಇ–ಮತ ವಿಧಾನವನ್ನು ನಿಷ್ಕ್ರಿಯಗೊಳಿಸಲಾಗುವುದು. ನಿಗಧಿತ ಮತ ಚಲಾವಣೆಯ ಫಲಿತಾಂಶವನ್ನು ಅನ್ವಯಿಸುವ ನಿಯಮದ ಪ್ರಕಾರವಾಗಿ ಘೋಷಿಸಲಾಗುವುದು ಹಾಗೂ ಇದನ್ನು ಕಂಪನಿಯ ವೆಬ್‌ಸೈಟ್‌ನಲ್ಲಿ ಸಹ ಪ್ರಕಟಿಸಲಾಗುವುದು. ರಿಮೋಟ್ ಇ–ಮತ ಚಲಾವಣೆ ಮೂಲಕ ಮತ ಚಲಾಯಿಸಿರುವ ಸದಸ್ಯರು 38ನೇ ವಾರ್ಷಿಕ ಸಾರ್ವತ್ರಿಕ ಸಭೆ (ಎಜಿಎಂ) ಯಲ್ಲಿ ಭಾಗವಹಿಸಬಹುದು ಆದರೆ ಪುನಃ ಮತ ಚಲಾಯಿಸಲು ಅವಕಾಶವಿರುವುದಿಲ್ಲ.

ಯಾವುದೇ ವಿಚಾರಣೆಗೆ ಅಥವಾ ಇ–ಮತ ಚಲಾವಣೆಯ ಬಗ್ಗೆ ಸಮಸ್ಯೆಗಳಿಗೆ ಆಗಿಂದಾಗೆ ಕೇಳಲ್ಪಡುವ ಪ್ರಶ್ನೆ ("ಎಫ್‌ಎಕ್ಯೂ") ಗಳನ್ನು ಗಮನಿಸಿ ಮತ್ತು www.evoting.nsdl.com ನಲ್ಲಿ ಲಭ್ಯವಿರುವ ಇ–ಮತ ಮ್ಯಾನ್ಯುಯಲ್ ಅನ್ನು ಉಲ್ಲೇಖಿಸಬಹುದು. ಯಾವುದೇ ತೊಂದರೆ/ಕುಂದು ಕೊರತೆ ಇದ್ದಲ್ಲಿ, ಸದಸ್ಯರು ಕೆಳಸಹಿದಾರರನ್ನು tilinvestor@timken.com (ದೂರವಾಣಿ ಸಂಖ್ಯೆ.: 080–41362000) ಅಥವಾ ಆರ್‌ಟಿಎಯವರನ್ನು rta@cbmsl.com (ದೂರವಾಣಿ ಸಂಖ್ಯೆ.: 033–6906 6200) ಮೂಲಕ ಸಂಪರ್ಕಿಸಬಹುದು.

38ನೇ ಎಜಿಎಂನಲ್ಲಿ ಸದಸ್ಯರು ಮಿಸ್ಟರ್. ಸುಮಿತ್ ರಾಥೋರ್ (DIN: 00128517) ಮತ್ತು ಡಾ. ಲಕ್ಷ್ಮೀ ಲಿಂಗಮ್ (DIN: 10181197) ಮತ್ತು ಮಿಸ್ಟರ್ ಸುಜಿತ್ ಕುಮಾರ್ ಪಟ್ಟನಾಯಕ್ (DIN: 10709015) ರವರ ನೇಮಕಾತಿ/ಪುನರ್–ನೇಮಕಾತಿಯ ಪ್ರಸ್ತಾವನೆಯನ್ನು ಪರಿಗಣಿಸುತ್ತಾರೆ. ಕಾಯ್ದೆಯ ಸೆಕ್ಷನ್ 160 ರ ಅಡಿಯಲ್ಲಿ ಕಂಪನಿಯು ಸದಸ್ಯರುಗಳಿಂದ ಸದರಿ ನೇಮಕಾತಿಗಾಗಿ ಸೂಚನೆಗಳನ್ನು ಸ್ವೀಕರಿಸಿದೆ ಹಾಗೂ ಇದು ಕಂಪನಿಯ ವೆಬ್‌ಸೈಟ್ www.timken.com/en-in ನಲ್ಲಿ ಲಭ್ಯವಿದೆ.

ಸರಳ ಹೂಡಿಕೆಗೆ ಸಂಬಂಧಿಸಿದಂತೆ ಸಿಬಿ ಸುತ್ತೋಲೆ ದಿನಾಂಕ 2 ಜುಲೈ, 2025 ಕ್ಕೆ ಅನ್ವಯಿಸುವಂತೆ ಷೇರುದಾರರ ಗಮನಕ್ಕೆ ನಾವು ಆಹ್ವಾನಿಸುತ್ತಿದ್ದೇವೆ – ಭೌತಿಕ ಷೇರುಗಳ ವರ್ಗಾವಣೆ ಮನವಿಗಳನ್ನು ಪುನರ್–ಸಲ್ಲಿಕೆಗಾಗಿ ವಿಶೇಷ ಕಿಟಕಿ. ಸೆಬಿಯು ವರ್ಗಾವಣೆಯ ಪತ್ರಗಳ ಪುನರ್–ಸಲ್ಲಿಕೆಗಾಗಿ ಮಾತ್ರ ವಿಶೇಷ ಕಿಟಕಿಯನ್ನು ತೆರೆಯಲು ನಿರ್ಧರಿಸಿದ್ದು, 1 ಏಪ್ರಿಲ್, 2019 ರ ಕೊನೆಯ ದಿನಾಂಕಕ್ಕೆ ಮುಂಚಿತವಾಗಿ ಸಲ್ಲಿಸಲಾದ ಮತ್ತು ದಾಖಲೆಗಳಲ್ಲಿ/ಪ್ರಕ್ರಿಯೆಯಲ್ಲಿ/ಅಥವಾ ಬೇರೆ ಯಾವುದೇ ಕಾರಣದ ಅಭಾವದಿಂದಾಗಿ ತಿರಸ್ಕೃತವಾದ/ಹಿಂದಿರುಗಿಸಲಾದ/ಗಮನಹರಿಸದ ಪ್ರಕಾರವಾಗಿ. ಷೇರುದಾರರು ಮೇಲೆ ತಿಳಿಸಲಾದ ಪ್ರಕರಣೆಗಳಿಗೆ ತಮ್ಮ ವರ್ಗಾವಣೆ ಪತ್ರಗಳನ್ನು 07 ಜುಲೈ, 2025 ರಿಂದ 06 ಜನವರಿ, 2026 ರವರೆಗೆ ಆರು ತಿಂಗಳು ಅವಧಿಯಲ್ಲಿ ಸಲ್ಲಿಸಬಹುದು. ಈ ಸುತ್ತೋಲೆಯು ಕಂಪನಿಯ ವೆಬ್‌ಸೈಟ್ <https://www.timken.com/en-in/investors/statutory-compliances/> ನಲ್ಲಿ ಲಭ್ಯವಿದೆ.

ಟಿಮ್‌ಕೆನ್ ಇಂಡಿಯ ನಿಯಮಿತ ಪರವಾಗಿ
ಸಹಿ/– ಮಂದಾರ್ ವಸಮತ್‌ಕರ್
ಕಂಪನಿ ಕಾರ್ಯದರ್ಶಿ ಮತ್ತು ಮುಖ್ಯ–ಕಾಂಪ್ಲಯನ್ಸ್
ಸದಸ್ಯತ್ವ ಸಂಖ್ಯೆ : ಎ23953

ಬೆಂಗಳೂರು
23 ಜುಲೈ, 2025





ಚಟಿಕೆ ಸುದ್ದಿ

ನಿಷ್ಪಕ್ಷಪಾತ ತನಿಖೆಗೆ ಆಗ್ರಹ

ಬೆಂಗಳೂರು: ಧರ್ಮಸ್ಥಳದ ವ್ಯಾಪ್ತಿಯಲ್ಲಿ ನಡೆದ ನಿಗೂಢ ಕೊಲೆಗಳ ಪ್ರಕರಣಗಳ ತನಿಖೆ ನಡೆಸಲು ರಾಜ್ಯ ಸರ್ಕಾರ ಎಸ್‌ಐಟಿ ರಚಿಸಿರುವುದು ಶ್ಲಾಘನೀಯ. ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಕರ್ನಾಟಕ ಪ್ರಜ್ಞಾವಂತ ಜನತಾ ಪಕ್ಷ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ಡಿ. ಮಹೇಶ್ ಗೌಡ, 'ಧರ್ಮಸ್ಥಳದಲ್ಲಿ ವ್ಯಾಪ್ತಿಯಲ್ಲಿ ನಡೆದಿರುವ ನಿಗೂಢ ಕೊಲೆ ಪ್ರಕರಣಗಳಲ್ಲಿ ಪ್ರಭಾವಿ ವ್ಯಕ್ತಿಗಳು ಇರುವ ಸಾಧ್ಯತೆ ಇದೆ. ಇವರಿಗೆ ಆಡಳಿತ ಹಾಗೂ ವಿರೋಧ ಪಕ್ಷದ ರಾಜಕೀಯ ಮುಖಂಡರ ಬೆಂಬಲವಿದೆ. ಈ ಪ್ರಕರಣಗಳಲ್ಲಿ ನಿಷ್ಪಕ್ಷಪಾತ ತನಿಖೆ ನಡೆಸಿ, ಸಂತ್ರಸ್ತ ಕುಟುಂಬಗಳಿಗೆ ನ್ಯಾಯ ಒದಗಿಸಬೇಕು. ಇಲ್ಲದಿದ್ದರೆ ಕರ್ನಾಟಕ ಪಜ್ಞಾವಂತ ಜನತಾ ಪಕ್ಷದಿಂದ ರಾಜ್ಯದಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಅರ್ಜಿ ಆಹ್ವಾನ

ಬೆಂಗಳೂರು: ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ ಬೆಂಗಳೂರು ಪ್ರಾದೇಶಿಕ ಕೇಂದ್ರದಲ್ಲಿ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮಾ ಪ್ರವೇಶಕ್ಕೆ ಆನ್‌ಲೈನ್ ಅರ್ಜಿ ಆಹ್ವಾನಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರಾದೇಶಿಕ ಕೇಂದ್ರದ ನಿರ್ದೇಶಕ ಎಂ. ಷಣ್ಮುಗಂ, 'ಪ್ರವೇಶ ಪರೀಕ್ಷೆ ಇಲ್ಲದೇ ಎಂಬಿಎಗೆ ನೇರ ಪ್ರವೇಶವನ್ನು ಒದಗಿಸಲಾಗುತ್ತಿದೆ. ಬ್ಯಾಚುಲರ್ ಆಫ್ ಆರ್ಟ್ಸ್, ಬ್ಯಾಚುಲರ್ ಆಫ್ ಕಾಮರ್ಸ್, ಬ್ಯಾಚುಲರ್ ಆಫ್ ಸೈನ್ಸ್ ಪದವಿಗಳನ್ನು ಪ್ರವೇಶ ಬಯಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶೇ 50ರಷ್ಟು ಶುಲ್ಕ ವಿನಾಯಿತಿ ಇದೆ. ಈ ಬಗ್ಗೆ ಹೆಚ್ಚಿನ ಮಾಹಿತಿಗೆ https://www.ignou.ac.in/ ವೆಬ್‌ಸೈಟ್‌ಗೆ ಭೇಟಿ ನೀಡಬಹುದು' ಎಂದು ತಿಳಿಸಿದರು.

ಬಿಸಿಯು: 25ರಂದು ಉದ್ಯೋಗ ಮೇಳ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದಿಂದ ಇದೇ 25ರಂದು 'ಟ್ರಾನ್ಸ್‌ಫಾರ್ಮ್ ಕೆರಿಯರ್ ಫೇರ್ 2025' ಶೀರ್ಷಿಕೆಯಡಿ ಶೈಕ್ಷಣಿಕ ಪ್ರದರ್ಶನ ಮತ್ತು ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ.

ವಿಶ್ವವಿದ್ಯಾಲಯದ ಹೊಸ ಅಕಾಡೆಮಿಕ್ ಬ್ಲಾಕ್‌ನಲ್ಲಿ ಈ ಮೇಳವನ್ನು ಆಯೋಜಿಸಲಾಗಿದೆ. ವಿವಿಧ ಕ್ಷೇತ್ರಗಳ ಪ್ರತಿಭಾವಂತ ವಿದ್ಯಾರ್ಥಿಗಳು, ಪದವೀಧರರು ಮತ್ತು ವೃತ್ತಿಪರು ಮತ್ತು ಪ್ರಮುಖ ಕಂಪನಿಗಳೊಂದಿಗೆ ನೇರ ಸಂಪರ್ಕ ಕಲ್ಪಿಸುವುದು ಈ ಮೇಳದ ಉದ್ದೇಶವಾಗಿದೆ.

60ಕ್ಕೂ ಅಧಿಕ ಸಂಸ್ಥೆಗಳು ಮೇಳದಲ್ಲಿ ಭಾಗವಹಿಸುತ್ತಿವೆ. ಉದ್ಯೋಗ, ಇಂಟರ್ನ್‌ಷಿಪ್ ಮತ್ತು ವೃತ್ತಿ ಅಭಿವೃದ್ಧಿಗೆ ಸಂಬಂಧಿಸಿದ ಅನೇಕ ಅವಕಾಶಗಳನ್ನು ನೀಡಲಿವೆ. ಭಾಗವಹಿಸುವವರಿಗೆ ಸ್ಥಳದಲ್ಲಿಯೇ ಸಂದರ್ಶನ, ಪರಿಚಯಪತ್ರ (ಬಯೊಡೇಟಾ) ತಯಾರಿಕೆ, ಸಂದರ್ಶನ ತಂತ್ರಗಳು ಮತ್ತು ವೃತ್ತಿ ಬೆಳವಣಿಗೆ ಕುರಿತ ಕಾರ್ಯಾಗಾರಗಳಲ್ಲಿ ಭಾಗವಹಿಸುವ ಅವಕಾಶ ಲಭ್ಯವಿದೆ ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ. ಮೇಳದಲ್ಲಿ ಪಾಲ್ಗೊಳ್ಳುವ ಆಸಕ್ತರು https://tcf.edufactory.in ಜಾಲತಾಣದ ಮೂಲಕ ನೋಂದಣಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ www.bcu.ac.in ಜಾಲತಾಣ ಸಂಪರ್ಕಿಸಬಹುದು.

ನಿಧನ ವಾರ್ತೆ

ನಿವೃತ್ತ ಐಎಎಸ್ ಅಧಿಕಾರಿ ಡಿ.ಎಸ್.ಅಶ್ವತ್

ಬೆಂಗಳೂರು: ನಿವೃತ್ತ ಐಎಎಸ್ ಅಧಿಕಾರಿ ಡಿ.ಎಸ್.ಅಶ್ವತ್ ಅವರು ನಿಧನರಾಗಿದ್ದಾರೆ. ಅವರಿಗೆ 75 ವರ್ಷ ವಯಸ್ಸಾಗಿತ್ತು.

ಕೊಪ್ಪಳ, ಬೆಂಗಳೂರು ನಗರ ಜಿಲ್ಲೆ, ಕೊಡಗು ಜಿಲ್ಲಾಧಿಕಾರಿಯಾಗಿ, ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ಅವರು ಪತ್ನಿ, ಒಬ್ಬ ಪುತ್ರ ಮತ್ತು ಒಬ್ಬ ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಕೋಲಾರದ ಸ್ವಗ್ರಾಮದಲ್ಲಿ ಬುಧವಾರ ಮಧ್ಯಾಹ್ನ ನಡೆಯಿತು.

ಎಚ್.ಪಿ. ಸುಲೋಚನ



ನೆಲಮಂಗಲ: ಪಟ್ಟಣದ ನಿವಾಸಿ ಶಿಕ್ಷಕಿ ಎಚ್.ಪಿ. ಸುಲೋಚನ(53) ಅವರು ಹೃದಯಾಘಾತದಿಂದ ಮಂಗಳವಾರ ರಾತ್ರಿ ನಿಧನರಾದರು.

ಮೃತರಿಗೆ ಪತಿ, ಪುತ್ರ ಇದ್ದಾರೆ. ಬುಧವಾರ ಸಂಜೆ ಮಾಗಡಿ ತಾಲ್ಲೂಕು ಬ್ಯಾಲಕೆರೆಯಲ್ಲಿ ಅವರ ಅಂತ್ಯ ಸಂಸ್ಕಾರ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಕ್ತಿ ಕೇಂದ್ರದಲ್ಲಿ ರಾರಾಜಿಸಲಿದೆ ಕನ್ನಡ ಫಲಕ

ವಿಧಾನಸೌಧ, ವಿಕಾಸಸೌಧದಲ್ಲಿ ಕನ್ನಡ ಘೋಷವಾಕ್ಯ ಅಳವಡಿಕೆಗೆ ಕ್ರಮ

• ವರುಣ ಹೆಗಡೆ

ಬೆಂಗಳೂರು: ವಿಧಾನಸೌಧ ಮತ್ತು ವಿಕಾಸಸೌಧದ ಜತೆಗೆ ಜಿಲ್ಲಾಧಿಕಾರಿ ಕಚೇರಿಗಳಲ್ಲಿ ಕನ್ನಡ ಘೋಷವಾಕ್ಯದ ಫಲಕಗಳ ಅಳವಡಿಕೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮುಂದಾಗಿದ್ದು, ಮುಂಬರುವ ಕರ್ನಾಟಕ ರಾಜ್ಯೋತ್ಸವದ ವೇಳೆಗೆ ಆಡಳಿತದ ಶಕ್ತಿ ಕೇಂದ್ರಗಳಲ್ಲಿ ಈ ಫಲಕಗಳು ರಾರಾಜಿಸಲಿವೆ.

ಈ ಕಟ್ಟಡಗಳಲ್ಲಿ ಕನ್ನಡಮಯ ವಾತಾವರಣ ನಿರ್ಮಾಣ ಆಗಬೇಕೆಂಬ ಉದ್ದೇಶದಿಂದ ಪ್ರಾಧಿಕಾರ ಈ ಯೋಜನೆ ಹಮ್ಮಿಕೊಂಡಿದೆ. ಘೋಷವಾಕ್ಯಗಳ ಆಯ್ಕೆಯ ಸಂಬಂಧ ವಿಮರ್ಶಕ ಎಚ್.ಎಸ್.ರಾಘವೇಂದ್ರ ರಾವ್ ಹಾಗೂ ಲೇಖಕಿ ಪ್ರತಿಭಾ ನಂದಕುಮಾರ್ ಅವರನ್ನು ಒಳಗೊಂಡ ಸಮಿತಿಯನ್ನು ಪ್ರಾಧಿಕಾರ ರಚಿಸಿದೆ. ಈ ಸಮಿತಿ ಘೋಷವಾಕ್ಯಗಳನ್ನು ಪರಿಶೀಲಿಸುತ್ತಿದ್ದು, ಇದೇ ತಿಂಗಳು ಸಂಗ್ರಹ ಕಾರ್ಯವನ್ನು ಪೂರ್ಣಗೊಳಿಸಲಿದೆ. ಒಟ್ಟು 2,500 ಘೋಷವಾಕ್ಯಗಳನ್ನು



ಆಡಳಿತದ ಶಕ್ತಿ ಕೇಂದ್ರಗಳು ಕನ್ನಡಮಯವಾಗಬೇಕು. ಆದ್ದರಿಂದ ಘೋಷವಾಕ್ಯಗಳ ಫಲಕ ಅಳವಡಿಸಲಾಗುತ್ತಿದೆ.
ಪುರುಷೋತ್ತಮ ಬಿಳಿಮಲೆ
ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

ಸಂಗ್ರಹಿಸುವ ಗುರಿಯನ್ನು ಪ್ರಾಧಿಕಾರ ಹಾಕಿಕೊಂಡಿದ್ದು, ಅವುಗಳಲ್ಲಿ ಅತ್ಯುತ್ತಮವಾದ, ಕನ್ನಡತನ ಪ್ರತಿಬಿಂಬಿಸುವ 500 ಘೋಷವಾಕ್ಯಗಳನ್ನು ಅಂತಿಮಗೊಳಿಸಲಾಗುತ್ತದೆ.

ಪ್ರಾಧಿಕಾರವು ಕಳೆದ ತಿಂಗಳು ಸಾರ್ವಜನಿಕರಿಂದಲೂ ಘೋಷವಾಕ್ಯಗಳನ್ನು ಆಹ್ವಾನಿಸಿತ್ತು. ಸುಮಾರು 1,600 ಘೋಷವಾಕ್ಯ-ಗಳನ್ನು ಪ್ರಾಧಿಕಾರ ಸ್ವೀಕರಿಸಿದ್ದು, ಇವುಗಳನ್ನು ಕೂಡ ಸಮಿತಿಯ ಸದಸ್ಯರು



ವಿಧಾನಸೌಧ

ಪರಿಶೀಲಿಸುತ್ತಿದ್ದಾರೆ. ವಿವಿಧ ಪುಸ್ತಕಗಳು, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರ ಭಾಷಣಗಳ ಉದ್ಧರಣಗಳು, ಕವಿವಾಣಿಗಳನ್ನೂ ಘೋಷವಾಕ್ಯಗಳಿಗೆ ಪರಿಗಣಿಸಲಾಗುತ್ತಿದೆ.

ಸ್ಥಳಾವಕಾಶ ಗುರುತು: ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಡಿಪಿಎಆರ್) ಸಹಯೋಗದಲ್ಲಿ ಪ್ರಾಧಿಕಾರವು ಘೋಷವಾಕ್ಯಗಳನ್ನು ಅಳವಡಿಕೆ ಮಾಡಲಿದೆ. ವಿಧಾನಸೌಧ ಹಾಗೂ ವಿಕಾಸಸೌಧ ಕಟ್ಟಡಗಳ ಭವ್ಯತೆಗೆ ಪೂರಕವಾಗಿ ಆಯ್ದ ಜಾಗಗಳಲ್ಲಿ ಕನ್ನಡದ ಘೋಷವಾಕ್ಯಗಳ ಫಲಕವನ್ನು ಅಳವಡಿಸಲಾಗುತ್ತದೆ. ಈ ಕಟ್ಟಡಗಳಿಗೆ 92 ಕಡೆ ನಾಮಫಲಕಗಳನ್ನು ಅಳವಡಿಸಲು ಸ್ಥಳಾವಕಾಶ ಗುರುತಿಸಲಾಗಿದೆ. ಅಲ್ಲಿ ಲಭ್ಯವಿರುವ ಸ್ಥಳಾವಕಾಶದ ಅನುಸಾರ ಘೋಷವಾಕ್ಯ ಹಾಗೂ ಫಲಕಗಳ ಅಳತೆಯನ್ನು ಅಂತಿಮಗೊಳಿಸಲಾಗುತ್ತದೆ.

'ಅಂತಿಮಗೊಳಿಸಲಾದ ಫಲಕಗಳನ್ನು ಸ್ಥಳಾವಕಾಶದ ಅನುಸಾರ ಡಿಪಿಎಆರ್ ಅಳವಡಿಸಲಿದೆ. ಕನ್ನಡ ತನವನ್ನು ಬಿಂಬಿಸುವ ಕವಿ ವಾಣಿಗಳ ಜತೆಗೆ, ಜನಪದದ ಸೂಕ್ತಿಗಳು, ವಚನಕಾರರ ನುಡಿ ಮುತ್ತುಗಳನ್ನೂ ಪರಿಗಣಿಸಲಾಗುತ್ತದೆ. ಆಯ್ಕೆಯಾದ ಘೋಷವಾಕ್ಯಗಳ ಕೆಳಗೆ ಸಾಹಿತಿ, ಕವಿಗಳ ಹೆಸರನ್ನೂ ನಮೂದಿಸಲಾಗುತ್ತದೆ. ನಿರಾಶದಾಯಕ ನುಡಿಗಳನ್ನು ಪರಿಗಣಿಸುತ್ತಿಲ್ಲ' ಎಂದು ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ತಿಳಿಸಿದರು.

ಭವ್ಯತೆಗೆ ಧಕ್ಕೆ ಆಗದಂತೆ ಫಲಕ

ವಿಧಾನಸೌಧ, ವಿಕಾಸಸೌಧ ಹಾಗೂ ಜಿಲ್ಲಾಧಿಕಾರಿಗಳ ಕಟ್ಟಡದ ಭವ್ಯತೆಗೆ ಧಕ್ಕೆ ಆಗದಂತೆ ಘೋಷವಾಕ್ಯಗಳ ಫಲಕವನ್ನು ಅಳವಡಿಸಲು ಪ್ರಾಧಿಕಾರ ಕ್ರಮವಹಿಸಿದೆ. ಈ ಸಂಬಂಧ ಕಲಾ ತಜ್ಞರನ್ನು ಒಳಗೊಂಡ ಸಮಿತಿಯನ್ನು ರಚಿಸಲು ಮುಂದಾಗಿದೆ. ಕಟ್ಟಡಗಳಿಗೆ, ವಾಸ್ತುಶಿಲ್ಪಕ್ಕೆ ಸರಿ ಹೊಂದುವಂತೆ ಲೋಹ, ಕಲ್ಲು ಸೇರಿ ವಿವಿಧ ಪರಿಕರಗಳಿಂದ ಫಲಕ ಸಿದ್ಧಪಡಿಸಲಾಗುತ್ತದೆ. ಅಂತಿಮಗೊಳಿಸಲಾದ ಘೋಷವಾಕ್ಯಗಳ 500 ಫಲಕಗಳನ್ನು ಸಿದ್ಧಪಡಿಸಿ, ಜಿಲ್ಲಾಧಿಕಾರಿಗಳ ಕಚೇರಿಗೂ ಕಳುಹಿಸಲಾಗುತ್ತದೆ.

ಸುದ್ದಿ 2 ನಿಮಿಷ

'ತಲಾದಾಯ ಹೆಚ್ಚಿಸಿದ ಗ್ಯಾರಂಟಿ'

ಬೆಂಗಳೂರು: ಗ್ಯಾರಂಟಿ ಯೋಜನೆಗಳು ಜನರಿಗೆ ಶಕ್ತಿ ತುಂಬಿದ್ದು, ರಾಜ್ಯದ ತಲಾ ಆದಾಯ ₹2 ಲಕ್ಷಕ್ಕೆ ಮುಟ್ಟಿದೆ. ಕಾಂಗ್ರೆಸ್ ನುಡಿದಂತೆ ನಡೆದಿದೆ. ಆದರೂ, ವಿರೋಧ ಪಕ್ಷಗಳು ರಾಜಕೀಯ ಕಾರಣಗಳಿಗಾಗಿ ಟೀಕೆ ಮಾಡುತ್ತಿವೆ ಎಂದು ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ದೂರಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಗ್ಯಾರಂಟಿ ಯೋಜನೆ ಜಾರಿಗೆ ಕಾಂಗ್ರೆಸ್ ಭರವಸೆ ನೀಡಿದ ದಿನದಿಂದಲೂ ಬಿಜೆಪಿ, ಜೆಡಿಎಸ್ ನಾಯಕರು ಟೀಕೆ ಮಾಡುತ್ತಾ ಬಂದಿದ್ದಾರೆ. ಆರಂಭದಲ್ಲಿ ಇದು ಹುಸಿ ಭರವಸೆ ಎಂದು, ನಂತರ ಎಲ್ಲ ಗ್ಯಾರಂಟಿಗಳ ಜಾರಿ ಅಸಾಧ್ಯ ಎಂದು ಸುಳ್ಳು ಆರೋಪ ಮಾಡಿದರು. ಸರ್ಕಾರ ದಿವಾಳಿಯಾಗುತ್ತದೆ ಎಂದು ಟೀಕಿಸಿದರು. ಈಗ ಎಲ್ಲವೂ ಸುಸುತ್ರವಾಗಿ ನಡೆದರೂ ಅವರಿಗೆ ಸಹಿಸಲು ಆಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಶಕ್ತಿ ಯೋಜನೆ ಭಾರತದಲ್ಲೇ ಅತ್ಯುತ್ತಮ ಯೋಜನೆಯಾಗಿದೆ. ಮಹಿಳೆಯರು 500 ಕೋಟಿ ಟಿಕೆಟ್ ಪಡೆದಿದ್ದಾರೆ. ಅರ್ಥಶಾಸ್ತ್ರಜ್ಞರಾದ ಅಮೃತ್ ಸೇನ್, ಅಭಿಜಿತ್ ಅವರು ಯೋಜನೆಯನ್ನು ಹೊಗಳಿದ್ದಾರೆ. ಹಣದ ಚಲಾವಣೆಯಿಂದ ಸಾಕಷ್ಟು ಅನುಕೂಲಗಳಾಗಿವೆ. ಗೃಹಲಕ್ಷ್ಮಿ ಯೋಜನೆಯಿಂದ ಮಹಿಳೆಯರು ಸ್ವಾವಲಂಬಿಗಳಾಗಿದ್ದಾರೆ. ಅನ್ನಭಾಗ್ಯ ಬಡವರ ಹಸಿವು ನೀಗಿಸಿದೆ ಎಂದರು.



ಚುನಾವಣೆ ವೇಳೆ ಉದ್ಯೋಗ ನೀಡುವ ಭರವಸೆ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ನುಡಿದಂತೆ ನಡೆಯಲಿಲ್ಲ. ಬಿಜೆಪಿಯ ಒಬ್ಬರೂ ಅವರನ್ನು ಟೀಕೆ ಮಾಡಲಿಲ್ಲ. ಅವರಿಗೆ ಬರೀ ಗುಜರಾತ್ ಮಾದರಿಯದೇ ಚಿಂತೆ. ಅಲ್ಲಿನ ಹಳ್ಳಿಗಳ ಸ್ಥಿತಿ ಕೆಟ್ಟದಾಗಿದೆ ಎಂದು ಹೇಳಿದರು.

ಮಾಜಿ ಸಂಸದ ವಿ.ಎಸ್. ಉಗ್ರಪ್ಪ, ವಿಧಾನಪರಿಷತ್ ಮಾಜಿ ಸದಸ್ಯ ಪ್ರಕಾಶ್ ರಾಥೋಡ್ ಉಪಸ್ಥಿತರಿದ್ದರು.

ಮಾಣಿಕ್ ಷಾ ಪರೇಡ್ ಮೈದಾನ ಸ್ವಾತಂತ್ರ್ಯ ದಿನಾಚರಣೆಗೆ ಸಿದ್ಧತೆ

ಬೆಂಗಳೂರು: ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ನಡೆಯುವ ರಾಜ್ಯಮಟ್ಟದ ಸ್ವಾತಂತ್ರ್ಯ ದಿನಾಚರಣೆಗೆ ಬಿಬಿಎಂಪಿ, ಜಿಲ್ಲಾಡಳಿತ ಸಿದ್ಧತಾ ಕಾರ್ಯ ಆರಂಭಿಸಿವೆ.

ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ಜಿಲ್ಲಾಧಿಕಾರಿ ಜಗದೀಶ್ ನೇತೃತ್ವದಲ್ಲಿ ಮಂಗಳವಾರ ಪೂರ್ವಭಾವಿ ಸಭೆ ನಡೆಯಿತು.

'ಆಯಾ ಇಲಾಖೆಗಳಿಗೆ ನೀಡಿರುವ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಬೇಕು. ಲೋಪದೋಷ ಗಳಾಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು. ಆಸನಗಳ ವ್ಯವಸ್ಥೆ, ಯಾವ ದ್ವಾರಗಳಲ್ಲಿ ಯಾರಿಗೆ ಪ್ರವೇಶ ನೀಡಬೇಕು, ಪಾರ್ಕಿಂಗ್ ವ್ಯವಸ್ಥೆ, ಮಾರ್ಗ ಬದಲಾವಣೆ ವ್ಯವಸ್ಥೆಗಳಲ್ಲಿ ಯಾವುದೇ ರೀತಿಯ ಗೊಂದಲಗಳಿಲ್ಲದಂತೆ ನೋಡಿಕೊಳ್ಳಬೇಕು' ಎಂದು ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಪಾಲಿಕೆಯ ಆರೋಗ್ಯ ವಿಭಾಗದಿಂದ ಪ್ರಥಮ ಚಿಕಿತ್ಸೆ ವ್ಯವಸ್ಥೆ, ಆಂಬುಲೆನ್ಸ್, ಮೈದಾನದಲ್ಲಿ ಶೌಚಾಲಯಗಳ ವ್ಯವಸ್ಥೆ ಮಾಡಬೇಕು. ಮುನ್ನೆಚ್ಚರಿಕೆ ಹಾಗೂ ಭದ್ರತೆಯ ದೃಷ್ಟಿಯಿಂದ ಸಿ.ಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು. ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅಗತ್ಯ ಸಿದ್ಧತೆ ಮಾಡಿಕೊಂಡು, ತಂಡಗಳನ್ನು ಆಯ್ಕೆ ಮಾಡಬೇಕು. ಪ್ರವೇಶ ದ್ವಾರಗಳ ಬಳಿ ತಪಾಸಣೆಗಾಗಿ ಪೊಲೀಸ್ ಸಿಬ್ಬಂದಿ ಹಾಗೂ ಸ್ಕ್ಯಾನಿಂಗ್ ವ್ಯವಸ್ಥೆ ಮಾಡಬೇಕು ಎಂದು ಹೇಳಿದರು.

ಬಿಬಿಎಂಪಿ ವಿಶೇಷ ಆಯುಕ್ತರಾದ ಸುರಳ್ಕರ್ ವಿಕಾಸ್ ಕಿಶೋರ್, ನವೀನ್ ಕುಮಾರ್ ರಾಜು, ವಲಯ ಆಯುಕ್ತರಾದ ದಿಗ್ವಿಜಯ್ ಬೊಡ್ಕೆ, ರಮ್ಯಾ, ಪೊಲೀಸ್, ಬೆಸ್ಕಾಂ, ಲೋಕೋಪಯೋಗಿ, ಜಲಮಂಡಳಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳು ಇದ್ದರು.

ಲಕ್ಕೇನಹಳ್ಳಿಯಲ್ಲಿ ಎತ್ತಿನಹೊಳೆ ಜಲಾಶಯ ನಿರ್ಮಾಣಕ್ಕೆ ವಿರೋಧ

ರಾಜ್ಯಪಾಲರ ಮೊರೆ ಹೋದ ರೈತರು

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಎತ್ತಿನಹೊಳೆ ನೀರು ಸಂಗ್ರಹಕ್ಕಾಗಿ ತಾಲ್ಲೂಕಿನ ಸಾಸಲು ಹೋಬಳಿಯ ಲಕ್ಕೇನಹಳ್ಳಿಯಲ್ಲಿ ಉದ್ದೇಶಿತ ಜಲಾಶಯ ನಿರ್ಮಾಣ ವಿರೋಧಿಸಿ ರೈತರು ರಾಜ್ಯಪಾಲರ ಮೊರೆ ಹೋಗಿದ್ದಾರೆ.

ಜಲಾಶಯ ನಿರ್ಮಾಣದಿಂದ ಮುಳುಗಡೆಯಾಗಲಿರುವ ಏಳು ಗ್ರಾಮ ಗ್ರಾಮಸ್ಥರ ನಿಯೋಗ ಬುಧವಾರ ಬೆಂಗಳೂರಿನ ರಾಜಭವನದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರನ್ನು ಭೇಟಿ ಮಾಡಿತು. ಜಲಾಶಯಕ್ಕಾಗಿ ತಮ್ಮ ಫಲವತ್ತಾದ ಕೃಷಿ ಭೂಮಿಯನ್ನು ಸರ್ಕಾರ ಸ್ವಾಧೀನ ಮಾಡಿಕೊಳ್ಳಬಾರದು ಎಂದು ಒತ್ತಾಯಿಸಿದ ನಿಯೋಗ, ತಮ್ಮ ಮನೆ ಹಾಗೂ ಕೃಷಿ ಭೂಮಿ ಉಳಿಸಿಕೊಡುವಂತೆ ಮನವಿ ಮಾಡಿತು.

ಜಲಾಶಯದಿಂದ ಏಳು ಗ್ರಾಮಗಳ ಫಲವತ್ತಾದ ಭೂಮಿ, ಮನೆ ಮುಳುಗಡೆಯಾಗುತ್ತವೆ. ಹಾಗಾಗಿ ಜಲಾಶಯ ನಿರ್ಮಿಸಲು ಅವಕಾಶ ನೀಡಬಾರದು. ಯೋಜನೆಯಿಂದ ಪರಿಸರ ಹಾಗೂ ಸಾಂವಿಧಾನಿಕ ನಿಯಮ ಉಲ್ಲಂಘನೆಯಾಗುತ್ತಿವೆ. ಹಾಗಾಗಿ ಯೋಜನೆಗೆ ಅನುಮತಿ ನೀಡದಂತೆ ರಾಜ್ಯಪಾಲರಿಗೆ ಸಾರ್ವಜನಿಕ ಹಿತಾಸಕ್ತಿ



ಲಕ್ಕೇನಹಳ್ಳಿಯಲ್ಲಿ ಎತ್ತಿನಹೊಳೆ ಜಲಾಶಯ ನಿರ್ಮಾಣ ವಿರೋಧಿಸಿ ಸಾಸಲು ಹೋಬಳಿಯ ಗ್ರಾಮಸ್ಥರು ಬುಧವಾರ ಬೆಂಗಳೂರಿನಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಿದರು

ಮನವಿ ಸಲ್ಲಿಸಲಾಗಿದೆ ಎಂದು ನಿಯೋಗದಲ್ಲಿದ್ದ ವಕೀಲ ನರಸಿಂಹಗೌಡ ತಿಳಿಸಿದರು.

ಎತ್ತಿನಹೊಳೆ ಯೋಜನೆಯಡಿ ಜಲಾಶಯ ನಿರ್ಮಿಸಲು ಎರಡು ಮೂರು ಬಾರಿ ವಿಸ್ತೃತ ವರದಿಗಳನ್ನು(ಡಿಪಿಆರ್) ತಯಾರಿಸುವ ಮೂಲಕ ಯೋಜನೆಯಲ್ಲಿ ಗೊಂದಲ ಮೂಡಿಸಲಾಗಿದೆ. ಲಕ್ಕೇನಹಳ್ಳಿಯಲ್ಲಿ ಅಣೆಕಟ್ಟು ನಿರ್ಮಾಣ ಮಾಡಿದರೆ ಜಲಾಶಯದಲ್ಲಿ ಶ್ರೀರಾಮನಹಳ್ಳಿ, ದಾಸರಪಾಳ್ಯ, ಶಿಂಗೇನಗಲ್ಲಿ, ಗಾಣದಾಳು, ಹನುಮಂತಯ್ಯನಪಾಳ್ಯ, ನರಸಾಪುರ, ಲಕ್ಕೇನಹಳ್ಳಿ ಗ್ರಾಮಗಳು ಸಂಪೂರ್ಣ ಮುಳುಗಡೆಯಾಗುತ್ತವೆ. ಫಲವತ್ತಾದ ಜಮೀನು ನಾಶವಾಗುತ್ತದೆ. ಇದರಿಂದ ಜನರ ಆಹಾರ ಹಕ್ಕು ಕಸಿದುಕೊಂಡಂತಾಗುತ್ತದೆ ಎಂದರು.

ಮುಖ್ಯಮಂತ್ರಿಯಿಂದ ವರದಿ ತರಿಸಿಕೊಂಡು ಯೋಜನೆ ಬಗ್ಗೆ ಶ್ವೇತಪತ್ರ ಹೊರಡಿಸುವಂತೆ ಸೂಚಿಸಬೇಕೆಂದು ರಾಜ್ಯಪಾಲರಿಗೆ ಮನವಿ ಮಾಡಲಾಗಿದೆ.

ಗ್ರಾಮ ಪಂಚಾಯಿತಿ ಸದಸ್ಯರಾದ ಗೋವಿಂದರಾಜ, ಕೆಂಪಣ್ಣ, ಗ್ರಾಮದ ಮುಖಂಡರಾದ ರಾಜಣ್ಣ, ಸಿದ್ದಲಿಂಗಾಚಾರ್, ಲಕ್ಷ್ಮಮ್ಮ, ಬೈರಣ್ಣ, ಕೆಂಪರಾಜ್, ಲಕ್ಕಣ್ಣ, ರಾಮಾಂಜಿನಪ್ಪ ಸೇರಿದಂತೆ ಸಾಸಲು ಹೋಬಳಿಯ ಲಕ್ಕೇನಹಳ್ಳಿ, ಕಡೇಪಾಳ್ಯ, ನರಸಾಪುರ, ಗರುಡಗಲ್ಲು, ಮಚ್ಚೇನಹಳ್ಳಿ, ದಾಸರಪಾಳ್ಯ, ಸಿಂಗೇನಹಳ್ಳಿ, ಶ್ರೀರಾಮನಹಳ್ಳಿ, ಸಾಸಲು ಮತ್ತು ವಡೇರಹಳ್ಳಿ ಗ್ರಾಮಸ್ಥರು ನಿಯೋಗದಲ್ಲಿದ್ದರು.

ಪುಸ್ತಕ ರೂಪದ ಮನವಿ

ಎತ್ತಿನಹೊಳೆ ಜಲಾಶಯ ನಿರ್ಮಾದಿಂದ ಮುಳುಗಡೆಯಾಗುತ್ತಿರುವ ಏಳು ಗ್ರಾಮಗಳಲ್ಲಿನ ಕೃಷಿ ಚಟುವಟಿಕೆಗಳ ಸಮಗ್ರ ಚಿತ್ರಗಳು. ಪ್ರಸ್ತುತ ರೈತರ ಜಮೀನುಗಳಲ್ಲಿ ಇರುವ ಅಡಿಕೆ, ತೆಂಗು, ತರಕಾರಿ ಬೆಳೆಗಳ ಜಿ.ಪಿ.ಆರ್.ಎಸ್ ಸಹಿತ ಫೋಟೋಗಳು, ಐತಿಹಾಸಿಕ ಮಹತ್ವದ ಸ್ಥಳಗಳು, ಮುಳುಗಡೆಗೆ ಒಳಗಾಗುತ್ತಿರುವ ಗ್ರಾಮಗಳಲ್ಲಿನ ಕೃಷಿ ಆದಾಯದ ಅಂಕಿ–ಅಂಶ ಸಹಿತ ಮಾಹಿತಿ ಒಳಗೊಂಡ ಪುಸ್ತಕ ರೂಪದ ಮನವಿ ಪತ್ರವನ್ನು ಗ್ರಾಮಸ್ಥರು ರಾಜ್ಯಪಾಲರಿಗೆ ಸಲ್ಲಿಸಿದರು.

ಜಿಲ್ಲಾಸ್ಪತ್ರೆಯಲ್ಲಿ ಅನುಚಿತ ವರ್ತನೆ; ಎಫ್‌ಐಆರ್

ಕೋಲಾರ: ನಗರದ ಎಸ್‌ಎನ್‌ಆರ್ ಜಿಲ್ಲಾಸ್ಪತ್ರೆಯಲ್ಲಿ ಅನುಚಿತ ವರ್ತನೆ ತೋರಿದ ಆರೋಪದ ಮೇಲೆ ಖಾಸಗಿ ಆಂಬುಲೆನ್ಸ್ ಚಾಲಕ ನಾಗರಾಜ್ ಎಂಬುವರ ಮೇಲೆ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಜುಲೈ 20ರ ಬೆಳಗ್ಗಿನ ಜಾವ 4 ಗಂಟೆ ಸುಮಾರಿಗೆ ಪಾನಮತ್ತರಾಗಿ, ಧೂಮಪಾನ ಮಾಡುತ್ತಾ ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕಕ್ಕೆ ಬಂದು ಖಾಸಗಿ ಅಂಗಾಂಗ ತೋರಿಸಿ ಅನುಚಿತ ವರ್ತನೆ ತೋರಿದ್ದಾರೆ ಎಂದು ದೂರಲಾಗಿದೆ. ಇವರ ವರ್ತನೆಯಿಂದ ಸಿಬ್ಬಂದಿ ಹೆದರಿದ್ದು, ಮುಜುಗರಕ್ಕೆ ಒಳಗಾಗಿದ್ದಾರೆ. ವೈದ್ಯ ಡಾ.ಕಮಲಾಕರ್ ಅವರ ವರದಿ ಆಧರಿಸಿ ಜಿಲ್ಲಾ ಸರ್ಜನ್ ಡಾ.ಜಗದೀಶ್ ಪೊಲೀಸರಿಗೆ ದೂರು ನೀಡಿದ್ದಾರೆ. ಆರೋಪಿ ಆಸ್ಪತ್ರೆಗೆ ಬಂದು ಹೋಗಿರುವ ದೃಶ್ಯಗಳು ಆಸ್ಪತ್ರೆಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ.

ಅಪಘಾತ: ಹೂವಿನ ವ್ಯಾಪಾರಿ ಸಾವು

ರಾಮನಗರ: ನಗರದ ಹೊರವಲಯದ ಕೊಂಕಾಣಿದೊಡ್ಡಿ ಬಳಿಯ ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಬುಧವಾರ ನಸುಕಿನಲ್ಲಿ ಸರಕು ಸಾಗಣೆ ವಾಹನವು ಮುಂದೆ ಹೋಗುತ್ತಿದ್ದ ಲಾರಿಗೆ ಡಿಕ್ಕಿ ಹೊಡೆದಿದ್ದರಿಂದ, ವಾಹನದಲ್ಲಿದ್ದ ಹೂವಿನ ವ್ಯಾಪಾರಿ ಮೃತಪಟ್ಟಿದ್ದಾರೆ.

ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕಿನ ಬಲ್ಲೇನಹಳ್ಳಿಯ ಸೋಮೇಶ್ (36) ಮೃತರು. ಘಟನೆಯಲ್ಲಿ ವಾಹನ ಚಾಲಕ ರಾಜು ಗಂಭೀರವಾಗಿ ಗಾಯಗೊಂಡಿದ್ದು, ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸೋಮೇಶ್ ಅವರು ವಾಹನದಲ್ಲಿ ಹೂ ತೆಗೆದುಕೊಂಡು ಬೆಂಗಳೂರಿನ ಕೆ.ಆರ್. ಮಾರುಕಟ್ಟೆಗೆ ಹೊರಟ್ಟಿದ್ದರು. ವೇಗವಾಗಿ ಹೋಗುತ್ತಿದ್ದ ಚಾಲಕ ರಾಜು ಕೊಂಕಾಣಿದೊಡ್ಡಿ ಬಳಿ ಮುಂದಿರುವ ಲಾರಿಯನ್ನು ಹಿಂದಿಕ್ಕುವ ಭರದಲ್ಲಿ ಗುದ್ದಿದ್ದಾನೆ.

ಘಟನೆ ಕುರಿತು ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ರಾಮನಗರ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

ನಗರದಲ್ಲಿ ಇಂದು

ಮಾನವೀಯತೆಯ ಹಬ್ಬ: ಆಯೋಜನೆ: ಎನ್.ಎ. ಹ್ಯಾರಿಸ್, ಸ್ಥಳ: ನಂದನ್ ಫುಟ್‌ಬಾಲ್ ಮೈದಾನ, ಆ್ಯಸ್ಟಿನ್ ಟೌನ್, ಶಾಂತಿನಗರ, ಬೆಳಿಗ್ಗೆ 10ರಿಂದ

ಆಸ್ಟ್ರೋನೊಮಿ ಎಕ್ಸ್‌ಪೊ 1.0ಗೆ ಚಾಲನೆ: ಆಯೋಜನೆ: ಇನ್ನೊನೆಕ್ಸ್ಟ್ ಮೈಂಡ್ಸ್ ಪ್ರೈವೇಟ್ ಲಿಮಿಟೆಡ್ ಸ್ಥಳ: ಮಂತ್ರಿಸ್ಕ್ವೇರ್ ಮಾಲ್‌ನ ಐನಾಕ್ಸ್, ಮಲ್ಲೇಶ್ವರ, ಬೆಳಿಗ್ಗೆ 10.30ರಿಂದ

ಬೆಂಗಳೂರು ನಗರ ವಿಶ್ವವಿದ್ಯಾಲಯದ ಜಾಗತಿಕ ಭಾಷಾ ಕೇಂದ್ರದ 40ನೇ ವಾರ್ಷಿಕೋತ್ಸವದ ಅಂಗವಾಗಿ 'ವಿದೇಶಿ ಭಾಷಾ ಕಲಿಕೆಯಲ್ಲಿ ನವೀನ ಬೋಧನಾ ವಿಧಾನಗಳು' ವಿಚಾರಸಂಕಿರಣ: ಉದ್ಘಾಟನೆ: ಎಸ್.ಆರ್. ನಿರಂಜನ, ಅತಿಥಿ: ಲಿಂಗರಾಜ ಗಾಂಧಿ, ಅಧ್ಯಕ್ಷತೆ: ಕೆ.ಆರ್. ಜಲಜಾ, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ ಜಾಗತಿಕ ಭಾಷಾ ಕೇಂದ್ರ, ಸ್ಥಳ: ಹೊಸ ಅಕಾಡೆಮಿಕ್ ಬ್ಲಾಕ್, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಳಿಗ್ಗೆ 11.30

ಇಂಡಿಯಾ ಇಂಟರ್‌ನ್ಯಾಷನಲ್ ಟ್ರಾವೆಲ್ ಮಾರ್ಟ್ ಉದ್ಘಾಟನೆ: ಪಸಾಗ್ ಡೋರ್ಗಿ ಸೋನಾ, ಆಯೋಜನೆ: ಇಂಡಿಯಾ ಇಂಟರ್‌ನ್ಯಾಷನಲ್ ಟ್ರಾವೆಲ್ ಮಾರ್ಟ್, ಸ್ಥಳ: ತ್ರಿಪುರ ವಾಸಿನಿ ಅರಮನೆ ಮೈದಾನ, ಮಧ್ಯಾಹ್ನ 12

105ನೇ ದಯಾನಂದಸಾಗರ್ ಜಯಂತಿ, ರಾಜ್ಯಮಟ್ಟದ ಸಾಂಸ್ಕೃತಿಕ ರಂಗೋತ್ಸವ, ಪ್ರಶಸ್ತಿ ಪ್ರದಾನ, ಸಮಾರೋಪ ಸಮಾರಂಭ: ಸಾನ್ನಿಧ್ಯ: ಶಾಂತವೀರ ಸ್ವಾಮೀಜಿ, ಅಧ್ಯಕ್ಷತೆ: ಡಿ.ವಿ. ಸದಾನಂದಗೌಡ, ಉಪಸ್ಥಿತಿ: ಡಿ. ಹೇಮಚಂದ್ರ ಸಾಗರ್, ಉದ್ಘಾಟನೆ: ಡಾ. ವಿಜಯಲಕ್ಷ್ಮಿ ದೇಶಮಾನೆ, ಅತಿಥಿಗಳು: ಕೆ.ವಿ. ನಾಗರಾಜಮೂರ್ತಿ, ಗಾಳಿಸ್ವಾಮಿ, ಗಿರೀಶ್ ನಾಯಕ್, ಆಯೋಜನೆ: ರಂಗಶ್ರೀ ಕಲಾಸಂಸ್ಥೆ, ದಯಾನಂದಸಾಗರ್ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4



ವಿಜಯಲಕ್ಷ್ಮಿ ದೇಶಮಾನೆ

'ಬೆಂಗಳೂರು ಜಲಮಂಡಳಿ ಒಂದು ಕೈಗಾರಿಕೆ–1978ರ ಸುಪ್ರೀಂ ಐತೀರ್ಪು' ವಿಚಾರಸಂಕಿರಣ: ಬಾಬು ಮ್ಯಾಥ್ಯೂ, ಅತಿಥಿ: ಮೈತ್ರೇಯಿ ಕೃಷ್ಣನ್, ಅಧ್ಯಕ್ಷತೆ: ಆರ್. ರಾಮಣ್ಣ, ಉಪಸ್ಥಿತಿ: ಎಂ. ರಾಜಣ್ಣ, ಆರ್. ರಾಮಚಂದ್ರ, ಗಂಗಾದ್ರಿ, ಆಯೋಜನೆ: ಬೆಂಗಳೂರು ಜಲಮಂಡಳಿ ಕಾರ್ಯನಿರತ ಹಾಗೂ ನಿವೃತ್ತ ನೌಕರರ ವೇದಿಕೆ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 5

'ಅಪರಾಧಿ ನಾನಲ್ಲ' ನಾಟಕ ಪ್ರದರ್ಶನ: ರಚನೆ: ಎಂ.ಎಸ್. ನರಸಿಂಹಮೂರ್ತಿ, ನಿರ್ದೇಶನ: ಮಹೇಶ್ ಕುಮಾರ್, ಆಯೋಜನೆ: ರಂಗಚಕ್ರ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.20

'ಮಹಾಭಾರತ-ವನಪರ್ವ' ಧಾರ್ಮಿಕ ಪ್ರವಚನ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ ಮತ್ತು ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ ಮುಖ್ಯರಸ್ತೆ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಸಸ್ಯ ಪ್ರಭೇದಗಳನ್ನು ಪರಿಚಯಿಸುವ 'ಕಬ್ಬನ್ ವಾಕ್ಸ್' 27ರಿಂದ ಆರಂಭ

ಕಬ್ಬನ್ ಪಾರ್ಕ್: 90 ನಿಮಿಷ 'ಪ್ರವಾಸಿ ನಡಿಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಉದ್ಯಾನದಲ್ಲಿರುವ ಸಸ್ಯ ಪ್ರಭೇದಗಳು, ಜೀವವೈವಿಧ್ಯಗಳು ಹಾಗೂ ಐತಿಹಾಸಿಕ ಸ್ಥಳಗಳನ್ನು ಸಾರ್ವಜನಿಕರಿಗೆ ಪರಿಚಯಿಸುವ ಉದ್ದೇಶದಿಂದ 'ಕಬ್ಬನ್ ವಾಕ್ಸ್' ಎಂಬ ಮಾರ್ಗದರ್ಶಿ ನಡಿಗೆ ಪ್ರವಾಸ ಇದೇ 27ರಂದು ಪ್ರಾರಂಭವಾಗಲಿದ್ದು, ಬುಧವಾರ ಮಾಧ್ಯಮ ಪ್ರತಿನಿಧಿಗಳಿಗಾಗಿ ನಡಿಗೆಯನ್ನು ಆಯೋಜಿಸಲಾಗಿತ್ತು.

ಪರಿಸರ ಕಾರ್ಯಕರ್ತ ಅರುಣ್ ಪೈ ನೇತೃತ್ವದ ತಂಡದ ಸದಸ್ಯರು ಕಬ್ಬನ್ ಉದ್ಯಾನದಲ್ಲಿರುವ ಪ್ರಾಣಿ ಸಂಕುಲ, ಸಸ್ಯ ಸಂಕುಲದ ಮಾಹಿತಿ, ಉದ್ಯಾನದ ಇತಿಹಾಸ ಮತ್ತು ಮರಗಳ ಕುರಿತು 90 ನಿಮಿಷ ಮಾಹಿತಿಗಳನ್ನು ಹಂಚಿಕೊಂಡರು. ಪ್ರೆಸ್‌ಕ್ಲಬ್‌ನಿಂದ ಪ್ರಾರಂಭವಾದ ಪ್ರವಾಸಿ ನಡಿಗೆಯಲ್ಲಿ ಕ್ರಿಸ್‌ಮಸ್ ಮರ, ಆಲದ ಮರ, ಅರಳಿಗಳ ಇತಿಹಾಸ, ಅದರ ಮಹತ್ವ, ವೈಜ್ಞಾನಿಕ ಹೆಸರನ್ನು ತಿಳಿಸಿದರು.



ಕಬ್ಬನ್ ಪಾರ್ಕ್‌ನಲ್ಲಿ ಬುಧವಾರ ನಡೆದ 'ಕಬ್ಬನ್ ವಾಕ್ಸ್' ಮಾರ್ಗದರ್ಶಿ ನಡಿಗೆಯ ಪೂರ್ವಭಾವಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಾರ್ವಜನಿಕರಿಗೆ ಪರಿಸರ ಕಾರ್ಯಕರ್ತ ಅರುಣ್ ಪೈ ಕಬ್ಬನ್ ಉದ್ಯಾನದ ಸಸ್ಯ ಸಂಕುಲ ಕುರಿತು ಮಾಹಿತಿ ನೀಡಿದರು ಪ್ರಜಾವಾಣಿ ಚಿತ್ರ

ಒಣಗಿದ ಮರಗಳಲ್ಲಿ ಇರುವೆಗಳು ಯಾವ ರೀತಿಯಾಗಿ ಗೂಡುಗಳನ್ನು ನಿರ್ಮಿಸುತ್ತವೆ ಎಂಬ ಮಾಹಿತಿಯನ್ನು ಹಂಚಿಕೊಂಡರು.

'ಕಬ್ಬನ್ ಉದ್ಯಾನದಲ್ಲಿ ಪ್ರತಿ ಶನಿವಾರ ಮತ್ತು ಭಾನುವಾರ ಕಬ್ಬನ್ ವಾಕ್ಸ್ ನಡೆಯಲಿದೆ. ಇದಕ್ಕಾಗಿ 10 ಮಂದಿ ಪರಿಸರ ತಜ್ಞರನ್ನು ಮಾರ್ಗದರ್ಶಕರನ್ನಾಗಿ ನೇಮಿಸಲಾಗಿದೆ. ಮಾರ್ಗದರ್ಶಕರು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮಾಹಿತಿಗಳನ್ನು ಹಂಚಿಕೊಳ್ಳಲಿದ್ದಾರೆ. 30 ಜನರನ್ನು ಒಳಗೊಂಡ ಒಂದು ತಂಡಕ್ಕೆ ಒಬ್ಬ ಮಾರ್ಗದರ್ಶಕರನ್ನು ನಿಯೋಜಿಸಲಾಗುವುದು. ವಯಸ್ಕರಿಗೆ ₹200, ಮಕ್ಕಳಿಗೆ ₹50 ದರ ನಿಗದಿಪಡಿಸಲಾಗಿದೆ. ಆಸಕ್ತರು ಆನ್‌ಲೈನ್ ಮೂಲಕವೇ ನೋಂದಣಿ ಮಾಡಿಕೊಂಡು ಬರಬೇಕು' ಎಂದು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕಿ (ಕಬ್ಬನ್ ಉದ್ಯಾನ) ಜಿ. ಕುಸುಮಾ ಮಾಹಿತಿ ನೀಡಿದರು.

ನೋಂದಣಿ ಹೇಗೆ

'ಕಬ್ಬನ್ ಉದ್ಯಾನದಲ್ಲಿ ಇದೇ 27ರಂದು ಪ್ರವಾಸಿ ನಡಿಗೆಗೆ ಅಧಿಕೃತವಾಗಿ ಚಾಲನೆ ನೀಡಲಾಗುತ್ತದೆ. ಪ್ರತಿ ಶನಿವಾರ ಮತ್ತು ಭಾನುವಾರ ಬೆಳಿಗ್ಗೆ 7.30ಕ್ಕೆ ಕಬ್ಬನ್ ವಾಕ್ಸ್ ಪ್ರಾರಂಭವಾಗಲಿದೆ. ಕಬ್ಬನ್ ಉದ್ಯಾನದ ಬಗ್ಗೆ ಮಾಹಿತಿ ಪಡೆಯಬೇಕೆಂಬ ಆಸಕ್ತಿಯಿರುವವರು www.cubbonpark.in ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಬಹುದು' ಎಂದು ಜಿ. ಕುಸುಮಾ ತಿಳಿಸಿದರು.

ಚಿತ್ರಾವಳಿ



ಕಲಾವಿದರಾದ ಜೋಗಿಲ ಸಿದ್ದರಾಜು ಹಾಗೂ ಕೆ.ಎನ್.ನಾಗೇಶ್ ಅವರ ಮೇಲೆ ಹಲ್ಲೆ ನಡೆಸಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಕೆ.ಎಂ.ಗಾಯಿತ್ರಿ ಅವರನ್ನು ಅಮಾನತು ಮಾಡಬೇಕು ಎಂದು ಆಗ್ರಹಿಸಿ ವಿವಿಧ ಸಂಘಟನೆಗಳ ಸದಸ್ಯರು ಹಾಗೂ ಕಲಾವಿದರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ



ಶಾಲೆ– ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಖಂಡಿಸಿ, ವಿದ್ಯಾರ್ಥಿನಿಯರ ರಕ್ಷಣೆಗೆ ಆಗ್ರಹಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ ನೇತೃತ್ವದಲ್ಲಿ ಬುಧವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು

ಗಯಾನ ದೇಶದಿಂದ ಮೃತದೇಹ ತರಲು ಸರ್ಕಾರದ ನೆರವು

ಪ್ರಜಾವಾಣಿ ವಾರ್ತೆ

ಮಡಿಕೇರಿ: ದಕ್ಷಿಣ ಅಮೆರಿಕಾದ ಗಯಾನಾ ದೇಶದಲ್ಲಿ ಅನಾರೋಗ್ಯದಿಂದ ಮೃತಪಟ್ಟ ಮಡಿಕೇರಿ ತಾಲ್ಲೂಕಿನ ಮದೆನಾಡು ಗ್ರಾಮದ ನಿವಾಸಿ ಪಿ.ಬಿ. ಗಿರೀಶಬಾಬು ಪಾಲೆ ಅವರ ಮೃತದೇಹ ತರಲು ರಾಜ್ಯಸರ್ಕಾರವು ₹ 3.60 ಲಕ್ಷ ನೆರವು ನೀಡಿದೆ.

2 ವರ್ಷಗಳಿಂದ ಗಯಾನಾದ ಶೆರಿಫ್ ಜನರಲ್ ಆಸ್ಪತ್ರೆಯಲ್ಲಿ ಸ್ಟಾಫ್‌ನರ್ಸ್ ಆಗಿದ್ದ ಅವರು, ಜುಲೈ 3ರಂದು ಅನಾರೋಗ್ಯದಿಂದ ಅಲ್ಲಿಯೇ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರು. ನಂತರ ಅನಿಯಮಿತ ರಕ್ತಸ್ರಾವದ ಹೃದಯಘಾತದಿಂದ ಜುಲೈ 14ರಂದು ಮೃತಪಟ್ಟರು.

ಪತ್ನಿ ಜಾನಕಿ 2 ವರ್ಷದ ಮಗನೊಂದಿಗೆ ಬೆಂಗಳೂರಿನಲ್ಲಿದ್ದು, ಮೃತದೇಹ ತರಲು ಸುಮಾರು ₹ 12 ಲಕ್ಷ ವೆಚ್ಚವಾಗಲಿದ್ದು, ಅಷ್ಟು ದೊಡ್ಡ ಮೊತ್ತವನ್ನು ಭರಿಸುವುದು ಕಷ್ಟ ಎಂದು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. ಅದರಂತೆ, ಅನಿವಾಸಿ ಭಾರತೀಯ ಸಮಿತಿಯಿಂದ ಮೃತದೇಹವನ್ನು ಭಾರತಕ್ಕೆ ಕರೆತರಲು ತಗಲುವ ವೆಚ್ಚವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಧನಸಹಾಯ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೋರಲಾಗಿತ್ತು.

'ಮನವಿಗೆ ಸ್ಪಂದಿಸಿದ ಸಿದ್ದರಾಮಯ್ಯ ಅವರು ರಾಜ್ಯ ಸರ್ಕಾರದ ವತಿಯಿಂದ ₹3.60 ಲಕ್ಷವನ್ನು ಮಂಜೂರು ಮಾಡಿದ್ದು, ಉಳಿಕೆ ಹಣವನ್ನು ಮೃತ ಪಿ.ಬಿ.ಗಿರೀಶ ಬಾಬು ಪಾಲೆ ಅವರು ಕೆಲಸ ಮಾಡುತ್ತಿದ್ದ ಶೆರಿಫ್ ಜನರಲ್ ಆಸ್ಪತ್ರೆಯವರು ಭರಿಸಲು ಒಪ್ಪಿದ್ದಾರೆ. ಗಯಾನದಲ್ಲಿರುವ ಭಾರತೀಯ ರಾಯಭಾರಿ ಕಚೇರಿ, ನವದೆಹಲಿಯಲ್ಲಿರುವ ನಿವಾಸಿ ಆಯುಕ್ತರ ವತಿಯಿಂದ ಮೃತದೇಹವನ್ನು ಭಾರತಕ್ಕೆ ತರಲಾಗುವುದು' ಎಂದು ಕರ್ನಾಟಕ ಅನಿವಾಸಿ ಭಾರತೀಯ ಸಮಿತಿ ಉಪಾಧ್ಯಕ್ಷರ ವಿಶೇಷ ಕರ್ತವ್ಯಾಧಿಕಾರಿ ಎಚ್.ಎಸ್.ಸತೀಶ್ ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

ಸ್ಟೀಲ್ ಕಾಯಿಲ್ ರೋಲ್ ಕಳ್ಳತನ: ಆರೋಪಿ ಬಂಧನ

ಬೆಂಗಳೂರು: ಸ್ಟೀಲ್ ಕಾಯಿಲ್‌ರೋಲ್ ಕಳ್ಳತನ ಮಾಡಿ ಪರಾರಿ ಆಗಿದ್ದ ಆರೋಪಿಯನ್ನು ಜಾಲಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಸಾಯಿಕುಮಾರ್ (38) ಬಂಧಿತ ಆರೋಪಿ. ಬಳ್ಳಾರಿ ಜಿಲ್ಲೆಯ ಜಿಂದಾಲ್ ಕಂಪನಿಯಿಂದ ತಮಿಳುನಾಡಿಗೆ ₹27.10 ಲಕ್ಷ ಮೌಲ್ಯದ ಸ್ಟೀಲ್ ಕಾಯಿಲ್‌ರೋಲ್ ಸಾಗಣೆ ಮಾಡುತ್ತಿದ್ದ ಚಾಲಕ ಲಾರಿ ಸಮೇತ ಪರಾರಿಯಾಗಿದ್ದ. ಟ್ರಾನ್ಸ್‌ಪೋರ್ಟ್ ಕಂಪನಿ ವ್ಯವಸ್ಥಾಪಕ ಮುತ್ತು ಇರುಲಪ್ಪನ್ ಅವರು ಜೂನ್ 26ರಂದು ಜಾಲಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ತಮಿಳುನಾಡಿನ ವೆಂಕಟರಮಣ ಟ್ರಾನ್ಸ್‌ಪೋರ್ಟ್ ಕಂಪನಿಯ ಚಾಲಕ ಸಾಯಿಕುಮಾರನನ್ನು ಎರಡು ತಿಂಗಳ ಹಿಂದೆ ಚಾಲಕನಾಗಿ ನೇಮಕ ಮಾಡಿಕೊಳ್ಳಲಾಗಿತ್ತು. ಬಳ್ಳಾರಿ ಜಿಲ್ಲೆಯ ತೋರಣಗಲ್‌ನಿಂದ ತಮಿಳುನಾಡಿನ ಕೋಯಮತ್ತೂರು ಕಾರ್ಖಾನೆಗೆ 33,683 ಟನ್ ತೂಕದ 3 ಸ್ಟೀಲ್ ಕಾಯಿಲ್ ತರುವಂತೆ ಹೇಳಲಾಗಿತ್ತು. ಚಾಲಕ ಲಾರಿ ಸಮೇತ ನಾಪತ್ತೆಯಾಗಿದ್ದ ಎಂದು ಪೊಲೀಸರು ಹೇಳಿದರು.

‘ಚರ್ಚೆಗೆ ಅವಕಾಶ ನೀಡಿದ್ದಕ್ಕೆ ಧನಕರ್ ರಾಜೀನಾಮೆ’

ಹುಬ್ಬಳ್ಳಿ: ‘ಪಹಲ್ಗಾಮ್ ದಾಳಿ ಸೇರಿ ವಿವಿಧ ವಿಷಯಗಳ ಕುರಿತು ರಾಜ್ಯಸಭೆಯಲ್ಲಿ ಚರ್ಚೆಗೆ ಅವಕಾಶ ನೀಡಿದ್ದೇ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರ ರಾಜೀನಾಮೆಗೆ ಕಾರಣ ಆಗಿರಬಹುದು’ ಎಂದು ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್ ಹೇಳಿದರು.

‘ಪಹಲ್ಗಾಮ್ ದಾಳಿ, ನ್ಯಾಯಮೂರ್ತಿ ಯಶವಂತ್ ವರ್ಮಾ ನಿವಾಸದಲ್ಲಿ ಹಣ ಪತ್ತೆ, ಇ.ಡಿ ದುರ್ಬಳಕೆ ಕುರಿತು ಚರ್ಚಿಸಲು ಕಾಂಗ್ರೆಸ್ ಅವಕಾಶ ಕೇಳಿತ್ತು. ಧನಕರ್ ಅವಕಾಶ ನೀಡಿದ್ದರು’ ಎಂದು ಹೇಳಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜೀನಾಮೆಗೆ ಸಂಬಂಧಿಸಿ ವಿಸ್ತೃತ ಚರ್ಚೆ ಆಗಬೇಕೆಂದರು.

ಕೃಷ್ಣ ಸಂಗೀತ ಸಂಜೆ 26ಕ್ಕೆ

ಬೆಂಗಳೂರು: ಕೃಷ್ಣ-ಮ್ಯೂಸಿಕ್, ಬ್ಲಿಸ್ ಆ್ಯಂಡ್ ಬಿಯಾಂಡ್ ತಂಡವು ಇದೇ 26ರಂದು ಸಂಜೆ 4 ಗಂಟೆಗೆ ವೈಟ್‌ಫೀಲ್ಡ್‌ನ ಕಾವೇರಿ ನಗರದಲ್ಲಿರುವ ಎಂಎಲ್‌ಆರ್ ಕನ್ವೆನ್ಶನ್ ಸೆಂಟರ್‌ನಲ್ಲಿ ಕೃಷ್ಣ ಸಂಗೀತ ಸಂಜೆ ಕಾರ್ಯಕ್ರಮ ಹಮ್ಮಿಕೊಂಡಿದೆ.

ಈ ಸಂಗೀತ ಸಂಜೆಯು ಕೃಷ್ಣನ ಜೀವನ ಹಾಗೂ ತತ್ವಗಳನ್ನು ಪ್ರಸ್ತುತಪಡಿಸಲಿದೆ. ಅಮೇಯಾ ದಾಬ್ಲಿ ಅವರು ಗಾಯನದ ಮೂಲಕ ಆಧ್ಯಾತ್ಮ ಮತ್ತು ಸಂಗೀತವನ್ನು ಒಂದುಗೂಡಿಸಲಿದ್ದಾರೆ.

ಕಾರ್ಯಕ್ರಮದ ಟಿಕೆಟ್‌ಗಳು ಬುಕ್‌ಮೈಶೋದಲ್ಲಿ ಲಭ್ಯ ಎಂದು ಪ್ರಕಟಣೆ ತಿಳಿಸಿದೆ.

7.92 ಲಕ್ಷ ಪ್ರಕರಣ: ₹6 ಕೋಟಿ ದಂಡ

ಜಾಗೃತಿ ಪರಿಣಾಮ ● ಹೆಲ್ಮೆಟ್ ರಹಿತ ಚಾಲನೆ ಪ್ರಕರಣ ಇಳಿಕೆ

● ಕೆ.ಎಸ್.ಸುನಿಲ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಸಂಚಾರ ನಿಯಮ ಕುರಿತು ವಾಹನ ಸವಾರರಲ್ಲಿ ಜಾಗೃತಿ ಮೂಡಿಸುತ್ತಿರುವ ಪರಿಣಾಮ ಹೆಲ್ಮೆಟ್ ಧರಿಸದ ವಾಹನ ಸವಾರರ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದೆ. ಹಿಂದಿನ ವರ್ಷಗಳಿಗೆ ಹೋಲಿಕೆ ಮಾಡಿದರೆ ಈ ವರ್ಷ ಪ್ರಕರಣಗಳ ಸಂಖ್ಯೆ ಅರ್ಧದಷ್ಟು ಕಡಿಮೆಯಾಗಿದೆ.

2023ರ ಜನವರಿಯಿಂದ ಜೂನ್ ಅಂತ್ಯದವರೆಗೆ ಹೆಲ್ಮೆಟ್ ರಹಿತ ಚಾಲನೆ ಸಂಬಂಧ 20.95 ಲಕ್ಷ ಪ್ರಕರಣಗಳು ದಾಖಲಾಗಿದ್ದರೆ, 2024ರಲ್ಲಿ 26.80 ಲಕ್ಷ ಪ್ರಕರಣಗಳನ್ನು ದಾಖಲಿಸಲಾಗಿತ್ತು.

ಈ ವರ್ಷ ಮೇ ಅಂತ್ಯದವರೆಗೆ ಹೆಲ್ಮೆಟ್ ರಹಿತ ಚಾಲನೆಗೆ ಸಂಬಂಧಿಸಿದಂತೆ ಒಟ್ಟು 7,92,822 ಪ್ರಕರಣಗಳು ದಾಖಲಾಗಿವೆ. ಆ ಪೈಕಿ ಹಿಂಬದಿ ಸವಾರರ ವಿರುದ್ಧ 4,13,157 ಪ್ರಕರಣಗಳು ದಾಖಲಾಗಿವೆ. ಒಟ್ಟು ₹ 6,31,47,900 ದಂಡ ವಸೂಲು ಮಾಡಲಾಗಿದೆ.

ಸಂಚಾರ ಪೊಲೀಸರ ಪ್ರಕಾರ ನಿತ್ಯ ಸರಾಸರಿ 15,520 ಪ್ರಕರಣಗಳು ದಾಖಲಾಗುತ್ತಿವೆ. ಅಪಘಾತಕ್ಕೀಡಾಗಿ ಗಾಯಗೊಂಡವರಲ್ಲಿ ದ್ವಿಚಕ್ರ ವಾಹನ ಸವಾರರ ಸಂಖ್ಯೆಯೇ ಅಧಿಕ. ಹೆಲ್ಮೆಟ್ ಧರಿಸದ ಪರಿಣಾಮ ಗಂಭೀರವಾಗಿ ಗಾಯಗೊಂಡು ಮೃತಪಡುವವರ ಸಂಖ್ಯೆಯೂ ಹೆಚ್ಚಾಗಿದೆ. ಹೆಲ್ಮೆಟ್ ಹಾಕಿಕೊಂಡಿದ್ದರಿಂದಲೇ ಹಲವು ಮಂದಿ ಅಪಘಾತದ ವೇಳೆ ಸಾವಿನಿಂದ ಪಾರಾಗಿರುವ ನಿದರ್ಶನಗಳು ಇವೆ.

ಅತ್ಯಾಧುನಿಕ ಕ್ಯಾಮೆರಾಗಳ ಬಳಕೆ, ಸಾಮಾಜಿಕ ಜಾಲತಾಣಗಳಲ್ಲಿ ನಿರಂತರ ಜಾಗೃತಿಯ ಜೊತೆಗೆ ನಿಯಮ ಉಲ್ಲಂಘನೆಗಳನ್ನು ತಡೆಯಲು ನಗರ ಸಂಚಾರ ಪೊಲೀಸರು ಕೈಗೊಂಡ ಬಿಗಿ ಕ್ರಮಗಳಿಂದಾಗಿ ಹೆಲ್ಮೆಟ್ ರಹಿತ ವಾಹನ ಚಾಲನೆ ಪ್ರಕರಣಗಳು ತಕ್ಕ ಮಟ್ಟಿಗೆ ಇಳಿಕೆಯಾಗುತ್ತಿವೆ.

ಅಜಾಗರೂಕವಾಗಿ ವಾಹನ ಚಾಲನೆ, ಸಿಗ್ನಲ್ ಜಂಪ್, ವೇಗಮಿತಿ ಉಲ್ಲಂಘನೆ, ಸೀಟ್ ಬೆಲ್ಟ್ ಧರಿಸದಿರುವುದು, ವಾಹನ ಚಾಲನೆ ವೇಳೆ ಮೊಬೈಲ್ ಬಳಕೆ ಸೇರಿ ಮೇ ಅಂತ್ಯಕ್ಕೆ ವಿವಿಧ ಸಂಚಾರ ನಿಯಮ ಉಲ್ಲಂಘನೆ ಸಂಬಂಧ 23 ಲಕ್ಷ ಪ್ರಕರಣಗಳು ದಾಖಲಾಗಿವೆ. ಈ ಪೈಕಿ ಹೆಲ್ಮೆಟ್ ಧರಿಸದೆ ವಾಹನ ಚಾಲನೆ ಪ್ರಕರಣಗಳ ಸಂಖ್ಯೆ ಅಧಿಕವಾಗಿದೆ.

ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರತಿ ವಾರವೂ ಪೊಲೀಸರು ಕಾರ್ಯಾಚರಣೆ ನಡೆಸಿ, ನಿಯಮ ಉಲ್ಲಂಘಿಸುವವರ ವಿರುದ್ಧ ಪ್ರಕರಣ ದಾಖಲಿಸುತ್ತಿದ್ದಾರೆ. ಅದರಲ್ಲೂ ವಾರಾಂತ್ಯದಲ್ಲಿ ವಾಹನ ತಪಾಸಣೆ ಹೆಚ್ಚು ನಡೆಯುತ್ತಿದೆ.

ಸಂಚಾರ ನಿಯಮ ಉಲ್ಲಂಘನೆ ಮೇಲಿನ ಕಣ್ಗಾವಲಿಗೆ ಹಾಗೂ ವಾಹನ ತಪಾಸಣೆಗೆ ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (ಐಟಿಎಂಎಸ್) ಜಾರಿಗೊಳಿಸಲಾಗಿದೆ. ಈ ವ್ಯವಸ್ಥೆಯಡಿ ಟ್ರಾಫಿಕ್ ಜಂಕ್ಷನ್‌ಗಳು ಹಾಗೂ ವೃತ್ತಗಳಲ್ಲಿ ಕೃತಕ ಬುದ್ಧಿಮತ್ತೆಯ (ಎಐ) ಆಟೊಮ್ಯಾಟಿಕ್ ನಂಬರ್ ಪ್ಲೇಟ್ ರೆಕಗ್ನಿಷನ್ (ಎಎನ್‌ಪಿಆರ್) ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಪೊಲೀಸರು ಶೇಕಡ 90ರಷ್ಟು ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ಈ ಕ್ಯಾಮೆರಾಗಳ ಮೂಲಕವೇ ಪತ್ತೆಹಚ್ಚಿ ದಂಡ ವಿಧಿಸುತ್ತಿದ್ದಾರೆ.

‘ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸದಿರುವುದು, ಸಿಗ್ನಲ್ ಜಂಪ್, ನೋ ಪಾರ್ಕಿಂಗ್‌ನಲ್ಲಿ ವಾಹನ ನಿಲುಗಡೆ, ನಿರ್ಲಕ್ಷ್ಯದ ಚಾಲನೆ, ಅಡ್ಡಾದಿಡ್ಡಿ ಚಾಲನೆ, ಸಾರ್ವಜನಿಕ ಸೇವೆ ಒದಗಿಸುವ ವಾಹನ ಚಾಲಕರು ಸಮವಸ್ತ್ರ ಧರಿಸದಿರುವುದು, ವಿಮೆ ಮಾಡಿಸದಿರುವುದು, ವಾಹನಗಳ ನೋಂದಣಿ ಪತ್ರ ಹೊಂದಿಲ್ಲದಿರುವುದು, ಚಾಲನಾ ಪರವಾನಗಿ ಇಲ್ಲದಿರುವುದು, ಪಾದಚಾರಿ ಮಾರ್ಗದಲ್ಲಿ ವಾಹನಗಳ ನಿಲುಗಡೆ ಮಾಡುವುದು ಸೇರಿದಂತೆ ಮೋಟಾರು ವಾಹನಗಳ ಕಾಯ್ದೆ ವ್ಯಾಪ್ತಿಗೆ ಬರುವ ಉಲ್ಲಂಘನೆ ಪ್ರಕರಣಗಳು ಅಧಿಕವಾಗಿವೆ’ ಎಂದು ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

‘ಜಂಕ್ಷನ್ ಮತ್ತು ವೃತ್ತಗಳಲ್ಲಿ ಎಐ ಆಧಾರಿತ ಎಫ್‌ಟಿವಿಆರ್ ಕ್ಯಾಮೆರಾಗಳನ್ನು ಅಳವಡಿಸಿದ್ದು, ಇವು ನಿಯಮ ಉಲ್ಲಂಘಿಸುವ ವಾಹನದ ನಂಬರ್ ಪ್ಲೇಟ್‌ಗಳನ್ನು ಗುರುತಿಸುತ್ತವೆ. ಸವಾರರ ಮೊಬೈಲ್ ಗಳಿಗೆ ದಂಡದ ನೋಟಿಸ್ ಕಳುಹಿಸಲಾಗುತ್ತಿದೆ’ ಎಂದು ಸಂಚಾರ ಅಧಿಕಾರಿಗಳು ತಿಳಿಸಿದ್ದಾರೆ.



ನಗರದಲ್ಲಿ ಇತ್ತೀಚೆಗೆ ಶಾಲಾ ವಿದ್ಯಾರ್ಥಿಗಳು ಹೆಲ್ಮೆಟ್ ಧರಿಸುವಂತೆ ಜಾಗೃತಿ ಮೂಡಿಸಿದರು –ಪ್ರಜಾವಾಣಿ ಚಿತ್ರ

ಐಎಸ್‌ಐ ಮಾರ್ಕ್‌ನ ಹೆಲ್ಮೆಟ್ ಧರಿಸಿ


ಕಾರ್ತಿಕ್ ರೆಡ್ಡಿ

ಮೋಟಾರು ವಾಹನ ಕಾಯ್ದೆಯ ಅನ್ವಯ ದ್ವಿಚಕ್ರ ವಾಹನ ಸವಾರರು ಮತ್ತು ಹಿಂಬದಿ ಸವಾರರು ಐಎಸ್‌ಐ ಮಾರ್ಕ್‌ನ ಪೂರ್ಣ ಪ್ರಮಾಣದ ಹೆಲ್ಮೆಟ್ ಧರಿಸುವುದು ಕಡ್ಡಾಯ. ಜಾಗೃತಿಯ ಪರಿಣಾಮವಾಗಿ ಎರಡು ವರ್ಷಗಳಿಗೆ ಹೋಲಿಸಿದರೆ ಐದು ತಿಂಗಳಲ್ಲಿ ಹೆಲ್ಮೆಟ್ ರಹಿತ ವಾಹನ ಚಾಲನೆ ಪ್ರಕರಣಗಳು ಕಡಿಮೆಯಾಗಿವೆ. ಇದು ಒಳ್ಳೆಯ ಬೆಳವಣಿಗೆ ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಕಾರ್ತಿಕ್ ರೆಡ್ಡಿ ತಿಳಿಸಿದ್ದಾರೆ.

ಐಟಿಎಂಎಸ್ ವ್ಯವಸ್ಥೆಯಿಂದ ನಗರದಲ್ಲಿ ಅಳವಡಿಸಿರುವ ಎಐ ಆಧಾರಿತ ಕ್ಯಾಮೆರಾ ಹಾಗೂ ಇನ್ನಿತರ ಸುಧಾರಿತ ಕ್ಯಾಮೆರಾಗಳ ಮೂಲಕ ಸಂಚಾರ ನಿಯಮ ಉಲ್ಲಂಘಿಸುವವರನ್ನು ಸ್ವಯಂಪ್ರೇರಿತವಾಗಿ ಪತ್ತೆ ಹಚ್ಚಿ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗುತ್ತಿದೆ ಎಂದು ಹೇಳಿ ದ್ದಾರೆ.

ಅಂಕಿ ಅಂಶಗಳು

ಹೆಲ್ಮೆಟ್ ರಹಿತ ಸವಾರರಿಂದ ದಂಡ ವಸೂಲು

ವರ್ಷ	ದಂಡ (ಕೋಟಿ ₹ಗಳಲ್ಲಿ)
2023	45.78
2024	13.93
2025 (ಮೇ ಅಂತ್ಯಕ್ಕೆ)	6.31

ಐದು ತಿಂಗಳಲ್ಲಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣ

ಹೆಲ್ಮೆಟ್‌ರಹಿತ ವಾಹನ ಚಾಲನೆ	7,92,822
ಹಿಂಬದಿ ಸವಾರ ಹೆಲ್ಮೆಟ್ ಧರಿಸದಿರುವುದು	4,13,157
ಸೀಟ್ ಬೆಲ್ಟ್ ಧರಿಸದಿರುವುದು	3,22,846
ಸಿಗ್ನಲ್ ಜಂಪ್	2,56,881
ತಪ್ಪಾಗಿ ವಾಹನ ನಿಲುಗಡೆ	2,56,766
ಪಾನಮತ್ತ ಚಾಲನೆ	15,151
ವೇಗಮಿತಿ ಉಲ್ಲಂಘನೆ	13,237

ಇಸ್ಲಾಂ ಧರ್ಮಕ್ಕೆ ಮತಾಂತರಕ್ಕೆ ಪ್ರಚೋದನೆ ಆರೋಪ: ಖುಲಾಸೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಜಮಖಂಡಿಯ ಮೂವರ ವಿರುದ್ಧ ದಾಖಲಾಗಿದ್ದ ಎಫ್‌ಐಆರ್
- ಆದೇಶ ನೀಡಿದ ಧಾರವಾಡ ಏಕಸದಸ್ಯ ಪೀಠ

ಹೈಕೋರ್ಟ್ ಸುದ್ದಿ

ಬೆಂಗಳೂರು: ಇಸ್ಲಾಂ ಧರ್ಮಕ್ಕೆ ಮತಾಂತರಗೊಳ್ಳುವಂತೆ ಪ್ರಚೋದಿಸಿದ ಆರೋಪದಡಿ ಜಮಖಂಡಿಯ ಮೂವರ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಮತ್ತು ಅದಕ್ಕೆ ಸಂಬಂಧಿಸಿದ ನ್ಯಾಯಿಕ ವಿಚಾರಣಾ ಪ್ರಕ್ರಿಯೆಯನ್ನು ಹೈಕೋರ್ಟ್ ರದ್ದುಪಡಿಸಿದೆ.

ಪ್ರಕರಣ ರದ್ದುಪಡಿಸುವಂತೆ ಕೋರಿ ಆರೋಪಿಗಳಾದ ಬಾಗಲಕೋಟೆ ಜಿಲ್ಲೆಯ ಜಮಖಂಡಿ ನಿವಾಸಿಗಳಾದ ಮುಸ್ತಾಫ ಬಿನ್ ಮುರ್ತಜ್‌ಸಾಬ್ ಮೊಮಿನ್ (27), ಅಲಿಸಾಬ್ ಬಿನ್ ಶಬ್ಬೀರ್ ಅಳಗುಂಡಿ (30) ಮತ್ತು ಸುಲೇಮಾನ್ ಬಿನ್ ರಿಯಾಜ್ ಅಹಮದ್ ಗಲಗಲಿ (25) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ವೆಂಕಟೇಶ್ ಟಿ.ನಾಯ್ಕ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) ಈ ಕುರಿತಂತೆ ಆದೇಶಿಸಿದೆ.

‘ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ರಕ್ಷಣೆ ಕಾಯ್ದೆ-2022ರ ಕಲಂ 4ರ ಅಡಿಯಲ್ಲಿ ಧಾರ್ಮಿಕ ಮತಾಂತರ ಪ್ರಕರಣದಲ್ಲಿ ಪ್ರಚೋದನೆಗೆ ಒಳಗಾಗಿ ಮತಾಂತರಗೊಂಡ ವ್ಯಕ್ತಿಯ ರಕ್ತ ಸಂಬಂಧಿಕರು ಹಾಗೂ ಪೋಷಕರು ಮಾತ್ರವೇ ದೂರು ಸಲ್ಲಿಸಲು ಅಧಿಕಾರವಿರಲಿದೆ. ಈ ಪ್ರಕರಣದಲ್ಲಿ ದೂರು ದಾಖಲಿಸಿರುವ ವ್ಯಕ್ತಿ ಮೂರನೆಯವರಾಗಿದ್ದಾರೆ. ಅಂತೆಯೇ, ಅರ್ಜಿದಾರರ ವಿರುದ್ಧ ಕಲಂ 3ರ ಅಡಿಯಲ್ಲಿ ತಿಳಿಸಿರುವಂತೆ ಮತಾಂತರಕ್ಕೆ ಪ್ರಚೋದನೆ ಮಾಡಿರುವ ಸಂಬಂಧ ಆರೋಪಗಳು ಇಲ್ಲವಾಗಿವೆ. ಹೀಗಾಗಿ, ಎಫ್‌ಐಆರ್ ಕಾನೂನುಬಾಹಿರ’ ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ಪ್ರಕರಣ ರದ್ದು ಗೊಳಿಸಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲರಾದ ಇಫ್ತೀಕರ್ ಶಹಾಪುರಿ ಮತ್ತು ಅನ್ವರ್ ಅಲಿ ಡಿ.ನದಾಫ್ ವಾದ ಮಂಡಿಸಿದ್ದರು.

ಪ್ರಕರಣವೇನು?: ದೂರುದಾರ ರಮೇಶ್ ಮಲ್ಲಪ್ಪ ನಾವಿ ಎಂಬುವರು 2025ರ ಮೇ 4ರಂದು ಸಂಜೆ 4.30ಕ್ಕೆ ಜಮಖಂಡಿಯ ರಾಮತೀರ್ಥ ದೇಗುಲಕ್ಕೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಕೆಲವರು ಇಸ್ಲಾಂ ಧರ್ಮದ ಬೋಧನೆಯನ್ನು ಉತ್ತೇಜಿಸುವ ಮತ್ತು ಅವರ ಧಾರ್ಮಿಕ ನಂಬಿಕೆ ವಿವರಿಸುವ ಕರಪತ್ರಗಳನ್ನು ಹಂಚುತ್ತಾ, ‘ದುಬೈನಲ್ಲಿ ಉದ್ಯೋಗಾವಕಾಶ ಕಲ್ಪಿಸುತ್ತೇವೆ ಮತ್ತು ವಾಹನಗಳನ್ನು ನೀಡುತ್ತೇವೆ ಎಂದು ಜನರನ್ನು ಇಸ್ಲಾಂ ಧರ್ಮ ದೆಡೆ ಆಕರ್ಷಿತರನ್ನಾಗಿಸುತ್ತಿದ್ದಾರೆ’ ಎಂದು ದೂರು ನೀಡಿದ್ದರು. ಅರ್ಜಿದಾರರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 299, 351(2) 3(5) ಮತ್ತು ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ರಕ್ಷಣೆ ಕಾಯ್ದೆ–2024ರ ಕಲಂ 5ರ ಅಡಿ ಜಮಖಂಡಿ ಗ್ರಾಮೀಣ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ಚೀಲದಲ್ಲಿ ಸ್ಫೋಟಕ ವಸ್ತು, ಕಲಾಸಿಪಾಳ್ಯ ಪೊಲೀಸರಿಂದ ತನಿಖೆ ಚುರುಕು

ಬಿಎಂಟಿಸಿ ನಿಲ್ದಾಣದಲ್ಲಿ ಜಿಲೆಟಿನ್ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕಲಾಸಿಪಾಳ್ಯ ಬಿಎಂಟಿಸಿ ಬಸ್ ನಿಲ್ದಾಣದ ಆವರಣದಲ್ಲಿರುವ ಶೌಚಾಲಯದ ಬಳಿಯಿದ್ದ ಚೀಲದಲ್ಲಿ ಸ್ಫೋಟಕ ವಸ್ತುಗಳು ಪತ್ತೆ ಆಗಿದ್ದು, ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಚೀಲದಲ್ಲಿ ಆರು ಜಿಲೆಟಿನ್ ಕಡ್ಡಿಗಳು ಹಾಗೂ ಡಿಟೊನೇಟರ್ ಪತ್ತೆಯಾಗಿವೆ. ಮಾಹಿತಿ ತಿಳಿದು ತಕ್ಷಣವೇ ಸ್ಥಳಕ್ಕೆ ಬಂದ ಕಲಾಸಿಪಾಳ್ಯ ಠಾಣೆ ಠಾಣೆಯ ಪೊಲೀಸರು, ಬಾಂಬ್ ತಪಾಸಣೆ ದಳ ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ತಪಾಸಣೆ ನಡೆಸಿ ಜಿಲೆಟಿನ್ ಕಡ್ಡಿ ಹಾಗೂ ಡಿಟೊನೇಟರ್‌ಗಳನ್ನು ವಶಕ್ಕೆ ಪಡೆದುಕೊಂಡರು. ನಿಲ್ದಾಣದ ಸುತ್ತಮುತ್ತ ಶ್ವಾನ ದಳ ಸಹ ತಪಾಸಣೆ ನಡೆಸಿತು.

‘ನಿಲ್ದಾಣದ ಎಟಿಎಸ್ ಮಲ್ಲಪ್ಪ ಅವರು ನೀಡಿದ ದೂರು ಆಧರಿಸಿ ಕಲಾಸಿಪಾಳ್ಯ ಠಾಣೆಯಲ್ಲಿ ಅಪರಿಚಿತ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿಗಳನ್ನು ಪರಿಶೀಲನೆ ನಡೆಸಲಾಗುತ್ತಿದೆ.


ಸ್ಫೋಟಕ ವಸ್ತುಗಳು

> ಸ್ಫೋಟಕ ವಸ್ತುಗಳ ಕಾಯ್ದೆ ಹಾಗೂ ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ
> **ಗಿರೀಶ್,** ಡಿಸಿಪಿ, ಪಶ್ಚಿಮ ವಿಭಾಗ

ಆರೋಪಿಯ ಪತ್ತೆಗೆ ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

‘ಬೆಳಿಗ್ಗೆ 9ಕ್ಕೆ ಬಂದು ಬಿಎಂಟಿಸಿ ಬಸ್ ನಿಲ್ದಾಣದ ಸುತ್ತಮುತ್ತ ಪರಿಶೀಲನೆ ನಡೆಸಿದ್ದೆ. ಆ ಸಂದರ್ಭದಲ್ಲಿ ಯಾವುದೇ ಚೀಲ ಹಾಗೂ ಬ್ಯಾಗ್ ಪತ್ತೆ ಆಗಿರಲಿಲ್ಲ. ಆದರೆ, ಮಧ್ಯಾಹ್ನ 1.15ರ ಸುಮಾರಿಗೆ ಭದ್ರತಾ ಸಿಬ್ಬಂದಿ ಪ್ರಭಾವತಿ ಹಾಗೂ ರಾಜು ಬಂದು ಶೌಚಾಲಯದ ಬಳಿ ಯಾವುದೋ ಚೀಲ ಇಡಲಾಗಿತ್ತು ಎಂದು ತಂದು ತೋರಿಸಿದ್ದರು. ತಕ್ಷಣವೇ ಪೊಲೀಸ್ ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಿದ್ದರು. ಪರಿಶೀಲಿಸಿದಾಗ ಸ್ಫೋಟ ವಸ್ತುಗಳು ಪತ್ತೆಯಾದವು. ಕಲಾಸಿಪಾಳ್ಯ ಬಸ್ ನಿಲ್ದಾಣವು ಜನದಟ್ಟಣೆ ಪ್ರದೇಶವಾಗಿದ್ದು, ಸಾರ್ವಜನಿಕರ ಪ್ರಾಣ ಹಾಗೂ ಆಸ್ತಿಗೆ ಹಾನಿ ಮಾಡುವ ದುರುದ್ದೇಶದಿಂದ ಸ್ಫೋಟಕ ವಸ್ತುಗಳನ್ನು ಇಟ್ಟು ಹೋಗಲಾಗಿದೆ’ ಎಂದು ನೀಡಿದ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

‘ಮೇಲ್ನೋಟಕ್ಕೆ ಕ್ವಾರಿಗಳಿಗೆ ಬಳಸಲು ಜಿಲೆಟಿನ್ ಕೊಂಡೊಯ್ಯುತ್ತಿರುವಂತೆ ಕಾಣಿಸಿದೆ. ದುಷ್ಕೃತ್ಯ ಎಸಗುವುದೇ ಆಗಿದ್ದರೆ ಅವುಗಳನ್ನು ಜೋಡಣೆ ಮಾಡಿಟ್ಟು ಹೋಗುತ್ತಿದ್ದರು. ಜಿಲೆಟಿನ್ ಹಾಗೂ ಡಿಟೊನೇಟರ್ ಅನ್ನು ಪ್ರತ್ಯೇಕವಾಗಿ ಇಡಲಾಗಿತ್ತು. ನಿಲ್ದಾಣದಲ್ಲಿ ಖಾಕಿ ಸಮವಸ್ತ್ರ ಧರಿಸಿದ್ದ ಬಿಎಂಟಿಸಿ ಸಿಬ್ಬಂದಿ ಕರ್ತವ್ಯದಲ್ಲಿದ್ದರು. ಅದನ್ನು ಕಂಡು ಭಯಗೊಂಡ ವ್ಯಕ್ತಿ, ಚೀಲವನ್ನು ನಿಲ್ದಾಣದಲ್ಲೇ ಬಿಟ್ಟು ಹೋಗಿರುವ ಸಾಧ್ಯತೆಯಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಮಸ್ಯೆ ಆಲಿಸಿದ ಪೊಲೀಸರು...

ಪ್ರಜಾವಾಣಿ ಚಿತ್ರ: ರಂಜು ಪಿ.


ನೂತನವಾಗಿ ಜಾರಿಗೆ ತಂದಿರುವ ‘ಮನೆ-ಮನೆಗೆ ಪೊಲೀಸ್’ ಕಾರ್ಯಕ್ರಮದ ಅಂಗವಾಗಿ ಬೆಂಗಳೂರಿನ ವಸಂತನಗರದಲ್ಲಿನ ಮನೆಯೊಂದಕ್ಕೆ ಹೈಗ್ರೌಂಡ್ಸ್ ಪೊಲೀಸರು ಬುಧವಾರ ಭೇಟಿ ಕೊಟ್ಟು, ಯೋಜನೆಯ ಭಿತ್ತಿಪತ್ರವನ್ನು ಮಹಿಳೆಗೆ ನೀಡಿ, ಸಮಸ್ಯೆ ಆಲಿಸಿದರು. ಬಡಾವಣೆಗಳಲ್ಲಿ ರೌಡಿಗಳ ಹಾವಳಿ ಇದೆಯೇ? ಕಳ್ಳತನ ಪ್ರಕರಣಗಳು ನಡೆಯುತ್ತಿವೆಯೇ ಎಂದು ಪ್ರಶ್ನಿಸಿ ಮಾಹಿತಿ ಪಡೆದುಕೊಂಡರು

ಪ್ರಾದೇಶಿಕ ಭವಿಷ್ಯನಿಧಿ ಆಯುಕ್ತ ಬಾಲಕೃಷ್ಣ ನಾಯಕ ಮಾಹಿತಿ

ಇಎಲ್‌ಐ ಯೋಜನೆ ಆಗಸ್ಟ್‌ನಿಂದ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಉದ್ಯೋಗ ಆಧಾರಿತ ಪ್ರೋತ್ಸಾಹ ಧನ (ಇಎಲ್‌ಐ) ಯೋಜನೆ ಆಗಸ್ಟ್‌ನಿಂದ ಜಾರಿಗೆ ಬರಲಿದೆ’ ಎಂದು ಪ್ರಾದೇಶಿಕ ಭವಿಷ್ಯನಿಧಿ ಆಯುಕ್ತ ಬಾಲಕೃಷ್ಣನಾಯಕ ತಿಳಿಸಿದರು.

‘ಯಾವುದೇ ಕಂಪನಿ ಅಥವಾ ಸಂಸ್ಥೆಯಲ್ಲಿ ಮೊದಲ ಬಾರಿ ಉದ್ಯೋಗಕ್ಕೆ ಸೇರುವ ಉದ್ಯೋಗಿಗೆ ಈ ಯೋಜನೆ ಅನ್ವಯವಾಗಲಿದೆ’ ಎಂದು ಆರ್.ಆರ್. ನಗರದ ವಲಯ ಪ್ರಾದೇಶಿಕ ಭವಿಷ್ಯ ನಿಧಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

‘ಈ ಯೋಜನೆಯಡಿ ಕೇಂದ್ರ ಸರ್ಕಾರ ಎರಡು ಕಂತುಗಳಲ್ಲಿ ಗರಿಷ್ಠ ₹15 ಸಾವಿರ ಪ್ರೋತ್ಸಾಹ ಧನ ನೀಡಲಿದೆ. ಯೋಜನೆ ಮೂಲಕ 3.5 ಕೋಟಿ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ. ಹೆಚ್ಚುವರಿ ಉದ್ಯೋಗ ಸೃಷ್ಟಿಗಾಗಿ ಉದ್ಯೋಗದಾತರಿಗೂ ಎರಡು ವರ್ಷಗಳವರೆಗೆ ಪ್ರೋತ್ಸಾಹ ಧನ ನೀಡಲಾಗುತ್ತದೆ’ ಎಂದರು.

‘ಯೋಜನೆಯು ಎರಡು ಭಾಗಗಳನ್ನು ಒಳಗೊಂಡಿದೆ. ಮೊದಲ ಭಾಗವಾಗಿ ನೌಕರರ ಭವಿಷ್ಯ ನಿಧಿ ಸಂಘಟನೆ(ಇಪಿಎಫ್‌ಒ)ಯಲ್ಲಿ ನೋಂದಾಯಿತ ಉದ್ಯೋಗಿಗೆ ತಿಂಗಳಿಗೆ ಗರಿಷ್ಠ ₹15 ಸಾವಿರವನ್ನು ಎರಡು ಕಂತುಗಳಲ್ಲಿ ನೀಡಲಾಗುತ್ತದೆ. ₹1 ಲಕ್ಷದವರೆಗೆ ವೇತನವಿರುವ ಉದ್ಯೋಗಿಗಳು ಇದಕ್ಕೆ ಅರ್ಹರಾಗಿರುತ್ತಾರೆ. ಮೊದಲ ಕಂತನ್ನು 6 ತಿಂಗಳ ಸೇವೆಯ ನಂತರ ಮತ್ತು 2ನೇ ಕಂತನ್ನು ಒಂದು ವರ್ಷದ ಸೇವೆಯ ನಂತರ ನೀಡಲಾಗುತ್ತದೆ’ ಎಂದು ವಿವರಿಸಿದರು.

‘ಎರಡನೇ ಭಾಗವಾಗಿ ಕನಿಷ್ಠ ಆರು ತಿಂಗಳವರೆಗೆ ನಿರಂತರ ಉದ್ಯೋಗ ಹೊಂದಿರುವ ಪ್ರತಿ ಹೆಚ್ಚುವರಿ ಉದ್ಯೋಗಿಗೆ ಸರ್ಕಾರವು ಎರಡು ವರ್ಷಗಳವರೆಗೆ ತಿಂಗಳಿಗೆ ₹3 ಸಾವಿರವರೆಗೆ ಪ್ರೋತ್ಸಾಹಧನ ನೀಡಲಿದೆ. ಇಪಿಎಫ್‌ಒದಲ್ಲಿ ನೋಂದಾಯಿಸಲಾದ 50ಕ್ಕಿಂತ ಕಡಿಮೆ ಉದ್ಯೋಗಿಗಳನ್ನು ಹೊಂದಿರುವ ಸಂಸ್ಥೆಗಳಿಗೆ ಕನಿಷ್ಠ ಇಬ್ಬರು ಹೆಚ್ಚುವರಿ ಉದ್ಯೋಗಿಗಳನ್ನು, 50 ಅಥವಾ ಅದಕ್ಕಿಂತ ಹೆಚ್ಚಿನ ಉದ್ಯೋಗಿಗಳನ್ನು ಹೊಂದಿರುವ ಸಂಸ್ಥೆಗಳು ಹೆಚ್ಚುವರಿಯಾಗಿ ಐದು ಮಂದಿ ಉದ್ಯೋಗಿಗಳನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ’ ಎಂದು ಬಾಲಕೃಷ್ಣ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮತ್ತೊಬ್ಬ ಪ್ರಾದೇಶಿಕ ಆಯುಕ್ತ ವೆಂಕಟ ಸುಬ್ಬಯ್ಯ ಮತ್ತು ಸಹಾಯಕ ಕಮಿಷನರ್ ಸೂರಜ್ ಕುಮಾರ್ ಉಪಸ್ಥಿತರಿದ್ದರು.


ಕಾರ್ಯಕ್ರಮದಲ್ಲಿ ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

‘ಜಾಲ ಹಬ್ಬ’ದ ಸಂಭ್ರಮದಲ್ಲಿ ಮಿಂದೆದ್ದ ಜನತೆ

ಪ್ರಜಾವಾಣಿ ವಾರ್ತೆ

ಯಲಹಂಕ: ಗ್ರಾಮೀಣ ಆಟಗಳು, ನೃತ್ಯ, ಚಿತ್ತಾರದ ರಂಗೋಲಿಗಳು, ಚಿತ್ರಕಲೆ, ಕ್ರೀಡಾ ಸ್ಪರ್ಧೆಗಳು, ರಕ್ತದಾನ-ಆರೋಗ್ಯ ಶಿಬಿರ, ಎತ್ತುಗಳ ಪ್ರದರ್ಶನ, ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ, ತೇಲಿಬರುತ್ತಿದ್ದ ಸಂಗೀತದ ಬೀಟ್ಸ್‌ಗಳಿಗೆ ಕುಣಿದು ಕುಪ್ಪಳಿಸಿದ ಯುವಜನತೆ...

ಕೆಬಿಜಿ ಸ್ವಯಂಸೇವಕರು ಹಾಗೂ ಬ್ಯಾಟರಾಯನಪುರ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಸಹಯೋಗದಲ್ಲಿ ಹುಣಸಮಾರನಹಳ್ಳಿಯ ಎಸ್.ಜೆ.ಪಿ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ‘ಜಾಲ ಹಬ್ಬ’ದಲ್ಲಿ ಕಂಡುಬಂದ ದೃಶ್ಯಗಳಿವು.

ವಾಲಿಬಾಲ್, ಕಬಡ್ಡಿ, ಹಗ್ಗ-ಜಗ್ಗಾಟ, ಲೆಮೆನ್ ಅಂಡ್ ಸ್ಪೂನ್ ಮತ್ತಿತರ ಕ್ರೀಡಾಸ್ಪರ್ಧೆಗಳು, ಮಹಿಳೆಯರಿಗಾಗಿ ರಂಗೋಲಿ ಹಾಗೂ ಮಕ್ಕಳಿಗಾಗಿ ಚಿತ್ರ ಕಲೆ ಸ್ಪರ್ಧೆ ಏರ್ಪಡಿಸಲಾಗಿತ್ತು. ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಪೋಷಕರು ಮಕ್ಕಳೊಂದಿಗೆ ಗ್ರಾಮೀಣ ಆಟಗಳಲ್ಲಿ ಉತ್ಸಾಹದಿಂದ ಪಾಲ್ಗೊಂಡು ಸಂಭ್ರಮಿಸಿದರು.

ಆರೋಗ್ಯ ಶಿಬಿರದಲ್ಲಿ ವೈದ್ಯರು ರಕ್ತ ದೊತ್ತಡ, ಮಧುಮೇಹ ಸೇರಿ ವಿವಿಧ ಕಾಯಿಲೆಗಳಿಗೆ ಸಂಬಂಧಿಸಿ ತಪಾಸಣೆ ನಡೆಸಿದರು. ರಕ್ತದಾನ ಶಿಬಿರದಲ್ಲಿ ಹಲವುಮಂದಿ ರಕ್ತದಾನ ಮಾಡಿದರು. ‘ನಮ್ಮೂರ ಹೆಮ್ಮೆ’ ಕಾರ್ಯಕ್ರಮದ ಅಡಿಯಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳಿಸಿದ 500 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸಂಗೀತ ನಿರ್ದೇಶಕ ಗುರುಕಿರಣ್ ಮತ್ತು ತಂಡದಿಂದ ಆಯೋಜಿಸಿದ್ದ ಸಂಗೀತ ರಸಸಂಜೆ ಕಾರ್ಯಕ್ರಮ ಪ್ರೇಕ್ಷಕರನ್ನು ರಂಜಿಸಿತು. ವಸ್ತುಪ್ರದರ್ಶನದಲ್ಲಿ 50ಕ್ಕೂ ಹೆಚ್ಚು ಮಳಿಗೆಗಳನ್ನು ಸ್ಥಾಪಿಸಲಾಗಿತ್ತು.

ಕಂದಾಯ ಸಚಿವ ಕೃಷ್ಣಬೈರೇಗೌಡ, ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ. ಅಶೋಕನ್, ಸದಸ್ಯ ದಾನೇಗೌಡ, ಕಾಂಗ್ರೆಸ್ ಮುಖಂಡರಾದ ಎನ್.ಎನ್.ಶ್ರೀನಿವಾಸಯ್ಯ, ಎಂ. ಜಯಗೋಪಾಲಗೌಡ ಉಪಸ್ಥಿತರಿದ್ದರು.

ಆರೋಪಿ ಮೂಳೆ ಮುರಿತ: ಚಿಕಿತ್ಸೆಗೆ ಕೋರ್ಟ್ ಸೂಚನೆ

ಬೆಂಗಳೂರು: ರೌಡಿ ಶೀಟರ್ ಶಿವಪ್ರಕಾಶ್ ಕೊಲೆ ಪ್ರಕರಣದಲ್ಲಿ ಬಂಧಿತನಾಗಿ ಪೊಲೀಸ್ ಕಸ್ಟಡಿಯಲ್ಲಿರುವ ಆರೋಪಿ ಕಿರಣ್ ಮೇಲೆ ಪೊಲೀಸರು ತೀವ್ರ ಹಲ್ಲೆ ನಡೆಸಿದ್ದಾರೆ ಎಂದು ಅವರ ಕುಟುಂಬಸ್ಥರು ಆರೋಪಿಸಿದ್ದಾರೆ.

ಈ ಸಂಬಂಧ ಹೈಕೋರ್ಟ್ ಸೂಚನೆಯಂತೆ ವಿಚಾರಣೆ ನಡೆಸಿದ ನಗರದ 29ನೇ ಎಸಿಎಂಎಂ ನ್ಯಾಯಾಲಯವು ಕಿರಣ್‌ಗೆ ಹೆಚ್ಚಿನ ವೈದ್ಯಕೀಯ ಚಿಕಿತ್ಸೆ ಕೊಡಿಸುವಂತೆ ಆದೇಶಿಸಿದೆ

‘ಪ್ರಕರಣದ ತನಿಖಾಧಿಕಾರಿ ಅವರು ತಮ್ಮ ಕಕ್ಷಿದಾರರಿಗೆ ತೊಂದರೆ ಕೊಟ್ಟಿಲ್ಲ. ಇತರೆ ಪೊಲೀಸರು ವಿಚಾರಣೆಯ ನೆಪದಲ್ಲಿ ಹಲ್ಲೆ ನಡೆಸಿ ಕಿರುಕುಳ ನೀಡಿದ್ದಾರೆ. ಇದರಿಂದ ಕಿರಣ್‌ನ ಪಾದದ ಮೂಳೆ ಮುರಿದಿದೆ. ಆದ್ದರಿಂದ ಕಿರಣ್‌ನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಬೇಕು’ ಎಂದು ಕಿರಣ್ ಪರ ವಕೀಲರು ನ್ಯಾಯಾಧೀಶರಲ್ಲಿ ಕೋರಿದರು. ‘ತನಿಖಾಧಿಕಾರಿ ಹೊರತುಪಡಿಸಿ ಇತರ ಸಿಬ್ಬಂದಿ ಕಿರಣ್‌ನನ್ನು ವಿಚಾರಣೆ ನಡೆಸುವಂತಿಲ್ಲ. ಕಿರಣ್‌ಗೆ ಹೆಚ್ಚಿನ ಚಿಕಿತ್ಸೆ ಕೊಡಿಸಬೇಕು’ ಎಂದು ನ್ಯಾಯಾಲಯವು ಸೂಚಿಸಿದೆ.

ಕಾಲ್ಪನಿಕ ‘ದೇಶಗಳ’ ರಾಯಭಾರಿ ಕಚೇರಿ ನಡೆಸುತ್ತಿದ್ದ ಆರೋಪ

‘ರಾಜತಾಂತ್ರಿಕ’ನ ಬಂಧನ; ನಗದು ವಶ

ಲಖನೌ/ಗಾಜಿಯಾಬಾದ್ (ಪಿಟಿಐ): ಹಲವು ಕಾಲ್ಪನಿಕ ‘ದೇಶಗಳ’ ಹೆಸರಿನಲ್ಲಿ ನಕಲಿ ರಾಯಭಾರಿ ಕಚೇರಿಗಳನ್ನು ನಡೆಸುತ್ತಿದ್ದ ಆರೋಪದ ಮೇಲೆ ಗಾಜಿಯಾಬಾದ್‌ನ ವ್ಯಕ್ತಿಯನ್ನು ಬಂಧಿಸಲಾಗಿದೆ ಎಂದು ಉತ್ತರ ಪ್ರದೇಶ ಪೊಲೀಸರು ಬುಧವಾರ ತಿಳಿಸಿದ್ದಾರೆ.

ಹರ್ಷವರ್ಧನ ಜೈನ್ ಬಂಧಿತ ‘ಸ್ವಯಂ ಘೋಷಿತ ರಾಜತಾಂತ್ರಿಕ’. ಈತನಿಂದ ₹44.7 ಲಕ್ಷ ನಗದು, ವಿವಿಧ ದೇಶಗಳ ಕರೆನ್ಸಿಗಳು, ತಿರುಚಲಾದ ‘ರಾಜತಾಂತ್ರಿಕರ ಪಾಸ್‌ಪೋರ್ಟ್’ಗಳು ಹಾಗೂ ವಾಹನಗಳಿಗೆ ಅಳವಡಿಸಿದ್ದ 18 ನಕಲಿ ನೋಂದಣಿಸಂಖ್ಯೆಯ ಫಲಕಗಳನ್ನು ಉತ್ತರ ಪ್ರದೇಶ ಎಸ್‌ಟಿಎಫ್ ಅಧಿಕಾರಿಗಳು ಮಂಗಳವಾರ ವಶಪಡಿಸಿದ್ದಾರೆ.

‘ತಾನು ‘ಪಶ್ಚಿಮ ಆರ್ಕ್ಟಿಕಾ’ ದೇಶದ ರಾಯಭಾರಿ ಅಥವಾ ರಾಜತಾಂತ್ರಿಕ ಅಧಿಕಾರಿ ಎಂದು ಹೇಳಿಕೊಳ್ಳುತ್ತಿದ್ದ ಜೈನ್, ದೆಹಲಿ ಹೊರವಲಯದಲ್ಲಿ ಬಾಡಿಗೆ ಕಟ್ಟಡವೊಂದರಲ್ಲಿ ನಕಲಿ ರಾಯಭಾರಿ ಕಚೇರಿ ಸ್ಥಾಪಿಸಿದ್ದ’ ಎಂದು ಎಡಿಜಿಪಿ ಅಮಿತಾಭ್ ಯಶ್ ಬುಧವಾರ ತಿಳಿಸಿದರು.

‘ಸಬೋರ್ಗಾ’, ‘ಲೊಡೊನಿಯಾ’, ‘ಪೌಲ್ವಿಯಾ’ ಎಂಬ ಅಸ್ತಿತ್ವದಲ್ಲಿಯೇ ಇಲ್ಲದಂತಹ ದೇಶಗಳ ರಾಯಭಾರಿ ಎಂಬುದಾಗಿಯೂ ಜೈನ್ ಹೇಳಿಕೊಂಡಿದ್ದ. ರಾಜತಾಂತ್ರಿಕರಿಗೆ ನೀಡುವ ನೋಂದಣಿ ಸಂಖ್ಯೆಗಳಿರುವ ನಕಲಿ ಫಲಕಗಳನ್ನು ಅಳವಡಿಸಿದ್ದ ವಾಹನಗಳನ್ನು ಬಳಸುತ್ತಿದ್ದ’ ಎಂದು ತಿಳಿಸಿದರು. ‘ಇತರರ ಮೇಲೆ ಪ್ರಭಾವ ಬೀರುವ ಉದ್ದೇಶದಿಂದ ರಾಷ್ಟ್ರಪತಿ, ಪ್ರಧಾನಿ ಸೇರಿ ಹಲವು ಗಣ್ಯರೊಂದಿಗೆ ತಾನು ನಿಂತಿರುವಂತೆ ತೋರುವ ಮಾರ್ಪಡಿಸಿದ ಭಾವಚಿತ್ರಗಳನ್ನು ಕೂಡ ಬಳಸುತ್ತಿದ್ದ ಎನ್ನಲಾಗಿದೆ’ ಎಂದರು. ‘ವಿವಾದಾತ್ಮಕ ದೇವಮಾನವ ಚಂದ್ರಸ್ವಾಮಿ, ಅಂತರರಾಷ್ಟ್ರೀಯ ಶಸ್ತ್ರಾಸ್ತ್ರ ವಿತರಕ ಅಡ್ನಾನ್ ಖಶೋಗಿ ಜೊತೆ ಜೈನ್ ನಂಟು ಹೊಂದಿದ್ದ’ ಎಂದೂ ತಿಳಿಸಿದರು. ಜೈನ್ ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಎಸಿಪಿ (ಕವಿನಗರ) ಭಾಸ್ಕರ್ ವರ್ಮಾ ತಿಳಿಸಿದರು.

ತರಹೇವಾರಿ ರಾಷ್ಟ್ರಗಳು: ‘ಪಶ್ಚಿಮ ಆರ್ಕ್ಟಿಕಾ’ ಎಂಬುದು ಅಂಟಾರ್ಟಿಕಾದಲ್ಲಿರುವ ಅತ್ಯಂತ ಚಿಕ್ಕ ದೇಶ. ಇದನ್ನು ಯಾವ ದೇಶವೂ ಮಾನ್ಯ ಮಾಡುವುದಿಲ್ಲ. ಹವಾಮಾನ ಬದಲಾವಣೆ ಕುರಿತು ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ ರಚಿಸಿರುವ ಲಾಭ ಮಾಡುವ ಉದ್ದೇಶವಿಲ್ಲದ ‘ದೇಶ’ ಇದು ಎಂಬುದು ಇಂಟರ್‌ನೆಟ್‌ನಲ್ಲಿ ಜಾಲಾಡಿದಾಗ ತಿಳಿದುಬರುತ್ತದೆ.

ಟಿಕೆಟ್ ತೆಗೆದುಕೊಳ್ಳದೇ ಇದ್ದರೆ ಬಸ್‌ನಿಂದ ಇಳಿಸುತ್ತಿರುವ ಬಿಎಂಟಿಸಿ ನೌಕರರು

ಅಂಧರ ಪಾಸ್‌ಗೆ ಬೆಲೆ ನೀಡದ ‘ವಜ್ರ’ ನಿರ್ವಾಹಕರು

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಬಿಎಂಟಿಸಿಯ ವಜ್ರ ಬಸ್‌ಗಳಲ್ಲಿ ಅಂಧರಿಗೆ ಪ್ರಯಾಣಿಸಲು ಅವಕಾಶ ನೀಡಿ ಸಂಚಾರ ವ್ಯವಸ್ಥಾಪಕರು ಹೊರಡಿಸಿರುವ ಆದೇಶವನ್ನು ಬಿಎಂಟಿಸಿ ಬಸ್ ನಿರ್ವಾಹಕರೇ ಪಾಲನೆ ಮಾಡುತ್ತಿಲ್ಲ. ಅಂಧ ಪ್ರಯಾಣಿಕರು ವಜ್ರ ಬಸ್ ಹತ್ತಿದರೆ ಇಳಿಸುತ್ತಿದ್ದಾರೆ. ಇಲ್ಲವೇ ಟಿಕೆಟ್ ದರ ಪಡೆಯುತ್ತಿದ್ದಾರೆ.

‘ಹೆಬ್ಬಾಳಕ್ಕೆ ಬರಲು ಟಿನ್ ಫ್ಯಾಕ್ಟರಿಯಲ್ಲಿ ವೋಲ್ವೊ ವಜ್ರ ಬಸ್ ಹತ್ತಿದ್ದೆ. ಕಂಡೆಕ್ಟರ್‌ಗೆ ಪಾಸ್ ತೋರಿಸಿದರೂ, ಪಾಸ್ ಆಗಲ್ಲ. ದುಡ್ಡುಕೊಟ್ಟು ಟಿಕೆಟ್ ತೆಗೆದುಕೊ ಇಲ್ಲದೇ ಇದ್ದರೆ ಇಳಿ ಎಂದು ಹೇಳಿದರು. ಈ ಬಸ್‌ಗಳಿಗೆ ಪಾಸ್ ಅನ್ವಯವಾಗುತ್ತದೆ ಎಂದು ಹೇಳಿದೆ. ಎಲ್ಲಿದೆ ಸುತ್ತೋಲೆ ತೋರಿಸು ಎಂದು ದಬಾಯಿಸಿದರು. ಸುತ್ತೋಲೆ ನಾವಲ್ಲ ನೀವು ಇಟ್ಟುಕೊಳ್ಳಬೇಕು ಎಂದು ಉತ್ತರಿಸಿದೆ. ನನ್ನ ಬಳಿ ಪಾಸ್ ಇರುವಾಗ ಯಾಕೆ ದುಡ್ಡುಕೊಡಬೇಕು ಎಂದು ಟಿಕೆಟ್ ದರ ಪಾವತಿ ಮಾಡಲಿಲ್ಲ. ಮುಂದಿನ ನಿಲ್ದಾಣ ಕಸ್ತೂರಿನಗರಕ್ಕೆ ಬಂದಾಗ ಇಳಿಯಲು ಹೇಳಿದ್ರು. ಅಲ್ಲಿ ಇಳಿದೆ’ ಎಂದು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಸಂಪೂರ್ಣ ಅಂಧತ್ವ ಇರುವ ಸುರೇಶ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಇನ್ನೊಂದು ವಜ್ರ ಬಸ್ ಬಂತು. ಅದಕ್ಕೆ ಹತ್ತಿದೆ. ಆ ಬಸ್‌ನ ಕಂಡೆಕ್ಟರ್ ಕೂಡ ಪಾಸ್ ಒಪ್ಪದೇ ಟಿಕೆಟ್ ತೆಗೆದುಕೊಳ್ಳಲು ತಿಳಿಸಿದರು. ಇಲ್ಲಿಯೂ ಜಗಳವಾಡಿ ಇಳಿಯೋದು ಬೇಡ ಎಂದು ₹30 ಪಾವತಿಸಿ ಟಿಕೆಟ್ ತಗೊಂಡು ಸಂಚರಿಸಿದೆ. ಬೆಳಿಗ್ಗೆ ಕೆಲಸಕ್ಕೆ ಹೋಗುವಾಗ ಸಾಮಾನ್ಯ ಬಸ್‌ಗಳು ಬೇಕಾದಷ್ಟು ಇರುತ್ತವೆ. ಸಾಮಾನ್ಯ ಬಸ್‌ಗಳಲ್ಲಿಯೇ ಹೋಗುತ್ತೇನೆ. ಸಂಜೆ ವಾಪಸ್ ಬರುವಾಗ 10 ಓಲ್ವೊ ಬಸ್‌ಗಳು ಬಂದರೆ ಒಂದು ಸಾಮಾನ್ಯ ಬಸ್ ಇರುತ್ತದೆ. ಓಲ್ವೊ ಬಸ್ ಹತ್ತಿದಾಗಲೆಲ್ಲ ಹೀಗೇ ಆಗುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಬಸ್‌ಗಳಲ್ಲಿ ನಾವು ಹೋಗುವಾಗ ಈ ರೀತಿಯ ಘಟನೆಗಳು ನಡೆಯುತ್ತಲೇ ಇರುತ್ತವೆ. ಓಲ್ವೊ ಬಸ್‌ಗಳಲ್ಲಿ ನಾವೇ ಸುತ್ತೋಲೆ ಇಟ್ಟುಕೊಂಡು ಕಂಡೆಕ್ಟರ್‌ಗೆ ತೋರಿಸಿದರೆ ಮಾತ್ರ ಒಪ್ಪಿಕೊಳ್ಳುತ್ತಾರೆ. ಬಿಎಂಟಿಸಿಯವರೇ ಚಾಲಕ, ನಿರ್ವಾಹಕರಿಗೆ ಈ ಬಗ್ಗೆ ಮಾಹಿತಿ ನೀಡಬೇಕು. ಸಾಮಾನ್ಯ ಬಸ್‌ಗಳಲ್ಲಿ ಇನ್ನೊಂದು ತರಹದ ಸಮಸ್ಯೆ. ಬಸ್ ಎಲ್ಲಿಗೆ ಹೋಗುತ್ತದೆ ಎಂದು ಕೇಳಿದರೆ ಹೇಳುವುದೇ ಇಲ್ಲ. ಯಾವ ಬಸ್ ಹೋಗುತ್ತದೆ ಎಂದರೂ ಚಾಲಕರು ಉತ್ತರಿಸುವುದಿಲ್ಲ. ಕೆಳಗೆ ಇರುವ ಪ್ರಯಾಣಿಕರಲ್ಲಿ ಕೇಳಬೇಕು. ಅವರು ತೋರಿಸಿದ ಬಸ್ ಹತ್ತಲು ಹೋದರೆ ಬಸ್ ಲೇಟ್ ಇದೆ ಎಂದು ಸುಳ್ಳು ಹೇಳುತ್ತಾರೆ. ಬಸ್ ನಿರ್ವಾಹಕರು ಮತ್ತು ಚಾಲಕರು ಅಂಧರೊಂದಿಗೆ ಮಾನವೀಯತೆಯಿಂದ ವರ್ತಿಸುವುದನ್ನು ಅವರ ಮೇಲಧಿಕಾರಿಗಳು ಮೊದಲು ಹೇಳಿಕೊಡಬೇಕು’ ಎಂದು ನ್ಯಾಷನಲ್ ಫೆಡರೇಷನ್ ಆಫ್ ಬ್ಲೈಂಡ್‌ನ ರಾಜ್ಯ ಯುವ ಘಟಕದ ಕಾರ್ಯದರ್ಶಿ ವೀರೇಶ್ ಆಗ್ರಹಿಸಿದರು.

ಆದೇಶದಲ್ಲಿ ಏನಿದೆ?:

ಪೂರ್ಣ ಅಂಧರಾಗಿದ್ದು, ಅಂಧರ ಉಚಿತ ಪಾಸ್ ಅಥವಾ ಅಂಗವಿಕಲರ ರಿಯಾಯಿತಿ ಪಾಸ್ ಪಡೆದವರಿಗೆ ಬಿಎಂಟಿಸಿಯ ಸಾಮಾನ್ಯ ಮತ್ತು ವಜ್ರ ಬಸ್‌ಗಳಲ್ಲಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ. ಸಾಮಾನ್ಯ ಬಸ್‌ಗಳಲ್ಲಿ ಮುಂಬಾಗಿಲಿನ ಕಿಟಕಿಯ ಎಡಭಾಗದ ಒಂದು ಆಸನವನ್ನು ಮತ್ತು ಹಿಂದೆ ಅಥವಾ ಮಧ್ಯದ ಬಾಗಿಲಿನ ಎದುರಿಗಿರುವ ಎರಡು ಆಸನಗಳನ್ನು ಅಂಗವಿಕಲರಿಗೆ ಮೀಸಲಿಡಲಾಗಿದೆ. ವಜ್ರ ವಾಹನಗಳಲ್ಲಿ ಮಧ್ಯದ ಬಾಗಿಲಿನ ಎದುರಿಗಿರುವ ಎರಡು ಆಸನಗಳನ್ನು ಮೀಸಲಿಡಲಾಗಿದೆ ಎಂದು ಮುಖ್ಯ ಸಂಚಾರ ವ್ಯವಸ್ಥಾಪಕರು ಆದೇಶದಲ್ಲಿ ತಿಳಿಸಿದ್ದಾರೆ.


ಸುರೇಶ್


ವೀರಪ್ಪ

> ಪೂರ್ಣ ಅಂಧತ್ವ ಹೊಂದಿದವರಿಗೆ ಬಿಎಂಟಿಸಿ ಸಾಮಾನ್ಯ ಬಸ್‌ಗಳಲ್ಲದೇ, ವೋಲ್ವೊ ಬಸ್‌ಗಳಲ್ಲಿಯೂ ಸಂಚರಿಸಲು ಅವಕಾಶ ನೀಡಲಾಗಿದೆ. ಅವಕಾಶ ನಿರಾಕರಿಸುವ ಚಾಲಕರು, ನಿರ್ವಾಹಕರ ಮೇಲೆ ಕ್ರಮ ಕೈಗೊಳ್ಳಲಾಗುವುದು.
> **ಜಿ.ಟಿ. ಪ್ರಭಾಕರ ರೆಡ್ಡಿ,** ಬಿಎಂಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕ

‘ಬಸ್‌ನಿಂದ ಬಿದ್ದಿದ್ದೆ’

‘ಜುಲೈ 6ರಂದು ಮೈಸೂರು ಬ್ಯಾಂಕ್‌ನಿಂದ ಮೆಜೆಸ್ಟಿಕ್‌ಗೆ ಬಿಎಂಟಿಸಿ ಬಸ್‌ನಲ್ಲಿ ಬಂದೆ. ಮೆಜೆಸ್ಟಿಕ್‌ನಲ್ಲಿ ಬಸ್ ನಿಂತಾಗ ಪ್ರಯಾಣಿಕರು ಇಳಿಯುತ್ತಿದ್ದರು. ನಾನು ಇಳಿಯಬೇಕಿದ್ದರೆ ಬಸ್ ಮುಂದಕ್ಕೆ ಚಲಿಸಿತು. ಕೆಳಗೆ ಬಿದ್ದುಬಿಟ್ಟೆ’ ಎಂದು ಗಾರ್ಮೆಂಟ್ಸ್ ಉದ್ಯೋಗಿ ವೀರಪ್ಪ ತಿಳಿಸಿದರು.

‘ಕಣ್ಣು ಕಾಣದ ನಮ್ಮಂಥವರು ಇಳಿಯುವವರೆಗೆ ಕಾಯುವ ತಾಳ್ಮೆ ಚಾಲಕರಿಗೂ, ನಿರ್ವಾಹಕರಿಗೂ ಇರುವುದಿಲ್ಲ. ಅವತ್ತು ನನ್ನದೇ ತಪ್ಪು ಎಂಬಂತೆ ಮಾತನಾಡಿದರು. ನಾನು ಅಲ್ಲಿಂದಲೇ ಸಹಾಯವಾಣಿಗೆ ಕರೆ ಮಾಡಿದ ಮೇಲೆ ಕ್ಷಮೆ ಯಾಚಿಸಿದರು. ಅಲ್ಲದೇ ಸಹಾಯವಾಣಿಯವರ ಜೊತೆಗೆ ನನ್ನ ಮೊಬೈಲ್‌ನಲ್ಲೇ ನಿರ್ವಾಹಕ ಮಾತನಾಡಿದರು. ಏಟು ಏನೂ ಬಿದ್ದಿಲ್ಲ ಎಂದು ತಿಳಿಸಿದರು. ನನ್ನ ಕಾಲಿಗೆ ಏಟಾಗಿ ನಾಲ್ಕೈದು ದಿನ ನೋವಿತ್ತು’ ಎಂದು ಹೇಳಿದರು.



ದುಡ್ಡಿನಂಥಾ ಮಾತು

ನೀವು ಅನಗತ್ಯವಾದ ವಸ್ತುಗಳ ಖರೀದಿಸಲು ವೆಚ್ಚ ಮಾಡಿದರೆ, ಅಗತ್ಯವಾದ ವಸ್ತುಗಳನ್ನು ಶೀಘ್ರವೇ ಮಾರಾಟ ಮಾಡಬೇಕಾಗುತ್ತದೆ
ವಾರನ್ ಬಫೆಟ್, ಹೂಡಿಕೆದಾರ

ಕ್ರೆಡಿಟ್ ಅಂಕವು ವ್ಯಕ್ತಿಯು ಪಡೆದ ಸಾಲಗಳ ಬಗ್ಗೆ ಹಾಗೂ ಅದನ್ನು ತೀರಿಸುತ್ತಿರುವುದರ ಬಗ್ಗೆ ಮಾಹಿತಿ ನೀಡುತ್ತದೆಯಾದರೂ ಅದು ಅಷ್ಟಕ್ಕೇ ಸೀಮಿತವಾದುದಲ್ಲ ಎಂಬುದನ್ನು ಈಚಿನ ಕೆಲವು ಬೆಳವಣಿಗೆಗಳು ಹೇಳುತ್ತಿವೆ. ಮನೆ ಬಾಡಿಗೆ ಪಡೆಯುವ ಸಂದರ್ಭದಲ್ಲಿ, ಕಚೇರಿ ಕಟ್ಟಡ ಬಾಡಿಗೆ ಪಡೆಯುವ ಸಂದರ್ಭದಲ್ಲಿಯೂ ಕ್ರೆಡಿಟ್ ಅಂಕಗಳು ಪ್ರಮುಖವಾಗಿ ಪರಿಗಣನೆ ಆಗಬಹುದು. ಈ ಅಂಕಗಳ ಮಹತ್ವವನ್ನು ಇಲ್ಲಿ ಲೇಖಕರು ವಿವರಿಸಿದ್ದಾರೆ



ಕ್ರೆಡಿಟ್ ಅಂಕ ಚೆನ್ನಾಗಿದ್ದವನೇ ಜಾಣ!

• ವಸಂತ ಜಿ. ಹೆಗಡೆ

ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ತನ್ನ ವೃತ್ತಾಧಿಕಾರಿ (ಸಿಬಿಒ) ಹುದ್ದೆಗೆ ವ್ಯಕ್ತಿಯೊಬ್ಬರನ್ನು ನೇಮಕ ಮಾಡಿಕೊಂಡಿದ್ದನ್ನು ಈಚೆಗೆ ರದ್ದು ಮಾಡಿತು. ಈ ವ್ಯಕ್ತಿಯ ಕ್ರೆಡಿಟ್ ಅಂಕವು ಚೆನ್ನಾಗಿ ಇರಲಿಲ್ಲ ಎಂಬ ಕಾರಣಕ್ಕೆ ಬ್ಯಾಂಕ್ ಈ ತೀರ್ಮಾನ ತೆಗೆದುಕೊಂಡಿತು. ಆದರೆ, ಬ್ಯಾಂಕ್‌ನ ಈ ತೀರ್ಮಾನವನ್ನು ಕೆಲಸ ಕಳೆದುಕೊಂಡ ವ್ಯಕ್ತಿಯು ಮದ್ರಾಸ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದರು. ತಾನು ಎಲ್ಲ ಬಾಕಿ ಸಾಲಗಳನ್ನು ಮರುಪಾವತಿ ಮಾಡಿರುವುದಾಗಿ, ಕ್ರೆಡಿಟ್ ಕಾರ್ಡ್ ಬಿಲ್ ಮೊತ್ತವನ್ನು ಪಾವತಿ ಮಾಡಿರುವುದಾಗಿ, ತನ್ನನ್ನು ಯಾವುದೇ ಬ್ಯಾಂಕ್ ಸುಸ್ತಿದಾರ ಎಂದು ಘೋಷಣೆ ಮಾಡಿಲ್ಲ ಎಂಬುದಾಗಿ ಅರ್ಜಿದಾರ ನ್ಯಾಯಾಲಯಕ್ಕೆ ವಿವರಿಸಿದರು.

ಅರ್ಜಿಯ ವಿಚಾರಣೆ ನಡೆಸಿದ ಮದ್ರಾಸ್ ಹೈಕೋರ್ಟ್, ಎಸ್‌ಬಿಐ ತೀರ್ಮಾನವನ್ನು ಎತ್ತಿಹಿಡಿಯಿತು. ಅರ್ಜಿಯನ್ನು ವಜಾಗೊಳಿಸಿತು. ಹಣಕಾಸಿನ ವಿಚಾರದಲ್ಲಿ ಶಿಸ್ತು ಕಾಯ್ದುಕೊಳ್ಳದ ವ್ಯಕ್ತಿಯನ್ನು ಸಾರ್ವಜನಿಕರ ಹಣವನ್ನು ನಿರ್ವಹಿಸುವ ಕೆಲಸಗಳಲ್ಲಿ ನಂಬಲು ಸಾಧ್ಯವಿಲ್ಲ ಎಂದು ಕೋರ್ಟ್ ಹೇಳಿತು. ಇಂದಿನ ಜಗತ್ತಿನಲ್ಲಿ ಕ್ರೆಡಿಟ್ ಅಂಕವು ವ್ಯಕ್ತಿಯು ಹಣಕಾಸಿನ ವಿಚಾರದಲ್ಲಿ ಎಷ್ಟರಮಟ್ಟಿಗೆ ಒಳ್ಳೆಯ ಹೆಸರು ಹೊಂದಿದ್ದಾನೆ ಎಂಬುದನ್ನು ತಿಳಿಸುತ್ತದೆ. ಅಲ್ಲದೆ, ಸಾಲಗಳನ್ನು ನಿಭಾಯಿಸಲು ಆತ ಎಷ್ಟರ ಮಟ್ಟಿಗೆ ಸಮರ್ಥ ಎಂಬುದನ್ನೂ ಅದು ಹೇಳುತ್ತದೆ.

ವ್ಯಕ್ತಿಯು ಗೃಹಸಾಲಕ್ಕೆ, ಚಿನ್ನದ ಮೇಲಿನ ಸಾಲಕ್ಕೆ, ವಾಹನ ಸಾಲಕ್ಕೆ, ವೈಯಕ್ತಿಕ ಸಾಲಕ್ಕೆ ಅಥವಾ ಕ್ರೆಡಿಟ್ ಕಾರ್ಡ್ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಿದಾಗ ಬ್ಯಾಂಕುಗಳು, ಬ್ಯಾಂಕೇತರ ಹಣಕಾಸು ಕಂಪನಿಗಳು (ಎನ್‌ಬಿಎಫ್‌ಸಿ), ಕಿರುಸಾಲ ಕಂಪನಿಗಳು, ಗೃಹಸಾಲ ಕಂಪನಿಗಳು ಹಾಗೂ ಫಿನ್‌ಟೆಕ್ ಕಂಪನಿಗಳು ಮೊದಲು ಗಮನಿಸುವುದು ಕ್ರೆಡಿಟ್ ಅಂಕಗಳನ್ನು. ಅರ್ಜಿ ಸಲ್ಲಿಸಿರುವ ವ್ಯಕ್ತಿಯ ಸಾಮರ್ಥ್ಯ ಹೇಗಿದೆ ಎಂಬುದನ್ನು ಪರಿಶೀಲಿಸಲು ಹಾಗೂ ಸಾಲ ನೀಡುವ ಬಗ್ಗೆ ತೀರ್ಮಾನಿಸಲು ಅವು ಈ ಅಂಕವನ್ನು ಗಮನಿಸುತ್ತವೆ. ಬ್ಯಾಂಕುಗಳು ಹಾಗೂ ಸಾಲ ನೀಡುವ ಕಂಪನಿಗಳು ಮಾತ್ರವೇ ಅಲ್ಲದೆ, ಇತರ ಕೆಲವು ಕಂಪನಿಗಳೂ ಕ್ರೆಡಿಟ್ ಅಂಕವನ್ನು ಪರಿಶೀಲಿಸುತ್ತವೆ.



ಕೆಲವು ಬಗೆಯ ವಿಮಾ ಪಾಲಿಸಿಗಳ ಪ್ರೀಮಿಯಂ ಮೊತ್ತವನ್ನು ತೀರ್ಮಾನಿಸುವ ಸಂದರ್ಭದಲ್ಲಿ ವಿಮಾ ಕಂಪನಿಗಳು ಕೂಡ ಕ್ರೆಡಿಟ್ ಅಂಕವನ್ನು ಪರಿಶೀಲಿಸುತ್ತಿವೆ. ಮನೆ ಅಥವಾ ಕಚೇರಿ ಸ್ಥಳವನ್ನು ಬಾಡಿಗೆ ಆಧಾರದಲ್ಲಿ ಕೊಡುವವರು ಕೂಡ ಕ್ರೆಡಿಟ್ ವರದಿಯನ್ನು ಕೇಳುವುದಿದೆ. ಬಾಡಿಗೆಗೆ ಪಡೆಯುವ ವ್ಯಕ್ತಿಗೆ ಬಾಡಿಗೆ ಮೊತ್ತವನ್ನು ಸಕಾಲದಲ್ಲಿ ಪಾವತಿಸುವ ಸಾಮರ್ಥ್ಯ ಇದೆಯೇ ಎಂಬುದನ್ನು ಅರಿಯಲು ಅವರು ಈ ವರದಿಯನ್ನು ಗಮನಿಸುತ್ತಾರೆ. ಚುಟುಕಾಗಿ ಹೇಳಬೇಕು ಎಂದಾದರೆ ಈ ಅಂಕವು ವ್ಯಕ್ತಿಯ ಸಾಲಗಳು ಹಾಗೂ ಅವುಗಳ ಮರುಪಾವತಿಯ ಒಂದು ಚಿತ್ರಣ ನೀಡುತ್ತವೆ.

ಹೀಗಾಗಿ ಕ್ರೆಡಿಟ್ ಅಂಕಗಳ ಮಹತ್ವ ಹಾಗೂ ಅವುಗಳ ಅಗತ್ಯವನ್ನು ಅರ್ಥ ಮಾಡಿಕೊಳ್ಳುವುದು ಮಹತ್ವದ್ದಾಗುತ್ತದೆ. ಅಲ್ಲದೆ, ಒಳ್ಳೆಯ ಕ್ರೆಡಿಟ್ ಅಂಕ ಅಂದರೆ ಏನೆಂಬುದನ್ನೂ ತಿಳಿಯುವುದು ಮುಖ್ಯವಾಗುತ್ತದೆ.

ಲೇಖಕ: ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್‌ನಲ್ಲಿ ಪ್ರಾಧ್ಯಾಪಕ ಹಾಗೂ ಸಿಎಫ್‌ಎ

ಸಾಲಗಾರರಿಗೆ ಅಂಕ ಯಾರು ನೀಡುತ್ತಾರೆ?

ಭಾರತದಲ್ಲಿ ಪ್ರಮುಖವಾಗಿ ನಾಲ್ಕು ಸಂಸ್ಥೆಗಳು ಈ ಅಂಕವನ್ನು ನೀಡುತ್ತವೆ. ಟ್ರಾನ್ಸ್‌ಯೂನಿಯನ್ ಸಿಬಿಲ್, ಎಕ್ಸ್‌ಪೀರಿಯನ್, ಈಕ್ವಿಫಾಕ್ಸ್ ಮತ್ತು ಸಿಆರ್‌ಐಎಫ್ ಹೈಮಾರ್ಕ್ ಆ ಸಂಸ್ಥೆಗಳು. ಸಿಬಿಲ್ ಸಂಸ್ಥೆಯು ಅದೆಷ್ಟು ಜನಪ್ರಿಯವಾಗಿದೆ ಎಂದರೆ, ಕ್ರೆಡಿಟ್ ಅಂಕಗಳನ್ನು ಈ ಸಂಸ್ಥೆಯ ಹೆಸರಿನ ಜೊತೆಯೇ ಗುರುತಿಸಲಾಗುತ್ತಿದೆ! ಈ ಸಂಸ್ಥೆಗಳು ಬ್ಯಾಂಕುಗಳು, ಎನ್‌ಬಿಎಫ್‌ಸಿಗಳಿಂದ ಸಾಲಕ್ಕೆ ಸಂಬಂಧಿಸಿದ ವಿವರಗಳನ್ನು ಪಡೆದು ವ್ಯಕ್ತಿಗಳಿಗೆ ಅಂಕ ನೀಡುತ್ತವೆ.

ಎಷ್ಟಿದ್ದರೆ ಒಳ್ಳೆಯ ಅಂಕ?

ಇದಕ್ಕೆ ನಿರ್ದಿಷ್ಟವಾದ ಉತ್ತರ ಇಲ್ಲ. ಕ್ರೆಡಿಟ್ ಅಂಕಗಳು ಸಾಮಾನ್ಯವಾಗಿ 300ರಿಂದ 900ರ ನಡುವೆ ಇರುತ್ತವೆ. ಈ ಅಂಕಗಳು ವ್ಯಕ್ತಿಯ ಸಾಲ ಪಡೆಯುವ ಅರ್ಹತೆಯನ್ನು ಹೇಳುತ್ತವೆ.

- 750ಕ್ಕಿಂತ ಹೆಚ್ಚಿನ ಅಂಕ ಇರುವುದು ಅತ್ಯುತ್ತಮ ಎಂದು ಪರಿಗಣಿತವಾಗಿದೆ. ಈ ಮಟ್ಟದ ಅಂಕ ಹೊಂದಿರುವವರ ಮರುಪಾವತಿ ಇತಿಹಾಸ ಅತ್ಯುತ್ತಮವಾಗಿರುತ್ತದೆ, ಇವರಿಗೆ ಸಾಲ ನೀಡುವಲ್ಲಿ ಹೆಚ್ಚಿನ ಅಪಾಯ ಇರುವುದಿಲ್ಲ. ಈ ಮಟ್ಟದ ಅಂಕ ಹೊಂದಿರುವವರು ಸಾಲದ ಮೇಲಿನ ಬಡ್ಡಿ ದರದಲ್ಲಿ ವಿನಾಯಿತಿ ಕೇಳಬಹುದು, ಹೆಚ್ಚಿನ ಮೊತ್ತದ ಸಾಲ ಕೋರಬಹುದು.
- ಕ್ರೆಡಿಟ್ ಅಂಕವು 700ರಿಂದ 749ರ ನಡುವೆ ಇದ್ದರೆ ಅದನ್ನು ಒಳ್ಳೆಯ ಅಂಕ ಎಂದು ಪರಿಗಣಿಸಲಾಗುತ್ತದೆ. ಈ ಮಟ್ಟದ ಅಂಕ ಇರುವವರಿಗೆ ಅನುಕೂಲಕರ ಷರತ್ತುಗಳೊಂದಿಗೆ ಸಾಲ ಸಿಗುತ್ತದೆ.
- 650ರಿಂದ 699ರ ನಡುವೆ ಕ್ರೆಡಿಟ್ ಅಂಕ ಇದ್ದರೆ ಅದನ್ನು ಸಾಮಾನ್ಯ ಮಟ್ಟ ಎಂದು ಪರಿಗಣಿಸಲಾಗುತ್ತದೆ. ಈ ಮಟ್ಟದ ಅಂಕ ಹೊಂದಿರುವವರು ಸಾಲ ಪಡೆಯಲು ಅರ್ಹರಾಗಿರುತ್ತಾರಾದರೂ, ಅವರಿಗೆ ಹೆಚ್ಚಿನ ಅನುಕೂಲಗಳು ಸಿಗುವುದಿಲ್ಲ. ಬಡ್ಡಿಯ ದರವೂ ಹೆಚ್ಚಿರಬಹುದು. ಇವರು ತಮ್ಮ ಕ್ರೆಡಿಟ್ ಅಂಕವನ್ನು ಸುಧಾರಿಸಿಕೊಳ್ಳುವ ಅಗತ್ಯ ಇರುತ್ತದೆ.
- 550ರಿಂದ 649ರವರೆಗಿನ ಮಟ್ಟದಲ್ಲಿ ಅಂಕ ಇದ್ದರೆ ಅದನ್ನು ಕಳಪೆ ಎಂದು ಪರಿಗಣಿಸಲಾಗುತ್ತದೆ. ಇಷ್ಟು ಅಂಕ ಹೊಂದಿರುವವರು ಸಾಲ ಕೋರಿ ಸಲ್ಲಿಸುವ ಅರ್ಜಿಗೆ ಅನುಮೋದನೆ ಸಿಗುವುದು ಕಷ್ಟ. ಒಂದುವೇಳೆ ಅನುಮೋದನೆ ದೊರೆತರೂ ಹೆಚ್ಚಿನ ಬಡ್ಡಿ ದರ ನಿಗದಿ ಮಾಡಬಹುದು. ಈ ಮಟ್ಟದ ಅಂಕ ಹೊಂದಿರುವವರು ಅದನ್ನು ಉತ್ತಮಪಡಿಸಿಕೊಳ್ಳಲು ಗಮನ ಕೊಡಬೇಕು.
- 550ಕ್ಕಿಂತ ಕಡಿಮೆ ಅಂಕ ಹೊಂದಿರುವವರ ಸಾಲದ ಅರ್ಜಿಯು ತಿರಸ್ಕೃತವಾಗುವ ಸಾಧ್ಯತೆ ಹೆಚ್ಚು. ಇಷ್ಟು ಅಂಕ ಹೊಂದಿರುವವರ ಸಾಲ ಮರುಪಾವತಿ ಇತಿಹಾಸ ಚೆನ್ನಾಗಿಲ್ಲ ಎಂದು ಅರ್ಥ. 300ಕ್ಕಿಂತ ಕಡಿಮೆ ಅಂಕ ಹೊಂದಿದ್ದರೆ ಅವರು ಸಾಲದ ಕಂತುಗಳನ್ನು ಸರಿಯಾಗಿ ಕಟ್ಟಿಲ್ಲ, ಸಾಲವನ್ನು ವಿಪರೀತವಾಗಿ ಬಳಸಿಕೊಂಡಿದ್ದಾರೆ ಎಂದು ಅರ್ಥ.

ಅಂಕವನ್ನು ಹೇಗೆ ಸುಧಾರಿಸಿಕೊಳ್ಳಬಹುದು?

ಕ್ರೆಡಿಟ್ ಅಂಕ ನೀಡುವ ಸಂಸ್ಥೆಗಳು ಸಾಲದಾತ ಕಂಪನಿಗಳು ತಮಗೆ ಕಳುಹಿಸುವ ಮಾಹಿತಿಯನ್ನು ಮಾತ್ರವೇ ನೆಚ್ಚಿಕೊಂಡಿರುತ್ತವೆ. ಈ ಸಂಸ್ಥೆಗಳಿಗೆ ವ್ಯಕ್ತಿಗಳ ಸಾಲದ ಮರುಪಾವತಿ ಇತಿಹಾಸವನ್ನು ಅರಿಯಲು ಬೇರೆ ಯಾವುದೇ ಮಾರ್ಗ ಇರುವುದಿಲ್ಲ. ಸಾಲದಾತ ಕಂಪನಿಗಳ ಕಡೆಯಿಂದ ಆಗುವ ಯಾವುದೇ ಲೋಪವು ಕ್ರೆಡಿಟ್ ಅಂಕದ ಮೇಲೆ ಪರಿಣಾಮ ಬೀರಬಹುದು.

ಸಾಲ ಪಡೆದ ವ್ಯಕ್ತಿಯು ಎಲ್ಲ ಕಂತುಗಳನ್ನು ಸರಿಯಾಗಿ ಪಾವತಿ ಮಾಡಿದ್ದರೂ, ಸಾಲದಾತ ಕಂಪನಿಯ ಕಡೆಯಿಂದ ತಪ್ಪು ವರದಿ ಸಲ್ಲಿಕೆಯಾದರೆ ಅಂಕಗಳು ಕಡಿಮೆ ಆಗುತ್ತವೆ. ನಾಲ್ಕೂ ಸಂಸ್ಥೆಗಳಿಂದ ಪ್ರತಿ ವರ್ಷ ತಲಾ ಒಂದು ವರದಿಯು ಉಚಿತವಾಗಿ ಸಿಗುವ ಕಾರಣ, ಸಾಲ ಪಡೆದವರು ಕಾಲಕಾಲಕ್ಕೆ ವರದಿಯನ್ನು ಪರಿಶೀಲಿಸುತ್ತ ಇರಬೇಕು. ವರದಿಯಲ್ಲಿ ಯಾವುದೇ ಲೋಪಗಳು ಇಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

ಹಲವು ಸಾಲದಾತ ಕಂಪನಿಗಳಲ್ಲಿ ಸಾಲಕ್ಕಾಗಿ ಮತ್ತೆ ಮತ್ತೆ ವಿಚಾರಣೆ ನಡೆಸಿದ್ದರೆ ಅದು ಕೂಡ ಅಂಕದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಎಂಬುದು ನೆನಪಿರಲಿ. ವರದಿಯಲ್ಲಿ ಲೋಪಗಳು ಇದ್ದರೆ ವರದಿ ಸಿದ್ಧಪಡಿಸಿದ ಸಂಸ್ಥೆಗೆ ಹಾಗೂ ಸಂಬಂಧಪಟ್ಟ ಸಾಲದಾತ ಕಂಪನಿಗೆ ಆ ಬಗ್ಗೆ ಒಂದು ಇ–ಮೇಲ್ ಕಳುಹಿಸಿಯೂ ಸಮಸ್ಯೆ ಪರಿಹರಿಸಿಕೊಳ್ಳಬಹುದು. ಬ್ಯಾಂಕ್‌ಗಳು ನೀಡುವ ಎನ್‌ಒಸಿ, ಸಾಲ ತೀರುವಳಿ ಆಗಿರುವ ಪತ್ರ ಹಾಗೂ ಬ್ಯಾಂಕ್ ವಹಿವಾಟಿನ ದಾಖಲೆಗಳನ್ನು ಸರಿಯಾಗಿ ಇಟ್ಟುಕೊಂಡರೆ ತಕರಾರುಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಿಕೊಳ್ಳಬಹುದು.

ನೀವು ಯಾರದಾದರೂ ಸಾಲಕ್ಕೆ ಜಾಮೀನುದಾರ ಆಗಿ ಸಹಿ ಮಾಡಿದ್ದರೆ, ಅವರಿಂದ ಸಾಲ ಮರುಪಾವತಿ ಬಾಕಿ ಆಗಿಲ್ಲ ಎಂಬುದನ್ನು ಕೂಡ ಖಚಿತಪಡಿಸಿಕೊಳ್ಳಿ. ಅವರು ಸಾಲವನ್ನು ಸರಿಯಾಗಿ ಹಿಂದಿರುಗಿಸದೆ ಇದ್ದರೆ ನಿಮ್ಮ ಕ್ರೆಡಿಟ್ ಅಂಕದ ಮೇಲೆ ಪರಿಣಾಮ ಉಂಟಾಗುತ್ತದೆ.

ಡಿಮ್ಯಾಟ್ ರೂಪದಲ್ಲಿ ಮ್ಯೂಚುವಲ್ ಫಂಡ್

ಮಾಹಿತಿ ಕಣಜ



ಮ್ಯೂಚುವಲ್ ಫಂಡ್‌ಗಳಲ್ಲಿ ಹಣ ತೊಡಗಿಸುವುದಕ್ಕೆ ಡಿಮ್ಯಾಟ್ ಖಾತೆಯನ್ನು ಹೊಂದಿರುವ ಅಗತ್ಯ ಇಲ್ಲ. ಸಾಂಪ್ರದಾಯಿಕ ಬಗೆಯಲ್ಲಿ, ಬ್ಯಾಂಕ್ ಖಾತೆಯಿಂದ ಹಣ ಕಡಿತ ಮಾಡಿಸಿ, ಆಸ್ತಿ ನಿರ್ವಹಣಾ ಕಂಪನಿಯ (ಎಎಂಸಿ) ಮೂಲಕ ಅದು ನಿರ್ವಹಿಸುವ ಮ್ಯೂಚುವಲ್ ಫಂಡ್‌ನಲ್ಲಿ ಹಣ ತೊಡಗಿಸಲು ಯಾವ ಅಡ್ಡಿಯೂ ಇಲ್ಲ. ಆದರೆ ಮ್ಯೂಚುವಲ್ ಫಂಡ್ ಯೂನಿಟ್‌ಗಳನ್ನು ಡಿಮ್ಯಾಟ್ ರೂಪದಲ್ಲಿಯೂ ಇರಿಸಿಕೊಳ್ಳಬಹುದು.

ಈ ರೀತಿ ಇರಿಸಿಕೊಳ್ಳುವಲ್ಲಿ ಒಂದಿಷ್ಟು ಅನುಕೂಲಗಳು ಕೂಡ ಇವೆ ಎಂದು ವಿವಿಧ ಆಸ್ತಿ ನಿರ್ವಹಣಾ ಕಂಪನಿಗಳು ಹೇಳುತ್ತವೆ. ಬ್ರೋಕರೇಜ್ ಕಂಪನಿಗಳು ಡಿಮ್ಯಾಟ್ ಖಾತೆ ತೆರೆಯುವ ಸೇವೆಯನ್ನು ಆನ್‌ಲೈನ್ ಮೂಲಕ ಒದಗಿಸುತ್ತಿರುವ ಈ ಕಾಲಘಟ್ಟದಲ್ಲಿ ಮ್ಯೂಚುವಲ್ ಫಂಡ್‌ಗಳಲ್ಲಿಯೂ ನೇರವಾಗಿ ಷೇರುಗಳಲ್ಲಿಯೂ ಹೂಡಿಕೆ ಮಾಡುವವರು ದೊಡ್ಡ ಸಂಖ್ಯೆಯಲ್ಲಿ ಇದ್ದಾರೆ. ಇಂಥವರಿಗೆ ತಮ್ಮ ಎಂ.ಎಫ್ ಹಾಗೂ ಷೇರು ಹೂಡಿಕೆಗಳ ವಿವರವು ಒಂದೇ ಕಡೆ ಸಿಗುವುದಿಲ್ಲ. ಅವರು ಎಂ.ಎಫ್ ಯೂನಿಟ್‌ಗಳನ್ನು ಡಿಮ್ಯಾಟ್ ರೂಪದಲ್ಲಿ ಹೊಂದಿದ್ದರೆ, ಅಷ್ಟೂ ಹೂಡಿಕೆಗಳ ವಿವರವು ಒಂದೇ ಕಡೆ ಲಭ್ಯವಾಗುತ್ತದೆ.

ಇಷ್ಟೇ ಅಲ್ಲ, ಮ್ಯೂಚುವಲ್ ಫಂಡ್‌ಗಳನ್ನು ಡಿಮ್ಯಾಟ್ ರೂಪದಲ್ಲಿ ಇರಿಸಿಕೊಂಡಾಗ ಅವುಗಳನ್ನು ನಾಮನಿರ್ದೇಶನ ಮಾಡಿರುವ ವ್ಯಕ್ತಿಗೆ ವರ್ಗಾವಣೆ ಮಾಡುವುದು ಸುಲಭ ಎಂದು ಹೂಡಿಕೆ ಸೇವೆಗಳನ್ನು ಒದಗಿಸುವ ಕಂಪನಿಗಳು ಹೇಳುತ್ತವೆ. ಸಾಂಪ್ರದಾಯಿಕ ಬಗೆಯಲ್ಲಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದವರು ಅದನ್ನು ಡಿಮ್ಯಾಟ್ ರೂಪಕ್ಕೆ ಪರಿವರ್ತಿಸಲು ಅವಕಾಶ ಇದೆ.



ಪ್ರಾತಿನಿಧಿಕ ಚಿತ್ರ

ಬ್ರೋಕರೇಜ್ ಮಾತು

ವಾ ಟೆಕ್ ವಾಬಗ್

ನೀರಿನ ಶುದ್ಧೀಕರಣ ಉದ್ಯಮದಲ್ಲಿ ತೊಡಗಿಸಿಕೊಂಡಿರುವ 'ವಾ ಟೆಕ್ ವಾಬಗ್' ಕಂಪನಿಯ ಷೇರು ಮೌಲ್ಯವು ₹1,900ಕ್ಕೆ ತಲುಪಬಹುದು ಎಂದು ಬ್ರೋಕರೇಜ್ ಕಂಪನಿ ಮೋತಿಲಾಲ್ ಓಸ್ವಾಲ್ ಹೇಳಿದೆ. ಈ ಕಂಪನಿಯು ನೀರಿನ ಶುದ್ಧೀಕರಣ ಉದ್ಯಮದಲ್ಲಿ ಜಾಗತಿಕ ಮಟ್ಟದಲ್ಲಿ ಹೆಸರು ಪಡೆದಿದೆ, ಈ ಉದ್ಯಮದಲ್ಲಿ ಗಟ್ಟಿಯಾದ ನೆಲೆಯನ್ನು ಹೊಂದಿದೆ, ನೀರಿನ ಮಾಲಿನ್ಯ ಹಾಗೂ ಶುದ್ಧ ನೀರಿನ ಅಲಭ್ಯತೆಯ ಕಾರಣದಿಂದಾಗಿ ಶುದ್ಧೀಕರಣ ಕಂಪನಿಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ ಎಂದು ಮೋತಿಲಾಲ್ ಓಸ್ವಾಲ್ ಹೇಳಿದೆ.

ಈ ಕಂಪನಿಯು 125ಕ್ಕೂ ಹೆಚ್ಚು ಬೌದ್ಧಿಕ ಆಸ್ತಿ ಹಕ್ಕುಗಳನ್ನು ಹೊಂದಿದೆ. ಹೆಚ್ಚಿನ ಲಾಭ ತಂದುಕೊಡುವ ವಹಿವಾಟುಗಳಲ್ಲಿ ತೊಡಗಿಸಿಕೊಂಡಿದೆ. ಕಂಪನಿಯು 2027–28ನೇ ಹಣಕಾಸು ವರ್ಷದವರೆಗೆ ಶೇ 20ರಷ್ಟು ಸಂಯುಕ್ತ ವಾರ್ಷಿಕ ಬೆಳವಣಿಗೆ ದರವನ್ನು (ಸಿಎಜಿಆರ್) ಸಾಧಿಸುವ ಲಕ್ಷಣಗಳು ಕಾಣುತ್ತಿವೆ. ಕಂಪನಿಯು ಕಾರ್ಯತಂತ್ರದ ಭಾಗವಾಗಿ ರೂಪಿಸಿರುವ ಕೆಲವು ಯೋಜನೆಗಳು ಬೆಳವಣಿಗೆ ಮತ್ತು ಲಾಭದ ಮುನ್ನೋಟವನ್ನು ಹೆಚ್ಚಿಸಿವೆ ಎಂದು ಕೂಡ ಮೋತಿಲಾಲ್ ಓಸ್ವಾಲ್ ಹೇಳಿದೆ. ಬುಧವಾರದ ವಹಿವಾಟಿನ ಅಂತ್ಯಕ್ಕೆ ವಾ ಟೆಕ್ ವಾಬಗ್ ಕಂಪನಿಯ ಷೇರುಮೌಲ್ಯವು ₹1,587 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ಮಾಹಿತಿ, ವಿವರಗಳಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ದಿಕ್ಸೂಚಿ ನಿಮಗಿಷ್ಟ ಆಗಿದೆಯೇ?
ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಇಂಗ್ಲಿಷ್

Unit-2 PROSE

There's a Girl by the Tracks!

Task 2: Choose the correct verb out of the two given in brackets:

1. Every leaf -------- fallen from this tree. (Has/ have)
2. Each of the boys ------------- done his home work. (Has / ~~have~~)
3. He, as well as you, ----------- intelligent. (Is/are)
4. Bread and butter ------------- his daily diet. (Were/was)
5. Either you or he ----------- done it. (Has/have)
6. One of the boys----------- punished. (Was/were)
7. Neither the children nor their mothers --------- admitted to hospital. (Were / was).

Answer:

Wrong answer is struck out in bracket.

1. Neither he nor you ----------- wrong. (~~Is~~ /are)
2. His father and uncle --------- their own business. (~~Has~~/ have)
3. The first innings -------- very interesting. (Was/~~were~~)
4. Either Amrutha or her friends --------taken it. (~~Has~~ / have)
5. Every one of the boys --------------- sitting silent in the hall. (Was/~~were~~)
6. Every leaf -------- fallen from this tree. (Has/ ~~have~~)
7. Each of the boys ------------- done his home work. (have / ~~has~~)
8. Heis as well as you ----------- intelligent. (~~Is~~/are)
9. Bread and butter ------------- his daily diet. (~~Were~~/was)
10. Either you or he ----------- done it. (Has/~~have~~)
11. One of the boys---------- punished. (Was/~~were~~)
12. Neither the children nor their mothers --------- admitted to hospital. (Were / ~~was~~).

Task 3: Read the following paragraph. A blank is given after each number. If the underlined word is correct, then write (c) in the blank. If the underlined word is wrong, write the right form of the word in the blank.

Everyone who have (1) eg., has ever been to a graduation ceremony know (2) ....how exciting it can be for the graduates. In our town, nearly the whole population comes (3) .... each year. There are (4) .... one thing that both graduates and guests enjoy (5) .... the awarding of scholarships. This ceremony, along with concluding exercises makes (6) .... attending the graduation worthwhile. Several of the students who receives (7) .... awards plan (8) .... to attend the community college. Many former graduates is (9) .... grateful for opportunities that such an award provides (10) .... to them.

Ans: Right form of the word is written underlined and correct is written as (c).

Everyone who have (1) eg., has ever been to a graduation ceremony know (2) knows how exciting it can be for the graduates. In our town, nearly the whole population comes (3) (c) each year. There are (4) is one thing that both graduates and guests enjoy (5) (c) the awarding of scholarships. This ceremony, along with concluding exercises makes (6) (c) attending the graduation worthwhile. Several of the students who receives (7) received awards plan. (8) planed to attend the community college. Many former graduates (9) (are) grateful for opportunities that such an award provides (10) provided to them.

Make reference

Study the meanings of a word given in a dictionary

compose (verb) composed, composing- transitive verb

1. Consists of
2. Combine together to form
3. Make up
4. Write a piece of music
5. Write a letter or poem
6. Try hard to become calm after feeling very angry, upset or excited
7. To arrange the parts of a painting photograph or scene in a way that achieves a particular result.

Task 1: Some sentences are given below. In each sentence the word 'compose' is used. Identify the meaning given above and write the corresponding number in the boxes.

Nayana sat at the desk, taking several deep breaths to compose herself. ( )

1. Water is composed of hydrogen and oxygen.( )
2. A.R. Rehaman has composed of people and people make legal system. ( )
3. The legal system is composed of people and business sector of our economy. ( )
4. More than 17.6 million firms composed the business sector of our economy. ( )
5. I like the way Ravi composes photographs. ( )

Ans:-1. Nayana sat at the desk, taking several deep breaths to compose herself. (6)

Biology

REPRODUCTION

REPRODUCTIVE HEALTH

Write short notes on:-

1] Infertility in Males.

Ans:- Infertility in Males - Semen of a fertile male is 3 - 4 ml per ejaculation with a sperm count of over 200 million, mostly motile, having proper fructose content and fluidity which is deposited high in the vagina.

Any defect in sperm count, sperm structure, sperm motility or seminal fluid leads to infertility.

(.....Contd)

Low sperm count is called **oligospermia** while near absence of sperms is known as **azospermia**. Low sperm motility is called **asthenozoospermia** while defective sperm morphology is termed as **teratozoospermia**.

The various causes of infertility in males are -

1. Cryptorchidism or failure of testes to descend into scrotum causes azospermia.
2. Absence or blockage of vasa deferentia and vasa efferentia.
3. Loss of ciliary function and sperm motility due to autosomal recessive disorder of kartagener syndrome.
4. Hyperthermia or higher scrotal temperature due to varicocele (varicose veins), hydrocele or filariasis, tight undergarment, thermal undergarment or working in hot environment cause oligospermia or depressed spermatogenesis.
5. Infection like mumps after puberty (orchitis or inflammation of testes), bronchiectasis (chronic dilation of bronchioles), infection of seminal vesicle or prostate result in oligospermia or lower sperm count. Infections of *Chlamydia trachomatis* and T. *mycoplasma* (= *Ureoplasma*) also bring about oligospermia.
6. Alcoholism inhibits spermatogenesis.
7. Klinefelter's syndrome.
8. Gonadotropin deficiency.
9. Cytotoxic drugs, radiations, antidepressant and anticonvulsant drugs depress spermatogenesis.
10. Failure to deposit sperms high in vagina due to developmental and ejaculatory defects.
11. Low fructose content, high prostaglandin, high viscosity and low volume of ejaculate and to male infertility.
12. Absence of sperm protein PCL-zeta required for egg activation on fertilization.

2] Infertility in Females

Ans:- Infertility in Females - A fertile woman is the one who regularly ovulates once every cycle, passes the egg down the reproductive tract which develops conditions for smooth passage of sperms and implantation of fertilized egg.

The various causes of infertility in females are -

1. Anovulation (non-ovulation) and oligoovulation(deficient ovulation) are caused by ovarian cysts deficient functioning of hypothalamo-pituitary complex or secondarily by thyroid and adrenal dysfunction ovarian cysts.
2. Inadequate growth and functioning of corpus luteum resulting in reduced progesterone secretion and deficient secretory changes in endometrium. It is called luteal phase defect. It inhibits implantation. Major reason is decrease in FSH or LH level and elevation of prolactin level.
3. The ovum is not liberated but remains trapped inside the follicle due to hyperprolactinaemia.
4. Fallopian tube may fail to pick up ovum, have impaired motility, loss of cilia and blocked lumen. The defects may be caused by infection or endometriosis.
5. Non-canalisation of uterus.
6. Defective uterine endometrium due to either reduced or excessive secretory activity.
7. Congential malformation of uterus.
8. Fibroid uterus.
9. Defects in cervix like congenital elongation, occlusion of cervix by a polyp, cervicitis, scanty or excessive cervical mucus and presence of antisperm antibodies.
10. Defective vaginal growth like atresia and transverse septum.

3] Treatment of male infertility

Ans:- Treatment of male infertility - Male infertility is corrected by avoidance of alcohol, avoidance of tight and warm undergarments, cold scrotal bath twice a day for five minutes each, use of vitamin E, C, B_{12} and folic acid improve oligospermia. Use of clomiphene citrate (25 - 50 mg daily for 25 days a month for three months) improves synthesis of gonadotropins. HCG (5000 IU) is given intramuscularly once or twice a week to stimulate testosterone production in the body. Alternately testosterone is provided orally (100-160 mg daily for 3-4 months). Presence of antisperm antibodies in the semen is corrected by dexamethasone. Gonadotropic releasing hormone therapy is required in infertile males with hypothalamic dysfunction. Obstruction of vasa efferentia or vasa deferentia is corrected surgically. Surgery is also required for correcting varicocele and non-descent of testes. Erectile dysfunction is corrected by use of sildenafil.

4] Treatment of female infertility

Ans:- Treatment of female infertility - In females ovulation is induced by clomiphene citrate, HMG, FSH, HCG and GnRH depending upon the condition of anovulation and oligoovulation. Ovarian cycts are corrected through laser vaporization, ovarian diathermy and surgery. Tubal and uterine defects are corrected by surgery (tuboplasty), endoscopy, cannulation(insertion of tube to remove obstruction) and hydrotubulation (flushing with fluid having antibiotic and hydrocortisone), Dextamethasone is used to correct antisperm antibodies in cervical mucus while antibiotics are given for treating infections. *(Contd......)*

ಮರ ಬಿದ್ದು ದಂಪತಿ ಸಾವು

ವಿವಿಧೆಡೆ ವರುಣಾರ್ಭಟ; ಕೊಚ್ಚಿಹೋದ ತಾತ್ಕಾಲಿಕ ಸೇತುವೆ

ಪ್ರಜಾವಾಣಿ ವಾರ್ತೆ

ರಾಯಚೂರು: ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಮುದಗಲ್‌ನಲ್ಲಿ ಗಾಳಿ–ಮಳೆಯಿಂದಾಗಿ ಮರ ಬಿದ್ದು ದಂಪತಿ ಮೃತಪಟ್ಟಿದ್ದಾರೆ. ಪುತ್ರಿ, ಮೂರು ವರ್ಷದ ಸೌಜನ್ಯಾಗೆ ಪೆಟ್ಟಾಗಿದೆ.

ಮುದಗಲ್‌ನಿಂದ ನಾಗಲಾಪುರಕ್ಕೆ ಬೈಕ್ ಮೇಲೆ ಹೊರಟಿದ್ದಾಗ ಹಳೆಯ ಆಲದ ಮರ ಬಿದ್ದು ನಾಗಲಾಪುರದ ರಮೇಶ ಗುಡದಪ್ಪ (25), ಪತ್ನಿ ಅನುಸೂಯಾ (22) ಸ್ಥಳದಲ್ಲೇ ಮೃತಪಟ್ಟರು.

ಮಂಗಳವಾರ ಸುರಿದ ಮಳೆಗೆ ರಾಯಚೂರು ತಾಲ್ಲೂಕಿನ ವಡ್ಲೂರು ಗ್ರಾಮದಲ್ಲಿ ಹಳ್ಳದ ತಾತ್ಕಾಲಿಕ ಸೇತುವೆ ಮಳೆಯಿಂದಾಗಿ ಕೊಚ್ಚಿ ಹೋಗಿದೆ. ಐದು ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ.

ರಾಯಚೂರು ಗ್ರಾಮಾಂತರ, ಮಾನ್ವಿ, ಮಸ್ಕಿ ಹಾಗೂ ಲಿಂಗಸುಗೂರಲ್ಲಿ ಸಾಧಾರಣ ಮಳೆಯಾಗಿದೆ.

ಪರೀಕ್ಷೆಗಾಗಿ ನದಿ ದಾಟಿದರು: ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಪದವಿ ಅಂತಿಮ ಸೆಮಿಸ್ಟರ್ ಪರೀಕ್ಷೆ ಬರೆಯಲು ವಿದ್ಯಾರ್ಥಿನಿ ತಂದೆಯ ಕೈಹಿಡಿದು ಉಕ್ಕಿ ಹರಿಯುತ್ತಿದ್ದ ಕಾಗಿಣಾ ನದಿ ಸೇತುವೆ ದಾಟಿದರು.

ಸೇಡಂ ತಾಲ್ಲೂಕಿನ ಸಂಗಾವಿ (ಟಿ) ಗ್ರಾಮದ ರಾಣಿ ಹಾಗೂ ಆಕೆಯ ತಂದೆ ಭೀಮಪ್ಪ ನದಿ ದಾಟಿದವರು. ಪರೀಕ್ಷೆ ಮುಗಿದ ಬಳಿಕವೂ ನದಿ ದಾಟಿ ಮರಳಿದರು.

ಮಳೆಯಿಂದಾಗಿ ಚಿಂಚೋಳಿ ತಾಲ್ಲೂಕಿನಲ್ಲಿ ಮನೆಗಳಿಗೆ ಹಾನಿಯಾಗಿದೆ. ಕಾಳಗಿ ತಾಲ್ಲೂಕಿನ ಭೂತ್ಪೂರ–ರುದ್ದೂರ ನಡುವಿನ ರಾಜ್ಯಹೆದ್ದಾರಿ ಕಿತ್ತುಹೋಗಿದೆ.

ಬೀದರ್ ಜಿಲ್ಲೆಯ ಹುಲಸೂರ, ಬಸವಕಲ್ಯಾಣ, ಔರಾದ್‌ನಲ್ಲೂ ಮಳೆಯಾಗಿದೆ.



ಮುದಗಲ್ ಪಟ್ಟಣದ ಮದರ್ ತೆರೇಸಾ ಶಾಲೆ ಮುಂಭಾಗ ಬೃಹತ್ ಆಲದ ಮರ ಧರೆಗೆ ಉರುಳಿ ದಂಪತಿ ಮೃತಪಟ್ಟಿದ್ದಾರೆ



ಸೇಡಂ ತಾಲ್ಲೂಕಿನಲ್ಲಿ ಬುಧವಾರ ಉಕ್ಕಿ ಹರಿಯುತ್ತಿದ್ದ ಕಾಗಿಣಾ ನದಿ ಸೇತುವೆಯನ್ನು ತಂದೆ–ಮಗಳು ದಾಟಿದರು



ಅನುಸೂಯಾ



ರಮೇಶ

ಮಡಿಕೇರಿ ನಗರ ಹಾಗೂ ಕೊಡಗು ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಗಿದೆ. ಭಾಗಮಂಡಲ, ಸಂಪಾಜೆ, ಮಡಿಕೇರಿ ಹಾಗೂ ಶಾಂತಳ್ಳಿಯಲ್ಲಿ ತಲಾ 3 ಸೆಂ.ಮೀನಷ್ಟು ಮಳೆ ಸುರಿಯಿತು.

ಮಳೆ; ಘಾಟ್‌ಗಳಲ್ಲಿ ದಟ್ಟ ಮಂಜು

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಲ್ಲಿ ಬುಧವಾರ ಧಾರಾಕಾರ ಮಳೆ ಆಗಿದೆ. ಕುಂದಾಪುರ, ಬೈಂದೂರು, ಬ್ರಹ್ಮಾವರ, ಹೆಬ್ರಿ, ಕಾರ್ಕಳ, ಕಾಪು ತಾಲ್ಲೂಕು ವ್ಯಾಪ್ತಿಯ ತಗ್ಗು ಪ್ರದೇಶಗಳು ಜಲಾವೃತವಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ, ಕೊಪ್ಪ, ಮೂಡಿಗೆರೆ, ಕಳಸದಲ್ಲಿ ಸಾಧಾರಣ, ತರೀಕೆರೆಯಲ್ಲಿ ಉತ್ತಮ ಮಳೆಬಿದ್ದಿತು.

ಮುಳ್ಳಯ್ಯನಗಿರಿ, ಕುದುರೆಮುಖ, ಚಾರ್ಮಾಡಿ ಘಾಟಿಗಳಲ್ಲಿ ಧಾರಾಕಾರ ಮಳೆಸುರಿಯಿತು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.74	13,941	10,758
ಹಾರಂಗಿ	2,859	2,856.46	3,308	4,850
ಕಬಿನಿ	2,284.00	2,283.63	12,122	12,000
ಹೇಮಾವತಿ	2,922	2,921.03	6,862	6,799
ಲಿಂಗನಮಕ್ಕಿ	1,819	1,804.45	18,993	5,007
ಸೂಪಾ (ಮೀ)	564	547.45	8,825.58	4,833.43
ವಾಣಿ	595	588.02	3,221	791
ತುಂಗಭದ್ರಾ	1,633	1,625.64	29,546	38,557
ಮಲಪ್ರಭಾ	2,079.5	2,073.15	3,577	1,494
ಘಟಪ್ರಭಾ	2,175	2,168.93	5,125	5,731
ಭದ್ರಾ *	186	179.6	9,398	7,118
ಆಲಮಟ್ಟಿ (ಮೀ)	519.6	518.07	44,054	25,640
ನಾರಾಯಣಪುರ (ಮೀ)	492.25	491.92	25,000	19,855

* ನೆಲಮಟ್ಟದಿಂದ

₹1,654 ಕೋಟಿ ಅಕ್ರಮ ಮಿಂತ್ರಾ ವಿರುದ್ಧ ಪ್ರಕರಣ

ಒಂದನೇ ಪುಟದಿಂದ...

'ಎಫ್‌ಡಿಐ ಪಡೆಯುವ ಕಂಪನಿಯು, ತನ್ನದೇ ಸಮೂಹದ ಮತ್ತೊಂದು ಕಂಪನಿಗೆ ತನ್ನ ಸರಕುಗಳನ್ನು ಪೂರ್ಣ ಪ್ರಮಾಣದಲ್ಲಿ ಮಾರಾಟ ಮಾಡುವಂತಿಲ್ಲ. ಒಂದೇ ಸಮೂಹದ ಎರಡು ಕಂಪನಿಗಳ ಮಧ್ಯೆ ಸರಕುಗಳ ಮಾರಾಟಕ್ಕೆ ಶೇ 25ರಷ್ಟು ಮಿತಿ ಇದೆ. ಮಿಂತ್ರಾ ಕಂಪನಿಯು ವೆಕ್ಟರ್ ತನ್ನದೇ ಸಮೂಹದ ಕಂಪನಿ ಎಂಬುದನ್ನು ಮುಚ್ಚಿಟ್ಟು, ಸರಕುಗಳನ್ನು ಮಾರಾಟ ಮಾಡಿದೆ. ಈ ಮೂಲಕ ಎಫ್‌ಡಿಐನ ಇನ್ನೊಂದು ನಿಯಮ ಉಲ್ಲಂಘಿಸಿದೆ' ಎಂದು ಮಾಹಿತಿ ನೀಡಿದೆ.

'ಎರಡೂ ನಿಯಮಗಳ ಉಲ್ಲಂಘನೆ ಆರೋಪದಲ್ಲಿ ಮಿಂತ್ರಾ ಡಿಸೈನ್ಸ್, ವೆಕ್ಟರ್ ಇ–ಕಾಮರ್ಸ್ ಕಂಪನಿಗಳು ಮತ್ತು ಅವುಗಳ ನಿರ್ದೇಶಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದಿದೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಮಿಂತ್ರಾ ಡಿಸೈನ್ಸ್, 'ಪ್ರಕರಣದ ವಿವರ ನಮಗಿನ್ನೂ ದೊರೆತಿಲ್ಲ. ತನಿಖೆಗೆ ಸಹಕರಿಸುತ್ತೇವೆ' ಎಂದಿದೆ. ಬೆಂಗಳೂರಿನಲ್ಲಿ ಕೇಂದ್ರ ಕಚೇರಿ ಹೊಂದಿರುವ ಮಿಂತ್ರಾ ಡಿಸೈನ್ ಈಗ ಫ್ಲಿಪ್‌ಕಾರ್ಟ್‌ನ ಸ್ವಾಧೀನದಲ್ಲಿದೆ. ಅಮೆರಿಕದ ವಾಲ್‌ಮಾರ್ಟ್ ಸಮೂಹವು ಫ್ಲಿಪ್‌ಕಾರ್ಟ್‌ನ ಮಾತೃಸಂಸ್ಥೆಯಾಗಿದೆ.

ಒನ್ ಸಿಗ್ಮಾ ವಿರುದ್ಧ ಪ್ರಕರಣ

ಕೇಂದ್ರ ಸರ್ಕಾರದ ಅನುಮತಿ ಪಡೆಯದೆಯೇ ಇ–ಕಾಮರ್ಸ್ ವೇದಿಕೆಗಳಲ್ಲಿ ಗ್ರಾಹಕರಿಗೆ ಸಾಲ ಸೌಲಭ್ಯ ಒದಗಿಸಿದ ಆರೋಪದಲ್ಲಿ ಒನ್ ಸಿಗ್ಮಾ ಟೆಕ್ನಾಲಜೀಸ್ ಲಿಮಿಟೆಡ್ (ಎಸ್‌ಐಎಂಪಿಎಲ್) ಮತ್ತು ಅದರ ನಿರ್ದೇಶಕ ನಿತ್ಯಾನಂದ ಶರ್ಮಾ ವಿರುದ್ಧ ಇ.ಡಿ ಪ್ರಕರಣ ದಾಖಲಿಸಿದೆ. ಕಂಪನಿಯು ನಿಯಮ ಉಲ್ಲಂಘಿಸಿ, ₹913 ಕೋಟಿಯಷ್ಟು ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಪಡೆದಿದೆ.

'ಮಾಹಿತಿ ತಂತ್ರಜ್ಞಾನ ಮತ್ತು ಕಂಪ್ಯೂಟರ್ ಸೇವಾ' ವರ್ಗದಲ್ಲಿ ಕಂಪನಿಯು ನೋಂದಣಿಯಾಗಿದೆ. ಈ ವರ್ಗದ ಕಂಪನಿಗಳು ಕೇಂದ್ರ ಸರ್ಕಾರದ ಪೂರ್ವಾನುಮತಿ ಇಲ್ಲದೆಯೇ ಎಫ್‌ಡಿಐ ಪಡೆಯಬಹುದಾಗಿದೆ.

ಎಸ್‌ಐಎಂಪಿಎಲ್ ಕಂಪನಿಯು ಯಾವುದೇ ರೀತಿಯಲ್ಲೂ ಮಾಹಿತಿ ತಂತ್ರಜ್ಞಾನ ಮತ್ತು ಕಂಪ್ಯೂಟರ್ ಸೇವೆಗಳನ್ನು ಒದಗಿಸಿಲ್ಲ. ಎಸ್‌ಐಎಂಪಿಎಲ್ ಎಂಬ ಮೊಬೈಲ್ ಆ್ಯಪ್ಲಿಕೇಷನ್ ಅನ್ನು ರೂಪಿಸಿದ್ದು, ಅದರ ಮೂಲಕ ಇ–ಕಾಮರ್ಸ್ ಪ್ಲಾಟ್‌ಫಾರ್ಮ್‌ಗಳ ಗ್ರಾಹಕರಿಗೆ ಸಾಲ ಸೌಲಭ್ಯ ನೀಡುತ್ತಿದೆ. ಈ ಸ್ವರೂಪದ ವಹಿವಾಟಿಗೆ ಎಫ್‌ಡಿಐ ಪಡೆಯುವುದಕ್ಕೂ ಮುನ್ನ ಕೇಂದ್ರ ಸರ್ಕಾರದ ಅನುಮತಿ ಪಡೆದುಕೊಳ್ಳಬೇಕು. ಕಂಪನಿಯು ಈ ನಿಯಮ ಉಲ್ಲಂಘಿಸಿದೆ ಎಂದು ಇ.ಡಿ ತಿಳಿಸಿದೆ.

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಧರ್ಮಸ್ಥಳ: ಅರ್ಜಿ ವಿಚಾರಣೆಗೆ ನಕಾರ

ನವದೆಹಲಿ: ಧರ್ಮಸ್ಥಳದ ಅಸಹಜ ಸಾವು ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾಧ್ಯಮ ವರದಿಗಳನ್ನು ನಿರ್ಬಂಧಿಸಿದ ಬೆಂಗಳೂರು ಸೆಷನ್ಸ್ ನ್ಯಾಯಾಲಯದ ಆದೇಶದ ವಿರುದ್ಧ 'ಥರ್ಡ್ ಐ' ಯುಟ್ಯೂಬ್ ಚಾನೆಲ್ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಬುಧವಾರ ನಿರಾಕರಿಸಿದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ, ನ್ಯಾಯಮೂರ್ತಿಗಳಾದ ಕೆ.ವಿನೋದ್ ಚಂದ್ರನ್ ಹಾಗೂ ಜೊಯ್‌ಮಲ್ಯ ಬಾಗ್ಚಿ ಅವರಿದ್ದ ಪೀಠವು 'ಹೈಕೋರ್ಟ್‌ನಲ್ಲಿ ಏಕೆ ಅರ್ಜಿ ಸಲ್ಲಿಸಿಲ್ಲ' ಎಂದು ಅರ್ಜಿದಾರರನ್ನು ಪ್ರಶ್ನಿಸಿತು. 'ಮೊದಲು ಹೈಕೋರ್ಟ್‌ಗೆ ಹೋಗಿ' ಎಂದು ಸಿಜೆಐ ಸೂಚಿಸಿದರು.

ಕೂಡಲಸಂಗಮದಲ್ಲೂ ಷಡ್ಯಂತ್ರ: ಯತ್ನಾಳ

ಕೊಪ್ಪಳ: 'ಪವಿತ್ರ ಕ್ಷೇತ್ರಗಳನ್ನು ಅಪವಿತ್ರಗೊಳಿಸಲು ಧರ್ಮಸ್ಥಳದ ಹೆಸರಲ್ಲಿ ನಡೆದಂತೆ ಕೂಡಲ ಸಂಗಮದಲ್ಲೂ ಷಡ್ಯಂತ್ರ ನಡೆದಿದೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದರು.

ಬುಧವಾರ ಇಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, 'ಕಮ್ಯುನಿಸ್ಟ್ ಬುದ್ದಿಯ ಕೆಲವರು, ಖಾವಿ ವೇಷದಲ್ಲಿರುವ ಕೆಲ ಕಳ್ಳ ಸ್ವಾಮೀಜಿಗಳು ಇಸ್ಲಾಂ ಹಾಗೂ ಲಿಂಗಾಯತ ಎರಡೂ ಒಂದೇ ಎನ್ನುವ ರೀತಿಯಲ್ಲಿದ್ದಾರೆ. ದೇಶದಲ್ಲಿ ಮೊದಲು ಅಯ್ಯಪ್ಪಸ್ವಾಮಿ ದೇಗುಲ, ಬಳಿಕ ಧರ್ಮಸ್ಥಳ, ಈಗ ಕೂಡಲ ಸಂಗಮವನ್ನು ಅಪವಿತ್ರ ಮಾಡಲು ಮುಂದಾಗಿದ್ದಾರೆ' ಎಂದು ದೂರಿದರು.

'ವೀರಶೈವ ಲಿಂಗಾಯತರು ಒಗ್ಗೂಡಬೇಕು ಎಂದು ದಾವಣಗೆರೆಯಲ್ಲಿ ನಡೆದ ಸಮಾವೇಶದಲ್ಲಿ ಹೇಳಲಾಗಿದೆ. ಆದರೆ, ಅಲ್ಲಿ ಹಾಕಿದ್ದ ನಾಮಫಲಕದ ಮೇಲೆ ವೀರಶೈವ ಲಿಂಗಾಯತರು ಎಂದು ಎಲ್ಲಿಯೂ ಬರೆದಿರಲಿಲ್ಲ. ಯಡಿಯೂರಪ್ಪ, ಶಾಮನೂರು ಶಿವಶಂಕರಪ್ಪ ಮತ್ತು ಈಶ್ವರ ಖಂಡ್ರೆ ತ್ರಿಮೂರ್ತಿಗಳು ಕುಳಿತೇ ಎಲ್ಲವನ್ನೂ ಆದೇಶ ಮಾಡುತ್ತಾರೆ' ಎಂದು ಲೇವಡಿ ಮಾಡಿದರು.

ಡಿ.ಕೆ.ಶಿವಕುಮಾರ್ ಸಿ.ಎಂ ಆಗುತ್ತಾರೆ ಎಂದು ಕೆಲ ಸ್ವಾಮೀಜಿಗಳು ಹೇಳುತ್ತಿದ್ದಾರೆ ಎಂಬ ಪ್ರಶ್ನೆಗೆ, 'ಕೆಲ ಸ್ವಾಮೀಜಿಗಳೇ ಭ್ರಷ್ಟರಿದ್ದಾರೆ. ಶಿವಕುಮಾರ್ ದೊಡ್ಡ ಮೊತ್ತ ನೀಡಿ ಪಾದಪೂಜೆ ಮಾಡಿದರೆ ಸಿ.ಎಂ., ಪ್ರಧಾನಿ ಆಗುತ್ತಾರೆ ಎಂದು ಆಶೀರ್ವದಿಸುತ್ತಾರೆ' ಎಂದು ಬಸನಗೌಡ ಪಾಟೀಲ ಹೇಳಿದರು.

ಕರ್ನಾಟಕ ಸರ್ಕಾರ

ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

2024 ಮತ್ತು 2025ನೇ ವರ್ಷದ ವಿಜ್ಞಾನಿ ಮತ್ತು ಇಂಜಿನಿಯರ್ ರಾಜ್ಯ ಪ್ರಶಸ್ತಿಗಳಿಗೆ ನಾಮಪತ್ರಗಳನ್ನು ಆಹ್ವಾನಿಸಿದೆ.

♦ ಸರ್ ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ ♦ ಡಾ. ರಾಜಾ ರಾಮಣ್ಣ ಪ್ರಶಸ್ತಿ ♦ ಸರ್ ಸಿ.ವಿ. ರಾಮನ್ ಪ್ರಶಸ್ತಿ ♦ ಪ್ರೊ. ಸತೀಶ್ ಧವನ್ ಪ್ರಶಸ್ತಿ ಮತ್ತು ♦ ಡಾ. ಕಲ್ಪನಾ ಚಾವ್ಲಾ ಪ್ರಶಸ್ತಿ

ನಾಮಪತ್ರಗಳನ್ನು ಸಲ್ಲಿಸಬೇಕಾದ ಕೊನೆಯ ದಿನಾಂಕ: 29.08.2025

ಪ್ರಶಸ್ತಿಗಳಿಗೆ ಅರ್ಹತೆ ಮತ್ತು ಇತರೆ ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್ ಅಥವಾ ಈ ಕೆಳಕಂಡ ವಿಳಾಸದಲ್ಲಿ ಪಡೆಯಬಹುದು.

ಕಾರ್ಯದರ್ಶಿ

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ

ಭಾರತೀಯ ವಿಜ್ಞಾನ ಸಂಸ್ಥೆ ಆವರಣ, ಬೆಂಗಳೂರು–560012

ದೂರವಾಣಿ: 080-2334 1652, 2334 8848 / 49 | ಇಮೇಲ್: office.kscst@iisc.ac.in

ವೆಬ್‌ಸೈಟ್: https://www.kscst.org.in OR https://kscst.karnataka.gov.in

KSCST Celebrating Golden Jubilee

DIPR/CP/YC/1968/2025-26

ಕರ್ನಾಟಕ ಸರಕಾರ

ಹಿರಿಯ ಭೂವಿಜ್ಞಾನಿಗಳ ಕಾರ್ಯಾಲಯ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಜಿಲ್ಲಾಡಳಿತ ಭವನ, ಕೊಪ್ಪಳ

ದೂರವಾಣಿ ಸಂಖ್ಯೆ: 08539–221285 ಈ–ಮೇಲ್: sgdmgkoppal@gmail.com

ಕೊಪ್ಪಳ ಜಿಲ್ಲಾ ವ್ಯಾಪ್ತಿಯ 4ನೇ, 5ನೇ ಮತ್ತು 6ನೇ ಶ್ರೇಣಿಯ ಹೊಳೆ/ನದಿ ಪಾತ್ರಗಳಲ್ಲಿ ಗುರುತಿಸಿರುವ ಮರಳು ಬ್ಲಾಕ್‌ಗಳನ್ನು ಇ ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಧಿಸೂಚನೆ

ವಿದ್ಯುನ್ಮಾನ ಸಂಗ್ರಹಣೆ ಮುಖಾಂತರ ಮರಳು ಬ್ಲಾಕ್‌ಗಳ ದರಖಾಸು ಮತ್ತು ಹಂಚಿಕೆ ಅಧಿಸೂಚನೆ ಟಿಸಿಎ ಸಂಖ್ಯೆ : DMG/2025-26/SE0131 ದಿನಾಂಕ: 22.07.2025

ಸರ್ಕಾರದ ಅಧಿಸೂಚನೆ ಸಂ: ಸಿಐ–ಎಂಎಂಎನ್/115/2024, ಬೆಂಗಳೂರು ದಿನಾಂಕ 03.12.2024 ರಲ್ಲಿ ಹೊರಡಿಸಿರುವಂತೆ 2024–25 ನೇ ಸಾಲಿನ ಅಯವ್ಯಯ ಕಂಡಿಕೆ 326 ರಲ್ಲಿ, ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ನಿಗದಿತ ಬೆಲೆಯಲ್ಲಿ ಮರಳು ಲಭ್ಯಪಡಿಸಲು ಹೊಸ ಮರಳು ನೀತಿ, 2020 ಅನ್ನು ಅನುಮೋದಿಸಲಾಗಿರುತ್ತದೆ. ಸರ್ಕಾರದ ಎಲ್ಲಾ ಇಲಾಖೆಗಳ ನಡುವೆ ಸಮನ್ವಯ ಸಾಧಿಸಿ ಈ ನೀತಿಯನ್ನು ಜಾರಿಗೊಳಿಸುವಲ್ಲಿ ಗೊಂದಲಗಳನ್ನು ನಿವಾರಿಸಿ ಸಾರ್ವಜನಿಕರಿಗೆ ಸುಲಭವಾಗಿ ಹಾಗೂ ಯೋಗ್ಯ ದರದಲ್ಲಿ ಮರಳನ್ನು ಒದಗಿಸುವ ಸಂಬಂಧ ಕೊಪ್ಪಳ ಜಿಲ್ಲಾ ವ್ಯಾಪ್ತಿಯ 4ನೇ, 5ನೇ ಮತ್ತು 6ನೇ ಶ್ರೇಣಿಯ ಹೊಳೆ/ನದಿ ಪಾತ್ರಗಳಲ್ಲಿ ಗುರುತಿಸಿರುವ ಮರಳು ಬ್ಲಾಕ್‌ಗಳನ್ನು ಇ ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಮಾಡಿ ವಿಲೇವಾರಿ ಮಾಡುವ ಸಂಬಂಧ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ವಹಿಸಿರುತ್ತದೆ.

ಈ ನಿಟ್ಟಿನಲ್ಲಿ ಕೊಪ್ಪಳ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಕೊಪ್ಪಳ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯ ನಡವಳಿ **ದಿನಾಂಕ : 07.03.2025 & 26.06.2025** ರಲ್ಲಿ ತಿರ್ಮಾನಿಸಿದಂತೆ ಎಲ್ಲಿದೆಯೋ ಹೇಗಿದೆಯೋ ಹಾಗೆಯೇ ಪರಿಕಲ್ಪನೆಯಡಿ ವಿಲೇವಾರಿ ಮಾಡುವ ಸಂಬಂಧ ಸದರಿ ಮರಳು ಬ್ಲಾಕ್‌ಗಳನ್ನು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿಗಳನುಸಾರ ಹಾಗೂ ಸರ್ಕಾರದ ಅಧಿಸೂಚನೆ ಸಂ: ಸಿಐ–ಎಂಎಂಎನ್/115/2024, ಬೆಂಗಳೂರು ದಿನಾಂಕ : 03.12.2024 ರಂತೆ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ವಿಧಿಸಿರುವ ಎಲ್ಲಾ ದಾಖಲೆಗಳು, ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ. ಸದರಿ ಮರಳು ಬ್ಲಾಕ್‌ಗಳನ್ನು ವಿದ್ಯುನ್ಮಾನ ಸಂಗ್ರಹಣಿ (ಇ–ಪ್ರೊಕ್ಯೂರ್‌ಮೆಂಟ್) ಯಡಿಯಲ್ಲಿ ಟೆಂಡರ್ ಮುಖಾಂತರ ವಿಲೇವಾರಿ ಮಾಡುವ ಈ ಅಧಿಸೂಚನೆಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ–2000 ರಂತೆ ಆಹ್ವಾನಿಸಲಾಗಿದೆ. ಅಸಕ್ತ ಸಾರ್ವಜನಿಕರು/ಬಿಡ್‌ದಾರರು ತಮ್ಮ ದರಖಾಸುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಜಾಲತಾಣವಾದ https://kppp.karnataka.gov.in/ ರಲ್ಲಿ ಸಲ್ಲಿಸಬಹುದಾಗಿರುತ್ತದೆ.

Tender Reference No. DMG/2025-26/SE0131 ಆಗಿರುತ್ತದೆ.

ಈ ಮೇಲ್ಕಾಣಿಸಿದ ಮರಳು ಬ್ಲಾಕ್‌ಗಳ ವಿಲೇವಾರಿ ಸಂಬಂಧ ಅರ್ಹತಾಪೂರ್ವ ದರಖಾಸು ಪ್ರಕ್ರಿಯೆಯ ವೇಳಾ ಪಟ್ಟಿ ಈ ಕೆಳಗಿನಂತಿದೆ

ಟೆಂಡರ್ ಡಾಕ್ಯೂಮೆಂಟ್ ಹಾಗೂ ಇತರೆ ವಿವರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ	**24.07.2025**
ಟೆಂಡರ್ ಪ್ರಿ ಬಿಡ್ ಮೀಟಿಂಗ್ ದಿನಾಂಕ ಮತ್ತು ಸ್ಥಳ	**01.08.2025, ಸಮಯ: ಬೆಳಿಗ್ಗೆ 11.00 ಗಂಟೆಗೆ ಹಿರಿಯ ಭೂವಿಜ್ಞಾನಿಯವರ ಕಚೇರಿ ಗಣಿ ಮತ್ತು ಭೂವಿಜ್ಞಾನ ಇಲಾಖೆ, ಜಿಲ್ಲಾಡಳಿತ ಭವನ, ಹೊಸಪೇಟೆ ರಸ್ತೆ, ಕೊಪ್ಪಳ**
ಟೆಂಡರ್ ದಾಖಲೆಗಳನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ	**16.08.2025, ಸಮಯ: ಸಾಯಂಕಾಲ 5:30 ಗಂಟೆಗೆ**
ಟೆಂಡರ್ ದಾಖಲೆಗಳನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ತೆರೆಯುವ ದಿನಾಂಕ	**18.08.2025, ಸಮಯ: ಬೆಳಿಗ್ಗೆ 11.00 ಗಂಟೆಗೆ**

ಸಹಿ/– ಹಿರಿಯ ಭೂವಿಜ್ಞಾನಿಗಳು ಹಾಗೂ ಸದಸ್ಯ ಕಾರ್ಯದರ್ಶಿಗಳು
ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕೊಪ್ಪಳ ಜಿಲ್ಲಾ ಮರಳು ಉಸ್ತುವಾರಿ ಸಮಿತಿ,
ಕೊಪ್ಪಳ ಜಿಲ್ಲೆ

ವಾ.ಸಾ.ಇ/ಕೊಪ್ಪಳ/241/ದೇಶಪಾಂಡೆಪಬ್ಲಿಸಿಟಿ/2025–26

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ

ಕ್ರಮಾಂಕ: ಶಿಮನಪಾಶಿ:ಕಾವಿ:ಟೆಂಡರ್:13/2025–26 ದಿನಾಂಕ : 22.07.2025

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಸರಕು ಪೂರೈಕೆ ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆಕ್ಟ್ 1999 ರ ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಕೆಪಿಪಿ ಪೋರ್ಟಲ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು.

1) ಕ್ರ.ಸಂ.01ರ ಕಾಮಗಾರಿಗೆ ಕೆಪಿಪಿ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 29.07.2025 (ಸಂಜೆ: 4.00 ಗಂಟೆಗೆ). 2) ಕ್ರ.ಸಂ.01 ರ ಕಾಮಗಾರಿಗೆ ಕೆಪಿಪಿ ಪೋರ್ಟಲ್ ಮೂಲಕ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:30.07.2025 (ಸಂಜೆ: 4.30 ಗಂಟೆಗೆ).

1. ಇಂಡೆಂಟ್ ಸಂಖ್ಯೆ : DMA/2025-26/IND5094, ಕಾಮಗಾರಿ ವಿವರ : ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯ ಮಹಾತ್ಮ ಗಾಂಧಿ ಪಾರ್ಕ್ ನಲ್ಲಿ ಬಯಲು ವ್ಯಾಯಾಮ ಮತ್ತು ಮಕ್ಕಳ ಆಟಿಕೆ ಉಪಕರಣಗಳನ್ನು ಅಳವಡಿಸುವುದು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 47.48, ಅನುದಾನ : ಪಾಲಿಕೆ ನಿಧಿ.

ಸೂಚನೆ: ಟೆಂಡರ್‌ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದುಪಡಿಯನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ವಾ.ಸಾ.ಸಂ.ಇ./ಶಿ/ನಂ.151–07/ ಝೇಂಕಾರ್/2025–26

ಸಹಿ/–
ಕಾರ್ಯಪಾಲಕ ಅಭಿಯಂತರರು
ಮಹಾನಗರ ಪಾಲಿಕೆ, ಶಿವಮೊಗ್ಗ


ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು– 570 005.

ಸಂ.: ಮೈಅಪ್ರಾ:ನಯೋಶಾ:ಭೂಉಬ:ನಯೋ–1:2025–26 ದಿನಾಂಕ: 22.07.2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕುರುಬಾರಹಳ್ಳಿ ಗ್ರಾಮದ ಸ.ನಂ.18ರ 11ಎಕರೆ 30ಗುಂಟೆ ವಿಸ್ತೀರ್ಣದ ಜಮೀನುಗಳನ್ನು **ಕೆ.ಟಿ.ಸಿ.ಪಿ. ಕಾಯ್ದೆ 1961ರ ಪ್ರಕರಣ 14(ಎ) ರನ್ವಯ ವಿಶೇಷ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಮೆ॥ ವಿನಾಯಕ ಎಂಟರ್ ಪ್ರೈಸಸ್ ಪರವಾಗಿ ಅಶ್ವಿನ್ ಪೈ** ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ **"ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂಧರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿ ಹೊಂದುತ್ತದೆ"** ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು–570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KEY PLAN



LAND IN QUESTION

ಸಹಿ/–
ನಗರ ಯೋಜಕ ಸದಸ್ಯರು
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.

DIPR/MYS/686/SA/2025-26

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

(ರಾಜ್ಯ ಹಣಕಾಸು ನಿಗಮ ಕಾಯಿದೆ 1951 ರ ಅಡಿಯಲ್ಲಿ ಸ್ಥಾಪಿಸಲಾಗಿದೆ)
ಬೆಂಗಳೂರು ಗ್ರಾಮಾಂತರ ಶಾಖೆ: ನಂ. 1026/29, 1ನೇ ಮತ್ತು 2ನೇ ಮಹಡಿ, ಡಾ. ರಾಜ್‌ಕುಮಾರ್ ರಸ್ತೆ, 4ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560 010. ದೂರವಾಣಿ: 23494628, 23495821,
ಇ–ಮೇಲ್: rur.ksfc@kamataka.gov.in

ಉಲ್ಲೇಖ ಸಂ.: ಕೆ.ಎಸ್.ಎಫ್.ಸಿ/ಬಿಬಿಓ (ಗ್ರಾ) 40/229/2025–26 ದಿನಾಂಕ: 22.07.2025

ಸ್ವಾಧೀನ ಸೂಚನೆ [ಅಪೆಂಡಿಕ್ಸ್–IV (ನಿಯಮ 8 (1)]

ಕೆಳಸಹಿದಾರರು **ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ**, ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯುರಿಟೈಜೇಶನ್ ಅಂಡ್ ರೀಕನ್ಸ್ಟ್ರಕ್ಷನ್ಸ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್ಫೋರ್ಸಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಕಾಯಿದೆ 2002 ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್ಫೋರ್ಸ್‌ಮೆಂಟ್) ನಿಯಮಾವಳಿ 2002, ಕಾಯಿದೆ 12(12) ನಿಯಮ 9ರ ಅಡಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ನೋಟೀಸನ್ನು ಈ ಕೆಳಕಂಡವರಿಗೆ ನೀಡಲಾಗಿತ್ತು: ಡಿಮ್ಯಾಂಡ್ ನೋಟೀಸ್ **ವೈಡ್ ನಂ.** KSFC/BBO/(R)/R-15/2025-26, **ದಿನಾಂಕ: 08.05.2025 ರಂದು** ಪೂರಕ ಭದ್ರತಾ ಆಸ್ತಿ ಮಾಲೀಕರಾದ **ಶ್ರೀ. ವೀರಭದ್ರಯ್ಯ ಮತ್ತು ಸಾಲಗಾರರಾದ ಶ್ರೀ. ಮೋಹನ್ ಕುಮಾರ್ ವಿ., ಮಾಲೀಕರು: ಇಂಡೋಯ್ ಮ್ಯಾನುಫ್ಯಾಕ್ಚರಿಂಗ್** ರವರಿಗೆ ಸಂಸ್ಥೆಗೆ ಬಾಕಿಯಾಗಿರುವ ಸಾಲದ ಮೊತ್ತ **ರೂ.1,05,57,459.00 (ರೂಪಾಯಿ ಒಂದು ಕೋಟಿ ಐದು ಲಕ್ಷದ ಐವತ್ತೇಳು ಸಾವಿರದ ನಾಲ್ಕುನೂರ ಐವತ್ತೊಂಭತ್ತು ಮಾತ್ರ)** ಗಳನ್ನು ಪಾವತಿಸಲು ಕೋರಲಾಗಿತ್ತು. ಆರ್‌ಪಿಎಡಿ ಕಳುಹಿಸಿದ ಮೇಲಿನ ತಗಾದೆ ಸೂಚನೆಯನ್ನು ಸಾಲಗಾರರು **ದಿನಾಂಕ: 10.05.2025 ರಂದು** ಅಂಗೀಕರಿಸಿದ್ದಾರೆ.

ಆಸ್ತಿ ಜಾಮೀನುದಾರರು/ ಸಾಲಗಾರರು ನೋಟೀಸಿನಲ್ಲಿ ಸೂಚಿಸಿದ ಮೊತ್ತವನ್ನು ಬಡ್ಡಿಯೊಂದಿಗೆ ಪಾವತಿಸಲು ವಿಫಲರಾದ ಕಾರಣ ಸಾಲಗಾರರಿಗೆ/ಜಾಮೀನುದಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಸೂಚಿಸುವುದೇನೆಂದರೆ ಷೆಡ್ಯೂಲ್‌ನಲ್ಲಿ ತಿಳಿಸಿರುವ ಆಸ್ತಿಯನ್ನು ಸದರಿ ಕಾಯಿದೆಯ ಸೆಕ್ಷನ್ 13(4) ಹಾಗೂ ನಿಯಮಾವಳಿಗಳ ನಿಯಮ 9ರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ **ದಿನಾಂಕ 22.07.2025** ರಂದು ಸ್ವಾಧಿನಪಡಿಸಿಕೊಳ್ಳಲಾಗಿದೆ.

ಸಾಲಗಾರರು/ಜಾಮೀನುದಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಸುವುದೇನೆಂದರೆ ಈ ಆಸ್ತಿಗಳ ಸಂಬಂಧ ಯಾರೂ ಯಾವುದೇ ವಿಧವಾದ ವ್ಯವಹಾರ ನಡೆಸಬಾರದು. ಹಾಗೊಂದು ವೇಳೆ ವ್ಯವಹರಿಸಿದ್ದಾದರೆ ಅದು ಸದರಿ ಆಸ್ತಿಗಳ ಮೇಲೆ **ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ** ಬಾಕಿ ಇರುವ ಮೊತ್ತ **ರೂ.1,05,57,459.00 (ರೂಪಾಯಿ ಒಂದು ಕೋಟಿ ಐದು ಲಕ್ಷದ ಐವತ್ತೇಳು ಸಾವಿರದ ನಾಲ್ಕುನೂರ ಐವತ್ತೊಂಭತ್ತು ಮಾತ್ರ)** ಜೊತೆಗೆ ಬಡ್ಡಿ ಮತ್ತು ಇತರೆ ಖರ್ಚುಗಳ ಋಣಭಾರವನ್ನು ಒಳಗೊಂಡಿರುತ್ತದೆ.

ಸ್ಥಿರಾಸ್ತಿಯ ವಿವರ:

ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಸ್ವತ್ತಿನ ನಂ. 857, ಪಿಐಡಿ ನಂ. 14–52–86, 14ನೇ ಕ್ರಾಸ್, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು–560086 ವಿಸ್ತೀರ್ಣ 30' x 55' ಜೊತೆಗೆ ಆಸ್ತಿಯು ಶ್ರೀ.ವೀರಭದ್ರಯ್ಯ ರವರ ಹೆಸರಿನಲ್ಲಿದೆ. ಚಕ್ಕುಬಂದಿ : ಪೂರ್ವಕ್ಕೆ : ನಿವೇಶನ ನಂ. 858, ಪಶ್ಚಿಮಕ್ಕೆ : ನಿವೇಶನ ನಂ. 856, ಉತ್ತರಕ್ಕೆ : ನಿವೇಶನ ನಂ. 839, ದಕ್ಷಿಣಕ್ಕೆ : ರಸ್ತೆ.

ಸ್ಥಳ: ಬೆಂಗಳೂರು
ದಿನಾಂಕ : 22.07.2025

ಸಹಿ/– ಅಧಿಕೃತ ಅಧಿಕಾರಿ
ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
ಬೆಂಗಳೂರು ಗ್ರಾಮಾಂತರ ಶಾಖೆ, ಬೆಂಗಳೂರು.

Infosys Limited

Infosys® Navigate your next

Regd. office: Electronics City, Hosur Road, Bengaluru 560 100, India.

CIN: L85110KA1981PLC013115
Website: www.infosys.com
Email: investors@infosys.com
Telephone: 91 80 2852 0261
Fax: 91 80 2852 0362

Q1 FY 26 Financial Results

Extract of the consolidated audited financial results of Infosys Limited and its subsidiaries for the quarter ended June 30, 2025 prepared in compliance with the Indian Accounting Standards (Ind-AS)

(in ₹ crore, except per equity share data)

Particulars	Quarter ended June 30, 2025	Year ended March 31, 2025	Quarter ended June 30, 2024
Revenue from operations	**42,279**	**1,62,990**	**39,315**
Profit before tax	9,740	37,608	9,021
Profit for the period	6,924	26,750	6,374
Total comprehensive income for the period (comprising profit for the period after tax and other comprehensive income after tax)	8,037	27,209	6,341
Profit attributable to:			
Owners of the Company	6,921	26,713	6,368
Non-controlling interests	3	37	6
	6,924	**26,750**	**6,374**
Total comprehensive income attributable to:			
Owners of the company	8,024	27,167	6,337
Non-controlling interest	13	42	4
	8,037	**27,209**	**6,341**
Paid-up share capital (par value ₹5/- each fully paid)	2,074	2,073	2,072
Other equity *#	93,745	93,745	86,045
Earnings per share (par value ₹5/- each)**			
Basic (in ₹ per share)	16.70	64.50	15.38
Diluted (in ₹ per share)	16.68	64.34	15.35

* Balances for the quarters ended June 30, 2025 and June 30, 2024 represent balances as per the audited Balance Sheet for the years ended March 31, 2025 and March 31, 2024, respectively as required by the SEBI (Listing and Other Disclosure Requirements) Regulations, 2015

** EPS is not annualized for the quarter ended June 30, 2025 and quarter ended June 30, 2024

\# Excludes non-controlling interest

a) The audited interim condensed consolidated financial statements for the quarter ended June 30, 2025 have been taken on record by the Board of Directors at its meeting held on July 23, 2025. **The statutory auditors, Deloitte Haskins & Sells LLP, have expressed an unmodified audit opinion**. The information presented above is extracted from the audited interim condensed consolidated financial statements. Those interim condensed consolidated financial statements are prepared in accordance with the Indian Accounting Standards (Ind-AS) as prescribed under Section 133 of the Companies Act, 2013 read with Rule 3 of the Companies (Indian Accounting Standards) Rules, 2015 and relevant amendment rules thereafter.

b) On April 30, 2025, Infosys Nova Holdings LLC acquired 100% partnership interests in MRE Consulting Ltd, a leading energy and business consulting services company, headquartered in USA, for a consideration including earnouts amounting up to US$36 million (₹306 crore).

c) On April 30, 2025, Infosys Singapore Pte Ltd. acquired 100% voting interests in The Missing Link Security Pty. Ltd., The Missing Link Security Limited and The Missing Link Automation Pty. Ltd. (collectively known as "The Missing Link"), a leading cybersecurity service provider headquartered in Australia, for a consideration including earnouts amounting up to AUD 93 million (₹505 crore).

d) The U.S. Department of Justice ("DOJ") is conducting an investigation into how the Company classified certain H-1B visa-recipient employees working for one of its clients in immigration documents filed with certain U.S. government authorities. The Company is engaged in discussions with the DOJ on its ongoing investigation and has commenced its own inquiry regarding the matter. At this stage, the Company is unable to predict the outcome of this matter, including whether such outcome could have a material adverse effect on the Company's business and results of operations.

2. Information on dividends for the quarter ended June 30, 2025

For the financial year 2025, the Board recommended a final dividend of ₹22/- (par value of ₹5/- each) per equity share. The same was approved by the shareholders in the Annual General Meeting (AGM) of the Company held on June 25, 2025 and paid on June 30, 2025.

(in ₹)

Particulars	Quarter ended June 30, 2025	Year ended March 31, 2025	Quarter ended June 30, 2024
Dividend per share (par value ₹5/- each)			
Interim dividend	–	21.00	–
Final dividend	–	22.00	–

3. Audited financial results of Infosys Limited (Standalone Information)

(in ₹ crore)

Particulars	Quarter ended June 30, 2025	Year ended March 31, 2025	Quarter ended June 30, 2024
Revenue from operations	35,275	1,36,592	33,283
Profit before tax	8,660	35,441	8,128
Profit for the period	6,114	25,568	5,768

The above is an extract of the detailed format of quarterly audited financial results filed with stock exchanges under regulation 33 of the SEBI (Listing and Other Disclosure Requirements) Regulations, 2015. The full format of the quarterly audited financial results are available on the Stock Exchange websites, www.nseindia.com and www.bseindia.com, and on the Company's website, www.infosys.com.

By order of the Board
for Infosys Limited

Sd/-
Salil Parekh
Chief Executive Officer and Managing Director

Bengaluru, India
July 23, 2025

Certain statements in this release concerning our future growth prospects, our future financial or operating performance, and the McCamish cybersecurity incident are forward looking statements intended to qualify for the 'safe harbor' under the Private Securities Litigation Reform Act of 1995, which involve a number of risks and uncertainties that could cause actual results or outcomes to differ materially from those in such forward-looking statements. The risks and uncertainties relating to these statements include, but are not limited to, risks and uncertainties regarding the execution of our business strategy, increased competition for talent, our ability to attract and retain personnel, increase in wages, investments to reskill our employees, our ability to effectively implement a hybrid working model, economic uncertainties and geo-political situations, technological disruptions and innovations such as generative AI, the complex and evolving regulatory landscape including immigration regulation changes, our ESG vision, our Capital Allocation Policy and expectations concerning our market position, future operations, margins, profitability, liquidity, capital resources, our corporate actions including acquisitions, the outcome of pending litigation, the amount of any additional costs resulting directly or indirectly from the McCamish cybersecurity incident, and the outcome of the government investigation. Important factors that may cause actual results or outcomes to differ from those implied by the forward-looking statements are discussed in more detail in our US Securities and Exchange Commission filings including our Annual Report on Form 20-F for the fiscal year ended March 31, 2025. These filings are available at www.sec.gov. Infosys may, from time to time, make additional written and oral forward-looking statements, including statements contained in the Company's filings with the Securities and Exchange Commission and our reports to shareholders. The Company does not undertake to update any forward-looking statements that may be made from time to time by or on behalf of the Company unless it is required by law.

ಸಂಸತ್: 28ರಿಂದ 'ಸಿಂಧೂರ' ಚರ್ಚೆ

ಉಭಯ ಸದನಗಳಲ್ಲಿ 16 ಗಂಟೆಗಳ ಸಮಯ ನಿಗದಿಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು 'ಆಪರೇಷನ್ ಸಿಂಧೂರ' ಕುರಿತು ಸಂಸತ್ತಿನಲ್ಲಿ ಮುಂದಿನ ವಾರ ವಿಶೇಷ ಚರ್ಚೆ ನಡೆಯಲಿದೆ. ಉಭಯ ಸದನಗಳಲ್ಲಿ ತಲಾ 16 ಗಂಟೆಗಳ ಚರ್ಚೆಗೆ ಅವಕಾಶ ನೀಡಲು ಸರ್ಕಾರ ಒಪ್ಪಿದೆ.

ಸೋಮವಾರ ನಡೆದ ಲೋಕಸಭೆಯ ಕಲಾಪ ವ್ಯವಹಾರಗಳ ಸಮಿತಿ ಸಭೆಯಲ್ಲಿ (ಬಿಎಸಿ) 16 ಗಂಟೆಗಳ ಚರ್ಚೆಗೆ ಸರ್ಕಾರ ಒಪ್ಪಿಕೊಂಡಿತು. ಬುಧವಾರ ನಡೆದ ರಾಜ್ಯಸಭೆಯ ಕಲಾಪ ವ್ಯವಹಾರ ಸಮಿತಿ ಸಭೆಯಲ್ಲೂ ಇದೇ ರೀತಿಯ ನಿರ್ಧಾರಕ್ಕೆ ಬರಲಾಯಿತು. ಪ್ರಧಾನಿ ನರೇಂದ್ರ ಮೋದಿ ಅವರು ಕಲಾಪದಲ್ಲಿ ಹಾಜರಿದ್ದು, ಈ ವಿಷಯದ ಬಗ್ಗೆ ಮಾತನಾಡಬೇಕು ಎಂದು ವಿಪಕ್ಷಗಳು ತಮ್ಮ ಬೇಡಿಕೆಯನ್ನು ಬುಧವಾರವೂ ಪುನರುಚ್ಚರಿಸಿದವು.

ಲೋಕಸಭೆಯಲ್ಲಿ ಇದೇ 28ರಂದು ಚರ್ಚೆ ಆರಂಭವಾಗಲಿದೆ. ಮರುದಿನ ರಾಜ್ಯಸಭೆಯಲ್ಲಿ ಚರ್ಚೆ ಶುರುವಾಗಲಿದೆ.

ಪ್ರಧಾನಿ ಪ್ರತಿಕ್ರಿಯೆ ನೀಡಬೇಕೆಂಬ ವಿಪಕ್ಷಗಳ ಬೇಡಿಕೆಗೆ ಸರ್ಕಾರ ಯಾವುದೇ ಭರವಸೆ ನೀಡಿಲ್ಲ ಎಂದು ಸರ್ಕಾರದ ಮೂಲಗಳು ಸ್ಪಷ್ಟಪಡಿಸಿವೆ. ಬಿಎಸಿ ಸಭೆಯಲ್ಲಿ ಭಾಗವಹಿಸಿದ್ದ ರಾಜ್ಯಸಭೆಯ ಕಾಂಗ್ರೆಸ್ ಉಪ ನಾಯಕ ಪ್ರಮೋದ್ ತಿವಾರಿ, 'ಪ್ರಧಾನಿ ಮೋದಿ ಅವರು ಚರ್ಚೆಯ ಸಮಯದಲ್ಲಿ ಹಾಜರಿರಬೇಕು ಎಂದು ನಾವು ಒತ್ತಾಯಿಸಿದ್ದೇವೆ. ಸರ್ಕಾರದಿಂದ ನಮಗೆ ಆ ಬಗ್ಗೆ ಭರವಸೆ ಸಿಕ್ಕಿದೆ' ಎಂದು ತಿಳಿಸಿದರು.

ಉಪ ರಾಷ್ಟ್ರಪತಿ ಹುದ್ದೆಯಿಂದ ಜಗದೀಪ್ ಧನಕರ್ ಕೆಳಗಿಳಿದ ನಂತರ ನಡೆದ ಮೊದಲ ಬಿಎಸಿ ಸಭೆ ಇದಾಗಿದೆ. ರಾಜೀನಾಮೆಗೂ ಮುನ್ನ ಸದನದ ಕಾರ್ಯಸೂಚಿಯನ್ನು ಅಂತಿಮಗೊಳಿಸಲು ಧನಕರ್ ಅವರು ಎರಡು ಸಲ ಸಮಿತಿಯ ಸಭೆ ಕರೆದಿದ್ದರು. ಸೋಮವಾರ ಸಂಜೆ ನಡೆದ ಸಮಿತಿ ಸಭೆಗೆ ಕೇಂದ್ರ ಸಚಿವರು ಗೈರುಹಾಜರಾದ ಕಾರಣಕ್ಕೆ ಮಂಗಳವಾರಕ್ಕೆ ಮುಂದೂಡಿದ್ದರು. ಬುಧವಾರ ನಡೆದ ಸಮಿತಿ ಸಭೆಯ ಅಧ್ಯಕ್ಷತೆಯನ್ನು ರಾಜ್ಯಸಭೆಯ ಉಪಸಭಾಪತಿ ಹರಿವಂಶ್ ವಹಿಸಿದ್ದರು.

ಆಪರೇಷನ್ ಸಿಂಧೂರ ಕುರಿತ ಚರ್ಚೆಯು ನಿರ್ಣಯದ ಮೇಲೆ ಇರಬಾರದು ಎಂದು ವಿರೋಧ ಪಕ್ಷಗಳು ಸ್ಪಷ್ಟಪಡಿಸಿದವು. ಈ ವಿಷಯದ ಬಗ್ಗೆ ವಿಶೇಷ ಚರ್ಚೆ ನಡೆಯಲಿದೆ ಎಂದು ಸರ್ಕಾರ ಸ್ಪಷ್ಟಪಡಿಸಿತು ಎಂದು ಮೂಲಗಳು ತಿಳಿಸಿವೆ.

ರಾಜ್ಯಸಭೆಯಿಂದ ನಿವೃತ್ತರಾಗುತ್ತಿರುವ ಸಂಸದರಿಗೆ ಗುರುವಾರ ಬೀಳ್ಕೊಡುಗೆ ಆಯೋಜಿಸಬಹುದು ಎಂದು ಕೆಲವು ಸಂಸದರು ಸಲಹೆ ನೀಡಿದರು. ಧನಕರ್ ಅವರಿಗೆ ಬೀಳ್ಕೊಡುಗೆ ಸಮಾರಂಭ ಆಯೋಜಿಸಬಹುದು ಎಂದು ಕಾಂಗ್ರೆಸ್‌ನ ಜೈರಾಮ್ ರಮೇಶ್ ಹೇಳಿದರು. ಧನಕರ್ ರಾಜೀನಾಮೆ ನೀಡಿರುವುದರಿಂದ ವಿದಾಯ ಹೇಳಲು ಯಾವುದೇ ಅವಕಾಶ ಉಳಿದಿಲ್ಲ ಎಂದು ಬಿಜೆಪಿಯ ಸಂಸದರೊಬ್ಬರು ಸ್ಪಷ್ಟಪಡಿಸಿದರು.

ಬಿಹಾರದಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆ ಸೇರಿದಂತೆ ವಿವಿಧ ವಿಷಯಗಳ ಚರ್ಚೆಗೆ ವಿರೋಧ ಪಕ್ಷಗಳು ಒತ್ತಾಯಿಸಿದವು. ಆದರೆ, ಸರ್ಕಾರದ ಪ್ರತಿನಿಧಿಗಳು ಈ ಬಗ್ಗೆ ಯಾವುದೇ ಭರವಸೆ ನೀಡಲಿಲ್ಲ.

ಮುಖ್ಯಾಂಶಗಳು

- ಪ್ರಧಾನಿ ಸದನದಲ್ಲಿ ಹಾಜರಿದ್ದು ಮಾತನಾಡಲು ಒತ್ತಾಯ
- ಪ್ರತಿಪಕ್ಷಗಳಿಂದ ಬೇಡಿಕೆ ಪುನರುಚ್ಚಾರ
- ಬಿಹಾರದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಚರ್ಚೆಗೂ ಪಟ್ಟು



ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ, ತಮಿಳುನಾಡು ರೈತರ ಹಿತರಕ್ಷಣಾ ಒಕ್ಕೂಟದ ಸದಸ್ಯರು ನವದೆಹಲಿಯ ಜಂತರ್ ಮಂತರ್‌ನಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು–ಪಿಟಿಐ ಚಿತ್ರ

ಮೂರನೇ ದಿನವೂ ನಡೆಯದ ಕಲಾಪ

ಬಿಹಾರದಲ್ಲಿ ಚುನಾವಣಾ ಆಯೋಗ ನಡೆಸುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಎಸ್‌ಐಆರ್) ವಿರೋಧಿಸಿ ವಿರೋಧ ಪಕ್ಷಗಳ ಸದಸ್ಯರು ಉಭಯ ಸದನಗಳಲ್ಲಿ ಬುಧವಾರವೂ ಗದ್ದಲ ಎಬ್ಬಿಸಿದರು. ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಪ್ರತಿಪಕ್ಷ ಸದಸ್ಯರು ಫಲಕಗಳನ್ನು ಹಿಡಿದು ಘೋಷಣೆಗಳನ್ನು ಕೂಗುತ್ತಾ ಸಭಾಧ್ಯಕ್ಷರ ಪೀಠದ ಎದುರು ಧಾವಿಸಿದರು. ಗದ್ದಲದ ನಡುವೆಯೇ ಎರಡು ಪ್ರಶ್ನೆಗಳಿಗೆ ಸಚಿವರು ಉತ್ತರ ನೀಡಿದರು. ಪ್ರತಿಭಟನೆ ಕೈಬಿಡುವಂತೆ ಲೋಕಸಭಾಧ್ಯಕ್ಷ ಓಂ ಬಿರ್ಲಾ ಮನವಿ ಮಾಡಿದರು. ವಿರೋಧ ಪಕ್ಷಗಳ ಸದಸ್ಯರು ಇದಕ್ಕೆ ಸ್ಪಂದಿಸಲಿಲ್ಲ. ನಂತರ ಕಲಾಪ ಮುಂದೂಡಲಾಯಿತು. ರಾಜ್ಯಸಭೆಯಲ್ಲೂ ಎರಡು ಸಲ ಕಲಾಪ ಮುಂದೂಡಿಕೆಯಾಯಿತು. ಮಧ್ಯಾಹ್ನ 2ಕ್ಕೆ ಸದನ ಸೇರಿದಾಗ ಪರಿಸ್ಥಿತಿ ಭಿನ್ನವಾಗಿರಲಿಲ್ಲ. ಬಳಿಕ, ಗುರುವಾರ ಬೆಳಿಗ್ಗೆ 11ಕ್ಕೆ ಕಲಾಪವನ್ನು ಮುಂದೂಡಲಾಗಿದೆ ಎಂದು ಉಪಸಭಾಪತಿ ತಿಳಿಸಿದರು.

'ಟ್ರಂಪ್ ಹೇಳಿಕೆ, ಪ್ರಧಾನಿ ಮೌನದಿಂದ ಸಂಶಯ'

ಕೇಂದ್ರ ಸರ್ಕಾರದ ವಿರುದ್ಧ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಾಗ್ದಾಳಿ

ನವದೆಹಲಿ (ಪಿಟಿಐ): ಭಾರತ–ಪಾಕಿಸ್ತಾನ ಸಂಘರ್ಷ ನಿಲ್ಲಿಸಿ, ಕದನ ವಿರಾಮ ಜಾರಿಗೆ ತರಲು ತಾನೇ ಕಾರಣ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು 25ನೇ ಬಾರಿ ಹೇಳಿರುವುದನ್ನು ಗಮನಿಸಿದರೆ ಹಲವು ಸಂಶಯಗಳು ಮೂಡುತ್ತವೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ಮಾಡಿದರು.

'ಕದನ ವಿರಾಮ ತರಲು ಟ್ರಂಪ್ ಯಾರು? ಅದು ಅವರ ಕೆಲಸವಲ್ಲ' ಎಂದ ರಾಹುಲ್, 'ಈ ಬಗ್ಗೆ ಇಲ್ಲಿಯವರೆಗೂ ಪ್ರಧಾನಿ ನರೇಂದ್ರ ಮೋದಿ ಅವರೇಕೆ ಉತ್ತರ ನೀಡಿಲ್ಲ' ಎಂದು ಪ್ರಶ್ನಿಸಿದರು.

'ಟ್ರಂಪ್ ಅವರ ಹೇಳಿಕೆಯನ್ನು ಗಮನಿಸಿದರೆ ಅವರೇ ಕದನ ವಿರಾಮ ಜಾರಿಗೆ ತಂದಂತಿದೆ. ಅದೀಗ ಜಗತ್ತಿಗೆ ತಿಳಿದ ಸತ್ಯವಾಗಿದೆ. ಆದರೆ ಅದನ್ನು ನಮ್ಮ ಪ್ರಧಾನಿ ಹೇಳುತ್ತಾರೆಯೇ' ಎಂದು ಅವರು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

'ನಾವು ಕದನ ವಿರಾಮದ ಜತೆಗೆ ಇತರ ದೊಡ್ಡ ಸಮಸ್ಯೆಗಳ ಬಗ್ಗೆ ಚರ್ಚಿಸಲು ಬಯಸಿದ್ದೇವೆ. ಭದ್ರತೆ, ರಕ್ಷಣಾ ಉದ್ಯಮ, ಆಪರೇಷನ್ ಸಿಂಧೂರದ ಬಗ್ಗೆ ಚರ್ಚೆ ನಡೆಸಬೇಕಿದೆ. ಆದರೆ, ದೇಶಭಕ್ತ ಎನಿಸಿಕೊಳ್ಳುವವರು ಓಡಿಹೋಗಿದ್ದಾರೆ. ಇದರ ಬಗ್ಗೆ ಒಂದೇ ಒಂದು ಹೇಳಿಕೆಯನ್ನೂ ಪ್ರಧಾನಿ ಇಲ್ಲಿಯವರೆಗೂ ನೀಡಿಲ್ಲ' ಎಂದು ಅವರು ಕಿಡಿಕಾರಿದರು.

ಮೋದಿ ಅವರು ವಿದೇಶದಿಂದ ಹಿಂದಿರುಗಿದ ಬಳಿಕ, ಆಪರೇಷನ್ ಸಿಂಧೂರದ ಬಗ್ಗೆ ಚರ್ಚೆ ನಡೆಸಲು ಸರ್ಕಾರ ಸಮ್ಮತಿಸಿದೆ ಎಂದು ಅವರು ಇದೇ ವೇಳೆ ತಿಳಿಸಿದರು.

'ಒಂದೆಡೆ ಆಪರೇಷನ್ ಸಿಂಧೂರ ಮುಂದುವರಿದಿದೆ ಎಂದು ಸರ್ಕಾರ ಹೇಳುತ್ತಿದೆ, ಇನ್ನೊಂದೆಡೆ ಈ ಕಾರ್ಯಾಚರಣೆಯಲ್ಲಿ ಈಗಾಗಲೇ ಜಯ ಸಾಧಿಸಲಾಗಿದೆ ಎಂದೂ ಪ್ರತಿಪಾದಿಸಲಾಗುತ್ತಿದೆ. ಗೆಲುವು ಸಾಧಿಸಲಾಗಿದೆಯೋ ಅಥವಾ ಕಾರ್ಯಾಚರಣೆ ಮುಂದುವರಿದಿದೆಯೋ ಎಂಬುದು ಸ್ಪಷ್ಟವಾಗಬೇಕು. ಅಲ್ಲದೆ, ಟ್ರಂಪ್ ಅವರು ಸಿಂಧೂರ ಕಾರ್ಯಾಚರಣೆಯನ್ನು ತಾವೇ ಸ್ಥಗಿತಗೊಳಿಸಿದ್ದಾಗಿ ಪದೇ ಪದೇ ಹೇಳುತ್ತಿದ್ದಾರೆ. ಹೀಗಾಗಿ ಹಲವು ಸಂಶಯಗಳು ಮೂಡಿವೆ' ಎಂದು ಹೇಳಿದರು.

ಆಪರೇಷನ್ ಸಿಂಧೂರದ ಬಳಿಕ ವಿದೇಶಗಳಿಗೆ ಭಾರತ ಕಳುಹಿಸಿದ್ದ ಸಂಸದರ ನಿಯೋಗದ ಬಗೆಗಿನ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಈಗಾಗಲೇ ಕೇಂದ್ರ ಸರ್ಕಾರವು ನಮ್ಮ ವಿದೇಶಾಂಗ ನೀತಿಯನ್ನು ನಾಶಪಡಿಸಿದೆ. ಈ ವೇಳೆ ಯಾರೂ ನಮಗೆ ಬೆಂಬಲ ನೀಡಿಲ್ಲ' ಎಂದರು.

> **ಭಾರತ– ಪಾಕ್ ನಡುವಿನ ಸಂಘರ್ಷವನ್ನು ನಿಲ್ಲಿಸುದ್ದು ತಾವೇ ಎಂದು ಟ್ರಂಪ್ 73 ದಿನಗಳಲ್ಲಿ 25 ಬಾರಿ ಹೇಳಿಕೆ ನೀಡಿದ್ದಾರೆ. ಆದರೆ ಭಾರತದ ಪ್ರಧಾನಿ ಮೌನಕ್ಕೆ ಜಾರಿದ್ದು, ವಿದೇಶ ಪ್ರವಾಸದಲ್ಲಿ ತಲ್ಲೀನರಾಗಿದ್ದಾರೆ**
>
> **ಜೈರಾಮ್ ರಮೇಶ್**
>
> ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ)

ಭಾರತ–ಪಾಕ್ ಸಂಘರ್ಷ ನಿಲ್ಲಿಸಿದ್ದು ನಾನೇ: ಟ್ರಂಪ್ ಪುನರುಚ್ಚಾರ

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): 'ಭಾರತ ಮತ್ತು ಪಾಕಿಸ್ತಾನದ ನಡುವೆ ಇತ್ತೀಚೆಗೆ ನಡೆದಿದ್ದ ಸೇನಾ ಸಂಘರ್ಷವನ್ನು ನಾನೇ ನಿಲ್ಲಿಸಿದ್ದು' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೊಮ್ಮೆ ಪುನರುಚ್ಚರಿಸಿದರು. ಅಲ್ಲದೆ ಈ ಸಂಘರ್ಷದಲ್ಲಿ ಐದು ಯುದ್ಧ ವಿಮಾನಗಳನ್ನು ಹೊಡೆದುರುಳಿಸಲಾಗಿತ್ತು ಎಂದೂ ಅವರು ಇನ್ನೊಮ್ಮೆ ಹೇಳಿದರು.

ಶ್ವೇತಭವನದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಸದಸ್ಯರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಭಾರತ–ಪಾಕ್ ನಡುವಿನ ಸೇನಾ ಸಂಘರ್ಷವನ್ನು ನಿಲ್ಲಿಸದಿದ್ದರೆ ಅದು ಬಹುಶಃ ಪರಮಾಣು ಯುದ್ಧದಲ್ಲಿ ಅಂತ್ಯವಾಗುತ್ತಿತ್ತು' ಎಂದು ತಿಳಿಸಿದರು.

'ಅವರು ಒಂದರ ಹಿಂದೆ ಒಂದರಂತೆ ಐದು ಯುದ್ಧ ವಿಮಾನಗಳನ್ನು ಹೊಡೆದುರುಳಿಸಿದರು. ಈ ವೇಳೆ ಅವರೊಂದಿಗೆ ನಾನು ದೂರವಾಣಿ ಮೂಲಕ ಮಾತನಾಡಿದೆ. ಇದನ್ನು ಹೀಗೆಯೇ ಮುಂದುವರಿಸಿದರೆ ನಿಮ್ಮೊಂದಿಗೆ ಯಾವುದೇ ವ್ಯಾಪಾರ ನಡೆಸುವುದಿಲ್ಲ. ಅದು ನಿಮಗೆ ಮಾರಕವಾಗುತ್ತದೆ ಎಂಬುದಾಗಿ ಎಚ್ಚರಿಸಿದ್ದೆ' ಎಂದು ಟ್ರಂಪ್ ಹೇಳಿದರು.

'ಅಣ್ವಸ್ತ್ರಗಳನ್ನು ಹೊಂದಿರುವ ಈ ಎರಡೂ ಶಕ್ತಿಶಾಲಿ ದೇಶಗಳ ನಡುವಿನ ಸಂಘರ್ಷ ನಿಲ್ಲಿಸದಿದ್ದರೆ, ಆ ಅಸ್ತ್ರಗಳು ಬಳಕೆಯಾಗುವ ಸಾಧ್ಯತೆಯಿತ್ತು. ಹಾಗಾಗಿದ್ದರೆ ಪರಿಣಾಮ ಏನಾಗುತ್ತಿತ್ತು ಎಂಬುದನ್ನು ಯಾರಿಂದಲೂ ಊಹಿಸಲು ಸಾಧ್ಯವಿರಲಿಲ್ಲ. ಅಂಥ ಸ್ಥಿತಿ ಎದುರಾಗದಂತೆ ನಾನು ತಡೆದಿದ್ದೇನೆ' ಎಂದು ಅವರು ತಿಳಿಸಿದರು.

'ಇದೇ ಅಲ್ಲದೆ, ಕಾಂಗೊ ಗಣರಾಜ್ಯ ಮತ್ತು ರುವಾಂಡ ನಡುವಿನ ಯುದ್ಧವನ್ನೂ ನಾವು ನಿಲ್ಲಿಸಿದ್ದೇವೆ. ಇರಾನ್‌ನ ಪರಮಾಣು ಶಸ್ತ್ರಾಸ್ತ್ರ ಹೊಂದುವ ಸಾಮರ್ಥ್ಯವನ್ನು ತಡೆದಿದ್ದೇವೆ. ಕೊಸೊವೊ ಮತ್ತು ಸರ್ಬಿಯಾ ನಡುವಿನ ಸಂಘರ್ಷವನ್ನೂ ನಿಲ್ಲಿಸಿದ್ದೇವೆ' ಎಂದು ಟ್ರಂಪ್ ಪ್ರತಿಪಾದಿಸಿದರು.

ಕೆ.ಜಿ ಹಳ್ಳಿ ಗಲಭೆ: ಮೂವರಿಗೆ 7 ವರ್ಷ ಶಿಕ್ಷೆ

ಒಂದನೇ ಪುಟದಿಂದ...

ಪುಲಕೇಶಿ ನಗರ ಕ್ಷೇತ್ರದ ಅಂದಿನ ಕಾಂಗ್ರೆಸ್ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಅವರ ಸೋದರಳಿಯ ನವೀನ್ ವಿರುದ್ಧ ಪ್ರಕರಣ ದಾಖಲಿಸಬೇಕು ಮತ್ತು ಕೂಡಲೇ ಬಂಧಿಸಬೇಕು ಎಂದು ಜೋರಾಗಿ ಘೋಷಣೆಗಳನ್ನು ಕೂಗಿದ್ದರು.

ಅದಾಗಲೇ ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ದೇವರಜೀವನ ಹಳ್ಳಿ (ಡಿಜೆ ಹಳ್ಳಿ) ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದ ಕಾರಣ ಕೆ.ಜಿ ಹಳ್ಳಿ ಠಾಣೆಯ ಪೊಲೀಸರು ಗುಂಪಿನ ಆಗ್ರಹಕ್ಕೆ ಮಣಿದು ಎನ್‌ಸಿಆರ್ (ಸಂಜ್ಞೇಯ ಅಪರಾಧವಲ್ಲದ ವರದಿ) ನೋಂದಣಿ ಮಾಡಿಕೊಂಡಿದ್ದರು. ಠಾಣೆಯ ಮುಂದೆ ಗುಂಪಿನ ಸಂಖ್ಯೆ ಹೆಚ್ಚಿದ ಕಾರಣ ಮಧ್ಯರಾತ್ರಿ 1 ಗಂಟೆಗೆ 144ನೇ ಕಲಂ ಅನುಸಾರ ನಿಷೇಧಾಜ್ಞೆ ಘೋಷಿಸಲಾಗಿತ್ತು.

ನಿಷೇಧಾಜ್ಞೆಯನ್ನೂ ಲೆಕ್ಕಿಸದೆ ಕಾನೂನುಬಾಹಿರವಾಗಿ ನೆರೆದಿದ್ದ ಜನರು ಏಕಾಏಕಿ ಹಿಂಸಾಕೃತ್ಯಗಳಲ್ಲಿ ತೊಡಗಿದರು. ಠಾಣೆಯ ಮೇಲೆ ಕಲ್ಲು ತೂರಿ, ಕಬ್ಬಿಣದ ರಾಡುಗಳಿಂದ ತಮ್ಮ ಕೈಗೆ ಸಿಕ್ಕ ಆಸ್ತಿಪಾಸ್ತಿಯನ್ನು ಧ್ವಂಸಗೊಳಿಸುತ್ತಾ, ಆಯುಧಗಳನ್ನು ಝಳಪಿಸುತ್ತಾ, ಕಂಡ ಕಂಡ ವಸ್ತುಗಳನ್ನು ಬಡಿಗೆಗಳಿಂದ ಬಡಿಯುತ್ತಾ ಠಾಣೆಯ ಮುಂದಿದ್ದ ವಾಹನಗಳನ್ನು ಜಖಂಗೊಳಿಸಿದ್ದರು. ನವೀನ್‌ನನ್ನು ಕೊಲ್ಲುವ ಉದ್ದೇಶದಿಂದ ತಮ್ಮ ಕಸ್ಟಡಿಗೆ ಒಪ್ಪಿಸಬೇಕು ಎಂದು ಆಗ್ರಹಿಸಿದ್ದರು.

ಗುಂಪಿನಲ್ಲಿದ್ದ ಕೆಲವರು ಪೊಲೀಸ್ ಠಾಣೆ ಮೇಲೆ ಪೆಟ್ರೋಲ್ ಬಾಂಬ್ ಎಸೆದು ಬೆಂಕಿ ಹಚ್ಚಿದರು. ಠಾಣೆಯಲ್ಲಿದ್ದ ಪೊಲೀಸರನ್ನು ಕೊಲ್ಲುವ ಪ್ರಯತ್ನ ನಡೆಸಿದರು. ಉದ್ರಿಕ್ತ ಗುಂಪನ್ನು ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟರು. ಇದಕ್ಕಾಗಿ ಕೆಲವು ಪ್ರಮುಖ ಧಾರ್ಮಿಕ ನೇತಾರರನ್ನೂ ತಕ್ಷಣದ ಸಹಾಯಕ್ಕೆ ಕೋರಿದರು. ಆದರೆ, ಹರಸಾಹಸಪಟ್ಟರೂ ಉದ್ರಿಕ್ತ ಗುಂಪು ನಿಯಂತ್ರಣಕ್ಕೆ ಬಾರದೇ ಹೋಯಿತು. ಗುಂಪನ್ನು ಚದುರಿಸಲು ಪೊಲೀಸರು ಅನ್ಯ ಮಾರ್ಗವಿಲ್ಲದೆ ಗೋಲಿಬಾರ್ ನಡೆಸಿದ್ದರು. ಹೀಗಾಗಿ ಕೆಜಿ ಹಳ್ಳಿ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಅಜಯ್ ಸಾರಥಿ ನೀಡಿದ್ದ ದೂರಿನ ಅನುಸಾರ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು.

ಘಟನೆಯಲ್ಲಿ ಪುಲಕೇಶಿ ನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಅವರ ಮನೆಗೂ ಬೆಂಕಿ ಹಚ್ಚಲಾಗಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಎಸ್‌ಐಆರ್: 1 ಲಕ್ಷ ಮತದಾರರು ನಾಪತ್ತೆ

ಪಟ್ನಾ (ಪಿಟಿಐ): ಬಿಹಾರದಲ್ಲಿ ನಡೆಯುತ್ತಿರುವ ವಿಶೇಷ ಸಮಗ್ರ ಪರಿಷ್ಕರಣಾ (ಎಸ್‌ಐಆರ್) ಕಾರ್ಯದಲ್ಲಿ 1 ಲಕ್ಷ ಮತದಾರರು ಪತ್ತೆಯಾಗಿಲ್ಲ ಎಂದು ಚುನಾವಣಾ ಆಯೋಗ ಬುಧವಾರ ಹೇಳಿದೆ.

ಎಸ್‌ಐಆರ್ ಭಾಗವಾಗಿ 7.17 ಕೋಟಿ ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಅವುಗಳನ್ನು ಡಿಜಿಟಲೀಕರಿಸಲಾಗಿದೆ ಎಂದು ಅದು ತಿಳಿಸಿದೆ.

ಸುಮಾರು 20 ಲಕ್ಷ ಮತದಾರರು ಮೃತರಾಗಿದ್ದಾರೆ ಎಂದು ವರದಿಯಾಗಿದ್ದರೆ, 28 ಲಕ್ಷ ಜನರು ಹಾಲಿ ವಿಳಾಸಗಳನ್ನು ಬದಲಿಸಿದ್ದಾರೆ ಎಂದು ಆಯೋಗ ತಿಳಿಸಿದೆ. ಉಳಿದಂತೆ 15 ಲಕ್ಷ ಮತದಾರರು ತಮ್ಮ ಅರ್ಜಿಗಳನ್ನು ಸ್ಥಳೀಯ ಚುನಾವಣಾ ಅಧಿಕಾರಿಗಳಿಗೆ ಹಿಂತಿರುಗಿಸಿಲ್ಲ ಎಂದೂ ಅದು ಹೇಳಿದೆ.

ಎಸ್‌ಐಆರ್‌ನ ಮೊದಲ ಹಂತ ಮುಕ್ತಾಯದ ಬಳಿಕ ಆಗಸ್ಟ್ 1ರಂದು ಮತದಾರರ ಪಟ್ಟಿಯ ಕರಡನ್ನು ಪ್ರಕಟಿಸಲಾಗುತ್ತದೆ. ಆ ಪಟ್ಟಿಯಲ್ಲಿ ಏನಾದರೂ ದೋಷಗಳಿದ್ದರೆ, ಯಾವುದೇ ಮತದಾರರು ಅಥವಾ ರಾಜಕೀಯ ಪಕ್ಷಗಳು ಸೆಪ್ಟೆಂಬರ್ 1ರೊಳಗೆ ಆಕ್ಷೇಪಣೆಗಳನ್ನು ಆಯಾ ವಿಧಾನಸಭಾ ಕ್ಷೇತ್ರದ ಚುನಾವಣಾ ನೋಂದಣಾಧಿಕಾರಿಗೆ ಸಲ್ಲಿಸಬಹುದು.

ಅದೇ ರೀತಿಯ ಯಾವುದೇ ಅರ್ಹ ವ್ಯಕ್ತಿಯ ಹೆಸರು ಮತದಾರರ ಕರಡು ಪಟ್ಟಿಯಲ್ಲಿ ಪ್ರಕಟವಾಗದೇ ಇದ್ದರೆ, ಅವರು ಸಹ ಸೆಪ್ಟೆಂಬರ್ 1ರೊಳಗೆ ಆಕ್ಷೇಪಣೆ ಸಲ್ಲಿಸಬಹುದು ಎಂದು ಆಯೋಗ ತಿಳಿಸಿದೆ.

ವಾಗ್ವಾದ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ಬಿಹಾರದ ವಿಧಾನಸಭೆಯಲ್ಲಿ ಕಾವೇರಿದ ಚರ್ಚೆ ನಡೆದು, ವಿರೋಧ ಪಕ್ಷದ ನಾಯಕ, ಆರ್‌ಜೆಡಿಯ ತೇಜಸ್ವಿ ಯಾದವ್ ಮತ್ತು ಮುಖ್ಯಮಂತ್ರಿ ನಿತೀಶ್ ಕುಮಾರ್ ನಡುವೆ ತೀವ್ರ ವಾಗ್ವಾದ ನಡೆಯಿತು.



ಬಿಹಾರದಲ್ಲಿ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಯನ್ನು ಖಂಡಿಸಿ 'ಇಂಡಿಯಾ' ಒಕ್ಕೂಟದ ಸಂಸದರು ಪ್ರಿಯಾಂಕಾ ಗಾಂಧಿ ನೇತೃತ್ವದಲ್ಲಿ ಸಂಸತ್ ಭವನ ಮುಂಭಾಗ ಬುಧವಾರ ಪ್ರತಿಭಟನೆ ನಡೆಸಿದರು–ಪಿಟಿಐ ಚಿತ್ರ

ಚಿಟಿಕೆ ಸುದ್ದಿ

ತಾಂತ್ರಿಕ ಸಮಸ್ಯೆ: ಇಂಡಿಗೊ ಹಾರಾಟ ರದ್ದು



ಅಹಮದಾಬಾದ್ (ಪಿಟಿಐ): ಅಹಮದಾಬಾದ್‌ನಿಂದ ದಿಯುಗೆ ಹೊರಟಿದ್ದ ಇಂಡಿಗೊ ವಿಮಾನವೊಂದು ತಾಂತ್ರಿಕ ಸಮಸ್ಯೆ ಕಾರಣಗಳಿಂದಾಗಿ ಹಾರಾಟ ರದ್ದುಗೊಳಿಸಿದೆ. ವಿಮಾನದಲ್ಲಿದ್ದ ಎಲ್ಲಾ ಪ್ರಯಾಣಿಕರು ಮತ್ತು ಸಿಬ್ಬಂದಿ ಸುರಕ್ಷಿತವಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವೇಳಾಪಟ್ಟಿಯ ಪ್ರಕಾರ, ವಿಮಾನವು ಇಲ್ಲಿನ ಸರ್ದಾರ್ ವಲ್ಲಭಭಾಯಿ ಪಟೇಲ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದಿಯುಗೆ ಬೆಳಿಗ್ಗೆ 11.15ಕ್ಕೆ ಹೊರಡಬೇಕಿತ್ತು.

'ವಿಮಾನವು ಹಾರಾಟಕ್ಕಾಗಿ ಚಲಿಸುತ್ತಿದ್ದಾಗ ತಾಂತ್ರಿಕ ಸಮಸ್ಯೆಗಳು ಕಾಣಿಸಿಕೊಂಡ ಕಾರಣ, ಪೈಲಟ್ ಹಾರಾಟವನ್ನು ರದ್ದು ಮಾಡಿದರು. 50ಕ್ಕಿಂತ ಹೆಚ್ಚಿದ್ದ ಪ್ರಯಾಣಿಕರು ಮತ್ತು ಸಿಬ್ಬಂದಿ ಸುರಕ್ಷಿತವಾಗಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಮಣಿಪುರ: ರಂಗಕರ್ಮಿ ರತನ್ ಥಿಯಂ ನಿಧನ

ಇಂಫಾಲ್ (ಪಿಟಿಐ): ಮಣಿಪುರದ ಖ್ಯಾತ ರಂಗಕರ್ಮಿ, ಪದ್ಮಶ್ರೀ ಪುರಸ್ಕೃತ ರತನ್ ಥಿಯಂ (77) ಅವರು ಬುಧವಾರ ಆಸ್ಪತ್ರೆಯಲ್ಲಿ ನಿಧನರಾದರು.



ದೀರ್ಘಕಾಲದಿಂದ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದ ಅವರನ್ನು ಪ್ರಾದೇಶಿಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ದಾಖಲಿಸಲಾಗಿತ್ತು. ಅವರು ಬುಧವಾರ ಮಧ್ಯಾಹ್ನ 1.30 ಗಂಟೆಗೆ ನಿಧನರಾದರು ಎಂದು ರಾಜ್ಯ ಸರ್ಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಮಣಿಪುರಿ ಕಲಾ ಪ್ರಕಾರಗಳನ್ನು ಸಮಕಾಲೀನ ಕರಕೌಶಲ, ನಾವೀನ್ಯ ಮತ್ತು ಕಾವ್ಯಾತ್ಮಕ ನಿರೂಪಣೆಗಳೊಂದಿಗೆ ಬೆರೆಸುವುದರಲ್ಲಿ ಥಿಯಂ ಹೆಸರುವಾಸಿಯಾಗಿದ್ದರು. ಅವರಿಗೆ 1989ರಲ್ಲಿ ಪದ್ಮಶ್ರೀ ಪುರಸ್ಕಾರ ದೊರೆತಿತ್ತು.

ಅವರು 1987–1988ರವರೆಗೆ ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು.

ನ್ಯೂಸ್‌ಕ್ಲಿಕ್ ಪ್ರಕರಣ: ಪುರಕಾಯಸ್ಥಗೆ ನಿರೀಕ್ಷಣಾ ಜಾಮೀನು



ನವದೆಹಲಿ (ಪಿಟಿಐ): 'ನ್ಯೂಸ್‌ಕ್ಲಿಕ್' ಸುದ್ದಿ ಪೋರ್ಟಲ್‌ನ ಸಂಸ್ಥಾಪಕ ಮತ್ತು ಪ್ರಧಾನ ಸಂಪಾದಕ ಪ್ರಬೀರ್ ಪುರಕಾಯಸ್ಥ ಅವರಿಗೆ ದೆಹಲಿ ಹೈಕೋರ್ಟ್ ಬುಧವಾರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಚೀನಾ ಪರ ಪ್ರಚಾರ ಮಾಡಲು ಹಣ ಪಡೆದ ಆರೋಪದಡಿ ಅವರ ವಿರುದ್ಧ ಪ್ರಕರಣ ದಾಖಲಾಗಿತ್ತು.

ಜಾರಿ ನಿರ್ದೇಶನಾಲಯ (ಇ.ಡಿ) ದಾಖಲಿಸಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲೂ ನ್ಯಾಯಮೂರ್ತಿ ನೀನಾ ಬನ್ಸಾಲ್ ಕೃಷ್ಣ ಅವರು ಇದೇ ರೀತಿಯ ಆದೇಶ ನೀಡಿದ್ದಾರೆ. ಪುರಕಾಯಸ್ಥ ಅವರ ಅರ್ಜಿಯ ವಿಚಾರಣೆ ನಡೆಸಿದ ಕೋರ್ಟ್ ಈ ಆದೇಶ ನೀಡಿದೆ.

ದೆಹಲಿ ಪೊಲೀಸರ ಆರ್ಥಿಕ ಅಪರಾಧ ವಿಭಾಗ (ಇಒಡಬ್ಲ್ಯು) ದಾಖಲಿಸಿದ ಪ್ರಕರಣದಲ್ಲಿ 'ನ್ಯೂಸ್‌ಕ್ಲಿಕ್' ನಿರ್ದೇಶಕರಾದ ಪ್ರಾಂಜಲ್ ಪಾಂಡೆ ಅವರಿಗೂ ಹೈಕೋರ್ಟ್ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ. 2021ರಲ್ಲಿ, ಪುರಕಾಯಸ್ಥ ಹಾಗೂ ಪಾಂಡೆ ಅವರನ್ನು ಬಂಧಿಸದಂತೆ ಹೈಕೋರ್ಟ್ ಮಧ್ಯಂತರ ಆದೇಶ ನೀಡಿತ್ತು.

ಲಾಲೂ ವಿರುದ್ಧ ದೋಷಾರೋಪ ನಿಗದಿ: ಮುಂದೂಡಿಕೆ

ನವದೆಹಲಿ (ಪಿಟಿಐ): ಐಆರ್‌ಸಿಟಿಸಿಗೆ ಸಂಬಂಧಿಸಿದ ಪ್ರಕರಣದಲ್ಲಿ ಆರ್‌ಜೆಡಿ ಅಧ್ಯಕ್ಷ ಲಾಲೂ ಪ್ರಸಾದ್ ಹಾಗೂ ಅವರ ಪತ್ನಿ ರಾಬ್ಡಿ ದೇವಿ, ಪುತ್ರ ತೇಜಸ್ವಿ ಯಾದವ್ ವಿರುದ್ಧ ದೋಷಾರೋಪ ನಿಗದಿ ಪ್ರಕ್ರಿಯೆಯನ್ನು ದೆಹಲಿ ನ್ಯಾಯಾಲಯ ಆಗಸ್ಟ್ 5ರವರೆಗೆ ಮುಂದೂಡಿದೆ.



ಮೇ 29ರಂದು ಅಂತಿಮ ವಿಚಾರಣೆ ನಡೆಸಿದ್ದ ನ್ಯಾಯಾಲಯವು ತನ್ನ ಆದೇಶವನ್ನು ಕಾಯ್ದಿರಿಸಿತ್ತು.

ಸಿಬಿಐ ತಮ್ಮ ವಿರುದ್ಧ ಹೊರಿಸಿರುವ ಭ್ರಷ್ಟಾಚಾರದ ಆರೋಪವನ್ನು ಲಾಲೂ, ರಾಬ್ರಿ ದೇವಿ ಹಾಗೂ ತೇಜಸ್ವಿ ಅವರು ನಿರಾಕರಿಸಿದ್ದಾರೆ.

ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಲು ಪ್ರಬಲ ಪುರಾವೆಗಳಿವೆ ಎಂದು ಸಿಬಿಐ ಫೆಬ್ರುವರಿ 28ರಂದು ನ್ಯಾಯಾಲಯಕ್ಕೆ ತಿಳಿಸಿತ್ತು.

ಸುದ್ದಿ 2 ನಿಮಿಷ


ಬ್ರಿಟನ್, ಮಾಲ್ದೀವ್ಸ್‌ಗೆ ಪ್ರಧಾನಿ ನರೇಂದ್ರ ಮೋದಿ ಭೇಟಿ

ನವದೆಹಲಿ(ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಬ್ರಿಟನ್ ಹಾಗೂ ಮಾಲ್ದೀವ್ಸ್‌ಗೆ ನಾಲ್ಕು ದಿನಗಳ ಪ್ರವಾಸ ಕೈಗೊಂಡಿದ್ದು, ಬುಧವಾರ ಇಲ್ಲಿಂದ ತೆರಳಿದರು.

ಪ್ರವಾಸ ಆರಂಭಕ್ಕೂ ಮುನ್ನ ಹೇಳಿಕೆ ಬಿಡುಗಡೆ ಮಾಡಿರುವ ಅವರು, 'ಉಭಯ ದೇಶಗಳೊಂದಿಗಿನ ಭಾರತದ ದ್ವಿಪಕ್ಷೀಯ ಸಂಬಂಧ ಮತ್ತಷ್ಟು ಬಲಗೊಳ್ಳುವ ವಿಶ್ವಾಸವಿದೆ' ಎಂದಿದ್ದಾರೆ.

'ಬ್ರಿಟನ್ ಜೊತೆ ಭಾರತ ಸಮಗ್ರ ಪಾಲುದಾರಿಕೆ ಹೊಂದಿದ್ದು, ಇತ್ತೀಚಿನ ದಿನಗಳಲ್ಲಿ ಈ ವಿಚಾರದಲ್ಲಿ ಗಮನಾರ್ಹ ಪ್ರಗತಿ ಸಾಧಿಸಲಾಗಿದೆ' ಎಂದು ಹೇಳಿದ್ದಾರೆ.

'ವ್ಯಾಪಾರ, ಹೂಡಿಕೆ, ತಂತ್ರಜ್ಞಾನ, ನಾವೀನ್ಯ, ರಕ್ಷಣಾ ಕ್ಷೇತ್ರ, ಶಿಕ್ಷಣ, ಸಂಶೋಧನೆ, ಸುಸ್ಥಿರತೆ ಹಾಗೂ ಆರೋಗ್ಯ ಕ್ಷೇತ್ರಗಳಿಗೆ ಸಂಬಂಧಿಸಿ ಎರಡೂ ದೇಶಗಳು ವ್ಯಾಪಕ ಸಹಕಾರ ಹೊಂದಿವೆ' ಎಂದು ತಿಳಿಸಿದ್ದಾರೆ.



ಬ್ರಿಟನ್‌ನಲ್ಲಿ ಪ್ರಧಾನಿ ಕಿಯರ್ ಸ್ಟಾರ್ಮರ್, ರಾಜ ಚಾರ್ಲ್ಸ್–3 ಅವರೊಂದಿಗೆ ಮಾತುಕತೆ ನಡೆಸುವರು.

ನಂತರ ಅವರು ಮಾಲ್ದೀವ್ಸ್‌ಗೆ ತೆರಳಿ, ಅಧ್ಯಕ್ಷ ಮೊಹಮದ್ ಮುಯಿಜು ಅವರೊಂದಿಗೆ ಚರ್ಚೆ ನಡೆಸುವರು. ಮಾಲ್ದೀವ್ಸ್‌ನ 60ನೇ ಸ್ವಾತಂತ್ರ್ಯೋತ್ಸವದಲ್ಲಿ ಸಹ ಪಾಲ್ಗೊಳ್ಳುವರು.

ಅಲ್–ಖೈದಾ ಜತೆಗೆ ನಂಟು ನಾಲ್ವರ ಬಂಧನ

ಅಹಮದಾಬಾದ್: ನಿಷೇಧಿತ ಭಯೋತ್ಪಾದಕ ಸಂಘಟನೆ ಅಲ್ ಖೈದಾ– ಭಾರತೀಯ ಉಪಖಂಡದ (ಎಕ್ಯೂಐಎಸ್) ಜತೆಗೆ ಸಂಪರ್ಕ ಹೊಂದಿದ್ದ ಆರೋಪದಲ್ಲಿ ನಾಲ್ಕು ಮಂದಿಯನ್ನು ಗುಜರಾತ್‌ನ ಭಯೋತ್ಪಾದನಾ ನಿಗ್ರಹ ದಳದ (ಎಟಿಎಸ್) ಅಧಿಕಾರಿಗಳು ಬುಧವಾರ ಬಂಧಿಸಿದ್ದಾರೆ.

ಬಂಧಿತರನ್ನು ದೆಹಲಿಯ ನಿವಾಸಿ ಮೊಹಮ್ಮದ್ ಫೈಕ್, ಅಹಮದಾಬಾದ್ ನಿವಾಸಿ ಮೊಹಮ್ಮದ್ ಫದ್ರೀನ್, ಗುಜರಾತ್‌ನ ಮೊಡಾಸ ಜಿಲ್ಲೆಯ ನಿವಾಸಿ ಸೈಫುಲ್ಲಾ ಖುರೇಷಿ, ನೊಯಿಡಾದ ನಿವಾಸಿ ಝೀಶಾನ್ ಅಲಿ ಎಂದು ಗುರುತಿಸಲಾಗಿದೆ.

ಭಾರತೀಯ ಆಡಳಿತ ಸಂಸ್ಥೆಗಳ ವಿರುದ್ಧ ಜನರನ್ನು ಪ್ರಚೋದಿಸುವ, ಹಿಂಸಾಚಾರಕ್ಕೆ ಕರೆ ನೀಡುವಂಥ ಮಾಹಿತಿ ಸಿದ್ಧಪಡಿಸಿ ಅವುಗಳನ್ನು ಇನ್‌ಸ್ಟಾಗ್ರಾಂನಲ್ಲಿ ಆರೋಪಿಗಳು ಹರಿಬಿಡುತ್ತಿದ್ದರು. ಜಿಹಾದಿ ಉದ್ದೇಶವಿರುವಂಥ, ಹಿಂಸಾತ್ಮಕ ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುತ್ತಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಆರೋಪಿಗಳು ಇನ್‌ಸ್ಟಾಗ್ರಾಂನ ಐದು ಖಾತೆಗಳ ಮೂಲಕ ಅಲ್–ಖೈದಾದ ಪ್ರಚೋದನಾಕಾರಿ ವಿಡಿಯೊಗಳನ್ನು ಹರಿಬಿಡುತ್ತಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದರು. ಭಾರತ ನಡೆಸಿದ ಆಪರೇಷನ್ ಸಿಂಧೂರದ ವಿರುದ್ಧ ವದಂತಿ ಹಬ್ಬಿಸಲು ಹಾಗೂ ಭಾರತ ಸರ್ಕಾರವನ್ನು ಗುರಿಯಾಗಿಸಿ ಅಪಪ್ರಚಾರಕ್ಕೆ ಸಂಚು ನಡೆಸಿರುವುದು ಆರೋಪಿಗಳು ನೀಡಿದ ಮಾಹಿತಿಯಿಂದ ತಿಳಿದುಬಂದಿದೆ' ಎಂದೂ ಅಧಿಕಾರಿಗಳು ಹೇಳಿದ್ದಾರೆ.

ನಷ್ಟ ಪರಿಹಾರ: ದೆಹಲಿ ಹೈಕೋರ್ಟ್ ಆದೇಶ ಎತ್ತಿಹಿಡಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಸ್ಪೈಸ್‌ಜೆಟ್ ಕಂಪನಿ ನಷ್ಟ ಪರಿಹಾರವಾಗಿ ₹1,323 ಕೋಟಿ ನೀಡಬೇಕು ಎಂದು ಕೋರಿ ಕೆಎಎಲ್ ಏರ್‌ವೇಸ್ ಹಾಗೂ ಅದರ ಮಾಲೀಕ ಕಲಾನಿಧಿ ಮಾರನ್ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿ ದೆಹಲಿ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ಬುಧವಾರ ಎತ್ತಿ ಹಿಡಿದಿದೆ.



ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಎ.ಎಸ್. ಚಂದೂರ್ಕರ್ ಅವರು ಇದ್ದ ಪೀಠವು, ಈ ಕುರಿತು ಕೆಎಎಲ್ ಏರ್‌ವೇಸ್ ಹಾಗೂ ಕಲಾನಿಧಿ ಮಾರನ್ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿತು.

'ಸಂವಿಧಾನದ 136ನೇ ವಿಧಿ ಅನ್ವಯ, ಈ ಪ್ರಕರಣದಲ್ಲಿ ಮಧ್ಯಪ್ರವೇಶಿಸಲು ತಾನು ಒಲವು ಹೊಂದಿಲ್ಲ' ಎಂದು ಪೀಠ ಸ್ಪಷ್ಟಪಡಿಸಿತು.

ಮೇ 26ರಂದು ಕೆಎಎಲ್ ಏರ್‌ವೇಸ್ ಹಾಗೂ ಮಾರನ್ ಅರ್ಜಿ ವಿಚಾರಣೆ ನಡೆಸಿದ್ದ ದೆಹಲಿ ಹೈಕೋರ್ಟ್‌ನ ವಿಭಾಗೀಯ ಪೀಠ, 'ಪ್ರಕರಣಕ್ಕೆ ಸಂಬಂಧಿಸಿ ಮೇಲ್ಮನವಿ ಸಲ್ಲಿಸುವಲ್ಲಿ ತೀರಾ ವಿಳಂಬ ಮಾಡುವ ಜೊತೆಗೆ, ನ್ಯಾಯಾಲಯದ ಸಮಯ ಹಾಳು ಮಾಡಲಾಗಿದೆ' ಎಂದು ಅರ್ಜಿದಾರರನ್ನು ತರಾಟೆಗೆ ತೆಗೆದುಕೊಂಡಿತ್ತು.

ಪ್ರಕರಣವೇನು: ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಸ್ಪೈಸ್‌ಜೆಟ್ ಕಂಪನಿಯ ಷೇರುಗಳನ್ನು ವರ್ಗಾವಣೆ ಮಾಡುವುದಕ್ಕೆ ಸಂಬಂಧಿಸಿದಂತೆ, ಸ್ಪೈಸ್‌ಜೆಟ್ ಮುಖ್ಯಸ್ಥ ಅಜಯ್ ಸಿಂಗ್ ಹಾಗೂ ಕೆಎಎಲ್ ಏರ್‌ವೇಸ್ ಮತ್ತು ಇದರ ಮಾಲೀಕ ಕಲಾನಿಧಿ ಮಾರನ್ ನಡುವಿನ ವ್ಯಾಜ್ಯ ಇದಾಗಿದೆ.

ನಷ್ಟ ಪರಿಹಾರವಾಗಿ ಸ್ಪೈಸ್‌ಜೆಟ್ ಕಂಪನಿಯು ತಮಗೆ ₹1,323 ಕೋಟಿ ನೀಡಬೇಕು ಎಂದು ಕೋರಿ ಮಾರನ್ ಅವರು ಮಧ್ಯಸ್ಥಿಕೆ ನ್ಯಾಯಮಂಡಳಿ ಮೊರೆ ಹೋಗಿದ್ದರು.

ಈ ಅರ್ಜಿ ತಿರಸ್ಕರಿಸಿದ್ದ ನ್ಯಾಯಮಂಡಳಿ, ಮಾರನ್ ಅವರಿಗೆ ₹579 ಕೋಟಿಯನ್ನು ಬಡ್ಡಿಯೊಂದಿಗೆ ಮರುಪಾವತಿಸುವಂತೆ ಆದೇಶಿಸಿತ್ತು. ಸ್ಪೈಸ್‌ಜೆಟ್ ಹಾಗೂ ಮಾರನ್ ಒಡೆತನದ ಕಂಪನಿಗಳೆರಡೂ ನ್ಯಾಯಮಂಡಳಿ ಆದೇಶ ಪ್ರಶ್ನಿಸಿ, ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದವು.

ಮಾರನ್ ಹಾಗೂ ಅಜಯ್ ಸಿಂಗ್ ಅವರ ಅರ್ಜಿಗಳನ್ನು ಹೈಕೋರ್ಟ್‌ನ ಏಕಸದಸ್ಯ ಪೀಠ ತಿರಸ್ಕರಿಸಿ 2023ರ ಜುಲೈನಲ್ಲಿ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಅಜಯ್ ಸಿಂಗ್ ಅವರು ನಿಗದಿತ 60 ದಿನಗಳ ಒಳಗಾಗಿ ಮೇಲ್ಮನವಿ ಸಲ್ಲಿಸಿದ್ದನ್ನು ಪುರಸ್ಕರಿಸಿದ್ದ ಹೈಕೋರ್ಟ್‌ನ ವಿಭಾಗೀಯ ಪೀಠ, ಸ್ಪೈಸ್‌ಜೆಟ್ ವಾದ ನ್ಯಾಯಸಮ್ಮತ ಎಂದು ಹೇಳಿ, ಹೊಸದಾಗಿ ವಿಚಾರಣೆ ನಡೆಸುವಂತೆ ಏಕ ಸದಸ್ಯ ಪೀಠಕ್ಕೆ ಅರ್ಜಿಯನ್ನು ವರ್ಗಾವಣೆ ಮಾಡಿತ್ತು.

ಉಪ ರಾಷ್ಟ್ರಪತಿ ಹುದ್ದೆಗೆ ದಿಢೀರ್ ರಾಜೀನಾಮೆ ನೀಡಿದ್ದ ಜಗದೀಪ್

ಧನಕರ್ ಉತ್ತರಾಧಿಕಾರಿ ಆಯ್ಕೆ: ಆಯೋಗ ಸಿದ್ಧತೆ

ನವದೆಹಲಿ (ಪಿಟಿಐ): 'ಜಗದೀಪ್ ಧನಕರ್ ಅವರು ಉಪ ರಾಷ್ಟ್ರಪತಿ ಹುದ್ದೆಗೆ ರಾಜೀನಾಮೆ ನೀಡಿದ ಎರಡು ದಿನದ ಬಳಿಕ ನೂತನ ಉಪ ರಾಷ್ಟ್ರಪತಿ ಆಯ್ಕೆ ಸಂಬಂಧ ಚುನಾವಣೆ ಪ್ರಕ್ರಿಯೆಗಳನ್ನು ಆರಂಭಿಸಲಾಗಿದೆ' ಎಂದು ಕೇಂದ್ರ ಚುನಾವಣಾ ಆಯೋಗವು ಬುಧವಾರ ತಿಳಿಸಿದೆ.

ಈಗಾಗಲೇ ಸಂಸತ್‌ನ ಉಭಯ ಸದನಗಳ ಅರ್ಹ ಸದಸ್ಯರ ಮಾಹಿತಿ ಪಡೆಯಲಾಗುತ್ತಿದೆ. ಉಪ ರಾಷ್ಟ್ರಪತಿ ಆಯ್ಕೆ ಪ್ರಕ್ರಿಯೆಯಲ್ಲಿ ಜನರಿಂದ ನೇರವಾಗಿ ಆಯ್ಕೆಯಾದ ಹಾಗೂ ರಾಷ್ಟ್ರಪತಿಗಳಿಂದ ನೇಮಕಗೊಂಡ ಸಂಸತ್‌ನ ಉಭಯ ಸದಸ್ಯರು ಮತ ಚಲಾಯಿಸಲು ಅವಕಾಶವಿದೆ.

ಉಪ ರಾಷ್ಟ್ರಪತಿಯವರ ರಾಜೀನಾಮೆ ಅಂಗೀಕಾರವಾಗಿರುವುದನ್ನು ಗೃಹ ಸಚಿವಾಲಯವು ಔಪಚಾರಿಕವಾಗಿ ತಿಳಿಸಿದೆ. ಅದರ ಬೆನ್ನಲ್ಲೇ, ಆಯೋಗವು ಚುನಾವಣಾ ಸಿದ್ಧತೆಗಳನ್ನು ಆರಂಭಿಸಿದೆ. ಅಲ್ಲದೇ, ಚುನಾವಣಾಧಿಕಾರಿ, ಸಹಾಯಕ ಚುನಾವಣಾಧಿಕಾರಿಗಳನ್ನು ಅಂತಿಮಗೊಳಿಸಿದೆ.

'ಪ್ರಾಥಮಿಕ ಹಂತದ ಚಟುವಟಿಕೆಗಳು ಮುಕ್ತಾಯಗೊಂಡ ಬಳಿಕ ಭಾರತದ ಉಪ ರಾಷ್ಟ್ರಪತಿ ಹುದ್ದೆಯ ಭರ್ತಿಗೆ ಆದಷ್ಟು ಬೇಗ ಚುನಾವಣಾ ದಿನಾಂಕವನ್ನು ಪ್ರಕಟಿಸಲಾಗುವುದು' ಎಂದು ತಿಳಿಸಿದೆ.

ಉಪ ರಾಷ್ಟ್ರಪತಿಯವರು ಮೃತಪಟ್ಟರೆ, ರಾಜೀನಾಮೆ ಅಥವಾ ಪದಚ್ಯುತಿಗೊಳಿಸಿದ ಸಂದರ್ಭದಲ್ಲಿ ಸಂವಿಧಾನದ 68ನೇ ವಿಧಿಯ ಕಲಂ 2ರ ಅನುಗುಣವಾಗಿ, ಆದಷ್ಟು ಬೇಗ ಚುನಾವಣೆ ನಡೆಸುವ ಮೂಲಕ ಹುದ್ದೆ ಭರ್ತಿ ಮಾಡಬೇಕು ಎಂದು ತಿಳಿಸಲಾಗಿದೆ. ಆದರೆ ನಿರ್ದಿಷ್ಟ ಗಡುವು ವಿಧಿಸಿಲ್ಲ.

ಖಾಲಿಯಿರುವ ಹುದ್ದೆಗೆ ಆಯ್ಕೆಯಾದ ವ್ಯಕ್ತಿಯು ತಮ್ಮ ಕಚೇರಿಗೆ ಪ್ರವೇಶಿಸಿದ ದಿನದಂದು ಐದು ವರ್ಷಗಳ ಕಾಲ ಅಧಿಕಾರ ಹೊಂದಿರುತ್ತಾರೆ.

ಆಯೋಗವು ಅಧಿಸೂಚನೆ ಹೊರಡಿಸಿದ ನಂತರ, ನಾಮಪತ್ರ ಸಲ್ಲಿಕೆ, ಪರಿಶೀಲನೆ, ಹಿಂಪಡೆಯುವಿಕೆ, ಮತದಾನ ಹಾಗೂ ಎಣಿಕೆ ಪ್ರಕ್ರಿಯೆಯೂ 30 ದಿನಗಳ ಒಳಗಾಗಿ ಪೂರ್ಣಗೊಳ್ಳಬೇಕು.

ಎನ್‌ಡಿಎಗೆ ಸರಳ ಬಹುಮತ: ನೂತನ ಉಪ ರಾಷ್ಟ್ರಪತಿ ಆಯ್ಕೆ ಮಾಡಲು ಎನ್‌ಡಿಎ ಒಕ್ಕೂಟವು ಸಂಸತ್ತಿನಲ್ಲಿ ಸರಳ ಬಹುಮತ ಹೊಂದಿದೆ.

ಲೋಕಸಭೆಯ 543 ಸದಸ್ಯರ ಪೈಕಿ ಪಶ್ಚಿಮ ಬಂಗಾಳದ ಬಶೀರ್‌ಹಾಟ್ ಕ್ಷೇತ್ರದ ಸಂಸದ ಹಾಜಿ ನುರೂಲ್ ಇಸ್ಲಾಂ ನಿಧನದಿಂದ ಕ್ಷೇತ್ರ ತೆರವಾಗಿದೆ. ರಾಜ್ಯಸಭೆಯ 245 ಸದಸ್ಯರ ಪೈಕಿ 5 ಕ್ಷೇತ್ರ ಖಾಲಿಯಿವೆ.

ಜಮ್ಮು ಮತ್ತು ಕಾಶ್ಮೀರದಿಂದ ನಾಲ್ಕು ರಾಜ್ಯಸಭಾ ಸ್ಥಾನಗಳು ಖಾಲಿ ಉಳಿದಿವೆ. ಪಂಜಾಬ್‌ನ ಆಮ್ ಆದ್ಮಿ ಪಕ್ಷದ ಮುಖಂಡ ಸಂಜೀವ್ ಅರೋರಾ ಅವರು ಕಳೆದ ತಿಂಗಳು ಉಪ ಚುನಾವಣೆಯಲ್ಲಿ ಶಾಸಕರಾಗಿ ಆಯ್ಕೆಯಾದ ಬಳಿಕ ರಾಜ್ಯಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಉಭಯ ಸದನಗಳಲ್ಲಿ 786 ಮಂದಿ ಅರ್ಹ ಮತದಾರರಿದ್ದು, ಗೆಲುವಿಗೆ 394 ಮತಗಳು ಅಗತ್ಯ. ಲೋಕಸಭೆಯಲ್ಲಿ ಎನ್‌ಡಿಎ ಒಕ್ಕೂಟವು 542ರ ಪೈಕಿ 293 ಸದಸ್ಯರ ಬೆಂಬಲ ಹೊಂದಿದ್ದು, ರಾಜ್ಯಸಭೆಯಲ್ಲಿ 129 ಸದಸ್ಯರ ಬಲ ಹೊಂದಿದ್ದು, ಆಡಳಿತಾರೂಢ ಒಕ್ಕೂಟವು ಒಟ್ಟು 422 ಸದಸ್ಯರ ಬೆಂಬಲ ಹೊಂದಿದೆ.

ಅರ್ಹತೆಗಳೇನು?

- ಭಾರತದ ಪ್ರಜೆಯಾಗಿರಬೇಕು
- 35 ವರ್ಷ ವಯಸ್ಸಾಗಿರಬೇಕು
- ಯಾವುದೇ ಲಾಭಧಾಯಕ ಹುದ್ದೆ ಹೊಂದಿರಬಾರದು

ರಾಜೀನಾಮೆಗೂ ಮುನ್ನ ರಾಷ್ಟ್ರಪತಿ ಭೇಟಿ

ಒಂದನೇ ಪುಟದಿಂದ...

74 ವರ್ಷದ ಧನಕರ್ ಅವರು 2022ರ ಆಗಸ್ಟ್‌ನಲ್ಲಿ ಉಪರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕರಿಸಿದ್ದು, ಅವರ ಅವಧಿ 2027ಕ್ಕೆ ಕೊನೆಗೊಳ್ಳುತ್ತಿತ್ತು. ರಾಜಸಭೆಯ ಅಧ್ಯಕ್ಷರಾಗಿದ್ದ ಧನಕರ್ ಅವರು ಸಂಸತ್‌ನ ಮಳೆಗಾಲದ ಅಧಿವೇಶನದ ಮೊದಲ ದಿನ ಭಾಗವಹಿಸಿ, ನಂತರ ರಾಜೀನಾಮೆ ಸಲ್ಲಿಸಿದ್ದರು.

ಮೋದಿ ಭೇಟಿಯಾದ ಶಾ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬುಧವಾರ ಸಂಸತ್‌ನಲ್ಲಿರುವ ಕಚೇರಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು.

ಧನಕರ್ ರಾಜೀನಾಮೆ ಬೆನ್ನಲ್ಲೇ ಈ ಭೇಟಿ ನಡೆದಿದೆ ಎಂದು ವಿಶ್ಲೇಷಿಸಲಾಗಿದೆ. ಈ ಬಗ್ಗೆ ಉಭಯ ನಾಯಕರು ಚರ್ಚಿಸಿದ್ದಾರೆ ಎನ್ನಲಾಗಿದೆ. ಇದಾದ ಬಳಿಕ ಪ್ರಧಾನಿ ಬ್ರಿಟನ್ ಹಾಗೂ ಮಾಲ್ದೀವ್ಸ್ ಪ್ರವಾಸಕ್ಕೆ ಹೊರಟರು.

'ಊಹಾಪೋಹಕ್ಕೆ ಉತ್ತರಿಸಿ': 'ಧನಕರ್ ಅವರು ರಾಜೀನಾಮೆ ನೀಡುವ ಮುನ್ನ ಸುತ್ತಲೂ ಸೃಷ್ಟಿಯಾದ ಸಂದರ್ಭಗಳ ಕುರಿತು ಸರ್ಕಾರ ಸ್ಪಷ್ಟನೆ ನೀಡಬೇಕು. ಸಾಂವಿಧಾನಿಕವಾದ ಎರಡನೇ ಅತ್ಯುನ್ನತ ಹುದ್ದೆಯ ಗೌರವ ಕಾಪಾಡಬೇಕು ಹಾಗೂ ಬೆಳೆಯುತ್ತಿರುವ ಊಹಾಪೋಹ ಪರಿಹರಿಸಬೇಕು' ಎಂದು ಸಿಪಿಎಂ ಸಂಸದ ಜಾನ್ ಬ್ರಿಟ್ಟಾಸ್ ಆಗ್ರಹಿಸಿದ್ದಾರೆ.

'ಒಂದೊಮ್ಮೆ ಸರ್ಕಾರವು ಈ ವಿಚಾರದಲ್ಲಿ ಮೌನ ವಹಿಸಿದರೆ, ಧನಕರ್ ಅವರು ತಮ್ಮ ಮೌನ ಮುರಿದು ಕಚೇರಿಯ ಘನತೆ ಎತ್ತಿ ಹಿಡಿಯಬೇಕು' ಎಂದು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಮಾಡಿದ ಪೋಸ್ಟ್‌ನಲ್ಲಿ ಒತ್ತಾಯಿಸಿದ್ದಾರೆ.

'ಧನಕರ್ ಅವರನ್ನು ಉಪರಾಷ್ಟ್ರಪತಿ ಹುದ್ದೆಗೆ ಅಭ್ಯರ್ಥಿಯಾಗಿ ಪರಿಗಣಿಸುವ ವೇಳೆ ರೈತನ ಮಗ (ಕಿಸಾನ್ ಪುತ್ರ) ಎಂದೇ ಪ್ರಧಾನಿ ನರೇಂದ್ರ ಅವರು ಉತ್ಸಾಹಭರಿತರಾಗಿ ಅನುಮೋದಿಸಿದ್ದರು. ಆದರೆ, ಅವರು ಹುದ್ದೆಗೆ ರಾಜೀನಾಮೆ ನೀಡಿದ ಬಳಿಕ ವಿಳಂಬವಾದ ಹೇಳಿಕೆಯು ಒಳಸಂಚಿನ ಕುರಿತ ಅನುಮಾನವನ್ನು ಹೆಚ್ಚಿಸುತ್ತಿದೆ' ಎಂದು ಬ್ರಿಟ್ಟಾಸ್ ತಿಳಿಸಿದ್ದಾರೆ.

ರಾಜೀನಾಮೆಗೆ ರಾಜಕೀಯ ಸ್ವರೂಪ

ಗುವಾಹಟಿ (ಪಿಟಿಐ): 'ಉಪ ರಾಷ್ಟ್ರಪತಿಯವರ ರಾಜೀನಾಮೆ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಸಾಮಾಜಿಕ ಜಾಲ ತಾಣದಲ್ಲಿ ಮಾಡಿದ ಪೋಸ್ಟ್ ಗಮನಿಸಿದರೆ, ರಾಜೀನಾಮೆಯು ರಾಜಕೀಯ ಸ್ವರೂಪ ಹೊಂದಿದೆ' ಎಂದು ಲೋಕಸಭೆಯ ವಿರೋಧ ಪಕ್ಷದ ಉಪ ನಾಯಕ ಗೌರವ್ ಗೊಗೊಯಿ ಹೇಳಿದ್ದಾರೆ.



'ಸಾಂವಿಧಾನಿಕ ಹುದ್ದೆಯ ಘನತೆ ಕಾಪಾಡಬೇಕಾದರೆ ಅವರು ರಾಜೀನಾಮೆಯಲ್ಲಿಯೂ ಈ ಘನತೆ ಕಾಣಿಸಿಕೊಳ್ಳಬೇಕು. ಪ್ರಧಾನಿ ನರೇಂದ್ರ ಮೋದಿ ಅವರ ಪೋಸ್ಟ್ ಗಮನಿಸಿದರೆ, ರಾಜಕೀಯ ಕಾರಣಕ್ಕಾಗಿಯೇ ರಾಜೀನಾಮೆ ನೀಡಿರುವುದು ಬಯಲಾಗಿದೆ' ಎಂದು ಗೊಗೊಯಿ ಸಾಮಾಜಿಕ ಜಾಲತಾಣದಲ್ಲಿನ ತಮ್ಮ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ಗೊಗೊಯಿ ಅವರುತಮ್ಮ ಪೋಸ್ಟ್‌ನಲ್ಲಿ ಎಲ್ಲಿಯೂ ಧನಕರ್ ಹೆಸರು ಉಲ್ಲೇಖಿಸಿಲ್ಲ.

ಧಾರವಾಡ, ಗದಗ, ಹಾವೇರಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ರೈತರು ಯೂರಿಯಾ ಗೊಬ್ಬರಕ್ಕಾಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಗೋದಾಮುಗಳ ಎದುರು ಕಾಯುವುದು, ಗೊಬ್ಬರ ಬಂದ ತಕ್ಷಣ ಖರೀದಿಸಲು ಮುಗಿಬೀಳುವುದು ಸಾಮಾನ್ಯವಾಗಿದೆ. ಕೊಪ್ಪಳದಲ್ಲಿ ಪೂರೈಕೆ ಇದ್ದರೂ ಅಸಮರ್ಪಕ ವಿಲೇವಾರಿಯಿಂದ ತೊಂದರೆಯಾಗಿದೆ. ದಕ್ಷಿಣ ಕನ್ನಡ, ಹಳೇ ಮೈಸೂರು ಭಾಗದ ಜಿಲ್ಲೆಗಳಲ್ಲಿ ಗೊಬ್ಬರದ ಕೊರತೆ ಇಲ್ಲ. ದಾವಣಗೆರೆಯಲ್ಲಿ ದುಪ್ಪಟ್ಟು ದರದಲ್ಲಿ ಗೊಬ್ಬರ ಮಾರಾಟ ಮಾಡಲಾಗುತ್ತಿದೆ ಎನ್ನುವುದು ರೈತರ ದೂರು. ಬೆಂಗಳೂರು ಗ್ರಾಮಾಂತರ ಸೇರಿ ಬಯಲುಸೀಮೆ ಜಿಲ್ಲೆಗಳಲ್ಲಿ ಮಳೆ ಕೊರತೆ ಕಾರಣ ಬಿತ್ತನೆ ವಿಳಂಬವಾಗಿದ್ದು, ಯೂರಿಯಾ ಸೇರಿ ರಸಗೊಬ್ಬರ ಕೇಳುವರೇ ಇಲ್ಲದಂತಾಗಿದೆ.

ಯೂರಿಯಾ ಗೊಬ್ಬರ

ಅಗತ್ಯವಿದ್ದಲ್ಲಿ ಕೊರತೆ ಉಳಿದೆಡೆ ದಾಸ್ತಾನು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಮುಂಗಾರು ಕೃಷಿ ಚಟುವಟಿಕೆ ಆರಂಭಗೊಂಡು ತಿಂಗಳು ಕಳೆದರೂ ಕೆಲ ವೆಡೆ ರಸಗೊಬ್ಬರಕ್ಕಾಗಿ ರೈತರು ಅಲೆದಾಡುತ್ತಿದ್ದಾರೆ. ಧಾರವಾಡ, ಗದಗ ಜಿಲ್ಲೆಯಲ್ಲಿ ಯೂರಿಯಾ ಕೊರತೆ ಇದ್ದು, ಕೃಷಿ ಇಲಾಖೆ ಗೊಬ್ಬರ ಒದಗಿಸಲು ಕ್ರಮ ವಹಿಸಬೇಕು' ಎಂದು ರೈತ ಶಂಕರಪ್ಪ ಅಂಬಲಿ ಒತ್ತಾಯಿಸಿದರು. ಸರ್ಕಾರ ರೈತರ ಬೇಡಿಕೆಗೆ ತಕ್ಕಷ್ಟು ಯೂರಿಯಾ ಪೂರೈಸಬೇಕು' ಎಂದು ರಾಜ್ಯ ರೈತ ಸಂಘದ ಗದಗ ಜಿಲ್ಲಾ ಘಟಕದ ಕಾರ್ಯದರ್ಶಿ ಶಿವಾನಂದ ಇಟಗಿ ಒತ್ತಾಯಿಸಿದರು.

'ಅಗತ್ಯ ಇರುವಷ್ಟು ರಸಗೊಬ್ಬರ ಪೂರೈಸಲು ನೆರವು ಕೋರಿ ಸಂಸದ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಲಾಗಿದೆ' ಎಂದು ಗದಗ ಜಿಲ್ಲಾ ಕೃಷಿ ಇಲಾಖೆ ಜಂಟಿ ನಿರ್ದೇಶಕಿ ಜಿ.ಎಚ್.ತಾರಾಮಣಿ ಹೇಳಿದರು.

'ಯೂರಿಯಾ ಸೇರಿ ಜಿಲ್ಲೆಯಾದ್ಯಂತ ಗೊಬ್ಬರದ ಕೊರತೆ ಉಂಟಾಗಿದೆ' ಎಂದು ಹಾವೇರಿ ಜಿಲ್ಲೆಯ ರೈತರು ಆರೋಪಿಸಿದ್ದಾರೆ. ಆದರೆ, ಹಾವೇರಿ ಜಿಲ್ಲೆಯ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಕೆ. ಮಲ್ಲಿಕಾರ್ಜುನ ಅವರು, 'ಹಳೆಯದ್ದು ಹಾಗೂ ಹೊಸ ದಾಸ್ತಾನು ಸೇರಿ 59,507 ಟನ್ ಗೊಬ್ಬರ ಜಿಲ್ಲೆಯಲ್ಲಿ ಹಂಚಿಕೆ ಮಾಡಲಾಗಿದೆ' ಎಂದಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಯೂರಿಯಾ ಕೊರತೆಯ ದೂರುಗಳಿವೆ. ಬನವಾಸಿ, ಮುಂಡಗೋಡ ಭಾಗದಲ್ಲಿ ಭತ್ತ, ಮೆಕ್ಕೆಜೋಳ ಬಿತ್ತನೆ ಮಾಡಿರುವ ರೈತರು ಯೂರಿಯಾ ಖರೀದಿಗೆ ಅಲೆದಾಡುತ್ತಿದ್ದಾರೆ.

'ಯೂರಿಯಾ ದಾಸ್ತಾನು ಇಲ್ಲ ಎಂದು ವ್ಯಾಪಾರಿಗಳು ಹೇಳುತ್ತಿದ್ದಾರೆ. ಉಳಿದ ರಸಗೊಬ್ಬರಗಳ ಪೂರೈಕೆ ಸಾಕಷ್ಟಿದೆ' ಎಂದು ರೈತ ಸಂಘ ಹಸಿರು ಸೇನೆಯ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ನಾಯ್ಕ ಕಿರವತ್ತಿ ಹೇಳಿದರು.

'ಯೂರಿಯಾದಲ್ಲಿ ಸಾರಜನಕ ಅಂಶ ಮಾತ್ರವೇ ಇದ್ದು, ಇದು ಸಸಿಗಳನ್ನು ಹಸಿರಾಗಿಸುತ್ತದೆಯೇ ಹೊರತು ಫಸಲು ಹೆಚ್ಚಾಗುವುದಿಲ್ಲ. ಪೊಟ್ಯಾಷಿಯಂ, ರಂಜಕದ ಅಂಶವುಳ್ಳ ರಸಗೊಬ್ಬರ ಬಳಕೆಗೂ ಆದ್ಯತೆ ನೀಡಬೇಕು' ಎಂದು ಉತ್ತರ ಕನ್ನಡ ಜಿಲ್ಲೆಯ ಕೃಷಿ ಇಲಾಖೆ ಜಂಟಿ ನಿರ್ದೇಶಕರ ಶಿವಪ್ರಸಾದ ಗಾಂವಕರ್ ತಿಳಿಸಿದರು.

ವಿಜಯನಗರ, ಬಳ್ಳಾರಿ, ಬೆಳಗಾವಿ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಯೂರಿಯಾ ಗೊಬ್ಬರದ ದಾಸ್ತಾನು ಇದೆ. 'ರೈತರಿಗೆ ದ್ರವರೂಪದ ಯೂರಿಯಾ (ಲಿಕ್ವಿಡ್) ಬಳಕೆ ಬಗ್ಗೆ ಮನವರಿಕೆ ಮಾಡಲಾಗುತ್ತಿದೆ ಎಂದು ವಿಜಯನಗರ ಜಂಟಿ ಕೃಷಿ ನಿರ್ದೇಶಕ ಡಿ.ಟಿ. ಮಂಜುನಾಥ್ ಹೇಳಿದರು.

'ನ್ಯಾನೊ ಯೂರಿಯಾಕ್ಕೆ ಜಿಲ್ಲೆಯಲ್ಲಿ ಕೊರತೆ ಇಲ್ಲ. ಆದರೆ, ರೈತರು ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಿಲ್ಲ' ಎಂದು ವಿಜಯಪುರ ಜಂಟಿ ಕೃಷಿ ನಿರ್ದೇಶಕ ಶಿವನಗೌಡ ಎಸ್.ಪಾಟೀಲ ಹೇಳಿದರು.

ಬಳ್ಳಾರಿ ಜಿಲ್ಲೆಯಲ್ಲಿ ಸದ್ಯ 43 ಸಾವಿರ ಟನ್ ದಾಸ್ತಾನು ಇದೆ ಎಂದು ಕೃಷಿ ಇಲಾಖೆ ಉಪ ನಿರ್ದೇಶಕ ಸೋಮಸುಂದರ್ ತಿಳಿಸಿದರು. 'ಲಿಕ್ವಿಡ್ ಯೂರಿಯಾವನ್ನೂ ಕಡ್ಡಾಯವಾಗಿ ಖರೀದಿಸುವಂತೆ ಒತ್ತಡ ಹೇರಲಾಗುತ್ತಿದೆ' ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಮಾಧವ ರೆಡ್ಡಿ ಆರೋಪಿಸಿದರು. 'ಬೆಳಗಾವಿ ಜಿಲ್ಲೆಯಲ್ಲಿ 81,104 ಟನ್ ಯೂರಿಯಾ ವಿತರಿಸಿದ್ದೇವೆ. 15,795 ಟನ್ ಉಳಿದಿದೆ' ಎಂದು ಕೃಷಿ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು.

> **ಎಕರೆಗೆ ಒಂದೂವರೆ ಚೀಲದಿಂದ ಎರಡು ಚೀಲ ಗೊಬ್ಬರ ಹಾಕಿದರೆ ಸಾಕು. ಹಲವರು ಮಿತಿಮೀರಿ ಹಾಕುತ್ತಾರೆ. ನ್ಯಾನೊ ಯೂರಿಯಾ ಬಳಸಬಹುದು**
> **ಮಂಜುನಾಥ ಅಂತರವಳ್ಳಿ,** ಧಾರವಾಡ ಜಿಲ್ಲಾ ಜಂಟಿ ಕೃಷಿ ನಿರ್ದೇಶಕ

> **ಡ್ರೋನ್ ಬಳಸಿ ಲಿಕ್ವಿಡ್ ಯೂರಿಯಾ ಹಾಕುವ ವಿಧಾನ ಬಹಳ ಉಪಯುಕ್ತ. ನಾನು ನನ್ನ 20 ಎಕರೆ ಗದ್ದೆಗೆ ಈ ವಿಧಾನ ಬಳಸುತ್ತಿದ್ದೇನೆ. ರೈತರು ತಮ್ಮ ಮನಸ್ಥಿತಿ ಬದಲಿಸಿಕೊಳ್ಳಬೇಕು**
> **ಮುನಿಸ್ವಾಮಿ,** ರೈತ, ಬಸವನದುರ್ಗ

> **ಯೂರಿಯಾ ಗೊಬ್ಬರಕ್ಕೆ ನಿಗದಿಗಿಂತ ಹೆಚ್ಚು ಹಣ ಪಡೆದರೆ, ಅಕ್ರಮ ದಾಸ್ತಾನು ಮಾಡಿದರೆ ದೂರು ನೀಡಿ**
> **ರುದ್ರೇಶಪ್ಪ ಟಿ. ಎಸ್.**
> ಕೃಷಿ ಇಲಾಖೆ ಜಂಟಿ ನಿರ್ದೇಶಕ, ಕೊಪ್ಪಳ



ಹಾವೇರಿ ತಾಲ್ಲೂಕಿನ ಕಾಟೇನಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ (ಸೊಸೈಟಿ) ಗೋದಾಮು ಎದುರು ಯೂರಿಯಾ ಗೊಬ್ಬರಕ್ಕಾಗಿ ಸಾಲಿನಲ್ಲಿ ನಿಂತಿದ್ದ ರೈತರು

ಪೂರೈಕೆ ಹೆಚ್ಚಿದ್ದರೂ, ಕೊರತೆ

ಕೊಪ್ಪಳ: ಜಿಲ್ಲೆಯಲ್ಲಿ ಯೂರಿಯಾ ಬೇಡಿಕೆಗಿಂತ ಹೆಚ್ಚು ಪೂರೈಕೆಯಾದರೂ, ಅಸಮರ್ಪಕ ವಿಲೇವಾರಿಯಿಂದ ರೈತರು ಪರದಾಡುವಂತಾಗಿದೆ.

ಜಿಲ್ಲೆಯಲ್ಲಿ 33,459 ಟನ್ ರಸಗೊಬ್ಬರದ ದಾಸ್ತಾನು ಇದ್ದು, ಇದರಲ್ಲಿ 28,757 ಟನ್ ವಿತರಣೆ ಮಾಡಲಾಗಿದೆ. .

ರಾಯಚೂರು ಜಿಲ್ಲೆಯಲ್ಲಿ ರಸಗೊಬ್ಬರದ ಕೊರತೆ ಇಲ್ಲ ಎಂದು ಜಂಟಿ ಕೃಷಿ ನಿರ್ದೇಶಕ ಪ್ರಕಾಶ ಚವ್ಹಾಣ ಹೇಳಿದರು. 'ಬೀದರ್ ಜಿಲ್ಲೆಯಲ್ಲಿ ನ್ಯಾನೊ ಯೂರಿಯಾ ಲಭ್ಯತೆ ಇದೆ. ಆದರೆ, ರೈತರು ಅದನ್ನು ಖರೀದಿಸುತ್ತಿಲ್ಲ' ಎಂದು ಜಂಟಿ ಕೃಷಿ ನಿರ್ದೇಶಕಿ ದೇವಿಕಾ ಆರ್. ಹೇಳಿದರು. 'ಕಲಬುರಗಿ ಜಿಲ್ಲೆಯಲ್ಲಿ 3,665 ಟನ್ ಯೂರಿಯಾ ಉಳಿದಿದೆ' ಎಂದು ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ತಿಳಿಸಿದ್ದಾರೆ.

'ಯಾದಗಿರಿ ಜಿಲ್ಲೆಯಲ್ಲಿ 8,258 ಮೆಟ್ರಿಕ್ ಟನ್ ದಾಸ್ತಾನು ಇದೆ' ಎಂದು ಜಂಟಿ ಕೃಷಿ ನಿರ್ದೇಶಕ ರತೇಂದ್ರನಾಥ ಸೂಗೂರು ಹೇಳಿದರು.

ದುಪ್ಪಟ್ಟು ದರದಲ್ಲಿ ಮಾರಾಟ

ದಾವಣಗೆರೆ: ಜಿಲ್ಲೆಯಲ್ಲಿ ಯೂರಿಯೂ ಲಭ್ಯವಿದ್ದರೂ, ರೈತರು ದುಬಾರಿ ಮೊತ್ತ ಪಾವತಿಸಿ ಖರೀದಿಸಬೇಕಾದ ಅನಿವಾರ್ಯ ಇದೆ. '50 ಕೆ.ಜಿ. ತೂಕದ, ₹265 ಬೆಲೆಯ ಒಂದು ಚೀಲ ಗೊಬ್ಬರ ₹400 ರಿಂದ ₹600ರವರೆಗೂ ಮಾರಾಟವಾಗುತ್ತಿದೆ' ಎಂದು ರೈತ ಕೊಳೇನಹಳ್ಳಿ ಬಿ.ಎಂ.ಸತೀಶ್ ದೂರಿದರು.

'ಹೆಚ್ಚಿನ ದರಕ್ಕೆ ರಸಗೊಬ್ಬರ ಮಾರಾಟ ಮಾಡಿದ ಅಂಗಡಿಗಳ ಮಾಲೀಕರ ವಿರುದ್ಧ ಪ್ರಸಕ್ತ ಸಾಲಿನಲ್ಲಿ 4 ಪ್ರಕರಣಗಳು ದಾಖಲಾಗಿವೆ' ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಜಿಯಾವುಲ್ಲಾ ಕೆ. ತಿಳಿಸಿದರು. ಚಿತ್ರದುರ್ಗದಲ್ಲಿ ₹280 ಬೆಲೆಯ ಪ್ರತಿ ಚೀಲ ಯೂರಿಯಾ ದರ ₹500ಕ್ಕೆ ಹೆಚ್ಚಿರುವುದು ರೈತರ ಆಕ್ರೋಶಕ್ಕೆ ಕಾರಣವಾಗಿದೆ. 'ಅಂಗಡಿ ಮಾಲೀಕರ ಕಳ್ಳಾಟದಿಂದ ರೈತರು ಪರದಾಡುವಂತಾಗಿದೆ' ಎಂದು ರೈತ ಡಿ.ಎಸ್.ಹಳ್ಳಿ ಮಲ್ಲಿಕಾರ್ಜುನ ಆರೋಪಿಸಿದರು. 'ಜಿಲ್ಲೆಯಲ್ಲಿ ಗೊಬ್ಬರ ಕೊರತೆಯಾಗದಂತೆ ಕ್ರಮ ವಹಿಸಲಾಗಿದೆ' ಎಂದು ಕೃಷಿ ಜಂಟಿ ನಿರ್ದೇಶಕ ಬಿ.ಮಂಜುನಾಥ್ ಹೇಳಿದರು.

ಮಳೆಗಾಲದಲ್ಲಿ ಗೊಬ್ಬರ ಬಳಕೆ ಕಡಿಮೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೊಬ್ಬರಕ್ಕೆ ಕೊರತೆ ಇಲ್ಲ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಹೊನ್ನಪ್ಪ ಗೌಡ ತಿಳಿಸಿದರು. 'ಯೂರಿಯಾವನ್ನು ಸೆಪ್ಟೆಂಬರ್‌ನಲ್ಲಿ ಅಡಿಕೆ ಬೆಳೆಗೆ ಬಳಸುತ್ತಾರೆ. ಭತ್ತದ ನಾಟಿ ಈಗಷ್ಟೇ ಅಗುತ್ತಿದೆ. ಅದಕ್ಕೆ ಒಂದು ತಿಂಗಳ ನಂತರವಷ್ಟೇ ಗೊಬ್ಬರ ಬಳಸುತ್ತಾರೆ' ಎಂದರು.

ಉಡುಪಿ ಜಿಲ್ಲೆಯಲ್ಲಿ ರೈತರು ರಸಗೊಬ್ಬರಗಳನ್ನು ಕಡಿಮೆ ಬಳಸುತ್ತಾರೆ. ಕೋಳಿ ಗೊಬ್ಬರ ಸೇರಿದಂತೆ ಸಾವಯವ ಗೊಬ್ಬರ ಬಳಸುತ್ತಾರೆ. ಹೀಗಾಗಿ ಯೂರಿಯಾ ಸೇರಿದಂತೆ ಯಾವುದೇ ರಸಗೊಬ್ಬರಗಳ ಕೊರತೆ ಎದುರಾಗಿಲ್ಲ ಎಂದು ರೈತರು ತಿಳಿಸಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಸದ್ಯಕ್ಕೆ ಯಾವುದೇ ಸಮಸ್ಯೆ ಇಲ್ಲ. ಬಯಲು ಸೀಮೆಯಲ್ಲಿ ಮಳೆ ಕೊರತೆ ಇರುವುದರಿಂದ ಯೂರಿಯಾ ಬೇಡಿಕೆ ಕಾಣಿಸುತ್ತಿಲ್ಲ.

'ಬೇಡಿಕೆಗಿಂತ ಹೆಚ್ಚು ಲಭ್ಯ

ಮೈಸೂರು: ಹಳೇ ಮೈಸೂರು ಭಾಗದ ಜಿಲ್ಲೆಗಳಲ್ಲಿ ಕೃಷಿ ಚಟುವಟಿಕೆ ಗರಿಗೆದರಿದ್ದು, ಅಗತ್ಯಕ್ಕೆ ತಕ್ಕಷ್ಟು ರಸಗೊಬ್ಬರದ ದಾಸ್ತಾನಿದೆ. ಶ್ರೀರಂಗಪಟ್ಟಣ ಹೊರತು ಪಡಿಸಿ ಬಹುತೇಕ ಕಡೆಗಳಲ್ಲಿ ಕೊರತೆಯಾಗಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ.

ಮೈಸೂರು ಜಿಲ್ಲೆಯಲ್ಲಿ ಬೇಡಿಕೆಗೆ ಹಲವು ಪಟ್ಟು ಹೆಚ್ಚಿನ ದಾಸ್ತಾನು ಇದೆ. ಸದ್ಯದಲ್ಲಿ ರಸಗೊಬ್ಬರದ ಕೊರತೆ ಆಗದು ಎನ್ನುತ್ತಾರೆ ಜಂಟಿ ಕೃಷಿ ನಿರ್ದೇಶಕ ಕೆ.ಎಚ್. ರವಿ.

ಕೊಡಗು ಜಿಲ್ಲೆಯಲ್ಲಿ ಸದ್ಯಕ್ಕೆ ಯಾವುದೇ ಕೊರತೆ ಇಲ್ಲ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಚಂದ್ರಶೇಖರ ತಿಳಿಸಿದರು. 'ಮಂಡ್ಯ ಜಿಲ್ಲೆಯಲ್ಲಿ 19,343 ಯೂರಿಯಾವನ್ನು ಮಾರಾಟ ಮಾಡಿದ್ದೇವೆ. 7,519 ಟನ್ ದಾಸ್ತಾನು ಇದೆ' ಎಂದು ಕೃಷಿ ಅಧಿಕಾರಿಗಳು ತಿಳಿಸಿದ್ದಾರೆ. ಚಾಮರಾಜನಗರ ಜಿಲ್ಲೆಯಲ್ಲಿ 8,539 ಟನ್‌ನಷ್ಟು ಗೊಬ್ಬರವನ್ನು ರೈತರು ಖರೀದಿಸಿದ್ದು, ಇನ್ನೂ 4218 ಟನ್ ಉಳಿದಿದೆ. ಮಾರಾಟಗಾರರು ಪೋರ್ಟಲ್‌ನಲ್ಲಿ ಗೊಬ್ಬರ ಮಾರಾಟದ ವಿವರ ದಾಖಲಿಸುತ್ತಿಲ್ಲ. ರಾಜ್ಯದಲ್ಲೇ ಹಾಸನ ಜಿಲ್ಲೆಯ ಪಿಎಸಿಎಸ್‌ನಲ್ಲಿ ಅತಿ ಹೆಚ್ಚು ಯೂರಿಯಾ ಉಳಿದಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ.

ಕೇಳುವವರೇ ಇಲ್ಲ!

ಬಯಲುಸೀಮೆ ಜಿಲ್ಲೆಗಳಲ್ಲಿ ಮಳೆ ಕೊರತೆ ಕಾರಣ ಪೂರ್ಣ ಪ್ರಮಾಣದ ಬಿತ್ತನೆ ಕಾರ್ಯ ಇನ್ನೂ ಆರಂಭವಾಗಿಲ್ಲ. ಹಾಗಾಗಿ ಯೂರಿಯಾ ಹಾಗೂ ಇತರ ರಸಗೊಬ್ಬರಗಳನ್ನು ಕೇಳುವವರು ಇಲ್ಲದಂತಾಗಿದೆ.

ರಾಗಿ, ಶೇಂಗಾ ಬಿತ್ತನೆಗೆ ಸೆ. 15ರವರೆಗೆ ಕಾಲಾವಕಾಶ ಇದ್ದು, ರೈತರು ಖರೀದಿಗೆ ಮುಗಿಬೀಳುತ್ತಿಲ್ಲ.ಮಳೆ ಕೊರತೆಯಿಂದಾಗಿ ಈ ವರ್ಷ ರಸಗೊಬ್ಬರಕ್ಕೆ ಬೇಡಿಕೆ ಕುಸಿದಿದೆ.

ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಡಿಎಪಿ ಗೊಬ್ಬರಕ್ಕೆ ಮಾತ್ರ ಹೆಚ್ಚಿನ ಬೇಡಿಕೆ ಇದೆ. ಪರ್ಯಾಯ ಗೊಬ್ಬರ ಬಳಕೆ ಮಾಡುವಂತೆ ರೈತರಿಗೆ ಸಲಹೆ ಮಾಡಲಾಗಿದೆ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ಅಂಬಿಕಾ ತಿಳಿಸಿದ್ದಾರೆ.

ಡಿಎಪಿಗೆ ಬದಲಾಗಿ ನ್ಯಾನೊ ಡಿಎಪಿ ಹಾಗೂ ಕಾಂಪ್ಲೆಕ್ಸ್ ಗೊಬ್ಬರ ಬಳಸುವಂತೆ ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ಮನವಿ ಮಾಡಿದ್ದಾರೆ.

ಕೋಲಾರ ಜಿಲ್ಲೆಯಲ್ಲಿ ಯೂರಿಯಾ ರಸಗೊಬ್ಬರ ಕೊರತೆಯಾಗಿಲ್ಲ' ಎಂದು ಜಿಲ್ಲಾ ಜಂಟಿ ಕೃಷಿ ನಿರ್ದೇಶಕಿ ಎಂ.ಆರ್. ಸುಮಾ ತಿಳಿಸಿದರು.

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.
ಸಂಖ್ಯೆ: ಕವಶಿಸಸ/ಕಾಅ–2/ಟೆಂಡರ್–13/2025–26 ದಿನಾಂಕ: 23.07.2025
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ **ಡಾ. ಬಿ.ಆರ್. ಅಂಬೇಡ್ಕರ್ (ಎಸ್.ಸಿ.) ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿನಿಲಯ ನಿರ್ಮಾಣ ಕಾಮಗಾರಿಗಳಿಗೆ (ಟೆಂಡರ್ ಇಂಡೆಂಟ್ ಸಂಖ್ಯೆ: 716, 717, 718, 719, 720, 721, 722 & 723)** ಇ–ಪೋರ್ಟಲ್ ಮುಖಾಂತರ ದಿನಾಂಕ: **23.07.2025**ರಂದು ಟೆಂಡರ್‌ನ್ನು ಕರೆಯಲಾಗಿದ್ದು, **ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 22.08.2025 ರಂದು** ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ರಲ್ಲಿ ನೋಡಬಹುದಾಗಿದೆ.
ಸೂಚನೆ: ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು–2
ಕ.ವ.ಶಿ.ಸಂ.ಸಂಘ
DIPR/CP/YC/1988/2025-26

CHIKKABALLAPURA DISTRICT CO-OPERATIVE MILK PRODUCER'S SOCIETIES UNION LIMITED., CHIKKABALLAPURA
Admns off: Yaluvahalli, Nandi Cross, Doddamarali Post, NH-07, Chikkaballapura–562 103.
GST: 29AAFAC7468L2Z1 | Email ID:chimulpurchase@gmail.com
IFT No.CHIMUL/PUR/E-PROCUREMENT/1412 /2025-26 Date: 23.07.2025
E-PROCUREMENT TENDER NOTIFICATION
The Chikkaballapura Milk Union Limited, Chikkaballapura invites tenders from eligible Tenderers for the supply of the following materials.

Sl. No.	Description of Material	Qty
01	Supply, Installation,Testiing and Commissioning THERMOFORMING TUB PACKAGING MACHINE for Mega Dairy, CHIMUL, Chikkaballapura on turnkey basis.	01 No
02	Supply of High Speed Diesel through Barrels for CHIMUL, Mega Dairy, Chikkaballapura for the period of One Year	60000 ltrs

Access to E-tender Documents: 24.07.2025 to 09.08.2025 5.30 PM
Last date for submission: on or before 09.08.2025 5.30 PM
Date of opening of Tech. Tender: 11.08.2025, 11.00 AM onwards
Tender documents may be downloaded from e-procurement website https://kppp.karnataka.gov.in/.
Sd/-
Managing Director,
Chikkaballapura Milk Union Ltd., Chikkaballapura.

ನಗರಸಭಾ ಕಾರ್ಯಾಲಯ, ಅರಸೀಕೆರೆ.
ದೂ ಸಂ:08174–232201 ಫ್ಯಾಕ್ಸ್ ನಂ:08174–233274
ಈ ಮೇಲ್ ವಿಳಾಸ: itstaff_ulb_arasikere@yahoo.com
ವೆಬ್‌ಸೈಟ್ ವಿಳಾಸ: www.arasikeretown.mrc.gov.in
ನಂ:ನ.ಸ.ಅ /ಘ.ವ.ನಿ/15ನೇಹಣಕಾಸು/ಕಾಮಗಾರಿ/02/2025–26
ದಿನಾಂಕ : 22–07–2025.
–:ಟೆಂಡರ್ ಪ್ರಕಟಣೆ:– (ಕರ್ನಾಟಕ ಸಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ)
ಅರಸೀಕೆರೆ ನಗರಸಭೆ ವ್ಯಾಪ್ತಿಯಲ್ಲಿ 2021–22,2022–23 ಮತ್ತು 2025–26 ನೇ ಸಾಲಿನ 15ನೇ ಹಣಕಾಸು ಯೋಜನೆ ನಡಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದ್ದೇಶ 1999–2000 ಪ್ರಕಾರ ಆಕ್ಟ್ 2000 ನಿಯಮದಂತೆ Karnataka Standard Tender Document –KG-2 & KW-3 ರ ಪ್ರಕಾರ ಎರಡು ಲೋಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಕರ್ನಾಟಕ ಸಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಟೆಂಡರ್‌ದಾರರು ಪೋರ್ಟಲ್:– http://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಕ್ರ.ಸಂ.1)ವಿವರ: DMA/2025-26/OW/WORK_INDENT45869 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)75.00 2)DMA/2025-26/OW/WORK_INDENT45884 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)51.20 3)DMA/2025-26/IND4998 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)30.00 ಹೆಚ್ಚಿನ ವಿವರಗಳನ್ನು www.kppp.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಪೌರಾಯುಕ್ತರು, ನಗರಸಭೆ ಅರಸೀಕೆರೆ/ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ ಅರಸೀಕೆರೆ ಈ ಕಛೇರಿಯಲ್ಲಿ ಪಡೆಯಬಹುದು.
ಸಹಿ/– ಅಧ್ಯಕ್ಷರು, ನಗರಸಭೆ, ಅರಸೀಕೆರೆ. ಸಹಿ/– ಪೌರಾಯುಕ್ತರು, ನಗರಸಭೆ, ಅರಸೀಕೆರೆ.
ವಾಸಾಸಂಇ/ಹಿಸನಿ/ಹಾಸನ/371/ಕೆಎಸ್‌ಎಂಸಿಎ/2025–26

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009
ಟೆಂಡರ್ ಪ್ರಕಟಣೆ
ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರು ಹಾಗೂ ಪಡೆಯಲು ಇಚ್ಛಿಸುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ಕರೆಯಲಾಗಿದೆ ವಿವರಗಳು ಕೆಳಕಂಡಂತಿವೆ.

ಕಾಮಗಾರಿಯ ಹೆಸರು	Work Indent & IFT No.	ಟೆಂಡರ್‌ಗಿಟ್ಟ ಮೊತ್ತ ರೂ.ಗಳಲ್ಲಿ	ಬಿಡ್ ಸಲಿಸಲು ಕೊನೆಯ ದಿನಾಂಕ ಮತ್ತು ವೇಳೆ
ಕೊಪ್ಪಳ ಜಿಲ್ಲೆಯ ಕಾರಟಗಿ "ಪ್ರಜಾಸೌಧ" ತಾಲ್ಲೂಕು ಆಡಳಿತ ಕೇಂದ್ರ ಕಟ್ಟಡ ನಿರ್ಮಾಣ ಕಾಮಗಾರಿ.	Tender Reference Number: KHB/2025-26/BD/WORK_INDENT 629 & IFT No. 78/2025-26 Date:23.07.2025	6,52,76,177/–	06.08.2025 ಸಂಜೆ 4.00 ಗಂಟೆಗೆ

ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು, ದೂರವಾಣಿ: 080-22273511 / 080-22100077. Website :https://kppp.karnataka.gov.in.
ಸಹಿ/–
ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/1986/ಶಿರಡಿಸಾಯಿ/2025–26

ಕರ್ನಾಟಕ ಸರ್ಕಾರ
ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ
ದೂರವಾಣಿ ಸಂಖ್ಯೆ: 08352–276996, ಫ್ಯಾಕ್ಸ: 08352–276984, ವೆಬ್‌ಸೈಟ್:www.vijayapura.uda.gov.in
ನಂ: ನಪ್ರಾವಿ/ಭೂ.ಬ/ಸಿ.ಆರ್–26/ಪ್ರಕಟಣೆ/2024–25 ದಿನಾಂಕ:
ಭೂ ಉಪಯೋಗ ಬದಲಾವಣೆ ಪ್ರಕಟಣೆ
ಶ್ರೀ ಕಾಶೀನಾಥ ತಂ:ಕೃಷ್ಣಾ ಕಾಮಗಳ., ವಿಜಯಪುರ, ಇವರು ವಿಜಯಪುರ ಜಿಲ್ಲೆ ತಿಕೋಟಾ ತಾಲ್ಲೂಕು ತೊರವಿ ಗ್ರಾಮದ ರಿ.ಸ.ಸಂ: 516/*/2 ರಲ್ಲಿರುವ 06ಎ–33ಗುಂ ಮತ್ತು 516/*/6 ರಲ್ಲಿರುವ 01ಎ–29ಗುಂ ಒಟ್ಟು 08ಎ–19ಗುಂ ಪ್ರದೇಶಕ್ಕೆ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ–ಬದಲಾವಣೆ ಮಾಡುವ ಸಂಬಂಧ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಜಮೀನಿಗೆ ವಿಜಯಪುರದಿಂದ ತಾಜಾಪೂರ ಗ್ರಾಮಕ್ಕೆ ಹೋಗುವ ಹಾಲಿ 10.0 ಮೀ ಅಗಲದ ನೇರ ರಸ್ತೆ ಸಂಪರ್ಕ ಹೊಂದಿಕೊಂಡಿರುತ್ತದೆ. ಸದರಿ ಜಮೀನಿಗೆ ಹೊಂದಿಕೊಂಡಂತೆ ವಸತಿ ಅಭಿವೃದ್ಧಿ ಬಂದಿರುವುದರಿಂದ, ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸುಸಜ್ಜಿತ ವಸತಿ ಬಡಾವಣೆ ನಿರ್ಮಿಸುವ ಉದ್ದೇಶದಿಂದ ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕಾಗಿ ಭೂ ಬದಲಾವಣೆಗೆ ಕೋರಿರುತ್ತಾರೆ.
ಭೂ ಉಪಯೋಗ ಬದಲಾವಣೆ ಪ್ರಕಟಣೆಯ ವಿವರವು ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ	ಅರ್ಜಿದಾರರ ಹೆಸರು	ಗ್ರಾಮ	ಹಾಲಿ ಭೂ ಉಪಯೋಗ	ಅರ್ಜಿದಾರರು ಬಯಸಿದ ಭೂ ಉಪಯೋಗ	ರಿ.ಸ.ಸಂ	ಕ್ಷೇತ್ರ ಎ–ಗು
1	ಶ್ರೀ ಕಾಶೀನಾಥ ತಂ: ಕೃಷ್ಣಾ ಕಾಮಗಳ	ತೊರವಿ	ವ್ಯವಸಾಯ	ವಸತಿ	516/*/2 516/*/6	06ಎ–33ಗುಂ 01ಎ–29ಗುಂ
					ಒಟ್ಟು	08ಎ–22ಗುಂ

ಆದ್ದರಿಂದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರನ್ವಯ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಬದಲಾವಣೆ ಕುರಿತು ಸಾರ್ವಜನಿಕರ ಸಲಹೆ/ಆಕ್ಷೇಪಣೆಗಳು ಇದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಒಳಗಾಗಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ ಕಚೇರಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು, ನಿಗಧಿತ ಅವಧಿ ಮುಕ್ತಾಯ ನಂತರದಲ್ಲಿ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ತಿಳೀಯತಕ್ಕದ್ದು.
ವಾಸಾಸಂಇ/ವಿಜಯಪುರ/206/ಕೆಎಸ್‌ಎಂಸಿಎ/2025–26 ಸಹಿ/– ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ

ಪಟ್ಟಣ ಪಂಚಾಯಿತಿ ಕಾರ್ಯಾಲಯ ತೆಕ್ಕಲಕೋಟೆ
ಬಳ್ಳಾರಿ (ಜಿಲ್ಲೆ)
☎: 08396 248228 । ಇ–mail ka.tekkalakote.tp@gmail.com web site: www.tekkalakotetown.mrc.gov.in
ನಂ.ಪಪಂತೆ/ಕಾಮಗಾರಿ/15ನೇ.ಹ/2025–26 ದಿನಾಂಕ:– 23.07.2025
ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಸ್ ಟೆಂಡರ್ ಕೆ.ಪಿ.ಪಿ ಪೋರ್ಟಲ್ **ಕೆ.ಡಬ್ಲ್ಯು–3 ಸರ್ವಿಸ್ ಬಿಡ್ ಡಾಕುಮೆಂಟ್ ಪ್ರಕಾರ** ರ ನಿಬಂಧನೆಗಳಿಗೆ ಒಳಪಟ್ಟು)

1)	ಖಾಲಿ ಟೆಂಡರ್ ಫಾರಂಗಾಗಿ ಕೆ.ಪಿ.ಪಿ ಪೋರ್ಟಲ್ ಪದ್ಧತಿಯಲ್ಲಿ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಅವಧಿ	:	ದಿನಾಂಕ: 24/07/2025 ರಿಂದ 30/07/2025ರ ಸಂಜೆ 5.30 ಗಂಟೆವರೆಗೆ
2)	ಟೆಂಡರನ್ನು ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	:	ದಿನಾಂಕ 01/08/2025 ರಂದು ಬೆಳಿಗ್ಗೆ 11.00 ಗಂಟೆಗೆ
3)	ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	:	ದಿನಾಂಕ 04/08/2025 ರಂದು ಬೆಳಿಗ್ಗೆ 11.00 ಗಂಟೆಗೆ

ಒಂದು ವೇಳೆ ನಿಗಧಿಪಡಿಸಿದ ದಿನಾಂಕಗಳು ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು.

ಕ್ರ. ನಂ.	ಇಂಡೆಟ್ ನಂ.	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ಖಾಲಿ ಟೆಂಡರ್ ಫಾರಂ ಬೆಲೆ	ಗುತ್ತೇದಾರರ ಅರ್ಹತೆ	ಕಾಮಗಾರಿ ಕಾಲಾವದಿ
2024–25ನೇ ಸಾಲಿನ 15ನೇ ಹಣಕಾಸು ಮುಕ್ತನಿಧಿ ಅನುದಾನ							
1	DMA/2025-26/WS/WORK_INDENT40429 call-2	ತೆಕ್ಕಲಕೋಟೆ ಪಟ್ಟಣದ ಪ್ರಸ್ತುತವಿರುವ ಜಲಶುದ್ಧಿಕರಣ ಘಟಕದ ದುರಸ್ಥಿ ಕಾಮಗಾರಿ	95.40	ಕೆ.ಪಿ.ಪಿ.ಪೋರ್ಟಲ್ ಪದ್ದತಿ			
2025–26ನೇ ಸಾಲಿನ 15ನೇ ಹಣಕಾಸು ಮುಕ್ತನಿಧಿ ಅನುದಾನ							
	DMA/2025-26/WS/WORK_INDENT 42256	ತೆಕ್ಕಲಕೋಟೆ ಪಟ್ಟಣದ ಬಳ್ಳಾರಿ ಸಿರುಗುಪ್ಪ ಮುಖ್ಯರಸ್ತೆಯ ಉಪ್ಪಾರು ಹೊಸಳ್ಳಿ ರಸ್ತೆಯ ಸೇತುವೆಯಿಂದ ನೀಲಕಂಠೇಶ್ವರ ರಸ್ತೆಯಲ್ಲಿ ಬರುವ ಪಂಪ್‌ಹೌಸ್ ಮೂಲಕ ಏಡಿಕೇರಿ ಟ್ಯಾಂಕ್ ಮೂಲಕ ಡಿ.ಐ ಪೈಪ್ ಅಳವಡಿಸುವ ಕಾಮಗಾರಿ, ಉಪ್ಪಾರು ಹೊಸಳ್ಳಿ ರಸ್ತೆಯ ಸೇತುವೆಯಿಂದ ಸಿಂದೊಳ್ಳಿ ಕಾಲೋನಿಯ ಒ.ಹೆಚ್.ಟಿ ವರೆಗೆ ಮತ್ತು ಉಮ್ಮಣ್ಣ ಮನೆಯಿಂದ ವರವಿನ ಮಲ್ಲೇಶ್ವರ ರಸ್ತೆಯಲ್ಲಿ ಬರುವ ಪಂಪ್‌ಹೌಸ್‌ವರೆಗೆ ಡಿ.ಐ. ಪೈಪ್‌ಲೈನ್ ಅಳವಡಿಸುವ ಕಾಮಗಾರಿ	97.20	ಕೆ.ಪಿ.ಪಿ.ಪೋರ್ಟಲ್ ಪದ್ದತಿ			

ಸಹಿ/– ಅಧ್ಯಕ್ಷರು, ಪಟ್ಟಣ ಪಂಚಾಯಿತಿ, ತೆಕ್ಕಲಕೋಟೆ ಸಹಿ/– ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ತೆಕ್ಕಲಕೋಟೆ.

ಆಯುಷ್ ಇಲಾಖೆ
ಸರ್ಕಾರಿ ಕೇಂದ್ರೀಯ ಔಷಧಾಗಾರ, ಅಶೋಕ ಪಿಲ್ಲರ್ ಹತ್ತಿರ, ಜಯನಗರ, ಬೆಂಗಳೂರು, ಇ–ಮೇಲ್: ddgcpblr@gmail.com
ದೂರವಾಣಿ ಸಂಖ್ಯೆ: 080–26561790
ಅಧಿಸೂಚನೆ ಸಂಖ್ಯೆ: GCP-SUPOOTHS/25/2025 ದಿನಾಂಕ: 23.07.2025
ಸರ್ಕಾರಿ ಕೇಂದ್ರೀಯ ಔಷಧಾಗಾರ, ಜಯನಗರ, ಬೆಂಗಳೂರು ಇಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಹೊರ ಸಂಪನ್ಮೂಲ ಏಜೆನ್ಸಿಯಿಂದ ಮಾನವ ಸೇವೆಯನ್ನು ಒದಗಿಸಲು ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ.
ವಿವರಗಳಿಗೆ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 06.08.2025 ಸಮಯ 17.30 ಗಂಟೆಯವರೆಗೆ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾಮ್ ಮುಖಾಂತರ ಸಲ್ಲಿಸಬಹುದು.
ಸಹಿ/–
ಉಪನಿರ್ದೇಶಕರು (ಫಾ) / ಅಧ್ಯಕ್ಷರು
ಟೆಂಡರ್ ಆಹ್ವಾನ ಪ್ರಾಧಿಕಾರ
ವಾ.ಸಾ.ಸಂ.ಇ/ವಾಪ್ರ/2000/ಆಕಾರ್/2025–26

ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರ ಕಛೇರಿ
ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು
ಸಂಖ್ಯೆ:ಎಸ್‌ಯುಪಿ(3)/2/ಸ್ವಚ್ಛತಾ ಸಾಮಾಗ್ರಿ/2025-26 ದಿನಾಂಕ: 22.07.2025
ಟೆಂಡರ್ ಅಧಿಸೂಚನೆ (ದ್ವಿ–ಲಕೋಟೆ ಪದ್ಧತಿಯಲ್ಲಿ)
(ಕೆಪಿಪಿಪಿ.ಕರ್ನಾಟಕ ಪೋರ್ಟಲ್ ಮುಖಾಂತರ ಮಾತ್ರ)
ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು ಇಲ್ಲಿಗೆ ವಿವಿಧ ವಿಭಾಗಗಳಿಗೆ ಬೇಕಾದ ಲೇಖನ ಸಾಮಾಗ್ರಿ ಮತ್ತು ಸ್ವಚ್ಛತಾ ಸಾಮಾಗ್ರಿಗಳ ಸರಬರಾಜು ಮಾಡುವ ಬಗ್ಗೆ ಟೆಂಡರ್ ಕರೆಯಲಾಗಿದೆ. ಕೆಪಿಪಿಪಿ. ಕರ್ನಾಟಕ ಪೋರ್ಟಲ್ ಮೂಲಕ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ : 06.08.2025 (ಮಧ್ಯಾಹ್ನ 4.30 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ kppp.karnataka.gov.inನ್ನು ಸಂಪರ್ಕಿಸಲು ಕೋರಿದೆ.
ಸಹಿ/–
ಸದಸ್ಯ ಕಾರ್ಯದರ್ಶಿ, ಆರೋಗ್ಯ ರಕ್ಷಾ ಸಮಿತಿ ಹಾಗೂ ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರು, ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು
DIPR / MNG / 526/ MPL / 25-26

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಒಂದು ಸ್ವಾಯುತ್ತ ಸಂಸ್ಥೆ)
ನಿರ್ದೇಶಕರು ಹಾಗೂ ಡೀನ್ ರವರ ಕಛೇರಿ, ಕೋಟೆ, ಕೆ.ಆರ್. ರಸ್ತೆ, ಬೆಂಗಳೂರು–560002.
ದೂರವಾಣಿ : 080–26700810, ಟೆಲಿ ಫ್ಯಾಕ್ಸ್: 080–26704342 ಇ–ಮೇಲ್: director_bmcri@yahoo.co.in
ಸಂಖ್ಯೆ: ಬೆಂವೈವಿಸಂಸಂ/ಸರಬ(2)/09/2024–25 ದಿನಾಂಕ: 23–07–2025
ಇ–ಟೆಂಡರ್ ಅಧಿಸೂಚನೆ
ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಕಾಯಿದೆ 1999 ರ ಪ್ರಕಾರ **ಈ ಸಂಸ್ಥೆ ಹಾಗೂ ಅಧೀನದಲ್ಲಿ ಬರುವ ಆಸ್ಪತ್ರೆಗಳು, ವಿದ್ಯಾರ್ಥಿ ವಸತಿ ನಿಲಯಗಳು ಮತ್ತು ಗ್ರಂಥಾಲಯ ಕಟ್ಟಡಗಳಿಗೆ ಇಂಟರ್‌ನೆಟ್ ಸೇವೆಯನ್ನು ಪಡೆಯಲು** ಇ–ಟೆಂಡರ್ ಆಹ್ವಾನಿಸಲಾಗಿದೆ.
ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **24–07–2025** ರಿಂದ ಡೌನ್‌ಲೋಡ್ ಮಾಡಬಹುದು ಮತ್ತು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **08–08–2025 ರಂದು ಸಂಜೆ 5.00 ಗಂಟೆವರೆಗೆ.** ಇ.ಎಂ.ಡಿ. ಯೊಂದಿಗೆ ಸಲ್ಲಿಸದ ಟೆಂಡರ್‌ಗಳನ್ನು ತಿರಸ್ಕರಿಸಲಾಗುತ್ತದೆ. ಹೆಚ್ಚಿನ ವಿವರಗಳಿಗಾಗಿ **ನಿರ್ದೇಶಕರು ಹಾಗೂ ಡೀನ್, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು** ಇವರನ್ನು ಸಂಪರ್ಕಿಸಬಹುದು.
ಸಹಿ/– ನಿರ್ದೇಶಕರು ಹಾಗೂ ಡೀನ್, ಬೆಂವೈವಿಸಂಸಂ, ಬೆಂಗಳೂರು.
ವಾಸಾಸಂಇ/ವಾ.ಪ್ರ/1995/ಅಡ್ವಟೋರ್/2025–26

ಕರ್ನಾಟಕ ಸರ್ಕಾರ
ಭೂದಾಖಲೆಗಳ ಉಪನಿರ್ದೇಶಕರ ಕಛೇರಿ,
ಚಿತ್ರದುರ್ಗ ಜಿಲ್ಲೆ ಜಿಲ್ಲಾಧಿಕಾರಿಗಳ ಕಛೇರಿಗಳ ಸಂಕೀರ್ಣ
Email : mojini.ddchitradurga2@gmail.com Ph:- 9663323278
ಸಂಖ್ಯೆ:SSLRD/2025-26 SE0084 ದಿನಾಂಕ: 21.07.2025
ಟೆಂಡರ್ ಪ್ರಕಟಣೆ
ಟೆಂಡರ್ ಚಿತ್ರದುರ್ಗ ಜಿಲ್ಲೆಯ ಭೂದಾಖಲೆಗಳ ಉಪನಿರ್ದೇಶಕರ ಕಛೇರಿ, ಮತ್ತು ಅಧೀನ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಗಳಿಗೆ ಸಂಬಂಧಿಸಿದಂತೆ 33 ಬಾಂದು ಜವಾರನ("ಡಿ" ಗ್ರೂಫ್) ಅವಶ್ಯಕತೆ ಇರುವುದರಿಂದ, The Karnataka Transparency in public procurment Act, 1999 (as amended by act 21 of 2001 and 4 of 2003) ರನ್ವಯ ಅರ್ಹ ಸಂಸ್ಥೆಗಳಿಂದ ಆನ್‌ಲೈನ್ ಮೂಲಕ ದಿನಾಂಕ: 21.07.2025 ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ http://KPPP.karnataka.gov.in . ನಲ್ಲಿ ಅಳವಡಿಸಲಾಗಿದೆ ಮಾನವ ಹೊರ ಸಂಪನ್ಮೂಲ ಸೇವೆಯನ್ನು ಒದಗಿಸುವ ಕುರಿತು ಆಸಕ್ತ ಸಂಸ್ಥೆಯವರು ಟೆಂಡರ್‌ಗಳನ್ನು ದಿನಾಂಕ: 13.08.2025 ರೊಳಗೆ ಸಲ್ಲಿಸತಕ್ಕದ್ದು, ಹೆಚ್ಚಿನ ಮಾಹಿತಿಗಾಗಿ ಭೂದಾಖಲೆಗಳ ಉಪನಿರ್ದೇಶಕರು, ಚಿತ್ರದುರ್ಗ ಇವರನ್ನು ಸಂಪರ್ಕಿಸಬಹುದು.
Email : mojini.ddchitradurga2@gmail.com Ph:- 9663323278
ಸಹಿ/– ಜಿಲ್ಲಾಧಿಕಾರಿಯವರ ತಾಂತ್ರಿಕ ಸಹಾಯಕರು ಹಾಗೂ ಭೂದಾಖಲೆಗಳ ಉಪನಿರ್ದೇಶಕರು ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ
DIPR/CTA/KSMCA/243/2025-26

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನೀಯರ್, ವಿಜನಿನಿ, ರವರ ಕಛೇರಿ ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.9, ಶಿರಾ, ತುಮಕೂರು ಜಿಲ್ಲೆ–572137
Phone/Fax No: 08135-200763 E.Mail I.D.: ubpee.9@gmail.com
ಸಂಖ್ಯೆ:ವಿಜನಿನಿ/ಭಮೇಯೋ/ಕಾಇಂ/ವಿ–9/ಶಿರಾ/ಟೆಂಡರ್ ಪ್ರಕಟಣೆ–05/2025–26/439 ದಿ:19.07.2025
ಅಲ್ಪಾವಧಿ ಟೆಂಡರ್ ಪ್ರಕಟಣೆ
ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ನೋಂದಾಯಿತ ಕಛೇರಿ, ನಂ.148, ಎಂಬೆಸಿ ಸ್ಕ್ವೇರ್, ಇನ್‌ಫೆಂಟ್ರಿ ರೋಡ್, ಬೆಂಗಳೂರು–560001 ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರಮೆಂಟ್ ಪೋರ್ಟಲ್‌ನಲ್ಲಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.9, ಶಿರಾ ಕಛೇರಿ ವ್ಯಾಪ್ತಿಯ 2025–26ನೇ ಸಾಲಿನ ಲೆಕ್ಕಶೀರ್ಷಿಕೆ–4701 ರಡಿಯಲ್ಲಿ **ರೂ.322.02 ಲಕ್ಷದ 01** ಕಾಮಗಾರಿಯನ್ನು (ಇಂಡೆಂಟ್ ನಂ.265) KW-4 ನಲ್ಲಿ ದ್ವಿ ಲಕೋಟೆ ಪದ್ಧತಿ ಮೂಲಕ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್‌ನಿಂದ ಖಾಲಿ ಟೆಂಡರ್ ದಾಖಲೆಗಳನ್ನು **ದಿನಾಂಕ: 21–07–2025 ರಿಂದ 05–08–2025 ರ ಸಂಜೆ 5.00 ಗಂಟೆ**ಯವರೆಗೆ ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ನ್ನು ಸಲ್ಲಿಸಬಹುದು. ನಿಗಧಿ ಪಡಿಸಿದ ಇ.ಎಂ.ಡಿ ಮೊತ್ತ/ಟೆಂಡರ್ ನಿಯಮ/ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ **https://kppp.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ಸಮಯದಲ್ಲಿ **ದಿನಾಂಕ:21–07–2025 ರಿಂದ 05–08–2025** ರ ಕಛೇರಿಯ ಅವಧಿಯಲ್ಲಿ ಸಂಪರ್ಕಿಸಬಹುದು. ಸ್ವೀಕೃತ ಟೆಂಡರ್ ಬಿಡ್‌ಗಳನ್ನು **ದಿನಾಂಕ:06–08–2025ರ ಸಂಜೆ 5.30 ಗಂಟೆ**ಯ ನಂತರ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.9, ಶಿರಾರವರ ಕಛೇರಿಯಲ್ಲಿ ತೆರೆಯಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.
ಅರ್ಹ ಗುತ್ತಿಗೆದಾರರು **(https://kppp.karnataka.gov.in)** ಅಂತರ್‌ಜಾಲದಿಂದ ಎಲ್ಲಾ ವಿವರಗಳನ್ನು ಪಡೆದು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ವಿಜನಿನಿ, ಭ.ಮೇ.ಯೋ. ವಿಭಾಗ ನಂ.09, ಶಿರಾ. ತುಮಕೂರು ಜಿಲ್ಲೆ
DIPR/TUM/RO-68/25-26/Oysters

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ


ರತ್ನದ ಸಂಕೋಲೆಯಾದರೆ ತೊಡರಲ್ಲವೇ? ಮುತ್ತಿನ ಬಲೆಯಾದರೆ ಬಂಧನವಲ್ಲವೇ?

–ಅಕ್ಕಮಹಾದೇವಿ

ಸಂಪಾದಕೀಯ

ಅಂತರ್ಜಲ ಬಳಕೆಗೆ ಶುಲ್ಕ ಜಾಗೃತಿಗೆ ಕಾರಣವಾಗಲಿ

ನಗರ ಪ್ರದೇಶಗಳಲ್ಲಿನ ಕೊಳವೆಬಾವಿಗಳ ನೀರಿನ ಬಳಕೆಗೆ ದರ ನಿಗದಿ ಮಾಡುವ ರಾಜ್ಯ ಸರ್ಕಾರದ ನಿರ್ಧಾರ, ಅಂತರ್ಜಲ ಸಂರಕ್ಷಣೆಯ ದೃಷ್ಟಿಯಿಂದ ಅಗತ್ಯವಾಗಿದ್ದ ಕ್ರಮ. ಅಂತರ್ಜಲ ಬಳಕೆಯನ್ನು ನಿರ್ಬಂಧಿಸಲು 'ಕೇಂದ್ರ ಅಂತರ್ಜಲ ಪ್ರಾಧಿಕಾರ' ಹೊರಡಿಸಿರುವ ಮಾರ್ಗಸೂಚಿಯನ್ನು ರಾಜ್ಯ ಸರ್ಕಾರ ಒಪ್ಪಿಕೊಂಡಿದ್ದು, ಪ್ರಾಧಿಕಾರದ ಮಾರ್ಗಸೂಚಿಗೆ ಕೆಲವು ತಿದ್ದುಪಡಿಗಳನ್ನು ತರಲು ಉದ್ದೇಶಿಸಿದೆ. ಪರಿಷ್ಕೃತ ಮಾರ್ಗಸೂಚಿ ಸಿದ್ಧಗೊಂಡ ಬಳಿಕ ದರ ನಿಗದಿಯಾಗಲಿದೆ. 'ಡಿಜಿಟಲ್ ಟೆಲಿಮಿಟ್ರಿ' ಅಳವಡಿಕೆಯ ಮೂಲಕ ಕೊಳವೆಬಾವಿಯಿಂದ ತೆಗೆಯುವ ನೀರಿನ ಪ್ರಮಾಣವನ್ನು ಅಳೆಯಲಾಗುವುದು. ಕೈಗಾರಿಕೆ, ವಾಣಿಜ್ಯ, ಗಣಿಗಾರಿಕೆ, ಮೂಲ ಸೌಕರ್ಯದ ಅಭಿವೃದ್ಧಿ, ಟ್ಯಾಂಕರ್‌ಗಳಲ್ಲಿ ನೀರು ಪೂರೈಕೆ ವಹಿವಾಟು, ಸಮೂಹ ಗೃಹ ಸಹಕಾರ ಸಂಘಗಳು ಮತ್ತು ಅಪಾರ್ಟ್‌ಮೆಂಟ್ ಸಮುಚ್ಚಯಗಳ ಅಂತರ್ಜಲ ಬಳಕೆಯ ಮೇಲೆ ಪ್ರತಿ ಕ್ಯೂಬಿಕ್ ಮೀಟರ್‌ಗೆ ₹1ರಿಂದ ₹35ರವರೆಗೆ ಶುಲ್ಕ ನಿಗದಿ ಮಾಡುವ ಪ್ರಸ್ತಾವ ಸರ್ಕಾರದ ಮುಂದಿದೆ. ಗೃಹೋಪಯೋಗಿ ಬಳಕೆ ಹಾಗೂ ಕೃಷಿ ಚಟುವಟಿಕೆಗಳಿಗೆ ಕೊಳವೆಬಾವಿ ನೀರು ಬಳಸುವುದಕ್ಕೆ ಯಾವುದೇ ಶುಲ್ಕ ಇರುವುದಿಲ್ಲ. ಸೇನೆ– ಸಶಸ್ತ್ರ ಪಡೆಗಳ ಕಟ್ಟಡಗಳು, ಸಂಸ್ಥೆಗಳನ್ನು ಶುಲ್ಕದಿಂದ ಹೊರಗಿಡಲಾಗಿದೆ. ಈ ವಿನಾಯಿತಿ, ದಿನಕ್ಕೆ 10 ಕ್ಯೂಬಿಕ್‌ಗಿಂತ ಕಡಿಮೆ ನೀರು ಬಳಸುವ ಸಣ್ಣ ಮತ್ತು ಅತಿ ಸಣ್ಣ ಉದ್ಯಮಗಳಿಗೂ ಅನ್ವಯಿಸಲಿದೆ. ಅಂತರ್ಜಲ ಬಳಕೆಗೆ ನಿರಾಕ್ಷೇಪಣಪತ್ರ ಪಡೆಯುವುದನ್ನೂ ಕಡ್ಡಾಯಗೊಳಿಸಲಾಗಿದೆ. ಇವೆಲ್ಲ ಕ್ರಮಗಳೂ ಅಂತರ್ಜಲದ ದುರುಪಯೋಗ ತಡೆಗಟ್ಟುವ ನಿಟ್ಟಿನಲ್ಲಿ ಅಗತ್ಯವಾಗಿದ್ದವು. ಕೊಳವೆಬಾವಿಗಳಿಂದ ನೀರು ತೆಗೆಯುವುದನ್ನು ಕಾನೂನು ಚೌಕಟ್ಟಿಗೆ ತರುವ ಮೂಲಕ, ಅಂತರ್ಜಲ ಸುರಕ್ಷತೆಯ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇರಿಸಿದಂತೆಯೂ ಆಗಿದೆ.



ಕೊಳವೆಬಾವಿಗಳ ನೀರಿನ ಬಳಕೆಗೆ ಶುಲ್ಕ ವಿಧಿಸುವುದು, ಅಂತರ್ಜಲದ ಸಂರಕ್ಷಣೆಯ ದೃಷ್ಟಿಯಿಂದ ಮಹತ್ವದ ಕ್ರಮ. ಆದರೆ, ಈ ಕ್ರಮ ಯಾರದೋ ಲಾಭಕ್ಕೆ ಅನುಕೂಲ ಆಗುವಂತೆ ಆಗಬಾರದು.

ಅಂತರ್ಜಲ ಮಟ್ಟ ತೀವ್ರವಾಗಿ ಕುಸಿಯುತ್ತಿರುವುದು ಆತಂಕ ಹುಟ್ಟಿಸುವ ವಿದ್ಯಮಾನ. ಜಲಮೂಲಗಳಲ್ಲಿನ ನೀರಿನ ಲಭ್ಯತೆ ಕಡಿಮೆ ಆಗುತ್ತಿರುವಂತೆ, ಅಂತರ್ಜಲದ ಮೇಲಿನ ಅವಲಂಬನೆಯೂ ಹೆಚ್ಚಾಗಿದೆ. ಅನಿಯಮಿತ ಮಳೆಯಿಂದಾಗಿ ಬಹುತೇಕ ಕೃಷಿ ಚಟುವಟಿಕೆಗಳು ಕೊಳವೆಬಾವಿಗಳನ್ನು ಆಧರಿಸಿವೆ. ಹೀಗೆ, ಭೂಮಿಯಿಂದ ನೀರನ್ನು ಎತ್ತುವ ಚಟುವಟಿಕೆ ಅವ್ಯಾಹತವಾಗಿ ನಡೆಯುತ್ತಿದ್ದರೂ, ಅದಕ್ಕೆ ತಕ್ಕನಾಗಿ ನೀರನ್ನು ಭೂಮಿಗೆ ಸೇರಿಸುವ ಪ್ರಯತ್ನಗಳು ನಿರೀಕ್ಷಿತ ಪ್ರಮಾಣದಲ್ಲಿ ನಡೆಯುತ್ತಿಲ್ಲ. ಮಳೆನೀರನ್ನು ಭೂಮಿಗೆ ಸೇರಿಸುವ ಯೋಜನೆಗಳು ಕಟ್ಟುನಿಟ್ಟಾಗಿ ಜಾರಿಗೆ ಬಂದಿಲ್ಲ ಹಾಗೂ ಮಳೆ ನೀರು ಸಂಗ್ರಹದ ಕುರಿತು ಸಾರ್ವಜನಿಕ ಹೊಣೆಗಾರಿಕೆಯೂ ದೊಡ್ಡ ಪ್ರಮಾಣದಲ್ಲಿ ಕಾಣಿಸುತ್ತಿಲ್ಲ. ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಅಂತರ್ಜಲ ಪ್ರಮಾಣ ಅಪಾಯಕರ ಮಟ್ಟಕ್ಕೆ ಕುಸಿದಿದೆ. ಅಳತೆಗೆ ಸಿಗದೆ ಬೆಳೆಯುತ್ತಿರುವ ಬೆಂಗಳೂರಿನಂಥ ಮಹಾನಗರಗಳಲ್ಲಿ ಕೊಳವೆಬಾವಿಗಳಿಂದ ನೀರೆತ್ತುವುದು ದೊಡ್ಡ ವಹಿವಾಟಿನ ಸ್ವರೂಪ ಪಡೆದುಕೊಂಡಿದ್ದು, ಅಂತರ್ಜಲವನ್ನು ಸೂರೆ ಮಾಡಲಾಗುತ್ತಿದೆ. ನೆಲದ ಮೇಲಿನ ಒಡೆತನ ವ್ಯಕ್ತಿಗಳಿಗೆ ಸೇರಿದ್ದಾದರೂ, ಭೂಮಿಯೊಳಗಿನ ನೀರು ಸಾಮುದಾಯಿಕ ಸಂಪನ್ಮೂಲವಾಗಿದೆ. ಆ ಕಾರಣದಿಂದಲೇ, ಎಲ್ಲರಿಗೂ ಸೇರಿದ ಸಂಪನ್ಮೂಲವನ್ನು ಜವಾಬ್ದಾರಿಯಿಂದ ಬಳಸುವುದು ಅಗತ್ಯ. ನೀರಿನ ಸಂಗ್ರಹ ಹಾಗೂ ಮಿತಬಳಕೆ ಇಂದಿನ ಅಗತ್ಯ. ನೀರಿನ ಬಳಕೆಯ ಬಗ್ಗೆ ಸಾರ್ವಜನಿಕ ಎಚ್ಚರ ಮೂಡದೆ ಹೋದಾಗ, ಅದನ್ನು ಕಾನೂನು ಮಾರ್ಗದಿಂದಾದರೂ ರೂಪಿಸುವುದು ಅಗತ್ಯ. ಅಂತರ್ಜಲ ಬಳಕೆ ಹಾಗೂ ಮರುಪೂರಣದ ಬಗ್ಗೆ ಸಾರ್ವಜನಿಕ ಉತ್ತರದಾಯಿತ್ವ ರೂಪಿಸುವುದಕ್ಕೆ, ಕೊಳವೆಬಾವಿ ನೀರಿನ ಬಳಕೆಗೆ ಶುಲ್ಕ ವಿಧಿಸುವ ಕ್ರಮ ಪೂರಕವಾಗಬಹುದು. ಸರ್ಕಾರದ ಬಹುತೇಕ ಯೋಜನೆಗಳು ಸದುದ್ದೇಶದಿಂದ ಕೂಡಿದ್ದರೂ, ಅವುಗಳ ಅನುಷ್ಠಾನ ಭ್ರಷ್ಟಾಚಾರಕ್ಕೆ ಅವಕಾಶ ಕಲ್ಪಿಸಿರುವ ಉದಾಹರಣೆಗಳೇ ಹೆಚ್ಚಾಗಿವೆ. ಈ ಭ್ರಷ್ಟಾಚಾರ, ಅಂತರ್ಜಲ ಬಳಕೆಗೆ ಶುಲ್ಕ ವಿಧಿಸುವ ವಿಷಯದಲ್ಲಿ ಮರುಕಳಿಸಬಾರದು. ಮಳೆ ನೀರು ಸಂಗ್ರಹದ ಕಾನೂನು ಪಾಲನೆ ಕಾಟಾಚಾರಕ್ಕೆ ನಡೆಯುತ್ತಿದೆ. ನಿರೀಕ್ಷಿತ ಪ್ರಮಾಣದಲ್ಲಿ ಮಳೆ ನೀರು ಸಂಗ್ರಹ ನಡೆದಿದ್ದರೆ ಅಂತರ್ಜಲದ ಪ್ರಮಾಣ ಉತ್ತಮಗೊಳ್ಳುತ್ತಿತ್ತು ಹಾಗೂ ನಗರ ಪ್ರದೇಶಗಳ ನೀರಿನ ಬೇಡಿಕೆ ಪೂರೈಕೆಗೆ ಸ್ಥಳೀಯ ಜಲಮೂಲಗಳು ಹೆಚ್ಚಿನ ಪಾಲು ಸಲ್ಲಿಸುತ್ತಿದ್ದವು. ಕೊಳವೆಬಾವಿಗಳ ನೀರಿನ ಬಳಕೆಯನ್ನು ಕಾನೂನು ಚೌಕಟ್ಟಿಗೆ ತರುವ ಕ್ರಮ ಅಂತರ್ಜಲ ಸಂರಕ್ಷಣೆಗೆ ಅನುಕೂಲ ಆಗಬೇಕೇ ಹೊರತು, ಅಧಿಕಾರಿಗಳಿಗೆ ಹಾಗೂ ನೀರು ಮಾರಾಟ ಮಾಡುವವರಿಗೆ ಲಾಭದಾಯಕ ಆಗಬಾರದು.

'ಘನತೆ' ಎಲ್ಲಿಗೆ ತಲುಪಿದೆ?



ಶಾಸಕಾಂಗದಲ್ಲಿ ಪಕ್ಷ ರಾಜಕೀಯವನ್ನು ಮೀರಿದ ಮೂರು ಸಾಂವಿಧಾನಿಕ ಹುದ್ದೆಗಳೆಂದರೆ– ರಾಷ್ಟ್ರಪತಿ, ಉಪ ರಾಷ್ಟ್ರಪತಿ ಹಾಗೂ ಲೋಕಸಭೆಯ ಸ್ಪೀಕರ್ ಅವರದು. 75 ವರ್ಷಗಳಲ್ಲಿ ಈ ಮೂರು, ಸಂವಿಧಾನದ 'ಸ್ಪಿರಿಟ್' ರಕ್ಷಕ ಹುದ್ದೆಗಳ 'ಘನತೆ' ಎಲ್ಲಿಗೆ ತಲುಪಿದೆ ಎನ್ನುವುದು ಪಕ್ಷ ರಾಜಕೀಯ ಬಿಟ್ಟು ಯೋಚಿಸತೊಡಗಿದಾಗ ಮಾತ್ರ ಅರ್ಥವಾಗುವುದು.

ರಾಜಾರಾಂ ತಲ್ಲೂರು, ಪತ್ರಕರ್ತ, ಫೇಸ್‌ಬುಕ್‌ನಿಂದ

ಕಿಡಿನುಡಿ



ಕೂಡಲಸಂಗಮದಲ್ಲಿ ಕೆಲವರು ವೈಯಕ್ತಿಕ ಹಿತಾಸಕ್ತಿಗಾಗಿ ಪಂಚಮಸಾಲಿ ಪೀಠಕ್ಕೆ ಬೀಗ ಹಾಕಿದ್ದಾರೆ. ಈಗ ಬೀಗ ಹಾಕಿದವರ ಮನೆಗೂ ಮುಂದಿನ ದಿನಗಳಲ್ಲಿ ಬೀಗ ಬೀಳಲಿದೆ. ಜನ ಭಕ್ತಿಯಿಂದ ಕೊಟ್ಟ ಹಣವನ್ನು ದುರ್ಬಳಕೆ ಮಾಡಿಕೊಂಡರೆ ಯಾರೂ ಉದ್ಧಾರವಾಗುವುದಿಲ್ಲ.

ಬಸನಗೌಡ ಪಾಟೀಲ ಯತ್ನಾಳ, ಶಾಸಕ

25 ವರ್ಷಗಳ ಹಿಂದೆ

ಸೋಮವಾರ, 24-7-2000

- **ಗುರು ಗ್ರಹಕ್ಕೆ ಇನ್ನೊಂದು 'ಚಂದ್ರ'**

ವಾಷಿಂಗ್ಟನ್, ಜುಲೈ 23– (ರಾಯಿಟರ್ಸ್)– ಸೌರವ್ಯೂಹದ ಅತ್ಯಂತ ದೊಡ್ಡ ಗ್ರಹವಾದ ಗುರುವಿಗೆ ಇನ್ನೊಂದು ಪುಟ್ಟ ಚಂದ್ರ ಇರುವುದನ್ನು ಖಗೋಳ ವಿಜ್ಞಾನಿಗಳು ಪತ್ತೆ ಹಚ್ಚಿದ್ದಾರೆ.

ಇದರಿಂದಾಗಿ ಗುರು ಗ್ರಹದ ಉಪಗ್ರಹಗಳ ಸಂಖ್ಯೆ 17ಕ್ಕೆ ಏರಿದಂತಾಗಿದೆ. ಸುಮಾರು ಐದು ಕಿ.ಮೀ. ಸುತ್ತಳತೆಯಷ್ಟು ಗಾತ್ರದ ಈ ಉಪಗ್ರಹ ಸೌರವ್ಯೂಹದಲ್ಲಿರುವ ದೊಡ್ಡ ಗ್ರಹಗಳಿಗೆ ಇರುವ ಉಪಗ್ರಹಗಳ ಪೈಕಿ ಅತ್ಯಂತ ಕಿರಿಯದು.

75 ವರ್ಷಗಳ ಹಿಂದೆ

ಸೋಮವಾರ, 24-7-1950

- **ಅನ್ನ ಸಮಸ್ಯೆ; ಧಾನ್ಯ ಉಳಿಕೆ ಕುರಿತು ಮುನ್ಷಿ**

ಮುಂಬೈ, ಜುಲೈ 23– ಆಹಾರ ಧಾನ್ಯ ಶೇಖರಣೆಗೆಂದು ಹೆಚ್ಚುವರಿ ಸಂಸ್ಥಾನಗಳು ಯಾವ ಪ್ರಯತ್ನವನ್ನೂ ಮಾಡಿಲ್ಲವೆಂದು ಭಾರತ ಸರ್ಕಾರದ ಆಹಾರ ಶಾಖೆ ಸಚಿವ ಕೆ.ಎಂ. ಮುನ್ಷಿ ಅವರು ಇಂದು ದೂರಿದರು.

ಮದರಾಸ್, ಮುಂಬಯಿ, ಪಶ್ಚಿಮ ಬಂಗಾಳ ಮತ್ತು ಹೈದರಾಬಾದ್ ಸಂಸ್ಥಾನಗಳು ಆಹಾರ ಸಂಗ್ರಹಣೆ ಮಾಡುತ್ತಿದ್ದರೂ ಉತ್ತರ ಪ್ರದೇಶ, ಮಧ್ಯಪ್ರದೇಶ, ಪೂರ್ವ ಪಂಜಾಬ್ ಮತ್ತು ಪೆಪ್ಸು ಯೂನಿಯನ್‌ಗಳಂಥ ಹೆಚ್ಚುವರಿ ಪ್ರದೇಶಗಳು ಸುಮ್ಮನೆ ಬರಿಯ ಹೆಸರಿಗೆ ಮಾತ್ರ ಶೇಖರಣಾ ಕಾರ್ಯ ನಡೆಸುತ್ತಿವೆ ಎಂದು ನುಡಿದರು.

- **ರೇಷನ್ ಪದಾರ್ಥಗಳ ಬೆಲೆ ಹೆಚ್ಚಿಸುವ ಸರ್ಕಾರದ ಸನ್ನಾಹಕ್ಕೆ ಸೋಷಲಿಸ್ಟರ ತೀವ್ರ ಖಂಡನೆ**

ಬೆಂಗಳೂರು, ಜುಲೈ 23– ಸೋಷಲಿಸ್ಟ್ ಪಾರ್ಟಿಯ ನಗರ ಶಾಖೆಯ ಸರ್ವ ಸದಸ್ಯರ ಸಭೆ ಇಂದು ಮಧ್ಯಾಹ್ನ ಆರ್ಯ ವಿದ್ಯಾಶಾಲೆಯಲ್ಲಿ ನಡೆದು, ರೇಷನ್ ಪದಾರ್ಥಗಳ ಬೆಲೆ ಹೆಚ್ಚು ಮಾಡುವ ಸರ್ಕಾರದ ನಿರೀಕ್ಷಿತ ಸನ್ನಾಹವನ್ನು ತೀವ್ರವಾಗಿ ಖಂಡಿಸಿ ನಿರ್ಣಯ ಅಂಗೀಕರಿಸಿತು.

ಮೈಸೂರು ಸೋಷಲಿಸ್ಟ್ ಪಾರ್ಟಿ ಅಧ್ಯಕ್ಷ ಸಿ.ಜಿ.ಕೆ. ರೆಡ್ಡಿ ಅಧ್ಯಕ್ಷತೆ ವಹಿಸಿದ್ದರು.

ಅನ್ನ ನೀಡುವ ತಾಯಿಗೆ ಜಾತಿಯೆ?



ವಿಶ್ಲೇಷಣೆ

ಸುಬ್ಬು ಹೊಲೆಯಾರ್

'ಇಪ್ಪತ್ತನಾಲ್ಕು ವರ್ಷ ದುಡಿದಿದ್ದೇನೆ, ಬೀದಿಗೆ ದೂಡಬೇಡಿ...' –'ಪ್ರಜಾವಾಣಿ'ಯಲ್ಲಿ ಪ್ರಕಟವಾದ ಸುದ್ದಿಯನ್ನು ಓದುವಾಗ, ಕಣ್ಣು ಮಂಜಾದವು, ಕರುಳು ಕಲಕಿದಂತಾಯಿತು. ಆ ಸುದ್ದಿ ಓದಿದ ಬೇರೆಯವರಿಗೆ ಏನನ್ನಿಸಿತೋ ತಿಳಿಯದು, ನನ್ನಂತವರಿಗೆ ಮಾತ್ರ ನೋವು, ಸಿಟ್ಟು ಒಟ್ಟಿಗೆ ಬರುತ್ತದೆ.

ಪರಿಶಿಷ್ಟ ಜಾತಿಗೆ ಸೇರಿದ ನಂಜಮ್ಮ ಎನ್ನುವ ಮಹಿಳೆ ಚಾಮರಾಜನಗರ ಜಿಲ್ಲೆಯ ಗ್ರಾಮವೊಂದರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ಕೆಲವು ವರ್ಷಗಳ ಕಾಲ ಅಡುಗೆ ಸಹಾಯಕಿಯಾಗಿ ಕೆಲಸ ಮಾಡಿದವರು. ಈಗ ಆಕೆಯೇ ಅಡುಗೆ ಮಾಡಲು ಶುರು ಮಾಡಿದಾಗ, ಪರಿಶಿಷ್ಟರ ಹೊರತಾಗಿ ಉಳಿದ ಸಮುದಾಯದ ಎಲ್ಲಾ ಮಕ್ಕಳು ವರ್ಗಾವಣೆ ಪತ್ರ ತೆಗೆದುಕೊಂಡು ಬೇರೆ ಶಾಲೆಗೆ ಹೋಗಿದ್ದಾರೆ. ಇದೇ ತಾಯಿ ಅಡುಗೆ ಸಹಾಯಕರಾಗಿದ್ದಾಗ ಮಕ್ಕಳ ತಟ್ಟೆ–ಪಾತ್ರೆಗಳನ್ನು ತೊಳೆದಿದ್ದಾರೆ, ಅಕ್ಕಿ ತೊಳೆದಿದ್ದಾರೆ. ಅಡುಗೆಗೆ ನೀರು ತಂದಿದ್ದಾರೆ. ಇದೆಲ್ಲ ಮಾಡುವಾಗ ಇಲ್ಲದ ಅಸ್ಪೃಶ್ಯತೆ ಮೈಲಿಗೆ ಅವರು ಅಡುಗೆ ಮಾಡುವಾಗ ಧೂಮಕೇತುವಿನಂತೆ ಪ್ರತ್ಯಕ್ಷವಾಗಿ ಮಕ್ಕಳ ತಟ್ಟೆಗೆ ಬಂದು ಬಿದ್ದುದು ಹೇಗೆ?

ಪ್ರಕರಣ ಸುದ್ದಿಯಾದ ನಂತರ, ಮಕ್ಕಳು ಶಾಲೆ ಬಿಟ್ಟುದುದಕ್ಕೆ ದಲಿತ ಮಹಿಳೆ ಕಾರಣವಲ್ಲ, ಪಠ್ಯ ಚಟುವಟಿಕೆ ಸರಿಯಿಲ್ಲದೆ ಹೋದುದರಿಂದ ವಿದ್ಯಾರ್ಥಿಗಳು ಬೇರೆ ಶಾಲೆ ನೋಡಿಕೊಂಡರು ಎಂದು ಹೇಳಲಾಯಿತು. ಆದರೆ, ದಲಿತ ಮಹಿಳೆಯರು ಅಡುಗೆ ಮಾಡುವುದಕ್ಕೆ ರಾಜ್ಯದ ಹಲವು ಶಾಲೆಗಳಲ್ಲಿ ವಿರೋಧ ವ್ಯಕ್ತವಾಗಿರುವುದನ್ನು ಗಮನಿಸಿದರೆ, ನಂಜಮ್ಮನ ಸಂಕಟವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವೇನಲ್ಲ.

ಮಕ್ಕಳೆಲ್ಲ ಶಾಲೆ ಬಿಟ್ಟು ಹೋದರೆ, ನನ್ನ ಬದುಕು ಅತಂತ್ರವಾಗುತ್ತದೆ; ಹಾಗೆ ಮಾಡಬೇಡಿ ಎನ್ನುವುದು ಆ ತಾಯಿಯ ಪ್ರಾರ್ಥನೆ. ಅದು ಬರೀ ನಂಜಮ್ಮನ ಅಳಲಲ್ಲ; ಹಳ್ಳಿಯಿಂದ ದಿಲ್ಲಿಯವರೆಗೂ ದಿನವೂ ಜಾತಿಯ ನಂಜು ಉಣ್ಣುತ್ತಿರುವವರ ಅಸಹಾಯಕತೆಯ ದನಿ.

ಬಾಬಾಸಾಹೇಬ ಅಂಬೇಡ್ಕರ್ ಅವರೂ ಜಾತಿಯ ಅಸಹನೆ ಎದುರಿಸಿದ್ದರು. ಒಮ್ಮೆ ಗಾಂಧೀಜಿ ಅವರಿಗೆ 'ನಮಗೊಂದು ಮಾತೃಭೂಮಿಯಿಲ್ಲ. ಅಸ್ಪೃಶ್ಯರ ನೋವು– ಅವಮಾನ ನನಗೆ ಅರ್ಥವಾದಷ್ಟು ನಿಮಗೆ ಅರ್ಥವಾಗುವುದಿಲ್ಲ' ಎಂದು ಅಂಬೇಡ್ಕರ್ ಹೇಳಿದ ಮಾತು ಎಲ್ಲಾ ಕಾಲಕ್ಕೂ ಸತ್ಯವಾಗಿಬಿಟ್ಟಿದೆ. ಇದೇ ನಂಜಮ್ಮ ಶಿಕ್ಷಕಿಯಾಗಿದ್ದರು ಎಂದುಕೊಳ್ಳಿ. ಆಗ, ಶಾಲೆಯ ಮಕ್ಕಳೆಲ್ಲ ಏನು ಮಾಡುತ್ತಿದ್ದರು? ದಲಿತರು ಅಧಿಕಾರಿಯೋ ಜನಪ್ರತಿನಿಧಿಯೋ ಆಗಿದ್ದಾಗ ಜಾತಿ ವ್ಯಸನಿಗರು ಏನು ಮಾಡುತ್ತಾರೆ? ನಮ್ಮ ಸಮಾಜದಲ್ಲಿ ಸ್ಥಾನ– ಮಾನದಿಂದ ಜಾತಿ ಸಹನೀಯವಾಗುವ ಉದಾಹರಣೆಗಳೂ ಇವೆ.

ದೇಶಕ್ಕೆ ಸ್ವಾತಂತ್ರ್ಯ ಬಂದು ಏಳೂವರೆ ದಶಕಕ್ಕೂ ಹೆಚ್ಚು ಕಾಲವಾಯಿತು. ತಂತ್ರಜ್ಞಾನದಿಂದಾಗಿ ಜಗತ್ತೇ ಒಂದು ಗ್ರಾಮವಾಗಿದೆ. ಬೆರಳ ತುದಿಯಲ್ಲೇ ಲೋಕ ಕಾಣುತ್ತಿದೆ. ಆದರೆ, ಈ ಹೊತ್ತಿಗೂ ಜಾತೀಯತೆ, ಅಸ್ಪೃಶ್ಯತೆ ಜೀವಂತವಾಗಿದೆ. ವ್ಯಕ್ತಿಯಾಗಿ ತನಗೆ ಗೌರವವಿದೆ, ಘನತೆಯಿದೆ ಎಂದು ಭಾವಿಸುವವರು, ಉಳಿದವರಿಗೂ ಅದೇ ಘನತೆ ಮತ್ತು ಗೌರವ ಇದೆ ಎಂದು ಭಾವಿಸುವ ವಿವೇಕ ಹೊಂದಿರದೆ ಹೋದರೆ ಹೇಗೆ?

ಕರ್ನಾಟಕದಲ್ಲಿ ಕಳೆದ ಹತ್ತು ವರ್ಷಗಳಲ್ಲಿ 1.10 ಲಕ್ಷಕ್ಕೂ ಹೆಚ್ಚು ದೌರ್ಜನ್ಯ ಪ್ರಕರಣಗಳು ದಲಿತರ ಮೇಲೆ ನಡೆದಿವೆ. ಇವು ದಾಖಲಾಗಿರುವ ಪ್ರಕರಣಗಳಷ್ಟೇ. ಮುಚ್ಚಿ ಹೋಗಿರುವ ಪ್ರಕರಣಗಳು ಇನ್ನೆಷ್ಟೋ. ಈ ದೌರ್ಜನ್ಯ ಪ್ರಕರಣಗಳ ಬಗ್ಗೆ ಸಮಾಜ ವಿಜ್ಞಾನಿಗಳಿಂದ ಅಧ್ಯಯನ ನಡೆದು, ಜಾತೀಯ ದರ್ಪ– ದೌರ್ಜನ್ಯದಲ್ಲಿ ಯಾವ ಯಾವ ಸಮುದಾಯಗಳ ಪಾತ್ರ ಎಷ್ಟೆಷ್ಟು ಎನ್ನುವುದು ದಾಖಲಾದರೆ, ಅದು ಭಾರತೀಯ ಸಮಾಜದ ಸಂಕೀರ್ಣತೆಯನ್ನು ಅರ್ಥ ಮಾಡಿಕೊಳ್ಳಲು ನೆರವಾಗಲಿದೆ.

ಪರಧರ್ಮ, ಪರವಿಚಾರಗಳ ಕುರಿತು ಸೈರಣೆಯ ಮಾದರಿಗಳನ್ನು ಸೃಷ್ಟಿಸಿದ ನಾಡಿನಲ್ಲೇ, ದಲಿತ ವ್ಯಕ್ತಿಯೊಬ್ಬನಿಗೆ ಮಲ ತಿನ್ನಿಸಿದ ಪ್ರಕರಣವೂ ನಡೆದಿದೆ. ಬೆಂಕಿಯ ಒಂದು ಕಿಡಿ ಮೈಗೆ ತಾಕಿದರೆ ಬೆಚ್ಚಿ ಬೀಳುತ್ತೇವೆ. ಆದರೆ, ಕೋಲಾರದ ಕಂಬಾಲಪಲ್ಲಿಯಲ್ಲಿ ದಲಿತರನ್ನು ಸುಟ್ಟು ಬೂದಿ ಮಾಡಲಾಯಿತು. ನಾಗಲಪಲ್ಲಿ ಎಂಬ ಗ್ರಾಮದಲ್ಲಿ ಪರಿಶಿಷ್ಟ ಜಾತಿಯ ಶಿಕ್ಷಕಿ ಮತ್ತು ಅವರ ಮಗನನ್ನು ಕೊಂದು, ತಾಯಿಯ ಎದೆಯ ಮೇಲೆ ಮಗನ ಮೃತದೇಹವನ್ನು ಮಲಗಿಸಲಾಗಿತ್ತು. ಕಲ್ಪಿಸಿಕೊಳ್ಳುವುದಕ್ಕೂ ಕಷ್ಟವೆನ್ನಿಸುವ ಇಂಥ ಘಟನೆಗಳಿಂದ ನಾವು ಕಲಿತಿರುವುದಾದರೂ ಏನು?

ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚಾಗುತ್ತಿರುವಾಗ ಕಾನೂನು ಏನು ಮಾಡುತ್ತಿದೆ? ದುರದೃಷ್ಟಕರ ಸಂಗತಿಯೆಂದರೆ, ಜಾತಿ ದೌರ್ಜನ್ಯಗಳ ಬಗ್ಗೆ ಕಠಿಣ ಕಾನೂನು ಕ್ರಮ ಜರುಗಿಸಬೇಕಾದ ಪೊಲೀಸ್ ಇಲಾಖೆ ಶೋಷಕರ ಬಗ್ಗೆ ಮೃದುವಾಗಿರುವುದು. ಪೊಲೀಸ್ ಠಾಣೆ ಎನ್ನುವುದೊಂದು ಜಾತ್ಯತೀತ ವ್ಯವಸ್ಥೆಯಷ್ಟೆ. ಅಲ್ಲಿ ಎಲ್ಲ ಜಾತಿ, ಧರ್ಮದವರಿಗೂ ಒಂದೇ ಕಾನೂನು. ಆದರೆ, ದಬ್ಬಾಳಿಕೆ ಮಾಡುವ ಸಮುದಾಯದವರದ್ದೇ ಠಾಣೆಗಳಲ್ಲಿ ಮೇಲುಗೈ ಆಗಿರುತ್ತದೆ ಮತ್ತು ಆ ಸಮುದಾಯಕ್ಕೆ ಸೇರಿದ ಭೂಮಾಲೀಕರು, ಹಣವಂತರು, ರಾಜಕಾರಣಿಗಳು, ಪೊಲೀಸ್ ಅಧಿಕಾರಿಗಳ ಮೇಲೆ ಒತ್ತಡ ಹೇರಿ, ಯಾರು ಅನ್ಯಾಯಕ್ಕೆ ಒಳಗಾಗಿರುತ್ತಾರೋ ಅವರಿಗೆ ನ್ಯಾಯ ಸಿಗದಂತೆ ಮಾಡುತ್ತಾರೆ. ಯಾವ ಪೊಲೀಸ್ ಠಾಣೆ ನೊಂದವರಿಗೆ ರಕ್ಷಣೆ ಕೊಡಬೇಕೋ, ಆ ಠಾಣೆಯಲ್ಲಿಯೇ ದಲಿತ ವ್ಯಕ್ತಿ ಮೂತ್ರ ನೆಕ್ಕುವಂತೆ ಮಾಡಿದ ಘಟನೆಗೂ ಕರ್ನಾಟಕ ಸಾಕ್ಷಿಯಾಗಿದೆ.

> 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಎನ್ನುವುದು ಸಮಾಜ ದೂರೀಕರಿಸಿದ ಸಮುದಾಯಗಳ ಅಳಲೂ ಹೌದು. ಈ ಮಣ್ಣಿನ ಉದಾತ್ತ ಪರಂಪರೆಯ ಗುಣಗಾನದ ಜೊತೆ ಜೊತೆಗೇ, ಜಾತಿಯ ಹೆಸರಿನಲ್ಲಿ ಪ್ರತಿ ದಿನವೂ ದೌರ್ಜನ್ಯಗಳು ನಡೆಯುತ್ತಿವೆ. ಪ್ರಕೃತಿ, ಹೆಣ್ಣು ಹಾಗೂ ದಲಿತರು, ಶೋಷಿತರ ಪಟ್ಟಿಯಲ್ಲಿ ಮುಂಚೂಣಿಯಲ್ಲಿ ಇರುವವರು.

ಮತ್ತೊಂದು ಪ್ರಕರಣ ನೋಡಿ. ಉತ್ತರ ಕರ್ನಾಟಕದ ಪೊಲೀಸ್ ಠಾಣೆಯೊಂದರ ಪಿಎಸ್‌ಐ ಪರಿಶಿಷ್ಟ ಜಾತಿಗೆ ಸೇರಿದವರು. ಅದು ಆ ಕ್ಷೇತ್ರದ ಶಾಸಕರಿಗೆ ಅರಗಿಸಿಕೊಳ್ಳಲಾಗದ ಸಂಗತಿ. ಜನಪ್ರತಿನಿಧಿಯಿಂದ ಜಾತಿ ನಿಂದನೆಯನ್ನು ಸಹಿಸಿಕೊಳ್ಳಲಾರದೆ ಆ ಪೊಲೀಸ್ ಅಧಿಕಾರಿ ಆತ್ಮಹತ್ಯೆ ಮಾಡಿಕೊಂಡರು. ಆತನ ಪತ್ನಿ ಈಗಲೂ ನ್ಯಾಯದ ನಿರೀಕ್ಷೆಯಲ್ಲಿದ್ದಾರೆ. ಇದು ಸ್ವತಂತ್ರ ಭಾರತದ ಪ್ರಜಾಪ್ರಭುತ್ವದ ಅಣಕವಲ್ಲವೇ? ಹೋಟೆಲ್‌ನಲ್ಲಿ ಜಗ್‌ನಲ್ಲಿದ್ದ ನೀರು ಕುಡಿದ ಕಾರಣಕ್ಕೆ ಇಬ್ಬರು ದಲಿತ ಹುಡುಗರನ್ನು ಬೆಂಗಳೂರಿನ ಪೀಣ್ಯದ ಮುಖ್ಯರಸ್ತೆಯಲ್ಲಿ ಕಾರು ಗುದ್ದಿಸಿ ಕೊಲ್ಲಲಾಗಿತ್ತು.

ನಾನೇ ಹುಟ್ಟಿ ಬೆಳೆದ ಊರಿನಲ್ಲಿ ಒಂದು ಘಟನೆ ನಡೆಯಿತು. ನನ್ನ ಕೇರಿಯ ಭೋಜಣ್ಣ ಮತ್ತು ಮಲ್ಲೇಶಣ್ಣ ಸಹೋದರರು ಮರಳು ಲೋಡಿಗೆ ಹೋಗಿ ಬಂದವರು, ಹೋಟೆಲ್ ಹತ್ತಿರ ಟೀ ಕುಡಿಯುತ್ತಾ ನಿಂತಿದ್ದರು. ಮಳೆಗಾಲವಾದ್ದರಿಂದ ಜೋರು ಮಳೆ–ಗಾಳಿ. ಸಹೋದರರು ಮಳೆಯಿಂದ ತಪ್ಪಿಸಿಕೊಳ್ಳಲು ಹೋಟೆಲ್ ಒಳಗೆ ಹೆಜ್ಜೆಯಿಡಲು ಪ್ರಯತ್ನಿಸಿದ್ದಾರೆ. ಜಾತಿ ವಿಷ ಹೊಮ್ಮಲಿಕ್ಕೆ ಅಷ್ಟು ಸಾಕಾಯಿತು. ಆ ಸಹೋದರರ ಮೇಲೆ ಮುಗಿಬಿದ್ದ ಕೆಲವರು, ಇಂದು ಹೋಟೆಲ್ ಒಳಗೆ ಬಂದವರು ನಾಳೆ ಹೆಣ್ಣು ಕೇಳಲು ನಮ್ಮ ಮನೆಗೆ ಬರುತ್ತೀರಿ ಎಂದು ನಿಂದಿಸುತ್ತಾ, ಹಲ್ಲೆ ನಡೆಸಿದ್ದಾರೆ. ನಿರ್ಮಾಣ ಹಂತದಲ್ಲಿದ್ದ ಶಾಲಾ ಕಟ್ಟಡದ ಜಾಗಕ್ಕೆ ಎಳೆದೊಯ್ದು, ಇಬ್ಬರ ಬಲಗೈ ಮುರಿದು ಹಾಕಿದ್ದಾರೆ. ನೋವು ಹಾಗೂ ಅವಮಾನ ತಾಳಲಾರದೆ ಅಳುತ್ತಾ ಮನೆಗೆ ಬಂದ ಆ ಸಹೋದರರ ಚೀರಾಟ ನಮ್ಮ ಮೆದುಳನ್ನೇ ಕಿತ್ತು ಎಸೆಯುವಂತಿತ್ತು. ಇದು ನಾನು ಕಣ್ಣಾರೆ ಕಂಡ, ಈಗಲೂ ಮರೆಯಲಾಗದ ಘಟನೆ.

ಕೋಲಾರದ ಕಡೆಯ ದಲಿತ ಸಂಘರ್ಷ ಸಮಿತಿಯ ಹಿರಿಯ ನಾಯಕರೊಬ್ಬರು ಹೇಳಿದ ಘಟನೆ ಹೀಗಿತ್ತು. ಭೂ ಮಾಲೀಕನ ಮನೆಯಲ್ಲಿ ಒಬ್ಬ ದಲಿತ ಜೀತ ಮಾಡುತ್ತಿದ್ದ. ಆತನ ಮಗ ಎಸ್ಸೆಸ್ಸೆಲ್ಸಿಯಲ್ಲಿ ಉತ್ತೀರ್ಣನಾದರೆ, ಭೂಮಾಲೀಕನ ಮಗ ಅನುತ್ತೀರ್ಣನಾಗಿದ್ದಾನೆ. ಜೀತಗಾರನ ಮಗನ ಕೊಲೆಯಾಗಲು ಅಷ್ಟು ಸಾಕಾಯಿತು. ಇದು, ನಾವು ಬದುಕುತ್ತಿರುವ ಸಮಾಜ; ದಲಿತರು ಅಸ್ಪೃಶ್ಯರೆಂದರೆ ಅಗಿದು ಜಗಿದು ಸಿಪ್ಪೆಯಾಗಿಸಿ ಉಗುಳುವುದಕ್ಕೆ ಅವಕಾಶ ಇರುವ ಸಮಾಜ.

ಕರ್ನಾಟಕದಲ್ಲಿನ ಸಾವಿರಾರು ಹಳ್ಳಿಗಳಲ್ಲಿ, ದಲಿತ ಕೇರಿಗಳಲ್ಲಿ ಯಾರಾದರೂ ತೀರಿಹೋದರೆ, ಉಳಿದ ಸಮುದಾಯದ ಹಟ್ಟಿಗಳಲ್ಲಿರುವ ಹೋಟೆಲ್‌ಗಳು ಇದ್ದಕ್ಕಿದ್ದಂತೆಯೇ ಬಾಗಿಲು ಮುಚ್ಚಿಕೊಳ್ಳುತ್ತವೆ. ಇದಕ್ಕೆ ಕಾರಣ, ಅಂತ್ಯಸಂಸ್ಕಾರಕ್ಕೆ ಬೇರೆ ಊರುಗಳಿಂದ ಬರುವ ದಲಿತರು ಹೋಟೆಲ್‌ಗೆ ಬರಬಹುದೆನ್ನುವ ಮೈಲಿಗೆಯ ಭಯ!

ಮುಟ್ಟಬಾರದೆಂದು ಸಮಾಜ ದೂರ ಇರಿಸಿದವರಿಗೆ ಮನುಷ್ಯರ ಅನುಕಂಪ ಇರಲಿ, ಮೂವತ್ತಮೂರು ಕೋಟಿ ದೇವರುಗಳಿಂದಲೂ ಸಾಸಿವೆ ಕಾಳಿನಷ್ಟು ಪ್ರಯೋಜನವಾಗಿಲ್ಲ. ಇವರಿಗೆ ದೇವರ ಗುಡಿಯೊಳಗೆ ಪ್ರವೇಶವಿಲ್ಲ. ಆದರೂ, ಅಪಾರ ಭಕ್ತಿ–ಶ್ರದ್ಧೆಯಿಂದ ದೇವರ ಪೂಜೆ ಮಾಡುವುದರಲ್ಲಿ ಶೋಷಿತರು ಹಿಂದೆ ಬಿದ್ದಿಲ್ಲ.

ಅನೇಕ ಹಳ್ಳಿಗಳಲ್ಲಿ ಇವತ್ತಿಗೂ ನಮ್ಮವರಿಗೆ ಕ್ಷೌರದ ಭಾಗ್ಯವಿಲ್ಲ. ನೀರು ಮುಟ್ಟಿಸದ ಪ್ರಕರಣಗಳಿಗಂತೂ ಲೆಕ್ಕ ಇಲ್ಲ. ದೇವನೂರ ಮಹಾದೇವ ಅವರು ದಲಿತ ಸಂಘರ್ಷ ಸಮಿತಿಯ ನಾಯಕರಾಗಿದ್ದಾಗ, ಅಸ್ಪೃಶ್ಯತೆ ಎಷ್ಟರ ಮಟ್ಟಿಗೆ ಜೀವಂತವಾಗಿದೆ ಎಂದು ಪರೀಕ್ಷೆ ಮಾಡಲಿಕ್ಕೆ, ಒಂದು ಕಾರ್ಯಕ್ರಮ ರೂಪಿಸಿದ್ದರು. ಊರು ಹಾಗೂ ದಲಿತ ಕೇರಿಯ ಒಂದು ಕೇಂದ್ರಬಿಂದುವಿನಲ್ಲಿ ನೀರಿನ ಮಡಿಕೆ ಇರಿಸಿ, ನೀರು ಕುಡಿಯಲಿಕ್ಕಾಗಿ ಎಲ್ಲರನ್ನೂ ಆಹ್ವಾನಿಸುವ ಕಾರ್ಯಕ್ರಮ ಅದು. ಅದನ್ನು ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ಮಾಡಲಾಯಿತು. ಆದರೆ, ಸ್ವಾಮೀಜಿಗಳು, ಧರ್ಮಗುರುಗಳು ಹಾಗೂ ಇಪ್ಪತ್ತನಾಲ್ಕು ಗಂಟೆ ಸಮಾಜ ಸೇವೆ ಮಾಡುವ ರಾಜಕಾರಣಿಗಳು, ಚಿಂತಕರು, ಯಾರೂ ನೀರು ಕುಡಿಯುವ ಸವಾಲನ್ನು ಸ್ವೀಕರಿಸಲಿಲ್ಲ. ಮಾಜಿ ಸಚಿವರಾದ ಎಚ್‌.ಜಿ. ಗೋವಿಂದೇಗೌಡ ಅವರು ಮಾತ್ರ ಶೃಂಗೇರಿಯಲ್ಲಿ ಗುಟುಕು ನೀರು ಕುಡಿದು ಮಾದರಿಯಾದರು.

ಸ್ವಾತಂತ್ರ್ಯ ಪೂರ್ವ ಮತ್ತು ನಂತರದಲ್ಲಿ ಭಾರತದ ನೆಲ ಫಲವತ್ತಾಗಿರುವುದಕ್ಕೆ ನಮ್ಮ ದೇಹ ಮತ್ತು ನೆತ್ತರೇ ಕಾರಣ. ನಮ್ಮ ದೇಹಗಳು ಈ ನೆಲದಲ್ಲಿ ಚೆಲ್ಲಿದ ರಕ್ತದಿಂದಲೇ ಭಾರತದ ಮಣ್ಣು ಇಷ್ಟು ಫಲವತ್ತಾಗಿದೆ ಎಂದು ಹೇಳುವುದಕ್ಕೆ ವಿಷಾದವೂ ಇದೆ, ಹೆಮ್ಮೆಯೂ ಇದೆ. ಪ್ರಕೃತಿ, ಹೆಣ್ಣು ಮತ್ತು ಅಸ್ಪೃಶ್ಯರು ಈ ದೇಶದಲ್ಲಿ ಹೆಚ್ಚು ಶೋಷಿತರು, ಅವಮಾನಿತರು.

'ನೊಂದವರ ನೋವು ನೋಯದವರೇನು ಬಲ್ಲರು' ಎನ್ನುವುದು ಅಕ್ಕಮಹಾದೇವಿ ಮಾತು. ನಮ್ಮ ನೋವನ್ನು ಯಾರಿಗೆ ಹೇಳಿಕೊಳ್ಳುವುದು? ಬಸವಣ್ಣನ 'ದಯೆಯೇ ಧರ್ಮದ ಮೂಲವಯ್ಯಾ?' ಮತ್ತು ಬುದ್ಧ ಗುರುವಿನ 'ಜಗತ್ತಿನ ಅತಿದೊಡ್ಡ ಪ್ರಾರ್ಥನೆ ಎಂದರೆ ತಾಳ್ಮೆ' ಎನ್ನುವ ಮಾತುಗಳು ನೆನಪಾಗುತ್ತವೆ. ಈ ಮಾತುಗಳು ಎಲ್ಲರ ಎದೆಗೂ ಬಿದ್ದರೆ, ಕುವೆಂಪು ಹೇಳಿದ 'ಸರ್ವ ಜನಾಂಗದ ಶಾಂತಿಯ ತೋಟ' ಸಾಕಾರಗೊಳ್ಳಬಹುದು.

ಲೇಖನದ ಆರಂಭದಲ್ಲಿ ಪ್ರಸ್ತಾಪಿಸಿದ ಘಟನೆಯನ್ನು ಮತ್ತೆ ನೆನಪಿಸಿಕೊಳ್ಳುವೆ. ಅನ್ನ ನೀಡುವ ತಾಯಿ ಅಸ್ಪೃಶ್ಯಳಾದರೆ, ಸಕಲ ಜೀವಕೋಟಿಯನ್ನೂ ಹೊತ್ತು ನಿಂತಿರುವ ಭೂತಾಯಿಯನ್ನು ಏನನ್ನಬೇಕು? ಸಕಲ ಜೀವಿಗಳ ಜೀವಜಲವಾಗಿರುವ ಗಂಗಾ–ಕಾವೇರಿ ತಾಯಂದಿರನ್ನು ಏನನ್ನಬೇಕು?

ವಾಚಕರ ವಾಣಿ

ಮೈಸೂರಿನಿಂದ ಬಿಜಾಪುರದವರೆಗೆ...

ಬರಗೂರು ರಾಮಚಂದ್ರಪ್ಪನವರ '125! ಅಂಕಗಳಷ್ಟೇ ಅಲ್ಲ, ಹೋರಾಟ' (ಪ್ರ.ವಾ., ಜುಲೈ 22) ಲೇಖನಕ್ಕೆ ಪೂರಕವಾಗಿ ಕೆಲವು ನೆನಪುಗಳು.

ಗೋಕಾಕ್ ಚಳವಳಿಗೆ ನಾಂದಿ ಹಾಡಿದ್ದು ಮೈಸೂರು ನಗರ. 1982ರ ಮಾರ್ಚ್ 15ರಿಂದ 21ರವರೆಗೆ ನಡೆದ ಚಳವಳಿಯ ಮೊದಲ ನೇತೃತ್ವವಹಿಸಿದ್ದು ಮೈಸೂರಿನಲ್ಲಿ ಸಕ್ರಿಯವಾಗಿದ್ದ 'ಕನ್ನಡ ಮಾಧ್ಯಮ ಹೋರಾಟ ಸಮಿತಿ'. ಆ ಸಮಿತಿಯ ಮೂವರು ಸಂಚಾಲಕರಾಗಿದ್ದವರು ಸ.ರ. ಸುದರ್ಶನ, ನಾ. ಮಹಾವೀರ ಪ್ರಸಾದ್ ಮತ್ತು ನಾನು. ತಾತಯ್ಯ ಪ್ರತಿಮೆ ಇರುವ ಉದ್ಯಾನದಲ್ಲಿ ಪ್ರತಿಭಟನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಮೈಸೂರಿನ ಅಂದಿನ ಪ್ರಾರಂಭಿಕ ಚಳವಳಿಯಲ್ಲಿ ಸಿನಿಮಾ ಕಲಾವಿದರಾದ ತೂಗುದೀಪ ಶ್ರೀನಿವಾಸ್, ವಿಷ್ಣುವರ್ಧನ್, ಎಂ.ಪಿ. ಶಂಕರ್ ಮತ್ತು ರಾಜಾನಂದ್ ಸ್ವಯಂಪ್ರೇರಣೆಯಿಂದ ಭಾಗವಹಿಸಿದ್ದರು.

ಪ್ರತಿಭಟನೆಯ ನಾಲ್ಕನೆಯ ದಿನ ಮಧ್ಯಾಹ್ನ 2 ಗಂಟೆಗೆ, ಪ್ರಾಧ್ಯಾಪಕರಾದ ಎಂ. ಚಿದಾನಂದಮೂರ್ತಿಯವರು ಧರಣಿ ನಡೆಯುತ್ತಿದ್ದಲ್ಲಿಗೆ ಬಂದಿದ್ದರು. ಪ್ರೊ. ದೇ. ಜವರೇಗೌಡರು ಆಗ ಅಮೆರಿಕದಲ್ಲಿದ್ದರು. ಹಾಗಾಗಿ, ಅವರು ಚಳವಳಿಯಲ್ಲಿ ಭಾಗವಹಿಸಲು ಸಾಧ್ಯವಾಗಿರಲಿಲ್ಲ.

ಗೋಕಾಕ್ ಚಳವಳಿಗೆ ನಾಂದಿ ಹಾಡಿದ್ದು ಮೈಸೂರು ಎನ್ನುವುದನ್ನು ಮರೆಯಬಾರದು. ಆ ಬಳಿಕ, ರಾಜ್ಯದಾದ್ಯಂತ ಚಳವಳಿಯು ಬಿರುಸಿನಿಂದ ಮುಂದುವರಿಯಿತು. ಮಾರ್ಚ್ 15ರಂದು ಬಿಜಾಪುರದಲ್ಲಿ ಗಂಗಾಧರ ಕೊರವಳ್ಳಿ (ಕೊರಳ್ಳಿ) ಎಂಬುವವರು 58 ದಿನಗಳ ಉಪವಾಸ ನಡೆಸಿದರು. ಹಾಗಾಗಿ, ಮೈಸೂರು ಹಾಗೂ ಬಿಜಾಪುರವನ್ನು ಚಳವಳಿಯ ಎರಡು ಪ್ರಮುಖ ಬಿಂದುಗಳಾಗಿ ನೆನಪಿಸಿಕೊಳ್ಳಬೇಕು. ಕೊರವಳ್ಳಿಯವರ ಹೆಸರನ್ನು ಬಹಳಷ್ಟು ಬರಹಗಾರರು ಮಾಹಿತಿ ಇಲ್ಲದೆ ಕೈ ಬಿಟ್ಟಿದ್ದಾರೆ. ಚಳವಳಿಯಲ್ಲಿ ಹೃತ್ಪೂರ್ವಕವಾಗಿ ತೊಡಗಿಸಿಕೊಂಡಿದ್ದು ಈಗ ಇಲ್ಲದಿರುವವರನ್ನೂ ಸ್ಮರಿಸುವುದು ನಮ್ಮ ಕರ್ತವ್ಯ.

ಹೊರೆಯಾಲ ದೊರೆಸ್ವಾಮಿ, ಮೈಸೂರು

ಸಮಾಜದ ಉದ್ಧಾರಕರು ಬೇಕು

ಕೂಡಲಸಂಗಮದ ಪಂಚಮಸಾಲಿ ಪೀಠದ ವಿವಾದ ತಾರಕಕ್ಕೇರಿದೆ. ಸಮಾಜದ ಗೌರವ, ಹಿತದೃಷ್ಟಿಯಿಂದ ಈ ವಿವಾದ ಅನಪೇಕ್ಷಿತ. ಸಮಾಜದ ವಿವಾದಗಳಲ್ಲಿ ರಾಜಕೀಯವೂ ಪ್ರವೇಶಿಸಿ, ಅಹಿತಕರ ಘಟನೆಗಳು ಸಂಭವಿಸುತ್ತಿವೆ. ಸಮಾಜದ ಏಳಿಗೆಯೊಂದನ್ನು ಬಿಟ್ಟು ಎಲ್ಲಾ ಕಾರ್ಯಗಳು ವ್ಯವಸ್ಥಿತವಾಗಿ ಜರುಗುತ್ತಿವೆ. ಇದರಿಂದ ಅತಿ ಸಾಮಾನ್ಯರಾದ ನಮ್ಮಂಥವರ ಭಾವನೆಗಳಿಗೆ ಗಾಸಿ ಆಗುತ್ತಿದೆ. ಸಮಾಜದ ಈಗಿನ ಮುಖಂಡರ ಬಗ್ಗೆ ನಂಬಿಕೆಯೇ ಹೋಗಿದೆ. ಅರ್ಹರಿಗೆ ಪ್ರೋತ್ಸಾಹ ನೀಡಿ ಇಡೀ ಸಮಾಜವನ್ನು ಮೇಲೆತ್ತುವ ಕೆಲಸ ಮಾಡುವ ಬದಲು, ಬರೀ ಸರ್ಕಾರಿ ಮೀಸಲಾತಿಗಾಗಿ ಹೋರಾಟ ಮಾಡುವುದು ಸರಿಯಲ್ಲ. ನಮಗೆ ನೂರೆಂಟು ಪೀಠಗಳು, ಪೀಠಾಧಿಪತಿಗಳು ಬೇಕಾಗಿಲ್ಲ. ಪಂಚಮಸಾಲಿ ಸಮಾಜವನ್ನು ಉದ್ಧಾರ ಮಾಡುವವರು ಬೇಕು.

ಶಾಂತವೀರ ಎಸ್., ಚಿತ್ರದುರ್ಗ

ಸಿದ್ದರಾಮಯ್ಯ ನಿರ್ದೋಷಿಯೇ?

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನಗಳ ಅಕ್ರಮ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು (ಇ.ಡಿ) ಕೈಗೊಂಡ ಕೆಲವು ಕ್ರಮಗಳ ವಿರುದ್ಧ ಸುಪ್ರೀಂ ಕೋರ್ಟ್ ಚಾಟಿ ಬೀಸಿದೆ. ರಾಜಕೀಯ ಹೋರಾಟಕ್ಕಾಗಿ ನೀವು ಬಳಕೆ ಆಗುತ್ತಿರುವುದು ಏಕೆ ಎಂದು ಇ.ಡಿ.ಗೆ ಪ್ರಶ್ನಿಸಿದೆ (ಪ್ರ.ವಾ., ಜುಲೈ 22). ಆದರೆ, ಕಾಂಗ್ರೆಸ್ ವಲಯದಲ್ಲಿ ಸಿದ್ದರಾಮಯ್ಯ ಅವರು ಈ ಪ್ರಕರಣದಲ್ಲಿ ನಿರ್ದೋಷಿಯಾಗಿದ್ದಾರೆ ಎಂಬಂತೆ ಸಂಭ್ರಮಿಸಲಾಗುತ್ತಿದೆ. ಅದು ನಿಜವೇ?

ಸುಪ್ರೀಂ ಕೋರ್ಟ್ ಸದರಿ ಪ್ರಕರಣದಲ್ಲಿ ಇ.ಡಿಯ ಮಧ್ಯಪ್ರವೇಶವನ್ನಷ್ಟೇ ದೃಷ್ಟಿಯಲ್ಲಿಟ್ಟುಕೊಂಡು ತನ್ನ ಅಭಿಪ್ರಾಯ ನೀಡಿದೆಯೇ ಹೊರತು ಮುಡಾ ಹಗರಣವನ್ನು ಸಮಗ್ರವಾಗಿ ಅನುಲಕ್ಷಿಸಿ ಅಲ್ಲ.

ಹೊಸಮನೆ ವೆಂಕಟೇಶ, ತಿ. ನರಸೀಪುರ

ಬೀದರ್–ಬೆಳಗಾವಿ ರೈಲು ಓಡಿಸಿ

ಬೀದರ್ ಹಾಗೂ ಬೆಳಗಾವಿ ನಗರಗಳ ನಡುವೆ ನಿತ್ಯವೂ ರಾತ್ರಿವೇಳೆ ಎಕ್ಸ್‌ಪ್ರೆಸ್ ರೈಲು ಸಂಚಾರ ಆರಂಭಿಸಬೇಕಿದೆ. ಈ ರೈಲು ಬೀದರ್‌ನಿಂದ ಕಲಬುರಗಿ, ರಾಯಚೂರು, ಗುಂತಕಲ್, ಬಳ್ಳಾರಿ, ಹೊಸಪೇಟೆ, ಕೊಪ್ಪಳ, ಹುಬ್ಬಳ್ಳಿ ಮೂಲಕ ಬೆಳಗಾವಿ ತಲುಪಿದರೆ ಹೆಚ್ಚಿನ ಜನರಿಗೆ ಅನುಕೂಲವಾಗಲಿದೆ. ರೈಲ್ವೆ ಖಾತೆಯ ರಾಜ್ಯ ಸಚಿವ ವಿ. ಸೋಮಣ್ಣ ಅವರು, ಈ ಬಗ್ಗೆ ಗಮನ ಹರಿಸುವರೇ?

ಮುದ್ಗಲ್ ವೆಂಕಟೇಶ, ಕಲಬುರಗಿ

ಹೊಸ ಧ್ವನಿ ಕೇಳುವುದೇ?


'ಕಾಲದ ಹೊಳೆಯಲ್ಲಿ ಉಳಿದ ರೇಡಿಯೊ' ಲೇಖನವು (ಲೇ: ಜಿ.ಎಂ. ಶಿರಹಟ್ಟಿ, ಪ್ರ.ವಾ., ಜುಲೈ 23) ಚೆನ್ನಾಗಿದೆ. 'ಆಕಾಶವಾಣಿ' ಎಂದು ಖ್ಯಾತಿ ಪಡೆದಿರುವ ಈ ಸರ್ಕಾರಿಸ್ವಾಮ್ಯದ ಮಾಧ್ಯಮವು ಗ್ರಾಮೀಣ ಕೃಷಿ ವಲಯದಲ್ಲಿ ಅರಿವು, ಮನರಂಜನೆ ಮೂಲಕ ಸಾಕಷ್ಟು ಜನಾನುರಾಗಿಯಾಗಿದೆ.

ಆರು ದಶಕಗಳಿಂದ ರೇಡಿಯೊ ಆಲಿಸುತ್ತಾ ಬಂದಿರುವ ನನಗೆ ಇತ್ತೀಚೆಗೆ ಆಗಿರುವ ಬದಲಾವಣೆಗಳು ಬೇಸರ ತರಿಸುತ್ತಿವೆ. ಆಕಾಶವಾಣಿಯಲ್ಲಿ ನಿವೃತ್ತರಿಂದ ತೆರವಾದ ಹುದ್ದೆಗಳಿಗೆ ಹೊಸಬರ ನೇಮಕಾತಿ ನಡೆಯುತ್ತಿಲ್ಲ.

ಬಾನುಲಿಯ ಸಖ–ಸಖಿಯರು ಶ್ರಮವಹಿಸಿ ಕಾರ್ಯಕ್ರಮವನ್ನು ನಿಭಾಯಿಸುತ್ತಿರುವರಾದರೂ, ಕೇಳುಗರಿಗೆ ಏಕತಾನತೆಯ ಅನುಭವ ಆಗುತ್ತಿದೆ. ಹೊಸ ಧ್ವನಿಗಳು ಹರಿದು ಬರುವಂತಾಗಲಿ. ಇಲ್ಲವಾದರೆ ಕಾಲದ ಹೊಳೆಯಲ್ಲಿ ರೇಡಿಯೊ ಮುಳುಗಬಹುದು.

ಅನಿಲಕುಮಾರ ಮುಗಳಿ, ಧಾರವಾಡ

ಚುರುಮುರಿ



ರಾಜಕೀಯ 'ಮಾತು'!

• ಗುರು ಪಿ.ಎಸ್.

'**ಒಂದೇ** ತಿಂಗಳು, ಇನ್ನೊಂದೇ ಒಂದು ತಿಂಗಳು...' ಅವಸರದಲ್ಲಿ ಸರ ಸರ ಅಂತ ಓಡಾಡುತ್ತಿದ್ದ ಮುದ್ದಣ್ಣ.

'ಏನಾಯ್ತು ನಿಂಗೆ?' ಆರಾಮ್ ಚೇರ್‌ನಲ್ಲಿ ಅರ್ಧ ಮಲಗಿಕೊಂಡೇ ಕೇಳಿದರು ಸಾಹೇಬ್ರು.

'ಅದೇ ಸರ್, ನಿಮ್ ಬರ್ತ್ ಡೇಗೆ ಇನ್ನೊಂದೇ ತಿಂಗಳಿದೆಯಲ್ವ, ಅದು ನಿಮ್ಮ ಜೀವನದ ಅಮೃತ ಮಹೋತ್ಸವ ವರ್ಷ ಆಗುತ್ತಲ್ವ'.

'ಅಮೃತ ಮಹೋತ್ಸವ ವರ್ಷವಾ?'

'ಅದೇ ಸರ್, ಮುಂದಿನ ತಿಂಗಳು ನಿಮಗೆ 75 ಆಗುತ್ತಲ್ವ'

75 ವರ್ಷ ಅನ್ನೋ ಪದ ಕಿವಿಗೆ ಬೀಳುತ್ತಲೇ ಸಾಹೇಬರ ಮುಖ ಕಪ್ಪಿಟ್ಟಿತು. '75 ಆಗೇ ಬಿಡ್ತಾ' ಎನ್ನುತ್ತ ಆರಾಮ್ ಚೇರ್‌ನಿಂದ ಮೇಲೆದ್ದರು.

'ಹೂಂ ಸರ್, ಬರ್ತ್ ಡೇ ಯಾವ ರೀತಿ ಇರಬೇಕು ಅಂತ ಎಲ್ಲ ಪ್ಲ್ಯಾನ್ ಮಾಡಿಟ್ಟಿದ್ದೀನಿ ಸರ್'.

'ಸಾಕ್ ಸುಮ್ನಿರಯ್ಯ, ಈಗಾಗಲೇ ನಮ್ ಪಾರ್ಟಿಯವರು ಏನೇನ್ ಪ್ಲ್ಯಾನ್ ಮಾಡಿಟ್ಟಿದ್ದಾರೋ ಅನ್ನೋ ಟೆನ್ಷನ್ ನನಗೆ'.

'ಯಾಕ್ ಸರ್ ಟೆನ್ಷನ್ನು?'

'ಇಲ್ಲದೇ ಇರುತ್ತೇನಯ್ಯ, 75ಕ್ಕೆ ರಾಜಕೀಯ ನಿವೃತ್ತಿ ತಗೋಬೇಕು ಅನ್ನೋ ರೂಲ್ಸ್ ನಮ್ ಪಕ್ಷದಲ್ಲಿರೋದು ನಿನಗೆ ಗೊತ್ತಿಲ್ವೇನು?'

'ಓಹೋ... ಹಾಗಾದರೆ ಮುಂದಿನ ತಿಂಗಳು ನೀವೂ ಮಾರ್ಗದರ್ಶಕ ಮಂಡಳಿ ಸೇರ್ತೀರಿ...' ಎಂದು ಹೇಳುತ್ತಿದ್ದಂತೆ ಅವನ ಬಾಯಿ ಮುಚ್ಚಿಸಿದ ಸಾಹೇಬ್ರು, 'ಅಪಶಕುನ ಎಲ್ಲ ನುಡಿಬೇಡ ನೀನು' ಎಂದು ಗದರಿದರು.

'ನಾನು ನುಡೀಲಿಲ್ಲ ಅಂದ್ರೂ, ಅಪೋಸಿಷನ್ ಪಾರ್ಟಿಯವರಾದರೂ ಶುರು ಹಚ್ಕೊತಾರಲ್ವ ಸರ್?'

'ಅವರೇನ್ ಶುರು ಹಚ್ಕೊತಾರೆ, ನಮ್ಮದರಲ್ಲಾದರೆ 75 ವರ್ಷಕ್ಕೆ ನಿವೃತ್ತಿ ಬಗ್ಗೆ ಯೋಚನೆಯಾದರೂ ಇದೆ, ಆದರೆ ಅವರಲ್ಲಿ ರಾಜಕೀಯ ಭವಿಷ್ಯ ಇರೋದೇ 75ರ ನಂತರದವರಿಗೆ' ನೋವಲ್ಲೂ ನಗುತ್ತಾ ಹೇಳಿದರು ಸಾಹೇಬ್ರು.

'ಆದ್ರೂ ಅವರು ಮತ್ತೆ ಮತ್ತೆ 75 ವರ್ಷದ ವಿಷಯ ಪ್ರಸ್ತಾಪ ಮಾಡಿದ್ರೆ ಏನ್ ಮಾಡ್ತೀರಿ ಸರ್?'

'ನಾನು, ಎರಡೂವರೆ ವರ್ಷ ಆಯ್ತು ಅಂತೀನಷ್ಟೇ' ಕಣ್ಣು ಮಿಟುಕಿಸಿದರು ಸಾಹೇಬ್ರು!

ಸಂಗತ

ಹಾಥಿ ಸಮಿತಿ ವರದಿ: ಈಗಲೂ ಮುಖ್ಯ

ಐದು ದಶಕಗಳ ಹಿಂದೆ 'ಹಾಥಿ ಸಮಿತಿ' ಸಲ್ಲಿಸಿದ್ದ ವರದಿ ಅನುಷ್ಠಾನಕ್ಕೆ ಬಂದಿದ್ದರೆ, ಔಷಧಗಳ ಬೆಲೆ ಜನಸಾಮಾನ್ಯರ ಕೈಗೆಟಕುವಂತೆ ಇರುತ್ತಿತ್ತು.

• ಡಾ. ಗೋಪಾಲ ದಾಬಡೆ

ಭಾರತದ ಔಷಧ ಉದ್ಯಮದಲ್ಲಿ ಹಾಥಿ ಸಮಿತಿಗೆ ವಿಶೇಷ ಮಹತ್ವವಿದೆ. ಔಷಧ ಉದ್ಯಮಕ್ಕೆ ಸರಿಯಾದ ದಿಕ್ಕು ಕೊಡಲು ಹಾಗೂ ಔಷಧಗಳು ಜನಸಾಮಾನ್ಯರ ಕೈಗೆಟಕುವಂತೆ ಮಾಡುವ ನಿಟ್ಟಿನಲ್ಲಿ ಮಾರ್ಗೋಪಾಯಗಳನ್ನು ಸೂಚಿಸುವ ಉದ್ದೇಶದಿಂದ ಅಂದಿನ ಪ್ರಧಾನಿ ಇಂದಿರಾಗಾಂಧಿ ನೇತೃತ್ವದ ಸರ್ಕಾರ, 1974ರಲ್ಲಿ 'ಹಾಥಿ ಸಮಿತಿ' ರಚಿಸಿತ್ತು. ರಾಜ್ಯಸಭಾ ಸದಸ್ಯರಾಗಿದ್ದ ಜಯಸುಖಲಾಲ್ ಹಾಥಿ ಸಮಿತಿಯ ಅಧ್ಯಕ್ಷರಾಗಿದ್ದರು. ಆ ಸಮಿತಿಯ ವರದಿ 1975ರಲ್ಲಿ ಸಂಸತ್ತಿನಲ್ಲಿ ಮಂಡನೆಯಾಯಿತು. ಅದಕ್ಕೆ ಈಗ 50ನೇ ವರ್ಷ.

ದೇಶದ ಔಷಧ ಉದ್ದಿಮೆ ವಲಯವನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿರುವ ಹಾಥಿ ಸಮಿತಿ, ತನ್ನ ವರದಿಯಲ್ಲಿ ಹಲವು ಮಹತ್ವದ ಶಿಫಾರಸುಗಳನ್ನು ಮಾಡಿದೆ. ಐದು ದಶಕಗಳ ನಂತರವೂ ಆ ವರದಿಯಲ್ಲಿ ಇಂದಿಗೂ ಅತ್ಯಂತ ಪ್ರಸ್ತುತವಾದ ಅಂಶಗಳಿವೆ.

ದೇಶದ ಔಷಧ ಕೈಗಾರಿಕೆ ಯಾವ ದಿಕ್ಕಿನಲ್ಲಿ ಸಾಗಬೇಕು, ಯಾವ ರೀತಿಯಾಗಿ ಸ್ವಾವಲಂಬನೆಯನ್ನು ಹೊಂದಬಹುದು, ಔಷಧಗಳ ಬೆಲೆ ನಿಯಂತ್ರಣ ಯಾಕೆ ಮತ್ತು ಎಷ್ಟು ಮಹತ್ವ ಎನ್ನುವ ವಿಷಯಗಳನ್ನು ವರದಿಯಲ್ಲಿ ಕೂಲಂಕಷವಾಗಿ ವಿಶ್ಲೇಷಣೆ ಮಾಡಲಾಗಿದೆ.

ಹಾಥಿ ಸಮಿತಿಯ ಬಹುಮುಖ್ಯವಾದ ಸಲಹೆ, ಔಷಧಗಳ 'ಬ್ರಾಂಡ್' ಹೆಸರನ್ನು ಕ್ರಮೇಣವಾಗಿ ಕಡಿಮೆ ಮಾಡುವುದು; ಬ್ರಾಂಡ್ ಬದಲು ಔಷಧಗಳ 'ಜೆನೆರಿಕ್' ಹೆಸರನ್ನು ಹೆಚ್ಚು ಪ್ರಚಾರ ಮಾಡುತ್ತ, ಅದನ್ನೇ ಜಾರಿಯಲ್ಲಿ ತರುವುದು. ಜೆನೆರಿಕ್ ಹೆಸರನ್ನು ಜಾರಿಯಲ್ಲಿ ತರುವುದರಿಂದ, ವೈದ್ಯರು ಹೆಚ್ಚು ತರ್ಕಬದ್ಧ ಔಷಧವನ್ನು ಜನರಿಗೆ ಶಿಫಾರಸು ಮಾಡಬಹುದು. ಬ್ರಾಂಡ್ ಹೆಸರನ್ನು ಬಳಕೆ ಮಾಡುವುದರಿಂದ, ಬಹಳಷ್ಟು ವೈದ್ಯರಿಗೆ ಆ ಔಷಧದಲ್ಲಿ ಇರುವ ವೈಜ್ಞಾನಿಕ ಮಾಹಿತಿ ಸಿಗದಿರುವ ಸಾಧ್ಯತೆಯಿದೆ. ಬ್ರಾಂಡ್ ಹೆಸರು ಅನವಶ್ಯಕ ಹಾಗೂ ಬ್ರಾಂಡ್ ಹೆಸರಿನಲ್ಲಿ ಅವೈಜ್ಞಾನಿಕ ಔಷಧಗಳಿಗೆ ಪ್ರಚಾರ ಕೊಡಲೂಬಹುದು. ಬ್ರಾಂಡ್ ಹೆಸರಿನಲ್ಲಿ ಪ್ರಸ್ತುತ, ವಿಟಮಿನ್ ಮಿಶ್ರಣ ಹಾಗೂ 'ಟಾನಿಕ್'ಗಳು ದೊಡ್ಡ ಪ್ರಮಾಣದಲ್ಲಿ ಮಾರಾಟ ಆಗುತ್ತಿರುವುದನ್ನು ಗಮನಿಸಬಹುದು.



ಬ್ರಾಂಡ್ ಔಷಧಗಳನ್ನು ಬರೆಯುವುದನ್ನು ಇಂದಿನ ಬಹುತೇಕ ವೈದ್ಯರು ರೂಢಿ ಮಾಡಿಕೊಂಡಿದ್ದಾರೆ ಹಾಗೂ ಅದನ್ನು ಸರಿಯಾದ ಕ್ರಮ ಎಂದು ಭಾವಿಸಿದ್ದಾರೆ. ಇದು ಖಂಡಿತವಾಗಿಯೂ ವೈದ್ಯಕೀಯ ಕಾಲೇಜಿನಲ್ಲಿ ಕಲಿತ ಅಭ್ಯಾಸವಲ್ಲ. ವೈದ್ಯಕೀಯ ಶಿಕ್ಷಣದಲ್ಲಿ ಕಲಿಸುವುದೆಲ್ಲ ಜೆನೆರಿಕ್ ಔಷಧವನ್ನೇ. ಔಷಧ ಕಂಪನಿಗಳು ತಮ್ಮ ಬ್ರಾಂಡ್‌ಗಳನ್ನು ಬಳಸುವಂತೆ ವೈದ್ಯರನ್ನು ಮರುಳು ಮಾಡುತ್ತವೆ. ಈ ಕಂಪನಿಗಳು ತಮ್ಮ ಬ್ರಾಂಡ್‌ನ ಪ್ರಚಾರಕ್ಕಾಗಿ ಮಾಡುವ ಖರ್ಚನ್ನೆಲ್ಲ ರೋಗಿಯ ಮೇಲೆ ಹೇರುತ್ತವೆ. ಬ್ರಾಂಡ್ ಔಷಧಗಳು ಉತ್ತಮ ಗುಣಮಟ್ಟದ್ದಾಗಿರುತ್ತವೆ ಎಂದು ಕೆಲವು ವೈದ್ಯರು ವಾದಿಸುವುದೂ ಇದೆ. ಆದರೆ, ಔಷಧ ನಿಯಂತ್ರಣ ಅಧಿಕಾರಿಗಳು ಕಳಪೆ ಔಷಧಗಳನ್ನು ಗುರುತಿಸುವ ಸಂದರ್ಭಗಳಲ್ಲಿ, ಕಪ್ಪುಪಟ್ಟಿಗೆ ಸೇರುವ ಔಷಧಗಳೆಲ್ಲ ಬ್ರಾಂಡ್ ಔಷಧಗಳೇ ಆಗಿರುವುದನ್ನು ಗಮನಿಸಬೇಕು. ಸಾರಾಂಶ ಇಷ್ಟೇ: ಬ್ರಾಂಡ್ ಔಷಧಗಳು ಕಳಪೆಯಾಗಿರುವ ಸಾಧ್ಯತೆ ಇರುತ್ತದೆ.

ಹಾಥಿ ಸಮಿತಿಯ ಅತ್ಯುತ್ತಮ ಸಲಹೆ– ಸೂಚನೆಗಳ ನಡುವೆಯೂ ಬ್ರಾಂಡ್ ಔಷಧಗಳ ಮೋಹದಿಂದ ವೈದ್ಯರನ್ನು ದೂರವಿಡುವುದು ನಮಗೆ ಸಾಧ್ಯವಾಗಿಲ್ಲ. ಔಷಧ ಕಂಪನಿಗಳಿಗಿಂತ ಹೆಚ್ಚಾಗಿ ವೈದ್ಯ ಸಂಘಟನೆಗಳೇ ಹಾಥಿ ಸಮಿತಿಯ ಶಿಫಾರಸನ್ನು ಜಾರಿಗೆ ತರುವಲ್ಲಿ ಅಡೆತಡೆ ಉಂಟು ಮಾಡುತ್ತಿವೆ. ಜೆನೆರಿಕ್ ಹೆಸರಿನಲ್ಲಿಯೇ ವೈದ್ಯರು ಔಷಧ ಬರೆಯಬೇಕೆಂದು 'ರಾಷ್ಟ್ರೀಯ ವೈದ್ಯಕೀಯ ಆಯೋಗ' ಹಲವು ಸುತ್ತೋಲೆಗಳನ್ನು ಹೊರಡಿಸಿದೆ. ಅದರಿಂದ ಏನೂ ಪ್ರಯೋಜನವಾಗಿಲ್ಲ. ವೈದ್ಯ ಸಂಘಟನೆಗಳು ಹಾಥಿ ಸಮಿತಿಯ ಶಿಫಾರಸುಗಳಿಗೆ ಬೆಂಬಲ ನೀಡಲಿಲ್ಲ. ಹಾಥಿ ಸಮಿತಿಯ ಅದೊಂದು ಶಿಫಾರಸು ಕಾರ್ಯರೂಪಕ್ಕೆ ಬಂದಿದ್ದಲ್ಲಿ, ಉತ್ತಮ ಗುಣಮಟ್ಟದ ಔಷಧಗಳು ಕೈಗೆಟಕುವ ಬೆಲೆಯಲ್ಲಿ ನಮಗೆ ಲಭಿಸುತ್ತಿದ್ದವು.

ಜೆನೆರಿಕ್ ಔಷಧಗಳನ್ನು ಬಳಕೆಯಲ್ಲಿ ತರಲು ಹಾಗೂ ಔಷಧ ಉತ್ಪಾದನೆಯಲ್ಲಿ ಭಾರತ ಸ್ವಾವಲಂಬಿ ಆಗಲು ಹಾಥಿ ಸಮಿತಿ ಹಲವು ಸಲಹೆ ನೀಡಿತ್ತು. ಬಹುರಾಷ್ಟ್ರೀಯ ಔಷಧ ಕಂಪನಿಗಳ ರಾಷ್ಟ್ರೀಕರಣಕ್ಕೆ ಸೂಚಿಸಿತ್ತು. ಸರ್ಕಾರಿ ಸ್ವಾಮ್ಯದ ಔಷಧ ಕಂಪನಿಗಳು ಅಥವಾ ಸಾರ್ವಜನಿಕ ವಲಯವು ಇನ್ನೂ ಹೆಚ್ಚು ಸ್ವಾವಲಂಬಿ ಆಗಲು ಮಾರ್ಗೋಪಾಯಗಳನ್ನು ಮುಂದಿಟ್ಟಿತ್ತು. ಆದರೆ, ಆ ಶಿಫಾರಸುಗಳನ್ನು ಜಾರಿಗೆ ತರುವ ಪ್ರಾಮಾಣಿಕ ಪ್ರಯತ್ನಗಳು ನಡೆಯಲಿಲ್ಲ. ಅದರ ಫಲವಾಗಿ, ನಮ್ಮ ದೇಶದ ಸಾರ್ವಜನಿಕ ಔಷಧ ವಲಯ ಅತ್ಯಂತ ಗಂಭೀರ ಸ್ಥಿತಿಯಲ್ಲಿದೆ.

'ಮೂಲ ಔಷಧ' (ಬಲ್ಕ್ ಡ್ರಗ್) ಉತ್ಪಾದನೆಯಲ್ಲಿ ಭಾರತ ಮುಂಚೂಣಿಯಲ್ಲಿ ಇರಬೇಕು ಎಂದು ಹಾಥಿ ಸಮಿತಿ ಹೇಳಿತ್ತು. ಆದರೆ, ಮೂಲ ಔಷಧಗಳ ಉತ್ಪಾದನೆಗೆ ನಾವಿಂದು ಬಹಳಷ್ಟು ಮಟ್ಟಿಗೆ ಚೀನಾದ ಮೇಲೆ ಅವಲಂಬಿತರು.

ದೇಶದ ಔಷಧ ಉತ್ಪಾದನಾ ಕ್ಷೇತ್ರ ಹಲವು ಸವಾಲುಗಳನ್ನು ಎದುರಿಸುತ್ತಿದೆ. ಈ ಸವಾಲುಗಳು ಹಾಗೂ ಪರಿಹಾರದ ಬಗ್ಗೆ ಹಾಥಿ ಸಮಿತಿ ಐದು ದಶಕಗಳ ಹಿಂದೆಯೇ ಬೆಳಕು ಚೆಲ್ಲಿತ್ತು. ಐದು ದಶಕಗಳ ನಂತರವಾದರೂ ಹಾಥಿ ಸಮಿತಿಯ ಶಿಫಾರಸುಗಳನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hospete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕ್ರೀಡಾ ಆಡಳಿತ ಮಸೂದೆಯಲ್ಲೇನಿದೆ?

ಪ್ರಜಾವಾಣಿ ವಾರ್ತೆ

ಕೇಂದ್ರ ಸರ್ಕಾರವು ರಾಷ್ಟ್ರೀಯ ಕ್ರೀಡಾ ಆಡಳಿತ ಕಾಯ್ದೆಯನ್ನು ತರಲು ಮುಂದಾಗಿದ್ದು, ಈ ಸಂಬಂಧ ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆ–2025 ಅನ್ನು ಬುಧವಾರ ಲೋಕಸಭೆಯಲ್ಲಿ ಮಂಡಿಸಿದೆ. ದೇಶದ ಕ್ರೀಡಾ ರಂಗದಲ್ಲಿ ಇದು ಮಹತ್ವದ ಬದಲಾವಣೆಗಳಿಗೆ ಕಾರಣವಾಗಲಿದೆ; ಮುಖ್ಯವಾಗಿ, ಕ್ರೀಡಾ ಸಂಸ್ಥೆಗಳ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಹೆಚ್ಚಲಿದೆ ಎನ್ನಲಾಗುತ್ತಿದೆ. ಪ್ರಸ್ತುತ ದೇಶದಲ್ಲಿರುವ 55ಕ್ಕೂ ಹೆಚ್ಚು ರಾಷ್ಟ್ರೀಯ ಕ್ರೀಡಾ ಒಕ್ಕೂಟಗಳ (ಎನ್‌ಎಸ್‌ಎಫ್) ಮಾನ್ಯತೆ, ಉಸ್ತುವಾರಿಗಾಗಿ ರಾಷ್ಟ್ರೀಯ ಕ್ರೀಡಾ ಮಂಡಳಿ ಸ್ಥಾಪಿಸುವುದು, ಕ್ರೀಡಾಸಂಸ್ಥೆಗಳ ಪದಾಧಿಕಾರಿಗಳ ವಯಸ್ಸು ಮತ್ತು ಅವಧಿಯ ಮಿತಿ ಬದಲಾವಣೆ, ವ್ಯಾಜ್ಯಗಳ ಪರಿಹಾರಕ್ಕಾಗಿ ರಾಷ್ಟ್ರೀಯ ಕ್ರೀಡಾ ನ್ಯಾಯಮಂಡಳಿ ಸ್ಥಾಪನೆ, ಎಲ್ಲ ಕ್ರೀಡಾ ಸಂಸ್ಥೆಗಳನ್ನು ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆಯಡಿ ತರುವುದು ಸೇರಿದಂತೆ ಹಲವು ಅಂಶಗಳು ಮಸೂದೆಯಲ್ಲಿವೆ. ಎಲ್ಲಕ್ಕಿಂತ ಮುಖ್ಯವಾಗಿ, ಜಗತ್ತಿನ ಅತ್ಯಂತ ಶ್ರೀಮಂತ ಕ್ರೀಡಾ ಸಂಸ್ಥೆ ಎಂದೇ ಹೆಸರಾಗಿರುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯೂ ಕಾಯ್ದೆಯ ವ್ಯಾಪ್ತಿಗೆ ಬರಲಿದ್ದು, ಅದಕ್ಕೆ ಮೂಗುದಾರ ಹಾಕುವ ಯತ್ನ ಇದಾಗಿದೆ ಎಂದೂ ವಿಶ್ಲೇಷಿಸಲಾಗುತ್ತಿದೆ. 2036ರ ಒಲಿಂಪಿಕ್ಸ್‌ನ ಆತಿಥ್ಯ ವಹಿಸಲು ಭಾರತವು ಬಿಡ್ ಸಲ್ಲಿಸುವ ಉದ್ದೇಶ ಹೊಂದಿದೆ. ಕಾಯ್ದೆ ತರಲು ಮುಂದಾಗಿರುವುದಕ್ಕೆ ಇದು ಕೂಡ ಒಂದು ಕಾರಣ ಎನ್ನಲಾಗುತ್ತಿದೆ. ಮಸೂದೆಯಲ್ಲಿನ ಪ್ರಮುಖ ಅಂಶಗಳನ್ನು ಇಲ್ಲಿ ವಿವರಿಸಲಾಗಿದೆ...



ರಾಷ್ಟ್ರೀಯ ಕ್ರೀಡಾ ಮಂಡಳಿ

ದೇಶದಲ್ಲಿ ನಡೆಯುವ ಕ್ರೀಡಾ ಚಟುವಟಿಕೆಗಳ ನಿರ್ವಹಣೆ, ನಿಯಂತ್ರಣ ಮತ್ತು ಮೇಲ್ವಿಚಾರಣೆಗಾಗಿ ಹೊಸದಾಗಿ ರಾಷ್ಟ್ರೀಯ ಕ್ರೀಡಾ ಮಂಡಳಿ (ಎನ್‌ಎಸ್‌ಬಿ) ಎಂಬ ಸಂಸ್ಥೆಯನ್ನು ಸ್ಥಾಪಿಸುವುದು ಮಸೂದೆಯ ಅತ್ಯಂತ ಪ್ರಮುಖ ಅಂಶ. ರಾಷ್ಟ್ರೀಯ ಕ್ರೀಡಾ ಒಕ್ಕೂಟಗಳಿಗೆ (ಎನ್‌ಎಸ್‌ಎಫ್) ಮಾನ್ಯತೆ ನೀಡುವ, ಇಲ್ಲವೇ ಅಮಾನತಿನಲ್ಲಿಡುವ ಅಧಿಕಾರವನ್ನು ಇದು ಹೊಂದಿರಲಿದೆ. ಜತೆಗೆ, ಆಟಗಾರರ ಒಳಿತಿಗಾಗಿ ಅಂತರರಾಷ್ಟ್ರೀಯ ಕ್ರೀಡಾ ಒಕ್ಕೂಟ ಮತ್ತು ಸಂಸ್ಥೆಗಳೊಂದಿಗೆ ಸಹಭಾಗಿಯಾಗುವ ಅಧಿಕಾರವೂ ಅದಕ್ಕೆ ಇರಲಿದೆ. ಸಂಪುಟ ಕಾರ್ಯದರ್ಶಿ / ಕ್ರೀಡಾ ಕಾರ್ಯದರ್ಶಿ ಅಧ್ಯಕ್ಷತೆಯ ಆಯ್ಕೆ ಸಮಿತಿಯ ಶಿಫಾರಸಿನ ಆಧಾರದಲ್ಲಿ ಕೇಂದ್ರವು ರಾಷ್ಟ್ರೀಯ ಕ್ರೀಡಾ ಮಂಡಳಿಯ ಅಧ್ಯಕ್ಷ ಮತ್ತು ಸದಸ್ಯರನ್ನು ನೇಮಕ ಮಾಡಲಿದೆ.

ಯಾವುದೇ ಕ್ರೀಡಾ ಸಂಸ್ಥೆಯು ತನ್ನ ಕಾರ್ಯಕಾರಿ ಸಮಿತಿಗೆ ನಿಗದಿತ ಅವಧಿಯಲ್ಲಿ ಚುನಾವಣೆ ನಡೆಸುವಲ್ಲಿ ವಿಫಲವಾದರೆ ಅಥವಾ ಚುನಾವಣಾ ಪ್ರಕ್ರಿಯೆಯಲ್ಲಿ ಅವ್ಯವಹಾರ ನಡೆದಿದ್ದರೆ, ಅದರ ಆಡಳಿತ ಮಂಡಳಿಯನ್ನು ಪುನರ್ ರಚಿಸುವ ಅಧಿಕಾರವೂ ಎನ್‌ಎಸ್‌ಬಿಗೆ ಇರಲಿದೆ. ಜತೆಗೆ, ಕ್ರೀಡಾ ಸಂಸ್ಥೆಯು ತನ್ನ ವಾರ್ಷಿಕ ಲೆಕ್ಕಪತ್ರವನ್ನು ಪ್ರಕಟಿಸಲು ವಿಫಲವಾದರೆ ಅಥವಾ ಹಣಕಾಸು ಅವ್ಯವಹಾರ ನಡೆಸಿದ್ದರೆ, ಅದನ್ನು ಅಮಾನತಿನಲ್ಲಿಡಬಹುದಾಗಿದೆ. ಆದರೆ, ಹಾಗೆ ಮಾಡುವ ಮುನ್ನ ಜಾಗತಿಕ ಕ್ರೀಡಾ ಸಂಸ್ಥೆಯನ್ನು ಸಂಪರ್ಕಿಸಬೇಕು ಎಂದು ಮಸೂದೆಯಲ್ಲಿ ಹೇಳಲಾಗಿದೆ. ಇದರಿಂದ ಮಾನ್ಯತೆ ಪಡೆದಿರುವ ಕ್ರೀಡಾ ಸಂಸ್ಥೆಗಳು ಮಾತ್ರ ಕೇಂದ್ರ ಸರ್ಕಾರದ ಧನಸಹಾಯ ಪಡೆಯಲು ಅರ್ಹವಾಗಿರುತ್ತವೆ.

ಕ್ರೀಡಾ ನ್ಯಾಯಮಂಡಳಿ

ರಾಷ್ಟ್ರದ ವಿವಿಧ ನ್ಯಾಯಾಲಯಗಳಲ್ಲಿ 350ಕ್ಕೂ ಹೆಚ್ಚು ಪ್ರಕರಣಗಳು ವಿಚಾರಣೆಯ ಹಂತದಲ್ಲಿವೆ. ಅವು ಕ್ರೀಡಾ ಸಂಸ್ಥೆಗಳ ಮತ್ತು ಕ್ರೀಡಾಪಟುಗಳ ಸಾಧನೆಯ ಮೇಲೆ ಪರಿಣಾಮ ಬೀರುತ್ತಿವೆ. ಕ್ರೀಡೆಗಳಿಗೆ ಸಂಬಂಧಿಸಿದ ದೂರು, ಕುಂದುಕೊರತೆ, ವಿವಾದ, ಬಿಕ್ಕಟ್ಟುಗಳನ್ನು ತ್ವರಿತವಾಗಿ ಇತ್ಯರ್ಥಪಡಿಸುವುದಕ್ಕಾಗಿ ರಾಷ್ಟ್ರೀಯ ಕ್ರೀಡಾ ನ್ಯಾಯಮಂಡಳಿ (ಎನ್‌ಎಸ್‌ಟಿ) ಸ್ಥಾಪನೆಗೆ ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಅದರಲ್ಲಿ ಒಬ್ಬ ಅಧ್ಯಕ್ಷ ಮತ್ತು ಇಬ್ಬರು ಸದಸ್ಯರು ಇರುತ್ತಾರೆ. ಸುಪ್ರೀಂ ಕೋರ್ಟ್‌ನ ಹಾಲಿ ಅಥವಾ ನಿವೃತ್ತ ನ್ಯಾಯಮೂರ್ತಿ ಅಥವಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅದರ ಮುಖ್ಯಸ್ಥರಾಗಿರಲಿದ್ದಾರೆ. ಅವರನ್ನು ನೇಮಕ ಮಾಡುವ ಅಧಿಕಾರವೂ ಕೇಂದ್ರದ ಕೈಯಲ್ಲಿ ಇರಲಿದೆ.

ಕೇಂದ್ರದ ಇಲಾಖಾ ಕಾರ್ಯದರ್ಶಿ ಮತ್ತು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಅವರನ್ನೊಳಗೊಂಡ ಆಯ್ಕೆ ಸಮಿತಿಯ ಶಿಫಾರಸಿನ ಆಧಾರದಲ್ಲಿ ಕೇಂದ್ರವು ನ್ಯಾಯಮಂಡಳಿಗೆ ನೇಮಕ ಮಾಡಲಿದೆ. ನಿಯಮಗಳ ಉಲ್ಲಂಘನೆ ನಡೆದರೆ ನ್ಯಾಯಮಂಡಳಿ ಸದಸ್ಯರನ್ನು ವಜಾಗೊಳಿಸುವ ಅಧಿಕಾರವೂ ಕೇಂದ್ರ ಸರ್ಕಾರದ ಕೈಯಲ್ಲಿ ಇರುತ್ತದೆ. ನ್ಯಾಯಮಂಡಳಿಯ ತೀರ್ಪುಗಳನ್ನು ಸುಪ್ರೀಂ ಕೋರ್ಟ್‌ನಲ್ಲಿ ಮಾತ್ರ ಪ್ರಶ್ನಿಸಬಹುದಾಗಿದೆ. ನ್ಯಾಯಮಂಡಳಿ ತೀರ್ಪು ನೀಡಿದ ನಂತರ 30 ದಿನಗಳ ಒಳಗೆ ಮಾತ್ರ ಮೇಲ್ಮನವಿ ಸಲ್ಲಿಸಲು ಅವಕಾಶವಿದ್ದು, ಅದು ಮೀರಿದರೆ ಮೇಲ್ಮನವಿ ಸಲ್ಲಿಕೆಗೂ ಸುಪ್ರೀಂ ಕೋರ್ಟ್‌ನ ಅನುಮತಿ ಬೇಕಾಗುತ್ತದೆ.

ಕ್ರೀಡಾ ಚುನಾವಣಾ ಸಮಿತಿ

ಎನ್‌ಎಸ್‌ಬಿ ಶಿಫಾರಸಿನ ಆಧಾರದಲ್ಲಿ ರಾಷ್ಟ್ರೀಯ ಕ್ರೀಡಾ ಚುನಾವಣಾ ಸಮಿತಿಯನ್ನು ಕೇಂದ್ರ ಸರ್ಕಾರವೇ ರಚಿಸಲಿದೆ. ಕೇಂದ್ರ ಚುನಾವಣಾ ಆಯೋಗದ ಸದಸ್ಯರು ಅಥವಾ ರಾಜ್ಯ ಚುನಾವಣಾ ಆಯೋಗಗಳ ಹಲವು ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ 'ಅನುಭವಿ'ಗಳನ್ನು ಸಮಿತಿಗೆ ನೇಮಕ ಮಾಡಲಾಗುತ್ತದೆ. ಕ್ರೀಡಾ ಸಂಸ್ಥೆಗಳ ಕಾರ್ಯಕಾರಿ ಸಮಿತಿ ಮತ್ತು ಆಟಗಾರರ ಸಮಿತಿಗೆ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸುವುದು ಇದರ ಜವಾಬ್ದಾರಿಯಾಗಿದೆ. ಮಸೂದೆಯ ಮತ್ತೊಂದು ಮುಖ್ಯ ಅಂಶವೆಂದರೆ, ಮಾನ್ಯತೆ ಪಡೆದಿರುವ ಎಲ್ಲ ಕ್ರೀಡಾ ಸಂಸ್ಥೆಗಳೂ ಮಾಹಿತಿ ಹಕ್ಕು ಕಾಯ್ದೆ–2005ರ (ಆರ್‌ಟಿಐ) ಅಡಿ ಬರಲಿವೆ.

ಕೇಂದ್ರದ ವಿವೇಚನಾ ಅಧಿಕಾರ

ಯಾವುದೇ ಕ್ರೀಡಾ ಸಂಸ್ಥೆಯು 'ಭಾರತ', 'ಭಾರತೀಯ', 'ರಾಷ್ಟ್ರೀಯ' ಎನ್ನುವ ಪದಗಳನ್ನು ಅಥವಾ ದೇಶಕ್ಕೆ ಸಂಬಂಧಿಸಿದ ಚಿಹ್ನೆಗಳನ್ನು ಬಳಸಬೇಕು ಎಂದು ಉದ್ದೇಶಿಸಿದರೆ, ಅದಕ್ಕೆ ಕೇಂದ್ರ ಸರ್ಕಾರದಿಂದ ನಿರಾಕ್ಷೇಪಣಾ ಪತ್ರ ಪಡೆಯಬೇಕು. ಜತೆಗೆ, ಕೇಂದ್ರ ಸರ್ಕಾರವು ಅಗತ್ಯಬಿದ್ದರೆ, 'ಸಾರ್ವಜನಿಕ ಹಿತಾಸಕ್ತಿ' ಇದೆ ಎನಿಸಿದರೆ, ಮಸೂದೆಯಲ್ಲಿರುವ ಯಾವುದೇ ನಿಯಮದಿಂದ ಕ್ರೀಡಾ ಸಂಸ್ಥೆಗಳಿಗೆ ವಿನಾಯಿತಿ ನೀಡಬಹುದಾಗಿದೆ.

ಕೇಂದ್ರವು ರಾಷ್ಟ್ರೀಯ ಕ್ರೀಡಾ ಮಂಡಳಿಗೆ, ಯಾವುದೇ ಘಟಕಕ್ಕೆ ಅಥವಾ ವ್ಯಕ್ತಿಗೆ ಉತ್ತಮ ಆಡಳಿತ ನೀಡುವ ದೃಷ್ಟಿಯಿಂದ ನಿರ್ದೇಶನ ನೀಡುವ ಅಧಿಕಾರ ಹೊಂದಿರುತ್ತದೆ. ಹಾಗೆಯೇ, ಅಪರೂಪದ ಸಂದರ್ಭಗಳಲ್ಲಿ, ದೇಶದ ಹಿತಾಸಕ್ತಿಗನುಗುಣವಾಗಿ ಯಾವುದೇ ಕ್ರೀಡೆಗೆ ಸಂಬಂಧಿಸಿದ ರಾಷ್ಟ್ರೀಯ ತಂಡದ ಭಾಗವಹಿಸುವಿಕೆಯನ್ನು ನಿಯಂತ್ರಿಸುವ ಅಧಿಕಾರವನ್ನೂ ಹೊಂದಿರುತ್ತದೆ.

ವಯಸ್ಸು ಮತ್ತು ಅವಧಿಯ ಮಿತಿ

ಕ್ರೀಡಾ ಸಂಸ್ಥೆಗಳ ಅಧ್ಯಕ್ಷ, ಮಹಾ ಪ್ರಧಾನ ಕಾರ್ಯದರ್ಶಿ, ಖಜಾಂಚಿ ಹುದ್ದೆಗಳ ಅಧಿಕಾರವನ್ನು ಸತತ ಮೂರು ಅವಧಿಗೆ (12 ವರ್ಷಗಳವರೆಗೆ) ಮಿತಿಗೊಳಿಸಲಾಗಿದೆ. ಪ್ರಸ್ತುತ, ಸಂಸ್ಥೆಗಳ ಪದಾಧಿಕಾರಿಗಳ ಗರಿಷ್ಠ ವಯಸ್ಸನ್ನು 70ಕ್ಕೆ ಮಿತಿಗೊಳಿಸಲಾಗಿದೆ. ಅಂತರರಾಷ್ಟ್ರೀಯ ಕ್ರೀಡಾ ಸಂಸ್ಥೆಗಳ ಅನುಮೋದನೆಯೊಂದಿಗೆ ಅದನ್ನು 75 ವರ್ಷಕ್ಕೆ ವಿಸ್ತರಿಸಲು ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಕ್ರೀಡಾ ಸಂಸ್ಥೆಗಳಿಗೆ ಹೆಚ್ಚಿನ ಆರ್ಥಿಕ ಹೊರೆಯಾಗದಂತೆ ಅವುಗಳ ಕಾರ್ಯಕಾರಿ ಮಂಡಳಿಯ ಸದಸ್ಯ ಬಲವನ್ನು 15ಕ್ಕೆ ನಿಗದಿಪಡಿಸಲಾಗಿದೆ. ಈ ಪೈಕಿ ಇಬ್ಬರು ಅತ್ಯುತ್ತಮ ಕ್ರೀಡಾಪಟುಗಳು, ನಾಲ್ವರು ಮಹಿಳೆಯರು ಇರುವುದು ಕಡ್ಡಾಯವಾಗಿದೆ.

ಅಂತರರಾಷ್ಟ್ರೀಯ ಮಾನದಂಡಗಳಿಗೆ ತಕ್ಕಂತೆ ಕ್ರೀಡಾ ಸಂಸ್ಥೆಗಳಲ್ಲಿ ಲಿಂಗ ಸಮಾನತೆಗೆ ಒತ್ತು ನೀಡಲಾಗಿದ್ದು, ಸಂಸ್ಥೆಗಳ ಆಡಳಿತಕ್ಕೆ ಸಂಬಂಧಿಸಿದ ನೀತಿ ನಿರ್ಧಾರ ಕೈಗೊಳ್ಳುವ ವಿಷಯದಲ್ಲಿ ಕ್ರೀಡಾಪಟುಗಳಿಗೆ ಹೆಚ್ಚಿನ ಮನ್ನಣೆ ನೀಡುವುದು ಮಸೂದೆಯ ಉದ್ದೇಶವಾಗಿದೆ.

ಆಧಾರ: ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆ, ಪಿಟಿಐ

ಬಿಸಿಸಿಐಗೆ ಮೂಗುದಾರ?

ಅತ್ಯಂತ ಶ್ರೀಮಂತ ಕ್ರೀಡಾ ಸಂಸ್ಥೆಯಾಗಿರುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕೂಡ ಈ ಮಸೂದೆಯ ವ್ಯಾಪ್ತಿಗೆ ಬರಲಿದೆ. ಕಾಯ್ದೆ ಜಾರಿಗೆ ಬಂದ ನಂತರ ಬಿಸಿಸಿಐ ಕೂಡ ಇತರ ರಾಷ್ಟ್ರೀಯ ಕ್ರೀಡಾ ಒಕ್ಕೂಟಗಳಂತೆ ಸರ್ಕಾರದ ನಿಯಂತ್ರಣಕ್ಕೆ ಒಳಪಡಲಿದೆ.

'ಬಿಸಿಸಿಐ ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಪಡೆಯುತ್ತಿಲ್ಲ. ಹಾಗಿದ್ದರೂ ಮಸೂದೆ ಕಾಯ್ದೆಯಾಗಿ ಜಾರಿಗೆ ಬಂದ ನಂತರ ಎಲ್ಲ ನಿಯಮಗಳು ಬಿಸಿಸಿಐಗೂ ಅನ್ವಯವಾಗುತ್ತದೆ. ಸಂಸತ್ ರೂಪಿಸಿದ ಕಾನೂನನ್ನು ಬಿಸಿಸಿಐ ಆಡಳಿತ ಪಾಲಿಸಲೇ ಬೇಕಾಗುತ್ತದೆ' ಎಂದು ಸಚಿವಾಲಯದ ಮೂಲಗಳು ತಿಳಿಸಿವೆ.

ಕಾಯ್ದೆಯ ವ್ಯಾಪ್ತಿಯಲ್ಲಿ ಬಂದರೂ ಬಿಸಿಸಿಐನ ಸ್ವಾಯತ್ತೆಗೆ ಧಕ್ಕೆಯಾಗುವುದಿಲ್ಲ. ದೇಶದ ಇತರ ಎಲ್ಲ ಕ್ರೀಡಾ ಒಕ್ಕೂಟಗಳಂತೆ ಕ್ರಿಕೆಟ್ ಮಂಡಳಿ ಕೂಡ ಕಾರ್ಯನಿರ್ವಹಿಸಬಹುದು. ಆದರೆ, ಹೊಸದಾಗಿ ಅಸ್ತಿತ್ವಕ್ಕೆ ಬರಲಿರುವ ರಾಷ್ಟ್ರೀಯ ಕ್ರೀಡಾ ಮಂಡಳಿಯ ಅಧೀನದಲ್ಲಿ ಅದು ಬರಲಿದೆ. ಬಿಸಿಸಿಐಯು ಈ ಮಂಡಳಿಯಿಂದ ಮಾನ್ಯತೆಯನ್ನೂ ಪಡೆಯಬೇಕಾಗುತ್ತದೆ. ಜತೆಗೆ, ಆಡಳಿತ ಮಂಡಳಿಯ ಚುನಾವಣೆ, ಆಯ್ಕೆ, ಕ್ರೀಡಾಪಟುಗಳಿಗೆ ಸಂಬಂಧಿಸಿದ ಎಲ್ಲ ದೂರುಗಳು, ವಿವಾದಗಳನ್ನು ಕಾಯ್ದೆಯ ಅಡಿಯಲ್ಲಿ ಸ್ಥಾಪನೆಯಾಗಲಿರುವ ರಾಷ್ಟ್ರೀಯ ಕ್ರೀಡಾ ನ್ಯಾಯಮಂಡಳಿಯ ಮೂಲಕವೇ ಬಗೆಹರಿಸಿಕೊಳ್ಳಬೇಕಾಗುತ್ತದೆ.

ಹಿಂದಿನಿಂದಲೂ ವಿರೋಧ: ₹18,760 ಕೋಟಿಯಷ್ಟು ಮೌಲ್ಯ ಹೊಂದಿರುವ ಬಿಸಿಸಿಐ, 1975ರ ತಮಿಳುನಾಡು ಸಹಕಾರ ಸಂಘಗಳ ನೋಂದಣಿ ಕಾಯ್ದೆಯ ಅಡಿಯಲ್ಲಿ ನೋಂದಣಿಯಾಗಿರುವ ಸಂಸ್ಥೆ. ಅದರ ಆಡಳಿತದಲ್ಲಿ ಸಾಮಾನ್ಯವಾಗಿ ಪ್ರಭಾವಿ ರಾಜಕಾರಣಿಗಳು, ಸಂಸದರು, ಆಡಳಿತ ಪಕ್ಷಗಳ ಜೊತೆ ಅಥವಾ ಆಡಳಿತದಲ್ಲಿರುವವರ ಜೊತೆ ಗುರುತಿಸಿಕೊಂಡವರೇ ಇರುತ್ತಾರೆ.

ರಾಷ್ಟ್ರೀಯ ಕ್ರೀಡಾ ಒಕ್ಕೂಟಗಳ (ಎನ್‌ಎಸ್‌ಎಫ್) ವ್ಯಾಪ್ತಿಗೆ ಬಿಸಿಸಿಐ ಅನ್ನು ತರುವ ಪ್ರಯತ್ನ ಹಿಂದೆಯೂ ನಡೆದಿತ್ತು. ಆದರೆ, ದೇಶದಲ್ಲಿ ಕ್ರಿಕೆಟ್‌ಗೆ ಸಂಬಂಧಿಸಿದ ಚಟುವಟಿಕೆಗಳನ್ನು ನಡೆಸಲು ಕ್ರೀಡಾ ಸಚಿವಾಲಯದ ಅನುದಾನವನ್ನು ತಾನು ಅವಲಂಬಿಸಿಲ್ಲ ಎಂಬ ಕಾರಣವನ್ನು ನೀಡಿ, ಈ ಪ್ರಸ್ತಾವವನ್ನು ಬಿಸಿಸಿಐ ವಿರೋಧಿಸುತ್ತಾ ಬಂದಿತ್ತು.

ಇದೇ ರೀತಿ, ಮಾಹಿತಿ ಹಕ್ಕು ಕಾಯ್ದೆಯ (ಆರ್‌ಟಿಐ) ಅಡಿಯಲ್ಲಿ ಸಂಸ್ಥೆಯನ್ನು ತರುವುದನ್ನೂ ಅದು ವಿರೋಧಿಸುತ್ತಾ ಬಂದಿದೆ. ಬಿಸಿಸಿಐನ ಆಡಳಿತ ನಿರ್ವಹಣೆ ಮತ್ತು ಅದು ಅಳವಡಿಸಿಕೊಂಡಿರುವ ನಿಯಮಗಳಲ್ಲಿ ಆಗಬೇಕಾಗಿರುವ ಬದಲಾವಣೆಗಳ ಬಗ್ಗೆ ಸಲಹೆ ನೀಡುವುದಕ್ಕಾಗಿ 2015ರ ಜನವರಿಯಲ್ಲಿ ನಿವೃತ್ತ ನ್ಯಾಯಮೂರ್ತಿ ಆರ್.ಎಂ.ಲೋಧಾ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. ಹಲವು ಸುಧಾರಣೆಗಳ ಬಗ್ಗೆ ಶಿಫಾರಸು ಮಾಡಿದ್ದ ಸಮಿತಿಯು ಬಿಸಿಸಿಐ ಅನ್ನು ಆರ್‌ಟಿಐ ವ್ಯಾಪ್ತಿಯಲ್ಲಿ ತರಬೇಕು ಎಂದೂ ಹೇಳಿತ್ತು. ಆದರೆ, ಬಿಸಿಸಿಐ ಆಡಳಿತ ಇದನ್ನು ವಿರೋಧಿಸಿತ್ತು. ಇದಕ್ಕಾಗಿ ಸುಪ್ರೀಂ ಕೋರ್ಟ್ ಬಿಸಿಸಿಐ ಅನ್ನು ತೀವ್ರ ತರಾಟೆಗೆ ತೆಗೆದುಕೊಂಡಿತ್ತು. 2018ರಲ್ಲಿ ಕಾನೂನು ಆಯೋಗ ಕೂಡ ಬಿಸಿಸಿಐಯನ್ನು ಆರ್‌ಟಿಐ ಅಡಿಯಲ್ಲಿ ತರಬೇಕು ಎಂದು ವರದಿ ನೀಡಿತ್ತು. ಹಾಗಿದ್ದರೂ ಅದು ಈವರೆಗೂ ಈ ಕಾಯ್ದೆಯ ಅಡಿಯಲ್ಲಿ ಬಂದಿಲ್ಲ. ಈಗ ಮಂಡಿಸಲಾಗಿರುವ ಕ್ರೀಡಾ ಆಡಳಿತ ಮಸೂದೆಯು ಎಲ್ಲ ರಾಷ್ಟ್ರೀಯ ಕ್ರೀಡಾ ಒಕ್ಕೂಟಗಳನ್ನೂ ಆರ್‌ಟಿಐ ವ್ಯಾಪ್ತಿಗೆ ತರುವ ಬಗ್ಗೆ ಪ್ರಸ್ತಾಪಿಸಿದೆ.

ಎಚ್ಚರಿಕೆಯ ಪ್ರತಿಕ್ರಿಯೆ

ತನ್ನ ಕಾರ್ಯಚಟುವಟಿಕೆಯಲ್ಲಿ ಸರ್ಕಾರದ ಹಸ್ತಕ್ಷೇಪವನ್ನು ಇಷ್ಟಪಡದ ಬಿಸಿಸಿಐ, ಈ ಮಸೂದೆಯ ಬಗ್ಗೆ ಎಚ್ಚರಿಕೆಯಿಂದ ಪ್ರತಿಕ್ರಿಯಿಸಿದೆ.

ಮಸೂದೆ ಮಂಡನೆಯ ಬಳಿಕ ಸಂಸತ್ತಿನ ಹೊರಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಬಿಸಿಸಿಐ ಉಪಾಧ್ಯಕ್ಷರೂ ಆಗಿರುವ ರಾಜ್ಯಸಭಾ ಸದಸ್ಯ ರಾಜೀವ್ ಶುಕ್ಲಾ, 'ನಾವು ಈ ಮಸೂದೆ ಹಾಗೂ ಅದರ ನಿಯಮಗಳನ್ನು ಅಧ್ಯಯನ ಮಾಡಲಿದ್ದೇವೆ. ಮಂಡಳಿಯ ಅತ್ಯುನ್ನತ ಸಮಿತಿಯ ಮುಂದೆ ಈ ವಿಚಾರವನ್ನು ಇಡುವ ಬಗ್ಗೆಯೂ ಚರ್ಚಿಸಲಿದ್ದೇವೆ. ನಂತರ ಏನು ಮಾಡಬಹುದು ಎಂದು ಯೋಚಿಸುತ್ತೇವೆ. ಸರ್ಕಾರದೊಂದಿಗೂ ನಾವು ಮಾತುಕತೆ ನಡೆಸಲಿದ್ದೇವೆ' ಎಂದು ಹೇಳಿದ್ದಾರೆ.

ಕ್ರಿಕೆಟ್ ಈಗ ಒಲಿಂಪಿಕ್ ಕ್ರೀಡಾಕೂಟದ ಭಾಗ. 2028ರಲ್ಲಿ ಲಾಸ್ ಏಂಜಲೀಸ್‌ನಲ್ಲಿ ನಡೆಯಲಿರುವ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಕೂಡ ಭಾಗವಾಗಲಿದ್ದು, ಭಾರತ ತಂಡ ಟಿ20 ಪಂದ್ಯಗಳನ್ನು ಆಡಲಿದೆ.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಜೊತೆಗೆ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಸ್‌ಎಫ್‌ಸಿ ಕೋಡ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಅಥವಾ ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **ಶೈಕ್ಷಣಿಕ ನೆರವಿಗೆ ಅರ್ಜಿ** ಎಂದು ಸ್ಪಷ್ಟವಾಗಿ ಬರೆದಿರಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ನೀಡಬೇಕು.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ರಾಷ್ಟ್ರೀಯ

ನ್ಯಾ.ವರ್ಮಾ ಪ್ರಕರಣ ವಿಚಾರಣೆಗೆ ಸಾಂವಿಧಾನಿಕ ಪೀಠ: 'ಸುಪ್ರೀಂ'



ನವದೆಹಲಿ (ಪಿಟಿಐ): ಮನೆಯಲ್ಲಿ ನಗದು ಪತ್ತೆಯಾದ ಪ್ರಕರಣ ಕುರಿತು ಸುಪ್ರೀಂ ಕೋರ್ಟ್‌ನ ಆಂತರಿಕ ತನಿಖಾ ಸಮಿತಿಯು ತಮ್ಮನ್ನು ಅಪರಾಧಿಯಾಗಿಸಿ ನೀಡಿದ ವರದಿಯನ್ನು ಅಮಾನ್ಯ ಮಾಡಬೇಕು ಎಂದು ಕೋರಿ ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರು ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿ ಸಾಂವಿಧಾನಿಕ ಪೀಠ ರಚಿಸುವುದಾಗಿ ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

'ಸಂಸತ್ತಿನಲ್ಲಿ ನನ್ನ ವಿರುದ್ಧ ವಾಗ್ದಂಡನೆ ಪ್ರಕ್ರಿಯೆ ನಡೆಸಬೇಕು' ಎಂದು ಅಂದಿನ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ಮೇ 8ರಂದು ಮಾಡಿದ್ದ ಶಿಫಾರಸ್ಸನ್ನೂ ರದ್ದು ಮಾಡಬೇಕು' ಎಂದು ವರ್ಮಾ ಕೋರಿದ್ದಾರೆ. ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿಗಳಾದ ಕೆ. ವಿನೋದ್ ಚಂದ್ರನ್, ಜಾಯ್ ಮಾಲ್ಯ ಬಾಗ್ಚಿ ಅವರಿದ್ದ ಪೀಠವು ಅರ್ಜಿಯ ವಿಚಾರಣೆ ನಡೆಸಿತು.

'ಸಮಿತಿಯ ಕಾರ್ಯ ಚಟುವಟಿಕೆಯ ಭಾಗವಾಗಿ ನಾನೂ ಇದ್ದೆ. ಆದ್ದರಿಂದ ಈ ಅರ್ಜಿಯ ವಿಚಾರಣೆಯನ್ನು ನಾನು ನಡೆಸುವುದು ಸೂಕ್ತವಲ್ಲ. ನಾನು ಸಾಂವಿಧಾನಿಕ ಪೀಠ ರಚಿಸುತ್ತೇನೆ' ಎಂದು ಮುಖ್ಯ ನ್ಯಾಯಮೂರ್ತಿ ಗವಾಯಿ ಅವರು ಹೇಳಿದರು.

'ಅದಾಗಲೇ ನನ್ನ ವಿರುದ್ಧ ರೂಪಿತವಾದ ಸಂಕಥನದ ಅಭಿಪ್ರಾಯದಲ್ಲಿಯೇ ಸಮಿತಿಯು ತನಿಖೆ ನಡೆಸಿದೆ. ತನಿಖೆಯನ್ನು ಬೇಗ ಮುಗಿಸಬೇಕು ಎನ್ನುವ ಕಾರಣಕ್ಕಾಗಿ ಬೇಗ ಮುಗಿಸಲಾಗಿದೆಯೇ ಹೊರತು, ನ್ಯಾಯಯುತ ಪ್ರಕ್ರಿಯೆ ನಡೆಸಿಲ್ಲ. ಸಮಿತಿಯು ನನ್ನ ವಾದವನ್ನು ಆಲಿಸಿಲ್ಲ' ಎಂಬುದಾಗಿ ವರ್ಮಾ ಅವರು ಅರ್ಜಿಯಲ್ಲಿ ಆರೋಪಿಸಿದ್ದಾರೆ.

ತಿದ್ದುಪಡಿ

ಬುಧವಾರದ ಸಂಚಿಕೆಯ ಆಳ ಅಗಲದಲ್ಲಿ ಪ್ರಕಟವಾದ 'ರಾಜಕೀಯ ಸುಳಿಯಲ್ಲಿ ಪಂಚಮಸಾಲಿ ಪೀಠ' ಎಂಬ ವರದಿಯಲ್ಲಿ 'ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠವನ್ನು ಪಂಚಪೀಠಾಧೀಶರ ಮಾರ್ಗದರ್ಶನದಲ್ಲಿ ಸ್ಥಾಪಿಸಲಾಯಿತು' ಎಂಬ ಮಾಹಿತಿ ಇದೆ. ಇದು ತಪ್ಪು ಮಾಹಿತಿ. ವಾಸ್ತವವಾಗಿ, ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠವು ಪಂಚಪೀಠಗಳಿಗೆ ಹೊರತಾಗಿ ಸ್ಥಾಪನೆಯಾದುದಾಗಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256


ಕ್ರಿಕೆಟ್ ಮೈದಾನವೊಂದರಲ್ಲಿ ಬಾಲಿವುಡ್ ನಟ ಅಜಯ್ ದೇವಗನ್ ಅವರು ಪಾಕಿಸ್ತಾನದ ಮಾಜಿ ಕ್ರಿಕೆಟಿಗ ಶಾಹಿದ್ ಅಫ್ರಿದಿ ಅವರೊಂದಿಗೆ ಮಾತನಾಡುತ್ತಿರುವ ಫೋಟೊಗಳು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹಂಚಿಕೆಯಾಗುತ್ತಿವೆ. ಈಗ ನಡೆಯುತ್ತಿರುವ ಲೆಜೆಂಡ್ಸ್ ವಿಶ್ವ ಚಾಂಪಿಯನ್‌ಶಿಪ್‌ನ (ಡಬ್ಲ್ಯುಸಿಎಲ್) ಪಂದ್ಯದ ವೇಳೆ ಈ ಮಾತುಕತೆ ನಡೆಸಲಾಗಿದೆ ಎಂದು ಪೋಸ್ಟ್‌ನಲ್ಲಿ ಹೇಳಲಾಗಿದೆ. ಇದೇ ಅಫ್ರಿದಿ ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಭಾರತವನ್ನು ಟೀಕಿಸಿದ್ದರು. ಅಲ್ಲದೇ ಆಪರೇಷನ್ ಸಿಂಧೂರ ಸಮಯದಲ್ಲಿ ಭಾರತದ ವಿರುದ್ಧ ಅಸಂಬದ್ಧವಾಗಿ ಮಾತನಾಡಿದ್ದರು ಎಂದೂ ಉಲ್ಲೇಖಿಸಲಾಗುತ್ತಿದೆ. ಆದರೆ, ಇದು ಸುಳ್ಳು. ಫೋಟೊಗಳು ಈ ವರ್ಷದ್ದಲ್ಲ.



ಚಾಂಪಿಯನ್‌ಶಿಪ್‌ನ ಭಾಗವಾಗಿ ಭಾರತ ಮತ್ತು ಪಾಕಿಸ್ತಾನದ ಮಾಜಿ ಕ್ರಿಕೆಟಿಗರ ಪಂದ್ಯ ಜುಲೈ 20ಕ್ಕೆ ನಿಗದಿಯಾಗಿತ್ತು. ಆದರೆ, ಭಾರತದ ಹಲವು ಕ್ರಿಕೆಟಿಗರು ಆಟವಾಡಲು ನಿರಾಕರಿಸಿರುವುದರಿಂದ ಆ ಪಂದ್ಯ ರದ್ದಾಗಿತ್ತು. ಹಾಗಾಗಿ, ಈ ವರ್ಷ ಭಾರತ–ಪಾಕಿಸ್ತಾನ ತಂಡಗಳ ನಡುವೆ ಪಂದ್ಯ ನಡೆದಿಲ್ಲ. ನಟ ಅಜಯ್ ದೇವಗನ್ ಅವರು ಡಬ್ಲ್ಯುಸಿಎಲ್ ತಂಡದ ಸಹಮಾಲೀಕರಾಗಿದ್ದಾರೆ. ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಫೋಟೊ ಕಳೆದ ವರ್ಷದ ಪಂದ್ಯಾವಳಿಯದ್ದು. ಕಳೆದ ವರ್ಷದ ಜುಲೈ 6ರಂದು ಇಂಗ್ಲೆಂಡ್‌ನ ಎಜ್‌ಬಾಸ್ಟನ್‌ನಲ್ಲಿ ನಡೆದಿದ್ದ ಭಾರತ–ಪಾಕಿಸ್ತಾನ ತಂಡಗಳ ನಡುವಿನ ಪಂದ್ಯದ ವೇಳೆ ಅಜಯ್ ದೇವಗನ್ ಅವರು ಅಫ್ರಿದಿ ಅವರೊಂದಿಗೆ ಮಾತನಾಡಿದ ಸಂದರ್ಭದಲ್ಲಿ ತೆಗೆದ ಫೋಟೊಗಳು. ಹಲವರು ಈ ಬಗ್ಗೆ ಕಳೆದ ವರ್ಷವೇ ಪೋಸ್ಟ್‌ಗಳನ್ನು ಮಾಡಿದ್ದಾರೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಮಾನವ - ವಿಶ್ವಮಾನವ





ಪಿ.ಚಂದ್ರಿಕಾ

ಪ್ರತಿಯೊಬ್ಬ ಮನುಷ್ಯನೂ ಪದೇ ಪದೇ ಬಯಸುವ ಒಂದು ವಿಷಯ ಇರುತ್ತದೆ, ಪರಿಸರ ಇರುತ್ತದೆ; ಜಗತ್ತಿನ ಜೊತೆಗಿನ ಸಂಘರ್ಷದಿಂದಲೇ ಅದು ರೂಪಿತವಾಗಿರುತ್ತದೆ. ಹೀಗೆ ಮನುಷ್ಯ ತನ್ನ ಜಗತ್ತನ್ನು ತಾನೇ ಕಟ್ಟಿಕೊಳ್ಳಲಿಕ್ಕೆ, ತನ್ನ ಒಳಗೆ ಮತ್ತು ಹೊರಗೆ ತುಂಬಾ ಅಪರೂಪದ ಸಂಗತಿಗಳ ಜೊತೆ ಮಾತಾಡಬೇಕಾಗುತ್ತದೆ. ತಾನು ಬದುಕುವ ಪರಿಸರವನ್ನು ಸೂಕ್ಷ್ಮವಾಗಿ ಅವಲೋಕಿಸಿ, ಮಥಿಸುವಾಗ ದುಃಖದ ದೊಡ್ಡ ಸಾಗರದ ಅಲ್ಲೋಲ ಕಲ್ಲೋಲವನ್ನು ತಾಳಿಕೊಳ್ಳಬೇಕಾಗುತ್ತದೆ. ಹೀಗೆಲ್ಲಾ ಆದರೆ ನಮಗೆ ನಾವೇ ಒಂದು ಜಗತ್ತನ್ನು ಸೃಷ್ಟಿ ಮಾಡಿಕೊಳ್ಳಬಹುದಾ ಎನ್ನುವ ಪ್ರಶ್ನೆಗೆ ಉತ್ತರ ಕಷ್ಟ. ಆದರೆ, ಹಾದಿ ಇದೆಯೆನ್ನುವುದು ಮಾತ್ರ ಸರ್ವವಿದಿತ. ನಿಜ; ನಾವು ಹಿಂದೆಲ್ಲಾ ಅನುಭವಿಸಿದ, ಅದರ ಮೂಲಕ ಕಲ್ಪಿಸಿಕೊಳ್ಳುತ್ತಿರುವ, ಅದಕ್ಕೆ ಹತ್ತಿರವಾಗುವ ಜಗತ್ತು ಇವತ್ತು ಸಿಗುತ್ತಿಲ್ಲ. ಸಿಗದ್ದನ್ನು ಸಾಧ್ಯ ಮಾಡಿಕೊಳ್ಳುವುದೇ ದೊಡ್ಡ ಸವಾಲು. ಮನುಷ್ಯ ನಿರ್ಮಿತವಾದ ಎಲ್ಲ ಗೆರೆಗಳು ಅಳಿಯದೆ ಸಹಜತೆ ದೊರಕುವುದಾದರೂ ಹೇಗೆ? ಸಹಜತೆಯಿಂದ ದೂರವಾದಾಗ ಮನುಷ್ಯನ ಮನಸ್ಸು ಮತ್ತೆ ಕೆರಳುತ್ತದೆ, ಯುದ್ಧಭೂಮಿಕೆಯೊಂದು ಸಿದ್ಧವಾಗುತ್ತದೆ. ಧರ್ಮ ಧರ್ಮದ ಮಧ್ಯೆ, ದೇಶ ದೇಶಗಳ ಮಧ್ಯೆ, ಜಾತಿ ಜಾತಿಯ ಮಧ್ಯೆ ಕೊನೆಗೆ ಮನುಷ್ಯ ಮನುಷ್ಯರ ಮಧ್ಯೆ ಯುದ್ಧ ಸಿದ್ಧವಾಗುತ್ತದೆ. ಪ್ರತಿಕ್ಷಣವೂ ವಿನಾಶವನ್ನು ಬಗಲಲ್ಲೇ ಸಿಕ್ಕಿಸಿಕೊಂಡು ಓಡಾಡುತ್ತೇವೆ.

ಈ ಎಲ್ಲಾ ಅಂತರಗಳು ಅಳಿಯುವುದು ಹೇಗೆ? ಒಂದು ಸುಂದರ ಪ್ರಸಂಗ ನೆನಪಾಗುತ್ತದೆ. ಗೆಳೆಯ ಬೇಲೂರು ರಘುನಂದನ ತನ್ನ ಮಗನೊಂದಿಗೆ ದೇಶದ ಗಡಿ ಸಿಕ್ಕಿಂನ ನತುಲಾ ಪಾಸ್‌ಗೆ ಹೋಗಿರುತ್ತಾರೆ. ಅಲ್ಲಿಂದಾಚೆಗಿನದ್ದು ಚೀನಾ. ಉದ್ದಕ್ಕೂ ದೇಶಗಳನ್ನು ಬೇರ್ಪಡಿಸುವ- ರಕ್ಷಣೆಯ ಕಾರಣಕ್ಕಾಗಿ ಹಾಕಿರುವ -ಬೇಲಿಯ ಆಚೆಗೆ ಆ ದೇಶದ ಸೈನಿಕರು, ಈಚೆ ಬದಿ ನಮ್ಮವರು. ಇದ್ಯಾವುದನ್ನೂ ಅರ್ಥಮಾಡಿಕೊಳ್ಳಲಾಗದ ಆರು ವರ್ಷಗಳ ಪುಟ್ಟ ಹುಡುಗ ಗೋಕುಲ ಸಹೃದಯ ಬೇಲಿಯ ಆಚೆಗಿನ ಸೈನಿಕನಿಗೆ ಮೊದಲು ಹಸ್ತಲಾಘವ ಕೊಟ್ಟನಂತೆ. ಆ ಕಡೆಯ ಸೈನಿಕ ಕೂಡಾ ಖುಷಿಯಾಗಿ ಪ್ರತಿಕ್ರಿಯಿಸಿದ್ದಾನೆ. ಉತ್ತೇಜಿತನಾದ ಪುಟ್ಟ ಹುಡುಗ ಸೈನಿಕನಿಗೆ ಬೇಲಿಯನ್ನು ದಾಟಿ ಬರುವಂತೆ ಮನವಿ ಮಾಡಿಕೊಳ್ಳತೊಡಗಿದನಂತೆ. ತಂದೆ ಮಗನಿಗೆ 'ಅವರು ಈ ಕಡೆಗೆ ಬರಬಾರದು' ಎಂದು ತಿಳಿಹೇಳಿದರೂ ಕೇಡುಕಿನ ಕಲ್ಪನೆಯೇ ಇಲ್ಲದ ಅವನಿಗೆ ಅರ್ಥವಾಗಲಿಲ್ಲ. 'ನೋಡು ನೋಡು, ಆ ಕಡೆಯಿಂದ ಗಾಳಿ ಬೀಸ್ತಾ ಇದೆಯಲ್ಲಾ? ಹಕ್ಕಿಗಳು ಹಾರಾಡ್ತಾ ಇವೆಯಲ್ಲಾ? ಇವರು ಮಾತ್ರ ಯಾಕೆ ಬರಬಾರದು' ಎಂದನಂತೆ. ಭಾಷೆ ಅರ್ಥವಾಗದ ಆ ಸೈನಿಕ 'ಹುಡುಗ ಏನು ಹೇಳ್ತಾ ಇದ್ದಾನೆ' ಎಂದು ಕೇಳಿ ತಿಳಿದುಕೊಂಡನಂತೆ. ಅವನ ಕಣ್ಣುಗಳಲ್ಲೂ ನೀರು.

ಮಗುವಿನ ಪ್ರಶ್ನೆಗೆ ಉತ್ತರಿಸುವವರು ಯಾರು? ಆದರೆ, ಆ ಮುಗ್ಧ ಪ್ರಶ್ನೆಯಲ್ಲೇ ಜಗತ್ತಿನ ಎಲ್ಲಾ ಸೌಖ್ಯವಿದೆ. ಪ್ರಕೃತಿಗೆ ಇಲ್ಲದ ಎಲ್ಲೆಗಳನ್ನು ನಾವು ನಿರ್ಮಿಸಿಕೊಂಡಿದ್ದೇವೆ. ದೇಶ, ಭಾಷೆ, ಧರ್ಮ, ಜಾತಿ ಎಲ್ಲದರ ನಡುವಣ ಗೆರೆ ಅಳಿಯಬೇಕು. ಆಗ ಮನುಷ್ಯ ವಿಶ್ವಮಾನವನಾಗುತ್ತಾನೆ. ಆಗ ಯುದ್ಧವಿಲ್ಲದ ಸುಂದರ ಜಗತ್ತು ನಮ್ಮದಾಗುತ್ತದೆ.

ಗುಂಡಣ್ಣ



ಪದಬಂಧ 6113

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈಕೆ ಕಣಿ ಹೇಳುವವಳು (4)
3.ಉತ್ತ ನೆಲವನ್ನು ಮಟ್ಟ ಮಾಡುವ ಸಾಧನ (3)
5.ಗಣಪತಿ ಚಿಕ್ಕದಾಗಿ ಮೂಡಿದ್ದಾನೆ (3)
7.ಉರು ಹೊಡೆಯುತ್ತಿರುವವನ ಶ್ವಾಸ! (3)
8.ಪ್ರೇಮಿಗಳ ಅಗಲಿಕೆಯ ಬೇಗೆ (5)
11.ನೆಲವನ್ನು ಗೋಮಯದಿಂದ ಸಾರಿಸುವಿಕೆ (3)
12.ಕಡೆದ ಮೊಸರಿದು (3)
15.ಬೆಟ್ಟದ ಗವಿ (3)
16.ಮಧ್ಯವಯಸ್ಸಿದು (4)

ಮೇಲಿಂದ ಕೆಳಕ್ಕೆ
1.ನಾಲ್ಕು ಬಳ್ಳಗಳ ಪರಿಮಾಣ (3)
2.ಎಣ್ಣೆ ತುಪ್ಪ ಮುಂತಾದವುಗಳ ಜಿಗುಟು (2)
3.ಕೇಶದ ಬುಡದಲ್ಲಿನ ಚರ್ಮದ ಹೊಟ್ಟು (3)
4.ಶರೀರದ ಹಿಂಭಾಗವನ್ನು ಹೊಡೆದು ಪ್ರೋತ್ಸಾಹಿಸು! (4)
6.ಹಾಡಿನ ಪುನರಾವರ್ತನೆಗೊಳ್ಳುವ ಭಾಗ (3)
7.ಕನ್ನಡಿಗನು ನೀಡಿರುವ ಎಕ್ಸಾಂಪಲ್! (5)
9.ಇದು ತುಂಬಾ ಶ್ರೇಷ್ಠ (3)
10.ಈತ ಹಾಲು ಮಾರುವವನು (4)
11.ಹತ್ತು ನೂರಿದು (3)
13.ಗೆಳತಿಯೊಡನಿರುವ ಸ್ನೇಹಿತ (3)
14.ಅರಿವು ಹೀಗೆ ಬಂದಿದೆ (2)

1			2	■	■	3		4
	■	■		■	■		■	
5		6	■	7			■	
■	■		■		■	■	■	
■	■	8				9	■	■
10	■	■	■		■		■	■
	■	11			■	12		13
	■		■	■	14	■	■	
15			■	■	16			

6112ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬದ್ಧಕಂಕಣ 3.ಸಂಧಾನ
6.ಖಾರಿ 7.ಯಜಮಾನ
10.ಪದವೀದಾನ 13.ಮನೋಗತ
16.ಅರಿ 17.ಯದೃಚ್ಛೆ
18.ವಾಚನಾಲಯ

ಮೇಲಿಂದ ಕೆಳಕ್ಕೆ:
1.ಬರಖಾಸ್ತು 2.ಕಮಠ
4.ನಸುನಗು 5.ವಾಯ
8.ಜವಾನ 9.ಪ್ರವೀಣ
10.ಪತಂಗ 11.ಕಮನೀಯ
12.ಪರಿಣಯ 14.ತಮ್ಮ
15.ಎಡಚ

ಸುಡೊಕು 6497

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

7		4		5				3
			1		9	6		5
6		5		3			1	
2					4	1		9
	7	1		8				
4			9		2	3		7
	4		3		7		2	1
						7		
1	3			2			6	

6496 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

24 ಜುಲೈ 2025 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಅಮಾವಾಸ್ಯೆ ಗಂ. 24-41 **ನಕ್ಷತ್ರ:** ಪುನರ್ವಸು ಗಂ. 16-44 **ಯೋಗ:** ಹರ್ಷಣ ಗಂ. 9-51 ಕರಣ: ಚತುಷ್ಪಾದ ಗಂ. 13-32, ಕರ್ಕಾಟಕ ಮಾಸದ 08 ನೇ ದಿನ. **ಮಳೆ ನಕ್ಷತ್ರ:** ಪುಷ್ಯ 1 ನೇ ಪಾದ. **ರಾಹುಕಾಲ:** ಮಧ್ಯಾಹ್ನ 01-30 03-00. **ಸೂರ್ಯೋದಯ:** 06-17 **ಸೂರ್ಯಾಸ್ತ:** 06-57. **ಮುಸ್ಲಿಂ ದಿನಾಂಕ:** 28 ಮೊಹರಮ್. **ದಿನ ವಿಶೇಷ:** ಚಿತ್ತಲಗಿ ಅಮಾವಾಸ್ಯೆ (ಒರಿಸ್ಸಾ), ಆಡಿ ಅಮಾವಾಸ್ಯೆ (ತಮಿಳುನಾಡು), ಕರ್ಕಾಟಕ ವಾವು (ಕೇರಳ) **ಅದೃಷ್ಟ ಸಂಖ್ಯೆ:** 2, 4

ಮೇಷ: ಮನೆಯ ಹಿರಿಯರ ಮಧ್ಯಸ್ಥಿಕೆಯಿಂದ ಅಣ್ಣ-ತಮ್ಮಂದಿರ ವಿವಾದಗಳು ಬಗೆಹರಿಯುವುದು. ಪುನಃ ಮೊದಲಿನಂತೆ ಸಂಬಂಧ ಗಟ್ಟಿಯಾಗಲಿದೆ. ಸರ್ಕಾರಿ ಗುತ್ತಿಗೆ ಕೆಲಸದ ಬಾಕಿ ಹಣ ಸಂದಾಯವಾಗುವುದು ನೆಮ್ಮದಿ ತರಲಿದೆ.

ವೃಷಭ: ಹಿಂದೆ ಕೊಟ್ಟಿರುವ ಸಾಲದ ಹಣ ಕೈಸೇರುವುದರಿಂದ ಲೇವಾದೇವಿ ವ್ಯವಹಾರ ಮುಂದುವರಿಸಲು ಮನಸ್ಸಾಗುವುದು. ತಿಳಿವಳಿಕೆ ಇಲ್ಲದವರಂತೆ ವರ್ತಿಸಿ ಮೂರ್ಖರೆನ್ನಿಸಬೇಡಿ. ಆದಾಯ ಇರುತ್ತದೆ.

ಮಿಥುನ: ಮುಖ್ಯ ಕೆಲಸಗಳತ್ತ ಮಾತ್ರ ಗಮನಹರಿಸಿ. ವೃತ್ತಿರಂಗದಲ್ಲಿ ತಿಳಿವಳಿಕೆಯಂತೆನೇ ನಡೆಯಿರಿ, ಅನ್ಯರ ಮಾತಿಗೆ ಕಿವಿ ಒಡ್ಡಬೇಡಿ. ಸಿನೆಮಾ ನಟ ನಟಿಯರಿಗೆ ಅವಕಾಶಗಳು ದೊರೆಯಲಿವೆ.

ಕರ್ಕಾಟಕ: ಕಚೇರಿಯಲ್ಲಿ ಇದ್ದ ಭಿನ್ನಾಭಿಪ್ರಾಯಗಳು ಬಗೆಹರಿಯುವುದು ಹಾಗೂ ಅದರಿಂದ ನೆಮ್ಮದಿ ಸಿಗಲಿದೆ. ಆಹಾರದ ಪದ್ಧತಿ ನಿಯಂತ್ರಿಸಿಕೊಂಡು ರಕ್ತದೊತ್ತಡ ಸ್ಥಿತಿ ಸಮತೋಲನಕ್ಕೆ ಬರುವಂತೆ ಮಾಡಿಕೊಳ್ಳಿರಿ.

ಸಿಂಹ: ಕೆಲಸಗಳನ್ನು ತುರಾತುರಿಯಿಂದ ಮುಗಿಸಿದಲ್ಲಿ ಬೇಕಾದ ಫಲಿತಾಂಶ ಸಿಗದಿರಬಹುದು, ಸಾವಕಾಶವಾಗಿ ವ್ಯವಹರಿಸಿ. ಎಣ್ಣೆ–ತಿಂಡಿಗಳು ಹಾಗೂ ನಂಜಿನ ಪದಾರ್ಥಗಳಿಂದ ದೂರವಿರಿ.

ಕನ್ಯಾ: ಪ್ರಭಾವಿ ವ್ಯಕ್ತಿಗಳ ಜತೆಯಲ್ಲಿನ ಓಡಾಟ ಸ್ಥಾನಮಾನವನ್ನು ಜತೆಯಲ್ಲಿ ಆಯಾಸವನ್ನು ತಂದು ಕೊಡಲಿದೆ. ಷೇರು ಖರೀದಿಸುವಾಗ ಎಚ್ಚರವಹಿಸಿ. ತೈಲ ಉತ್ಪನ್ನಗಳ ಮಾರಾಟದಿಂದ ಲಾಭವಿದೆ.

ತುಲಾ: ಸಮಯವನ್ನು ಅರಿತು ಎಚ್ಚರಿಕೆಯಿಂದ ವರ್ತಿಸುವುದರಿಂದ ಯಶಸ್ಸು ಹಾಗೂ ಅಭಿವೃದ್ಧಿಗೆ ಕಾರಣವಾಗುತ್ತದೆ. ಹಾಲು ಉತ್ಪಾದಕರಿಗೆ ಲಾಭ ಇರುವುದು. ಶ್ರೀವಿನಾಯಕನ ಸ್ತುತಿ ಮಾಡಿ ವಿಘ್ನಗಳನ್ನು ದೂರಮಾಡಿಕೊಳ್ಳಿರಿ.

ವೃಶ್ಚಿಕ: ಮಾತು ಬಲ್ಲವನಿಗೆ ಜಗಳವಿಲ್ಲ ಎಂಬಂತೆ ಮಾತಿನಿಂದ ದೊಡ್ಡ ಪ್ರಮಾಣದ ಜಗಳ ನಿಂತು ಹೋಗುತ್ತದೆ. ನಿಷ್ಠೆಯಿಂದ ಮಾಡಿದ ಕೆಲಸಕ್ಕೆ ಆತ್ಮತೃಪ್ತಿ ದೊರೆಯುತ್ತದೆ. ಮಧ್ಯವರ್ತಿಗಳ ಮಾತಿಗೆ ಮರುಳಾಗದಿರಿ.

ಧನು: ಔದ್ಯೋಗಿಕ ವ್ಯವಹಾರದವರಿಗೆ ನಿರೀಕ್ಷೆಗೆ ತಕ್ಕ ಫಲಗಳು ದೊರೆತು ನೆಮ್ಮದಿಯನ್ನು ಕಾಣುವರು. ನಿರ್ಣಯಗಳಿಗೆ ಸಕಾರಾತ್ಮಕ ಬೆಂಬಲ ದೊರೆಯಲಿದೆ. ಸಲಹೆಗಳಿಗೆ ಹೆಚ್ಚಿನ ಆದ್ಯತೆ ದೊರೆಯಲಿದೆ.

ಮಕರ: ಕಮಿಷನ್ ಏಜೆಂಟರಿಗೆ ಮತ್ತು ರಿಯಲ್ ಎಸ್ಟೇಟ್ ವ್ಯಾಪಾರಿಗಳಿಗೆ ಅಧಿಕ ಲಾಭ ಇರಲಿದೆ. ಪತ್ನಿಯ ಆರೋಗ್ಯ ಸುಧಾರಿಸಲಿದೆ. ಹಣಕಾಸಿನ ಚಿಂತೆ ದೂರವಾಗಿ ವೃದ್ಧಿ ಕಾಣಲಿದ್ದೀರಿ. ಕಪ್ಪು ಬಣ್ಣವು ಅದೃಷ್ಟ ಬದಲಾಯಿಸಲಿದೆ.

ಕುಂಭ: ಸಂಬಂಧ ಪಡದ ವಿಚಾರದಲ್ಲಿ ಅಕ್ಕ ಪಕ್ಕದವರಿಗೆ ಅನವಶ್ಯಕವಾಗಿ ತೀರ್ಮಾನ ಹೇಳಿದರೆ ನಿಷ್ಠುರವಾಗುವುದು ಖಚಿತ. ತಂದೆ ತಾಯಿಯನ್ನು ನೋಡಿಕೊಳ್ಳುವ ಕರ್ತವ್ಯಗಳಿಂದ ತಪ್ಪಿಸಿಕೊಳ್ಳಬೇಡಿ.

ಮೀನ: ಚಾಣಾಕ್ಷತನದಿಂದ ಪ್ರತಿಸ್ಪರ್ಧಿಗಳು ದೂರಾಗುವರು. ಕೆಲಸಗಳ ಬಗೆಗೆ ಮುತುವರ್ಜಿವಹಿಸುವುದರಿಂದ ಮನಸ್ಸಿಗೆ ಒಪ್ಪುವ ರೀತಿಯಲ್ಲಿ ಕೆಲಸ ಪೂರ್ಣಗೊಳ್ಳುವುದು. ವಾತ-ಪಿತ್ತಗಳ ವಿಚಾರದಲ್ಲಿ ನಿರ್ಲಕ್ಷ್ಯ ಬೇಡ.

ವಿನಿಮಯ ದರ: ಡಾಲರ್ 86.41 | ಪೌಂಡ್ 116.55 | ಯುರೊ 101.08 | ಯೆನ್ (100ಕ್ಕೆ) 59

ಚಟಾಕಿ ಸುದ್ದಿ

ಜಿಡಿಪಿ ದರ ತಗ್ಗಿಸಿದ ಎಡಿಬಿ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ಭಾರತದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ಶೇ 6.5ರಷ್ಟಕ್ಕೆ ಇಳಿಯಲಿದೆ ಎಂದು ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಅಂದಾಜಿಸಿದೆ.

ಏಪ್ರಿಲ್ ತಿಂಗಳಿನ ಅಂದಾಜಿನಲ್ಲಿ, ಬೆಳವಣಿಗೆ ದರವು ಶೇ 6.7ರಷ್ಟು ಇರಲಿದೆ ಎಂದು ಎಡಿಬಿ ಹೇಳಿತ್ತು. ಆದರೆ, ಈಗ ಬೆಳವಣಿಗೆ ದರವನ್ನು ಪರಿಷ್ಕರಿಸಿದೆ.

ಅಮೆರಿಕದ ಸುಂಕ ನೀತಿ, ವ್ಯಾಪಾರ ವಹಿವಾಟಿನಲ್ಲಿನ ಅನಿಶ್ಚಿತತೆಯು ದೇಶದ ರಫ್ತು ಮತ್ತು ಹೂಡಿಕೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಇದು ಬೆಳವಣಿಗೆ ದರದ ಪರಿಷ್ಕರಣೆಗೆ ಕಾರಣವಾಗಿದೆ ಎಂದು ಹೇಳಿದೆ. ಜೊತೆಗೆ ಭಾರತವು ಜಗತ್ತಿನಲ್ಲಿ ಅತ್ಯಂತ ವೇಗವಾಗಿ ಬೆಳೆಯುವ ಆರ್ಥಿಕತೆಯಾಗಿ ಉಳಿಯಲಿದೆ ಎಂದು ತಿಳಿಸಿದೆ.

2026–27ರ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆಯು ಶೇ 6.7ರಷ್ಟಾಗಬಹುದು ಎಂದು ಹೇಳಿದೆ.

ಸೆನ್ಸೆಕ್ಸ್ 539, ನಿಫ್ಟಿ 159 ಅಂಶ ಹೆಚ್ಚಳ

ಮುಂಬೈ (ಪಿಟಿಐ): ಬ್ಯಾಂಕಿಂಗ್ ಮತ್ತು ತೈಲ ಕಂಪನಿಗಳ ಷೇರುಗಳ ಖರೀದಿ ಹೆಚ್ಚಳದಿಂದ ಬುಧವಾರದ ವಹಿವಾಟಿನಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡಿವೆ.




ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 539 ಅಂಶ ಹೆಚ್ಚಳವಾಗಿ, 82,726ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 159 ಅಂಶ ಏರಿಕೆಯಾಗಿ, 25,219ಕ್ಕೆ ಕೊನೆಗೊಂಡಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಮಂಗಳವಾರದ ವಹಿವಾಟಿನಲ್ಲಿ ₹3,548 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.45ರಷ್ಟು ಇಳಿಕೆಯಾಗಿದೆ. ಪ್ರತೀ ಬ್ಯಾರೆಲ್ ದರವು 68.29 ಡಾಲರ್ ಆಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,060
ಇಂದಿನ ಅಂತ್ಯ:	25,219
ದಿನದ ಗರಿಷ್ಠ:	25,233
	159

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹525
	12 ಕ್ಕೆ	₹72
ಮೈಸೂರು:	100 ಕ್ಕೆ	₹525

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಪ್ರತಿ.ಕೆ.ಜಿ)	₹212-588
ದ್ವಿತಳಿ (ಪ್ರತಿ.ಕೆ.ಜಿ)	₹323-739

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್–4	₹209.50
ಆರ್‌ಎಸ್‌ಎಸ್–5	₹203.50
ಗುಡ್ ಲಾಟ್	₹187

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ)	
ಶೇಂಗಾ (ಕ್ವಿಂಟಲ್)	₹1440 (1440)
ಸೋಯಾ (ಕ್ವಿಂಟಲ್)	₹1225 (1225)
ಸೂರ್ಯಕಾಂತಿ (ಕ್ವಿಂಟಲ್)	₹1370 (1370)
ಪಾಮೊಲಿನ್	₹1200 (1200)

ಬ್ರಿಗೇಡ್ ಹೋಟೆಲ್ ಐಪಿಒ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ರಿಗೇಡ್ ಹೋಟೆಲ್ ವೆಂಚರ್ಸ್ ಲಿಮಿಟೆಡ್ ಕಂಪನಿಯು ಐಪಿಒ ಮೂಲಕ ₹759 ಕೋಟಿ ಸಂಗ್ರಹಿಸಲಿದೆ. ಐಪಿಒ ಭಾಗವಾಗಿ ಅಕ್ವಿಟಿ ಷೇರುಗಳಿಗೆ ಬಿಡ್ ಸಲ್ಲಿಸಲು ಗುರುವಾರದಿಂದ ಅವಕಾಶ ಇರಲಿದೆ.

ಬಿಡ್ ಸಲ್ಲಿಸಲು ಸೋಮವಾರ ಕಡೆಯ ದಿನ. ₹10 ಮುಖಬೆಲೆಯ ಪ್ರತಿ ಷೇರಿಗೆ ₹85-90 ಬೆಲೆ ನಿಗದಿ ಮಾಡಲಾಗಿದೆ. ಕಂಪನಿಯ ಅರ್ಹ ನೌಕರರಿಗೆ ₹ 7.59 ಕೋಟಿ ಮೌಲ್ಯದ ಷೇರುಗಳನ್ನು ಮೀಸಲಾಗಿ ಇರಿಸಲಾಗಿದೆ. ಅರ್ಹ ನೌಕರರಿಗೆ ಪ್ರತಿ ಷೇರಿಗೆ ₹ 3ರಷ್ಟು ರಿಯಾಯಿತಿ ಸಿಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬಿಡ್ ಸಲ್ಲಿಸುವವರು ಕನಿಷ್ಠ 166 ಷೇರುಗಳಿಗೆ ಬಿಡ್ ಮಾಡಬೇಕು. ಕಂಪನಿಯು ಐಪಿಒ ಮೂಲಕ ಸಂಗ್ರಹಿಸುವ ಮೊತ್ತವನ್ನು ಕೆಲವು ಬಾಕಿ ಮೊತ್ತಗಳ ಮರುಪಾವತಿಗೆ ಬಳಕೆ ಮಾಡಿಕೊಳ್ಳಲು ಉದ್ದೇಶಿಸಿದೆ. ಜೆಎಂ ಫೈನಾನ್ಶಿಯಲ್ ಲಿಮಿಟೆಡ್ ಮತ್ತು ಐಸಿಐಸಿಐ ಸೆಕ್ಯುರಿಟೀಸ್ ಲಿಮಿಟೆಡ್ ಕಂಪನಿಗಳು ಈ ಪ್ರಕ್ರಿಯೆಯಲ್ಲಿ ಬುಕ್ ರನ್ನಿಂಗ್ ಲೀಡ್ ಮ್ಯಾನೇಜರ್ ಹೊಣೆಯನ್ನು ನಿರ್ವಹಿಸುತ್ತಿವೆ.

ಮುಂಬೈ ಧಾರಣೆ (ಶೇಂಗಾ)

23-07-2025

ಜಾವಾ 70/80(ಹೊಸ)	10800-10900
ಜಾವಾ 80/90(ಹೊಸ)	10100-10200
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1450 (1450)
ಒಂದು ವಾರದ ಡಲಿವರಿ	1445 (1445)
ಪಾಮ್ ವಾರದ ಡಲಿವರಿ	1198 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1280 (1275)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	99,800 (99,500)
ಬೆಳ್ಳಿ ಕೆಜಿಗೆ	1,15,700 (1,15,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಇನ್ಫಿ ಲಾಭ ಶೇ 8ರಷ್ಟು ಹೆಚ್ಚಳ

ತಜ್ಞರ ಅಂದಾಜು ಮೀರಿಸಿದ ಕಂಪನಿ, ವರಮಾನದಲ್ಲಿ ಯುರೋಪ್ ಪಾಲು ಏರಿಕೆ

ಬೆಂಗಳೂರು (ಪಿಟಿಐ): ದೇಶದ ಎರಡನೆಯ ಅತಿದೊಡ್ಡ ಐ.ಟಿ. ಸೇವಾ ಕಂಪನಿ ಇನ್ಫೊಸಿಸ್ ಲಿಮಿಟೆಡ್‌ನ ಜೂನ್ ತ್ರೈಮಾಸಿಕದ ನಿವ್ವಳ ಲಾಭದಲ್ಲಿ ಶೇಕಡ 8.7ರಷ್ಟು ಹೆಚ್ಚಳ ಆಗಿದೆ. ಕಂಪನಿಯು ಈ ತ್ರೈಮಾಸಿಕದಲ್ಲಿ ₹6,921 ಕೋಟಿ ನಿವ್ವಳ ಲಾಭ ಗಳಿಸಿದೆ. ಕಂಪನಿಯು ಮಾರುಕಟ್ಟೆ ತಜ್ಞರ ಅಂದಾಜಿಗಿಂತ ಹೆಚ್ಚು ಲಾಭ ಗಳಿಸಿದೆ.

ಇದು ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ₹6,368 ಕೋಟಿ ಆಗಿತ್ತು. ವಾರ್ಷಿಕ ವರಮಾನ ಬೆಳವಣಿಗೆ ಮುನ್ನೋಟವನ್ನು ಕಂಪನಿಯು ಶೇ1ರಿಂದ ಶೇ 3ರ ಮಟ್ಟಕ್ಕೆ ಪರಿಷ್ಕರಿಸಿದೆ. ಈ ಹಿಂದೆ ಇದು ಶೇ 0–3 ಆಗಿತ್ತು.

ಜೂನ್ ತ್ರೈಮಾಸಿಕದಲ್ಲಿ ಕಂಪನಿಯ ಕಾರ್ಯಾಚರಣೆ ವರಮಾನವು ₹42,279 ಕೋಟಿ ಆಗಿದೆ. ಇದು ಹಿಂದಿನ ವರ್ಷದ ಇದೇ ಅವಧಿಯ ಕಾರ್ಯಾಚರಣೆ ವರಮಾನಕ್ಕೆ ಹೋಲಿಸಿದರೆ ಶೇ 7.53ರಷ್ಟು ಹೆಚ್ಚು. ಆದರೆ ಜನವರಿ–ಮಾರ್ಚ್ ತ್ರೈಮಾಸಿಕಕ್ಕೆ ಹೋಲಿಸಿದರೆ ಕಂಪನಿಯ ನಿವ್ವಳ ಲಾಭವು ಶೇ 1.5ರಷ್ಟು ಕಮ್ಮಿ ಆಗಿದೆ.

'ಬೃಹತ್ ಉದ್ಯಮಗಳಿಗೆ ಅಗತ್ಯ ವಿರುವ ಎ.ಐ. ಸೌಲಭ್ಯ ಒದಗಿಸುವಲ್ಲಿ ನಾವು ಹೊಂದಿರುವ ನಾಯಕತ್ವದ ಸ್ಥಾನ ಕೂಡ ನಮ್ಮ ವಹಿವಾಟಿನ ಬೆಳವಣಿಗೆಗೆ ಮುಖ್ಯ ಕಾರಣವಾಗಿ ಒದಗಿಬಂದಿದೆ' ಎಂದು ಕಂಪನಿಯ ಸಿಇಒ ಹಾಗೂ ವ್ಯವಸ್ಥಾಪಕ ನಿರ್ದೇಶಕ ಸಲೀಲ್ ಪಾರೇಖ್ ಹೇಳಿದ್ದಾರೆ.

ಈ ತ್ರೈಮಾಸಿಕದಲ್ಲಿ ಕಂಪನಿಯ ನೌಕರರ ಸಂಖ್ಯೆಯು 210ರಷ್ಟು ಜಾಸ್ತಿ ಆಗಿದೆ. ಅಲ್ಲದೆ, ಈ ಮೊದಲೇ ಘೋಷಿಸಿರುವಂತೆ 20 ಸಾವಿರ ಮಂದಿ ಹೊಸಬರನ್ನು ಈ ವರ್ಷದಲ್ಲಿ ನೇಮಕ ಮಾಡಿಕೊಳ್ಳುವ ಪ್ರಕ್ರಿಯೆಯು ಚಾಲ್ತಿಯಲ್ಲಿದೆ ಎಂದು ಕಂಪನಿ ಹೇಳಿದೆ.

ಹಣಕಾಸು ಸೇವೆಗಳ ವಲಯವು ಕಂಪನಿಯ ಒಟ್ಟು ವರಮಾನದಲ್ಲಿ ಶೇ 27.9ರಷ್ಟು ಪಾಲು ಪಡೆದಿದೆ. ನಂತರದ ಸ್ಥಾನಗಳಲ್ಲಿ ತಯಾರಿಕಾ ವಲಯ (ಶೇ 16.1ರಷ್ಟು) ಹಾಗೂ ರಿಟೇಲ್ (ಶೇ 13.4ರಷ್ಟು) ವಲಯ ಇವೆ.

ಕಂಪನಿಯ ಯುರೋಪ್ ವಲಯದ ವರಮಾನದಲ್ಲಿ ಪಾಲು ಶೇ 31.5ಕ್ಕೆ ಏರಿಕೆ ಆಗಿದೆ. ಇದು ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಶೇ 28.4ರಷ್ಟು ಇತ್ತು.



ಇನ್ಫೊಸಿಸ್ ಲಿಮಿಟೆಡ್‌ನ ಸಿಇಒ ಸಲೀಲ್ ಪಾರೇಖ್ ಮತ್ತು ಕಂಪನಿಯ ಸಿಎಫ್‌ಒ ಜಯೇಶ್ ಸಂಘರಾಜಕಾ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು –ಪಿಟಿಐ ಚಿತ್ರ

ಸುದ್ದಿ 2 ನಿಮಿಷ

ಬೆಳ್ಳಿ ದರ ಕೆ.ಜಿಗೆ ₹1.18 ಲಕ್ಷ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರದ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆಯಾಗಿದೆ.

ಬೆಳ್ಳಿ ದರವು ಕೆ.ಜಿಗೆ ₹4 ಸಾವಿರ ಹೆಚ್ಚಳವಾಗಿ, ₹1.18 ಲಕ್ಷದಂತೆ ಮಾರಾಟವಾಗಿದೆ. 10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹1 ಸಾವಿರ ಏರಿಕೆಯಾಗಿ, ₹1,01,020 ಆಗಿದೆ. ಅಪರಂಜಿ ಚಿನ್ನದ ಬೆಲೆಯು (ಶೇ 99.5 ಪರಿಶುದ್ಧತೆ) ₹900 ಹೆಚ್ಚಳವಾಗಿ, ₹1,00,450ಕ್ಕೆ ತಲುಪಿದೆ. ದಾಸ್ತಾನುಗಾರರಿಂದ ಖರೀದಿ ಹೆಚ್ಚಿದ್ದರಿಂದ ಬೆಲೆ ಏರಿಕೆಯಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಕಳೆದ ಮೂರು ದಿನಗಳ ವಹಿವಾಟಿನಲ್ಲಿ ಬೆಳ್ಳಿ ದರವು ಕೆ.ಜಿಗೆ ₹7,500ರಷ್ಟು ಹೆಚ್ಚಳವಾಗಿದೆ.

'ಅಮೆರಿಕ–ಯುರೋಪ್ ನಡುವೆ ವ್ಯಾಪಾರ ಒಪ್ಪಂದವು ಆಗಸ್ಟ್ 1ರ ಒಳಗೆ ಆಗುವ ಸಾಧ್ಯತೆ ಕಾಣುತ್ತಿಲ್ಲ. ಈ ಅನಿಶ್ಚಿತತೆಯು ಮಾರುಕಟ್ಟೆಯಲ್ಲಿ ಆತಂಕ ಹೆಚ್ಚಿಸಿದೆ. ಇದರಿಂದಾಗಿ ಹೂಡಿಕೆದಾರರು ಚಿನ್ನದ ಮೇಲೆ ಹೂಡಿಕೆ ಮಾಡಲು ಮುಂದಾಗಿದ್ದರಿಂದ ಹಳದಿ ಲೋಹದ ಬೆಲೆ ಏರಿಕೆಯಾಯಿತು' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.



ಡಾಲರ್ ಮೌಲ್ಯದಲ್ಲಿನ ಇಳಿಕೆಯು ಸಹ ಚಿನ್ನದ ದರ ಹೆಚ್ಚಳಕ್ಕೆ ನೆರವಾಯಿತು ಎಂದು ಹೇಳಿದ್ದಾರೆ. ಕೈಗಾರಿಕೆಗಳಲ್ಲಿ ಬೆಳ್ಳಿಗೆ ಬೇಡಿಕೆ ಹೆಚ್ಚಳವಾಗಿದೆ. ಇದೇ ಬೆಳ್ಳಿ ದರ ಏರಿಕೆಗೆ ಕಾರಣವಾಗಿದೆ ಎಂದು ವರ್ತಕರು ತಿಳಿಸಿದ್ದಾರೆ.

ಬಿಒಬಿ ಸಂಸ್ಥಾಪನಾ ದಿನಾಚರಣೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಮುಂಚೂಣಿ ಬ್ಯಾಂಕ್‌ಗಳಲ್ಲಿ ಒಂದಾಗಿರುವ ಬ್ಯಾಂಕ್ ಆಫ್ ಬರೋಡಾ, 'ವಿಶ್ವಾಸ, ಹೊಸತನ ಮತ್ತು ಸುಸ್ಥಿರ ಬೆಳವಣಿಗೆಗೆ ತನ್ನ ಬದ್ಧತೆಯನ್ನು ಪುನರುಚ್ಚರಿಸುವ ಮೂಲಕ 118ನೇ ಸಂಸ್ಥಾಪನಾ ದಿನವನ್ನು ಆಚರಿಸಿದೆ' ಎಂದು ಪ್ರಕಟಣೆ ತಿಳಿಸಿದೆ.

ಕೇಂದ್ರ ಹಣಕಾಸು ಸೇವೆಗಳ ಇಲಾಖೆಯ ಕಾರ್ಯದರ್ಶಿ ಎಂ. ನಾಗರಾಜು ಅವರು ಮುಂಬೈನಲ್ಲಿ ನಡೆದ ಈ ದಿನಾಚರಣೆಯ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಈ ದಿನಾಚರಣೆಯ ಅಂಗವಾಗಿ ಬ್ಯಾಂಕ್ ಆಫ್ ಬರೋಡಾ ಹೊಸತನದ ಹಲವು ಉತ್ಪನ್ನಗಳನ್ನು ಹಾಗೂ ಉಪಕ್ರಮಗಳನ್ನು ಗ್ರಾಹಕರಿಗೆ ಪರಿಚಯಿಸುವ ಆಲೋಚನೆಯನ್ನು ತೆರೆದಿಟ್ಟಿತು.

ಬ್ಯಾಂಕ್ ಜಾರಿಗೆ ತಂದಿರುವ ಅತ್ಯಂತ ಪ್ರಮುಖವಾದ ಉಪಕ್ರಮಗಳಲ್ಲಿ 'ಬಿಒಬಿ ವರ್ಲ್ಡ್ ಬಿಸಿನೆಸ್ ಆ್ಯಪ್', ಎಂಎಸ್‌ಎಂಇ ವಲಯದ ಉದ್ಯಮಿಗಳಿಗಾಗಿ, ವ್ಯಾಪಾರಿಗಳು ಹಾಗೂ ಕಾರ್ಪೊರೇಟ್ ಗ್ರಾಹಕರಿಗಾಗಿ ಹೊಸದಾದ ಮೊಬೈಲ್ ಬ್ಯಾಂಕಿಂಗ್ ಆ್ಯಪ್, ಜಾಗತಿಕವಾಗಿ ಬಳಕೆಗೆ ಬರುವ ಯುಪಿಐ ಸೌಲಭ್ಯಗಳನ್ನು ಹೊಂದಿರುವ ಬಿಒಬಿ ಇ-ಪೇ ಇಂಟರ್ನ್ಯಾಷನಲ್ ಆ್ಯಪ್, ದೃಷ್ಟಿದೋಷ ಇರುವ ವ್ಯಕ್ತಿಗಳಿಗೆ ನೆರವಾಗುವ ಉದ್ದೇಶದ ಬಿಒಬಿ 'ಇನ್‌ಸೈಟ್ ಬ್ರೈಲ್ ಡೆಬಿಟ್ ಕಾರ್ಡ್' ಸೇರಿವೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಬ್ಯಾಂಕ್ ಆಫ್ ಬರೋಡಾದ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ದೇಬದತ್ತ ಚಾಂದ್, 'ಗ್ರಾಹಕರ ಮಹತ್ವಾಕಾಂಕ್ಷೆಗಳಿಗೆ ಬೆಂಬಲವಾಗಿ ನಿಲ್ಲುವ ಮೂಲಕ ಬ್ಯಾಂಕ್ ಆಫ್ ಬರೋಡಾ ಒಂದು ಶತಮಾನಕ್ಕೂ ಹೆಚ್ಚಿನ ಅವಧಿಯಿಂದ ಅವರ ವಿಶ್ವಾಸವನ್ನು ಗಳಿಸಿದೆ' ಎಂದರು.

ಅಡಿಕೆ ಧಾರಣೆ

ಕುಮಟಾ		ಶಿರಸಿ		ಸಾಗರ	
ಚಾಲಿ	38799-42798	ಹೊಸ ಚಾಲಿ	25899-42299	ರಾಶಿ	46009-57501
ಚಿಪ್ಪು	23869-29869			ಸಿಪ್ಪೆಗೋಟು	18060-30209
ಕೋಕ	7889-22359	ಬೆಟ್ಟೆ	52509-60220	ಸರಕು	66009-97396
		ಕೆಂಪುಗೋಟು	5099-28000		

ಐದು ವರ್ಷದ ಬಳಿಕ ಚೀನಾ ನಾಗರಿಕರಿಗೆ ಭಾರತದ ಪ್ರವಾಸಿ ವೀಸಾ

ಬೀಜಿಂಗ್ (ಪಿಟಿಐ): 'ಚೀನಾದ ನಾಗರಿಕರಿಗೆ ಈ ವಾರದಿಂದಲೇ ಪ್ರವಾಸಿ ವೀಸಾ ನೀಡಲಾಗುವುದು' ಎಂದು ಭಾರತ ಪ್ರಕಟಿಸಿದೆ.

ಗಾಲ್ವಾನ್ ಕಣಿವೆಯಲ್ಲಿ ಉಭಯ ದೇಶಗಳ ಸೈನಿಕರ ನಡುವೆ ಗಲಾಟೆ ನಡೆದು ಐದು ವರ್ಷಗಳಾಗಿವೆ. ಉಭಯ ರಾಷ್ಟ್ರಗಳ ದ್ವಿಪಕ್ಷೀಯ ಸಂಬಂಧ ವೃದ್ಧಿಯ ನಿಟ್ಟಿನಲ್ಲಿ ಈ ಕ್ರಮ ಕೈಗೊಂಡಿರುವುದಾಗಿ ಹೇಳಿದೆ.

2020ರಲ್ಲಿ ಕೊರೊನಾ ವೈರಸ್ ಸೋಂಕು ಹರಡಿದಾಗ ಹಾಗೂ ಲಡಾಖ್ ಪೂರ್ವಭಾಗದಲ್ಲಿ ಸಂಘರ್ಷ ಉಂಟಾದ ಬಳಿಕ ಚೀನಾದ ನಾಗರಿಕರಿಗೆ ಪ್ರವಾಸಿ ವೀಸಾ ನೀಡುವುದನ್ನು ಭಾರತ ಸ್ಥಗಿತಗೊಳಿಸಿತ್ತು.

ಗುರುವಾರದಿಂದಲೇ ಚೀನಾದ ನಾಗರಿಕರು ಭಾರತದ ಪ್ರವಾಸಿ ವೀಸಾ ಪಡೆಯಲು ಅರ್ಜಿ ಸಲ್ಲಿಸಬಹುದಾಗಿದೆ ಎಂದು ಬೀಜಿಂಗ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ. 'ಭಾರತದ ನಿರ್ಧಾರವು ಸಕಾರಾತ್ಮಕ ನಡೆ' ಎಂದು ಚೀನಾದ ವಿದೇಶಾಂಗ ಇಲಾಖೆಯ ವಕ್ತಾರ ಗುವೊ ಜಿಯಾಕುನ್ ಪ್ರತಿಕ್ರಿಯಿಸಿದ್ದಾರೆ.

ಪಂಚಾಯಿತಿಗಳಿಗೆ ಹೆಚ್ಚು ಅನುದಾನ ಸಿಗಲಿ: ರಘುರಾಂ ರಾಜನ್

ನವದೆಹಲಿ (ಪಿಟಿಐ): 16ನೇ ಹಣಕಾಸು ಆಯೋಗವು ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಹೆಚ್ಚು ಅನುದಾನ ಸಿಗುವಂತೆ ನೋಡಿಕೊಳ್ಳಬೇಕು ಎಂದು ಆರ್‌ಬಿಐ ಮಾಜಿ ಗವರ್ನರ್ ರಘುರಾಂ ರಾಜನ್ ಹೇಳಿದ್ದಾರೆ.

'ಹಿಂದಿನ ಹಣಕಾಸು ಆಯೋಗಗಳು ರಾಜ್ಯಗಳಿಗೆ ಹೆಚ್ಚಿನ ಅನುದಾನ ಸಿಗುವಂತೆ ನೋಡಿಕೊಂಡವು. ಈಗ ನಾವು ಪೌರಾಡಳಿತ ಸಂಸ್ಥೆಗಳು, ಪಂಚಾಯಿತಿಗಳಿಗೆ ಹೆಚ್ಚಿನ ಅನುದಾನ ದೊರಕಿಸುವ ಬಗ್ಗೆ ಗಮನ ನೀಡಬೇಕಿದೆ' ಎಂದು ಅವರು ಪಿಟಿಐಗೆ ಹೇಳಿದ್ದಾರೆ.

ಅಮೆರಿಕ ಮತ್ತು ಚೀನಾದ ಉದಾಹರಣೆಯನ್ನು ನೀಡಿದ ರಾಜನ್ ಅವರು, ಈ ಎರಡು ದೇಶಗಳಲ್ಲಿ ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿನ ನೌಕರರ ಒಟ್ಟು ಪ್ರಮಾಣವು ಭಾರತದ ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿನ ನೌಕರರ ಪ್ರಮಾಣಕ್ಕಿಂತ ಹೆಚ್ಚಾಗಿದೆ ಎಂದರು.

ಭಾರತದಂತಹ ದೊಡ್ಡ ದೇಶದಲ್ಲಿ ವಿಕೇಂದ್ರೀಕರಣವು ಇನ್ನಷ್ಟು ಹೆಚ್ಚಬೇಕು. ಇದನ್ನು 16ನೇ ಹಣಕಾಸು ಆಯೋಗವು ಸಾಧ್ಯವಾಗಿಸಬೇಕು. ದಾನ ಮಾರ್ಗದಿಂದ ಅಥವಾ ದಂಡ ಮಾರ್ಗದಿಂದ ಅದನ್ನು ಸಾಧಿಸಬೇಕು ಎಂದು ಅವರು ಹೇಳಿದ್ದಾರೆ.


Together We Can
ಕೆನರಾ ಬ್ಯಾಂಕ್
Canara Bank
A Government of India Undertaking

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

3rd YEAR REMEMBRANCE



G K Narasimha Murthy
Gavipuram / Hanumanthanagar
From Family, Relatives and Friends

ಮತಾಂಧತೆ, ಭಯೋತ್ಪಾದನೆಯಲ್ಲಿ ಪಾಕಿಸ್ತಾನ ಮುಳುಗಿದೆ: ಭಾರತ

ವಿಶ್ವಸಂಸ್ಥೆ (ಪಿಟಿಐ): ಗಡಿಯಾಚೆಗಿನ ಭಯೋತ್ಪಾದನೆಯನ್ನು ಪ್ರಚೋದಿಸುವ ದೇಶಗಳ ವಿರುದ್ಧ ಗಂಭೀರ ಕ್ರಮ ತೆಗೆದುಕೊಳ್ಳಬೇಕು ಎಂದು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಪ್ರತಿಪಾದಿಸಿದ ಭಾರತ, ನೆರೆಯ ಪಾಕಿಸ್ತಾನವನ್ನು 'ಮತಾಂಧ', 'ಸರಣಿ ಸಾಲದ ಸುಳಿಯಲ್ಲಿ ಸಿಲುಕಿರುವ ದೇಶ' ಎಂದು ಟೀಕಿಸಿದೆ.

ವಿಶ್ವಸಂಸ್ಥೆಯಲ್ಲಿ ಪಾಕಿಸ್ತಾನದ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಭದ್ರತಾ ಮಂಡಳಿ ಸಭೆಯಲ್ಲಿ ಭಾರತ ಈ ರೀತಿ ವಾಗ್ದಾಳಿ ನಡೆಸಿದೆ.

ವಿಶ್ವಸಂಸ್ಥೆಯಲ್ಲಿ ಭಾರತದ ಕಾಯಂ ಪ್ರತಿನಿಧಿಯಾಗಿರುವ ಪರ್ವತನೇನಿ ಹರೀಶ್, ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಹೆಚ್ಚಿಸುವ ಕುರಿತು ಚರ್ಚಿಸುವಾಗ, ಕೆಲ ಮೂಲಭೂತ ತತ್ವಗಳನ್ನು ಗುರುತಿಸುವುದು ಅಗತ್ಯವಾಗಿದೆ. ಅವುಗಳಲ್ಲಿ ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆ ಪ್ರಮುಖವಾದುದಾಗಿದೆ ಎಂದು ಹೇಳಿದರು.

'ಒಂದೆಡೆ, ಭಾರತವು ಅಭಿವೃದ್ಧಿಯತ್ತ ಸಾಗುತ್ತಿದೆ. ಪ್ರಬುದ್ಧ ಪ್ರಜಾಪ್ರಭುತ್ವ, ವೃದ್ಧಿಸುತ್ತಿರುವ ಆರ್ಥಿಕತೆ, ಬಹುತ್ವ ಮತ್ತು ಎಲ್ಲರನ್ನೂ ಒಳಗೊಂಡ ಸಮಾಜದೊಂದಿಗೆ ಮುನ್ನುಗ್ಗುತ್ತಿದೆ. ಆದರೆ ಮತ್ತೊಂದೆಡೆ, ಪಾಕಿಸ್ತಾನವು ಮತಾಂಧತೆ, ಭಯೋತ್ಪಾದನೆಯಲ್ಲಿ ಮುಳುಗಿದೆ. ಅಲ್ಲದೆ, ಅಂತರರಾಷ್ಟ್ರೀಯ ಹಣಕಾಸು ನಿಧಿಯಿಂದ (ಐಎಂಎಫ್) ಸರಣಿ ಸಾಲಗಾರ ನಾಗಿಬಿಟ್ಟಿದೆ' ಎಂದು ತಿಳಿಸಿದರು.

ಜಪಾನ್ ವಸ್ತುಗಳ ಮೇಲಿನ ಸುಂಕ ಶೇ 15ಕ್ಕೆ ಇಳಿಸಿದ ಟ್ರಂಪ್

ವಾಷಿಂಗ್ಟನ್ (ಎಪಿ): ಜಪಾನ್ ಜೊತೆಗಿನ ವ್ಯಾಪಾರ ಒಪ್ಪಂದ ಘೋಷಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅಲ್ಲಿಂದ ಆಮದು ಮಾಡಿಕೊಳ್ಳುವ ವಸ್ತುಗಳಿಗೆ ಶೇಕಡ 15ರಷ್ಟು ಸುಂಕವನ್ನಷ್ಟೆ ವಿಧಿಸುವುದಾಗಿ ತಿಳಿಸಿದ್ದಾರೆ. ಈ ಹಿಂದೆ ಶೇ 25ರಷ್ಟು ತೆರಿಗೆ ವಿಧಿಸಲಾಗಿತ್ತು.

'ಈ ಒಪ್ಪಂದದಿಂದಾಗಿ ಅಮೆರಿಕದಲ್ಲಿ ನೂರಾರು ಉದ್ಯೋಗಗಳು ಸೃಷ್ಟಿಯಾಗಲಿವೆ. ಜಪಾನ್ ದೇಶದೊಂದಿಗೆ ಮುಂದೆಯೂ ಅತ್ಯುತ್ತಮ ಸಂಬಂಧವನ್ನು ಮುಂದುವರಿಸಲಾಗುವುದು' ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಾಮಾಜಿಕ ಜಾಲತಾಣ 'ಟ್ರುತ್'ನಲ್ಲಿ ಬರೆದುಕೊಂಡಿದ್ದಾರೆ.

'ನನ್ನ ನಿರ್ದೇಶನದಂತೆ, ಅಮೆರಿಕದಲ್ಲಿ 550 ಬಿಲಿಯನ್ ಡಾಲರ್ ಹೂಡಿಕೆ ಮಾಡಲು (₹47.51 ಲಕ್ಷ ಕೋಟಿ) ಜಪಾನ್ ಒಪ್ಪಿಗೆ ಸೂಚಿಸಿದೆ. ಅಲ್ಲದೇ, ಅಮೆರಿಕದ ಆಟೊಮೊಬೈಲ್ ಹಾಗೂ ಅಕ್ಕಿ ವಹಿವಾಟು ನಡೆಸಲು ತನ್ನ ಮಾರುಕಟ್ಟೆಯನ್ನು ತೆರೆದಿದೆ. ಹೀಗಾಗಿ, ಜಪಾನ್‌ನಿಂದ ಆಮದು ಮಾಡಿಕೊಳ್ಳುವ ಉತ್ಪನ್ನಗಳಿಗೆ ಈ ಹಿಂದೆ ವಿಧಿಸಿದ್ದ ಶೇಕಡ 25ರ ಸುಂಕದ ಬದಲಾಗಿ ಶೇಕಡ 15ರಷ್ಟು ಸುಂಕ ವಿಧಿಸಲಾಗುವುದು' ಎಂದು ಜಪಾನ್‌ನ ಪ್ರಧಾನಿ ಶಿಗೆರು ಇಶಿಬಾ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ಪರಿಷ್ಕೃತ ಸುಂಕವು ಆಗಸ್ಟ್ 1ರಿಂದ ಜಾರಿಗೆ ಬರಲಿದೆ.



ಡೊನಾಲ್ಡ್ ಟ್ರಂಪ್

ಫಿಲಿಪ್ಪೀನ್ಸ್‌ಗೆ ಶೇ 19 ಸುಂಕ: ಇಲ್ಲಿನ ಶ್ವೇತಭವನದಲ್ಲಿ ಅಧ್ಯಕ್ಷ ಫರ್ಡಿನೆಂಡ್ ಮಾರ್ಕಸ್ ಜೂನಿಯರ್ ಅವರ ಜೊತೆಗೆ ನಡೆದ ಸಭೆಯಲ್ಲಿ ವ್ಯಾಪಾರ ಒಪ್ಪಂದಕ್ಕೆ ಬರಲಾಗಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

'ಆ ದೇಶಕ್ಕೆ ವಿಧಿಸಿರುವ ಸುಂಕ ಸ್ವಲ್ಪ ಪ್ರಮಾಣದಲ್ಲಿ ಕಡಿಮೆ ಮಾಡುವ ಬಗ್ಗೆ ಚಿಂತನೆ ನಡೆಸಲಾಗಿದೆ. ಅಮೆರಿಕದಿಂದ ರಫ್ತು ಮಾಡುವ ಕೆಲವು ವಸ್ತುಗಳಿಗೆ ಫಿಲಿಪ್ಪೀನ್ಸ್ ಶೂನ್ಯ ಸುಂಕ ವಿಧಿಸಲು ನಿರ್ಧರಿಸಿದೆ. ಅದಕ್ಕೆ ಪ್ರತಿಯಾಗಿ ಅಲ್ಲಿಂದ ಆಮದು ಮಾಡಿಕೊಳ್ಳುವ ವಸ್ತುಗಳಿಗೆ ಶೇಕಡ 19 ರಷ್ಟು ಸುಂಕ ವಿಧಿಸಲಾಗುತ್ತದೆ' ಎಂದು ಹೇಳಿದ್ದಾರೆ.

ಜಂತಕಲ್ ಗಣಿಗೆ ವೇದಾಂತ ಆದ್ಯತೆಯ ಬಿಡ್ದರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಜಂತಕಲ್ ಕಬ್ಬಿಣದ ಅದಿರು ಗಣಿಗೆ ವೇದಾಂತ ಲಿಮಿಟೆಡ್ ಕಂಪನಿಯನ್ನು 'ಆದ್ಯತೆಯ ಬಿಡ್ದರ್' ಎಂದು ಘೋಷಿಸಲಾಗಿದೆ. ರಾಜ್ಯ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಈ ಗಣಿಗೆ ಇ-ಹರಾಜು ಪ್ರಕ್ರಿಯೆ ನಡೆಸಿತ್ತು.

ಜಂತಕಲ್ ಗಣಿಯು 71.16 ಹೆಕ್ಟೇರ್ ವಿಸ್ತೀರ್ಣ ಹೊಂದಿದೆ ಎಂದು ವೇದಾಂತ ಲಿಮಿಟೆಡ್‌ನ ಪ್ರಕಟಣೆ ತಿಳಿಸಿದೆ. ಈ ಗುತ್ತಿಗೆ ಕಾರ್ಯರೂಪಕ್ಕೆ ಬರಲು ಇನ್ನೂ ಕೆಲವು ಒಪ್ಪಿಗೆಗಳು ಸಿಗಬೇಕಿವೆ.

ಭಾರತದ ಕೈಗಾರಿಕಾ ಬೆಳವಣಿಗೆಗೆ ಬೆಂಬಲವಾಗಿ ನಿಲ್ಲಲು ಹಾಗೂ ಕಚ್ಚಾ ವಸ್ತುಗಳ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಲು ಅಗತ್ಯವಿರುವ ಪ್ರಮುಖ ಸಂಪನ್ಮೂಲಗಳನ್ನು ಪಡೆಯಲು ಕಂಪನಿಯು ಗಮನ ನೀಡುತ್ತಿರುವುದನ್ನು ಈ ಬೆಳವಣಿಗೆಯು ಒತ್ತಿಹೇಳಿದೆ ಎಂದು ಕಂಪನಿ ತಿಳಿಸಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರಯೋಜನಕಾರಿ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶ
ಗಾ TVS ಬ್ರಿಯಾನಿಯ, ವಿಡಿಯೋಕೇರ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯನುಸಾರ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರ್ಮ್ ತುಂಬುವ ಮೂಲಕ ತಿಂಗಳಿಗೆ 15,000 ದಿಂದ 20,000 ಸಂಪಾದಿಸಿ. 'ಕೆಲಸ' ಸೌಲಭ್ಯವಿದೆ. 8884777502, 8884777503.

ಪ್ರಜಾವಾಣಿ ಕ್ಲಾಸಿಫೈಡ್ಸ್
www.dhclassifieds.com
BOOK NOW
BOOK YOUR PUBLIC NOTICE
ADS IN PRAJAVANI
ALL KARNATAKA, ON ALL DAYS
@ 500/- PER SQCM
9886213331
9845114560

ಭಾರತದ ಜತೆ ಅರ್ಥಪೂರ್ಣ ಚರ್ಚೆಗೆ ಸಿದ್ಧ: ಪಾಕ್

ಇಸ್ಲಾಮಾಬಾದ್ (ಪಿಟಿಐ): ಭಾರತದ ಜತೆಗೆ ಬಾಕಿ ಉಳಿದಿರುವ ಎಲ್ಲ ವಿಷಯಗಳ ಬಗ್ಗೆ ಅರ್ಥಪೂರ್ಣ ಚರ್ಚೆ ನಡೆಸಲು ಪಾಕಿಸ್ತಾನ ಸಿದ್ಧವಿದೆ ಎಂದು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಶರೀಫ್ ಬುಧವಾರ ತಿಳಿಸಿದ್ದಾರೆ.

ತಮ್ಮ ನಿವಾಸದಲ್ಲಿ ಬ್ರಿಟನ್‌ನ ಹೈಕಮಿಷನರ್ ಜೇನ್ ಮ್ಯಾರಿಯಟ್ ಅವರೊಂದಿಗೆ ಮಾತುಕತೆ ನಡೆಸಿದ ವೇಳೆಯಲ್ಲಿ ಶರೀಫ್ ಈ ಹೇಳಿಕೆ ನೀಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ಶೆಹಬಾಜ್ ಶರೀಫ್

'ಭಾರತ–ಪಾಕಿಸ್ತಾನ ನಡುವಿನ ಸೇನಾ ಸಂಘರ್ಷ ಶಮನಕ್ಕೆ ಬ್ರಿಟನ್ ನಿರ್ವಹಿಸಿದ ಪಾತ್ರದ ಕುರಿತು ಪ್ರಧಾನಿ ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ವೇಳೆ ಪಾಕ್–ಬ್ರಿಟನ್ ನಡುವಿನ ದ್ವಿಪಕ್ಷೀಯ ಸಂಬಂಧ ಮತ್ತು ದಕ್ಷಿಣ ಏಷ್ಯಾ, ಮಧ್ಯ ಪ್ರಾಚ್ಯ ದೇಶಗಳ ಪ್ರಾದೇಶಿಕ ಸ್ಥಿತಿಗತಿ ಕುರಿತು ಚರ್ಚೆ ನಡೆಸಲಾಯಿತು' ಎಂದು ಪ್ರಕಟಣೆ ಹೇಳಿದೆ.

'ಪೃಥ್ವಿ ರಕ್ಷಿಸುವಲ್ಲಿನ ವೈಫಲ್ಯ ಕಾನೂನಿನ ಉಲ್ಲಂಘನೆ'

ದಿ ಹೇಗ್ (ಎಪಿ): ಹವಾಮಾನ ಬದಲಾವಣೆಯಿಂದ ಭೂಮಿ ಮೇಲೆ ಆಗುವ ದುಷ್ಪರಿಣಾಮಗಳನ್ನು ತಡೆಯಲು ಎಲ್ಲ ರಾಷ್ಟ್ರಗಳು ಕ್ರಮ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ವಿಫಲವಾದರೆ ಅದು ಅಂತರ ರಾಷ್ಟ್ರೀಯ ಕಾನೂನಿನ ಉಲ್ಲಂಘನೆಯಾಗಲಿದೆ ಎಂದು ಅಂತರ ರಾಷ್ಟ್ರೀಯ ನ್ಯಾಯಾಲಯ ಬುಧವಾರ ಘೋಷಿಸಿದೆ.

ಈ ವಿಚಾರವಾಗಿ ಸಲಹಾರೂಪದ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಾಲಯ, 'ಹವಾಮಾನ ಬದಲಾವಣೆಯಿಂದಾಗುವ ಪರಿಣಾಮಗಳು ಅಪಾರ. ಈ ಸಮಸ್ಯೆಗೆ ತುರ್ತಾಗಿ ಪರಿಹಾರ ಕಂಡುಕೊಳ್ಳಬೇಕು. ಇಲ್ಲದೇ ಹೋದಲ್ಲಿ ಅದು ಮನುಕುಲದ ಅಸ್ತಿತ್ವಕ್ಕೆ ಅಪಾಯ ಒಡ್ಡಲಿದೆ' ಎಂದು ಎಚ್ಚರಿಸಿದೆ.



'ಶುದ್ಧ, ಆರೋಗ್ಯಕರ ಹಾಗೂ ಸುಸ್ಥಿರ ಪರಿಸರ ಪ್ರತಿಯೊಬ್ಬರ ಹಕ್ಕು' ಎಂದೂ ಪ್ರತಿಪಾದಿಸಿದೆ. ದ್ವೀಪರಾಷ್ಟ್ರ ವನವಾಟು ನೇತೃತ್ವದಲ್ಲಿ ದಾಖಲಾಗಿರುವ ಪ್ರಕರಣದ ವಿಚಾರಣೆಯನ್ನು 15 ನ್ಯಾಯಮೂರ್ತಿಗಳು ಇದ್ದ ಪೀಠ ನಡೆಸಿತು.

ವಾಸಂತಿ ₹9 ಕೋಟಿ ಒಡತಿ

ಒಂದನೇ ಪುಟದಿಂದ...

'ವಾಸಂತಿ ಮತ್ತು ಅವರ ಕುಟುಂಬದವರ ಹೆಸರಿನಲ್ಲಿ ಮೂರು ಕಾರುಗಳಿದ್ದು, ಅವುಗಳ ಈಗಿನ ಮಾರುಕಟ್ಟೆ ಮೌಲ್ಯ ₹90 ಲಕ್ಷದಷ್ಟಾಗುತ್ತದೆ. ಜತೆಗೆ ಅವರ ಮನೆಯಲ್ಲಿ ಒಟ್ಟು ₹12 ಲಕ್ಷ ಮೌಲ್ಯದ ಚಿನ್ನಾಭರಣಗಳು ಸಿಕ್ಕಿವೆ' ಎಂದು ಮೂಲಗಳು ತಿಳಿಸಿವೆ. ಬೆಂಗಳೂರು ಉತ್ತರ ವಿಭಾಗದ ವಿಶೇಷ ಜಿಲ್ಲಾಧಿಕಾರಿ ಆಗಿದ್ದಾಗ ಸರ್ಕಾರಿ ಜಮೀನುಗಳನ್ನು ಅಕ್ರಮವಾಗಿ ಪರಭಾರೆ ಮಾಡಿದ ಆರೋಪದಲ್ಲಿ ವಾಸಂತಿ ಅವರ ವಿರುದ್ಧ ಕಂದಾಯ ಇಲಾಖೆ ನೀಡಿದ್ದ ದೂರನ್ನು ಆಧರಿಸಿ, ಜುಲೈ 16ರಂದು ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ಸ್ಥಿರಾಸ್ತಿ ಮೇಲೆ ಅಧಿಕಾರಿಗಳ ಹೂಡಿಕೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಸಿದ ಆರೋಪದ ಅಡಿಯಲ್ಲಿ ದಾಖಲಿಸಿದ ಪ್ರಕರಣಗಳಲ್ಲಿ ಲೋಕಾಯುಕ್ತ ಪೊಲೀಸರು ಬುಧವಾರ ನಡೆಸಿದ ಶೋಧದಲ್ಲಿ ಒಟ್ಟು ₹26.36 ಕೋಟಿ ಮೌಲ್ಯದ ಸ್ವತ್ತು ಪತ್ತೆಯಾಗಿದೆ. ಬಹುತೇಕ ಅಧಿಕಾರಿಗಳು ನಿವೇಶನ, ಮನೆ ಮತ್ತು ಕೃಷಿ ಜಮೀನಿನ ಮೇಲೆ ಹೂಡಿಕೆ ಮಾಡಿದ್ದಾರೆ. ಆ ಅಧಿಕಾರಿಗಳ ಆಸ್ತಿ ವಿವರ ಈ ರೀತಿ ಇದೆ.

ಎಚ್.ವಿ.ಯಿರಪ್ಪ ರೆಡ್ಡಿ, ಕಾರ್ಯಪಾಲಕ ಎಂಜಿನಿಯರ್, ಸಿ.ಐ.ಡಿ.ಎ.ಮ್ ನಗರ, ಬಿಬಿಎಂಪಿ	
₹1.45 ಕೋಟಿ	ಮೌಲ್ಯದ 2 ನಿವೇಶನ, 1 ಮನೆ
₹1.16 ಕೋಟಿ	ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು, ಗೃಹಬಳಕೆ ವಸ್ತುಗಳು
₹2.62 ಕೋಟಿ	ಆಸ್ತಿಯ ಒಟ್ಟು ಮೌಲ್ಯ
ಬಿ.ವಿ. ವಾಸಂತಿ ಅಮರ್, ವಿಶೇಷ ಉಪ ಆಯುಕ್ತ, ಕೆ-ರೈಡ್, ಬೆಂಗಳೂರು	
₹7.40 ಕೋಟಿ	ಮೌಲ್ಯದ 3 ನಿವೇಶನ, 4 ಮನೆ, 3 ಎಕರೆ ಕೃಷಿ ಜಮೀನು
₹1.62 ಕೋಟಿ	ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು, ಗೃಹಬಳಕೆ ವಸ್ತುಗಳು
₹9.02 ಕೋಟಿ	ಆಸ್ತಿಯ ಒಟ್ಟು ಮೌಲ್ಯ
ಬಿ.ವಿ. ಮಾರುತಿ, ಸಹಾಯಕ ನಿರ್ದೇಶಕ, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು	
₹4.85 ಕೋಟಿ	ಮೌಲ್ಯದ 8 ನಿವೇಶನ, 5 ಮನೆ, 19 ಎಕರೆ ಕೃಷಿ ಜಮೀನು
₹1.49 ಕೋಟಿ	ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು, ಗೃಹಬಳಕೆ ವಸ್ತುಗಳು
₹6.34 ಕೋಟಿ	ಆಸ್ತಿಯ ಒಟ್ಟು ಮೌಲ್ಯ
ವೆಂಕಟರಾಮು ವಿ., ಚೀಫ್ ಸಹಾಯಕ, ಎಂಸಿಸಿ, ಮೈಸೂರು	
₹2.56 ಕೋಟಿ	ಮೌಲ್ಯದ 3 ಮನೆ, 2 ಎಕರೆ 2 ಗುಂಟೆ ಕೃಷಿ ಜಮೀನು
₹1.15 ಕೋಟಿ	ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು, ಗೃಹಬಳಕೆ ವಸ್ತುಗಳು
₹3.71 ಕೋಟಿ	ಆಸ್ತಿಯ ಒಟ್ಟು ಮೌಲ್ಯ
ರಾಜೇಶ್ ಎಂ., ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಕೆಪಿಟಿಸಿಎಲ್, ತುಮಕೂರು	
₹2.10 ಕೋಟಿ	ಮೌಲ್ಯದ 3 ನಿವೇಶನ, 2 ಮನೆ, 5 ಎಕರೆ 6 ಗುಂಟೆ ಕೃಷಿ ಜಮೀನು
₹1.57 ಕೋಟಿ	ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು, ಗೃಹಬಳಕೆ ವಸ್ತುಗಳು
₹3.67 ಕೋಟಿ	ಆಸ್ತಿಯ ಒಟ್ಟು ಮೌಲ್ಯ
ಸುನೀಲ್ ಕುಮಾರ್, ಕಾರ್ಯಪಾಲಕ ಎಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕಲಬುರಗಿ	
₹1.90 ಕೋಟಿ	ಮೌಲ್ಯದ 3 ನಿವೇಶನ, 1 ಮನೆ, 5 ಎಕರೆ 35 ಗುಂಟೆ ಕೃಷಿ ಜಮೀನು
₹2.44 ಕೋಟಿ	ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು, ಗೃಹಬಳಕೆ ವಸ್ತುಗಳು
₹4.34 ಕೋಟಿ	ಆಸ್ತಿಯ ಒಟ್ಟು ಮೌಲ್ಯ
ಶೇಖು ಚವ್ಹಾಣ್, ಉಪನಿರ್ದೇಶಕ, ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ	
₹1.64 ಕೋಟಿ	ಮೌಲ್ಯದ 13 ನಿವೇಶನ, 3 ಮನೆ, 7 ಎಕರೆ 28 ಗುಂಟೆ ಕೃಷಿ ಜಮೀನು
₹1.47 ಕೋಟಿ	ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು, ಗೃಹಬಳಕೆ ವಸ್ತುಗಳು
₹3.11 ಕೋಟಿ	ಆಸ್ತಿಯ ಒಟ್ಟು ಮೌಲ್ಯ
ಮಂಜುನಾಥಸ್ವಾಮಿ ಎಂ., ಜಂಟಿ ನಿರ್ದೇಶಕ (ಹೆಚ್ಚುವರಿ), ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ	
₹4.45 ಕೋಟಿ	ಮೌಲ್ಯದ 3 ನಿವೇಶನ, 2 ಮನೆ, 4 ಎಕರೆ ಕೃಷಿ ಜಮೀನು
₹75.31 ಲಕ್ಷ	ಮೌಲ್ಯದ ಚಿನ್ನಾಭರಣ, ವಾಹನಗಳು, ನಗದು, ಗೃಹಬಳಕೆ ವಸ್ತುಗಳು
₹5.20 ಕೋಟಿ	ಆಸ್ತಿಯ ಒಟ್ಟು ಮೌಲ್ಯ

ದಂಡ ಹಾಗೂ ತೆರಿಗೆ ಸೇರಿ ₹38.26 ಲಕ್ಷ ಪಾವತಿಸಿದ ಅಫ್ಗಾನ್ ಕನ್‌ಸ್ಟ್ರಕ್ಷನ್ ಕಂಪನಿ

ರಾಜ್ಯದಲ್ಲಿ ಅಮಿತಾಭ್, ಅಮೀರ್ ಕಾರು ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಿವುಡ್ ನಟರಾದ ಅಮಿತಾಭ್ ಬಚ್ಚನ್ ಮತ್ತು ಅಮೀರ್‌ಖಾನ್ ಹೆಸರಲ್ಲಿ ಮಹಾರಾಷ್ಟ್ರದಲ್ಲಿ ನೋಂದಣಿ ಆಗಿರುವ ಐಷಾರಾಮಿ ಕಾರುಗಳು ರಾಜ್ಯದಲ್ಲಿ ಸಂಚರಿಸುತ್ತಿರುವುದನ್ನು ಪತ್ತೆಹಚ್ಚಿರುವ ಸಾರಿಗೆ ಅಧಿಕಾರಿಗಳು ದಂಡ ಮತ್ತು ತೆರಿಗೆ ಸೇರಿ ₹38.26 ಲಕ್ಷ ವಸೂಲಿ ಮಾಡಿದ್ದಾರೆ.

ಅಮಿತಾಭ್ ಬಚ್ಚನ್ ಹೆಸರಿನಲ್ಲಿ ನೋಂದಣಿಯಾಗಿರುವ ರೋಲ್ಸ್ ರಾಯ್ಸ್ ಫ್ಯಾಂಟಮ್ ಕಾರು ಮತ್ತು ಅಮೀರ್ ಖಾನ್ ಹೆಸರಲ್ಲಿ ನೋಂದಣಿಯಾಗಿರುವ ರೋಲ್ಸ್ ರಾಯ್ಸ್ ಘೋಸ್ಟ್ ಕಾರು ಬೆಂಗಳೂರು ನಗರದಲ್ಲಿ ಕೆಲವು ವರ್ಷಗಳಿಂದ ಸಂಚರಿಸುತ್ತಿದ್ದವು. ಈ ಕಾರುಗಳು ಉದ್ಯಮಿ ಕೆಜಿಎಫ್ ಬಾಬು ಅವರ ವಸಂತನಗರದ ಮನೆಯಲ್ಲಿರುವ ಬಗ್ಗೆ ಮಾಹಿತಿ ಪಡೆದ ಅಧಿಕಾರಿಗಳು ದಾಳಿ ನಡೆಸಿದರು. ಅಫ್ಗಾನ್ ಕನ್‌ಸ್ಟ್ರಕ್ಷನ್ ಕಂಪನಿಯ ದಂಡ ಮತ್ತು ತೆರಿಗೆಯ ಮೊತ್ತಕ್ಕೆ ಡಿ.ಡಿಯನ್ನು ನೀಡಿತು.

'ಸಿನಿಮಾ ನಟರಿಂದ ಕೆಜಿಎಫ್ ಬಾಬು ಕಾರು ಖರೀದಿ ಮಾಡಿದ್ದರು. 15 ದಿನಗಳ ಒಳಗೆ ದಾಖಲೆಗಳನ್ನು ಖರೀದಿದಾರರ ಮತ್ತು ಹೆಸರಿಗೆ ಬದಲಾಯಿಸಿಕೊಳ್ಳಬೇಕು ಎಂದು ಆಗ ಪತ್ರ ನೀಡಲಾಗಿತ್ತು. ಆದರೆ, ಖರೀದಿ ಮಾಡಿದ ಬಳಿಕ ಕೆಜಿಎಫ್



ತೆರಿಗೆ ಪಾವತಿಸದೇ ಸಂಚರಿಸುತ್ತಿದ್ದ ಐಷಾರಾಮಿ ಕಾರಿನ ಮಾಲೀಕರಿಗೆ ಸಾರಿಗೆ ಅಧಿಕಾರಿಗಳು ದಂಡ ವಿಧಿಸಿದರು

ಅಮಿತಾಭ್‌ಗೇ ನೋಟಿಸ್

'ಒಂದು ಕಾರು 2021ರಿಂದ ಮತ್ತು ಇನ್ನೊಂದು ಕಾರು 2023ರಿಂದ ರಾಜ್ಯದಲ್ಲಿ ಓಡಾಡುತ್ತಿದೆ. 2021ರಲ್ಲಿ ರೋಲ್ಸ್ ರಾಯ್ಸ್ ಫ್ಯಾಂಟಮ್ ಕಾರನ್ನು ಪತ್ತೆ ಹಚ್ಚಲಾಗಿತ್ತು. ಅಮಿತಾಭ್ ಬಚ್ಚನ್ ಅವರಿಗೂ ನೋಟಿಸ್ ನೀಡಲಾಗಿತ್ತು. ತಾತ್ಕಾಲಿಕವಾಗಿ ಕಾರನ್ನು ಬೆಂಗಳೂರಿನಲ್ಲಿ ತರಲಾಗಿದೆ. ಮಹಾರಾಷ್ಟ್ರದಲ್ಲಿಯೇ ಸಂಚರಿಸಲಿದೆ ಎಂದು ಆಗ ಕೆಜಿಎಫ್ ಬಾಬು ತಿಳಿಸಿದ್ದರು. ಆದರೂ ಇಲ್ಲೇ ಓಡಾಡುತ್ತಿದ್ದುದರಿಂದ ದಂಡ ವಿಧಿಸಲಾಗಿದೆ. ಕೂಡಲೇ ಖರೀದಿದಾರರ ಹೆಸರಿಗೆ ನೋಂದಣಿ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ' ಎಂದು ಸಾರಿಗೆ ಅಧಿಕಾರಿಗಳು ತಿಳಿಸಿದ್ದಾರೆ.

ಬಾಬು ತಮ್ಮ ಹೆಸರಿಗೆ ನೋಂದಣಿ ಮಾಡಿಕೊಂಡಿರಲಿಲ್ಲ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕಾರುಗಳು ರಾಜ್ಯದಲ್ಲೇ ಓಡಾಡುತ್ತಿರುವ ಬಗ್ಗೆ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸೆಂಟರ್‌ನಿಂದ (ಟಿಎಂಸಿ) ಮಾಹಿತಿ ಬಂದಿತ್ತು. ಆದರಂತೆ ಕಾರ್ಯಾಚರಣೆ ನಡೆಸಲಾಯಿತು ಎಂದು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಸಾರಿಗೆ ಜಂಟಿ ಆಯುಕ್ತರಾದ ಶೋಭಾ ಅವರ ಮಾರ್ಗದರ್ಶನದಲ್ಲಿ ಕೇಂದ್ರ ಪ್ರಾದೇಶಿಕ ಸಾರಿಗೆ ಅಧಿಕಾರಿ ದೀಪಕ್, ದಕ್ಷಿಣ ಪ್ರಾದೇಶಿಕ ಅಧಿಕಾರಿ ವಿ.ಪಿ. ರಮೇಶ್, ಸಿಬ್ಬಂದಿ ರಂಜಿತ್ ಎಸ್., ರಾಜೇಶ್ ಎನ್.ಪಿ., ಸುಧಾಕರ್ ಎಂ., ಮಂಜುನಾಥ್ ಎಚ್.ಎಂ., ರಾಜಣ್ಣ ಬಿ.ಕೆ. ಅಮಿತ್ ಪ್ರಭು, ಕೆಂಪರಾಜು ಕಾರ್ಯಾಚರಣೆ ನಡೆಸಿದ್ದರು.

ಸಖತ್ ಸದ್ದು ಮಾಡುತ್ತಿರುವ 'ಸೈಯಾರಾ'



ಅನೀತ್ ಪಡ್ಡಾ, ಅಹಾನ್ ಪಾಂಡೆ

ಸದ್ಯ ಬಾಲಿವುಡ್‌ನಲ್ಲಿ 'ಸೈಯಾರಾ' ಚಿತ್ರದ ಸದ್ದು ಜೋರಾಗಿದೆ. ಬಿಡುಗಡೆಯಾಗಿ ನಾಲ್ಕು ದಿನಗಳೊಳಗೆ ₹100 ಕೋಟಿ ಗಳಿಕೆ ಕಂಡಿರುವ ಚಿತ್ರ, ವಾರದ ದಿನಗಳಲ್ಲಿಯೂ ಯಶಸ್ವಿ ಪ್ರದರ್ಶನ ಕಾಣುತ್ತಿದೆ. ಬುಧವಾರ ಬೆಂಗಳೂರೊಂದರಲ್ಲಿಯೇ 250ಕ್ಕೂ ಹೆಚ್ಚು ಪರದೆಗಳಲ್ಲಿ ಚಿತ್ರ ಪ್ರದರ್ಶನಗೊಂಡಿದ್ದು, ಶೇಕಡ 90 ರಷ್ಟು ಪ್ರದರ್ಶನಗಳು ಹೌಸ್‌ಫುಲ್!

ಹೊಸ ಜೋಡಿಯಾದ ಅಹಾನ್ ಪಾಂಡೆ ಮತ್ತು ಅನೀತ್ ಪಡ್ಡಾ ಬಾಲಿವುಡ್‌ನಲ್ಲಿ ಸದ್ಯ ಅಕ್ಷರಶಃ ಮೋಡಿ ಮಾಡಿದ್ದಾರೆ. ರೀಲ್ಸ್‌ಗಳಲ್ಲಿಯೂ ಈ ಸಿನಿಮಾದ್ದೇ ಸದ್ದು. ಇವರಿಬ್ಬರ ನಟನೆಗೆ ಶ್ಲಾಘನೆ ವ್ಯಕ್ತವಾಗುತ್ತಿದೆ. ಹಾಗಂತ ಇಡೀ ಚಿತ್ರ ಹೊಸಬರದ್ದು ಎನ್ನಲಾಗದು. ತೆರೆಯ ಮೇಲಿನ ಜೋಡಿ ಮಾತ್ರ ಹೊಸತು. ತೆರೆಯ ಹಿಂದಿನ ಜಾದೂಗಾರರು ನಿರ್ದೇಶಕ ಮೋಹಿತ್ ಸೂರಿ ಹಾಗೂ ಯಶ್‌ರಾಜ್ ಫಿಲ್ಮ್ಸ್.

'ಆಶಿಕಿ-2' ಖ್ಯಾತಿಯ ಮೋಹಿತ್ ಸೂರಿ, 'ಸೈಯಾರಾ'ದಲ್ಲಿಯೂ ಅದೇ ಸೂತ್ರ ಅಳವಡಿಸಿಕೊಂಡು ಗೆದ್ದಿದ್ದಾರೆ. ಮ್ಯೂಸಿಕಲ್ ಲವ್ ಸ್ಟೋರಿಯನ್ನು ಇವತ್ತಿನ ತಲೆಮಾರಿಗೆ ಬೇಕಾದಂತೆ ಹೇಳಿದ್ದಾರೆ. ಹೀಗಾಗಿ ಕಾಲೇಜು ಹುಡುಗರು ಹಾಗೂ ಯುವಪಡೆ ಚಿತ್ರಮಂದಿರಗಳತ್ತ ನುಗ್ಗುತ್ತಿವೆ. ಇವರ 'ಹಮಾರಿ ಅದೂರಿ ಕಹಾನಿ', 'ಹಾಫ್ ಗರ್ಲ್‌ಫ್ರೆಂಡ್' ಮುಂತಾದ ಚಿತ್ರಗಳು ಕೂಡ ಸಂಬಂಧಗಳ ಸುತ್ತ ಸುತ್ತುವ ಕಥೆಯನ್ನೇ ಹೊಂದಿದ್ದವು.

ಯಶ್‌ರಾಜ್ ಫಿಲ್ಮ್ಸ್ ಹತ್ತಾರು ಹಿಟ್ ಸಿನಿಮಾಗಳನ್ನು ನೀಡಿರುವ ಸಂಸ್ಥೆ. ಆದರೆ ಈ ಚಿತ್ರವನ್ನು ಹೆಚ್ಚು ಪ್ರಚಾರವಿಲ್ಲದೆ ತೆರೆಗೆ ತಂದಿತ್ತು. ಚಿತ್ರದ ಕಂಟೆಂಟ್ ಅನ್ನು ಎಲ್ಲಿಯೂ ಹೆಚ್ಚು ಬಿಟ್ಟುಕೊಡಬಾರದೆಂಬ ಕಾರಣಕ್ಕೆ ನಿರ್ಮಾಣ ಸಂಸ್ಥೆ ಈ ಕಾರ್ಯತಂತ್ರಕ್ಕೆ ಮಾರು ಹೋಗಿತ್ತು ಎಂಬ ಮಾತು ಕೇಳಿಬಂದಿತ್ತು. ಆದರೆ ಚಿತ್ರದ ಹಾಡುಗಳು ಮತ್ತು ಟ್ರೇಲರ್ ಜನಮನ್ನಣೆ ಗಳಿಸಿದ್ದವು. ಯುವ ಪ್ರೇಮಿಗಳು ಚಿತ್ರಮಂದಿರಗಳಲ್ಲಿಯೇ ಭಾವುಕರಾಗಿ ಕಣ್ಣೀರು ಹಾಕುತ್ತಿರುವ ವಿಡಿಯೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿರುವುದು ಕೂಡ ಚಿತ್ರಕ್ಕೆ ಹೆಚ್ಚು ಪ್ರೇಕ್ಷಕರನ್ನು ಸೆಳೆಯುತ್ತಿದೆ.

ಬಾಲಿವುಡ್‌ಗೆ ನವಚೈತನ್ಯ

ಬಾಲಿವುಡ್‌ನಲ್ಲಿ ಹೊಸ ನಾಯಕ–ನಾಯಕಿಯ ಚಿತ್ರ ಗೆಲ್ಲದೇ ಬಹಳ ಕಾಲವಾಗಿತ್ತು. ಇತ್ತೀಚಿನ ವರ್ಷಗಳಲ್ಲಿ ಯಶಸ್ಸು ಕಂಡ ಬಹುತೇಕ ಚಿತ್ರಗಳು ಈಗಾಗಲೇ ಸ್ಟಾರ್‌ಗಳೆನಿಸಿಕೊಂಡ ನಟರದ್ದು ಅಥವಾ ಜನಪ್ರಿಯ ನಟರದ್ದು. ಅಹಾನ್ ಪಾಂಡೆ ಮತ್ತು ಅನೀತ್ ಪಡ್ಡಾ ಜೋಡಿಯ ಗೆಲುವು ಚಿತ್ರೋದ್ಯಮಕ್ಕೆ ಹೊಸ ಭರವಸೆ ನೀಡಿದೆ. ಜತೆಗೆ ಈ ಇಬ್ಬರಿಗೂ ಈಗಲೇ ಹೊಸ ಅವಕಾಶಗಳು ಹುಡುಕಿಕೊಂಡು ಬಂದಿವೆ.

ಈ ವರ್ಷ 'ಛಾವ' ಚಿತ್ರ ₹600 ಕೋಟಿ ಗಳಿಸಿ ದಾಖಲೆ ಬರೆದಿತ್ತು. 'ಹೌಸ್‌ಫುಲ್–5', 'ಸಿತಾರೆ ಜಮೀನ್ ಪರ್' ಚಿತ್ರಗಳು ಉತ್ತಮ ಗಳಿಕೆ ಕಂಡಿದ್ದವು. ಕಡಿಮೆ ಬಜೆಟ್‌ನಲ್ಲಿ ನಿರ್ಮಾಣಗೊಂಡು ವ್ಯಾಪಕ ಯಶಸ್ಸು ಪಡೆದ ಚಿತ್ರಗಳ ಸಾಲಿಗೆ 'ಸೈಯಾರಾ' ಸೇರ್ಪಡೆಗೊಂಡಿದೆ.



ಅನೀತ್ ಪಡ್ಡಾ

ಪೆದ್ದಿಗಾಗಿ ರಾಮ್ ಚರಣ್ ಭರ್ಜರಿ ತಯಾರಿ



ರಾಮ್ ಚರಣ್

ನಟ ಶಿವರಾಜ್‌ಕುಮಾರ್ ಅವರು 'ಪೆದ್ದಿ' ಸಿನಿಮಾ ಮೂಲಕ ತೆಲುಗು ಚಿತ್ರರಂಗದಲ್ಲೂ ಮಿಂಚಲು ಸಜ್ಜಾಗಿದ್ದಾರೆ. ಈ ಪ್ಯಾನ್ ಇಂಡಿಯಾ ಚಿತ್ರದಲ್ಲಿ ನಾಯಕನಾಗಿ ರಾಮ್ ಚರಣ್ ಅಭಿನಯಿಸುತ್ತಿದ್ದು, ಪಾತ್ರಕ್ಕಾಗಿ ಅವರು ಭರ್ಜರಿಯಾಗಿ ತಯಾರಾಗಿದ್ದಾರೆ. 'ಪೆದ್ದಿ' ಸಿನಿಮಾದ ಶೂಟಿಂಗ್ ಬುಧವಾರದಿಂದ ಪ್ರಾರಂಭವಾಗಿದೆ.

ಜಿಮ್‌ನಲ್ಲಿ ದೇಹ ಹುರಿಗೊಳಿಸಿರುವ ರಾಮ್ ಚರಣ್ ಸಿನಿಮಾದಲ್ಲಿ ರಗಡ್ ಅವತಾರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. 'ಉಪ್ಪೇನ' ಚಿತ್ರದ ನಿರ್ದೇಶಕ ಬುಚ್ಚಿಬಾಬು ಸನಾ ನಿರ್ದೇಶನ 'ಪೆದ್ದಿ' ಸ್ಪೋರ್ಟ್ಸ್ ಆ್ಯಕ್ಷನ್ ಡ್ರಾಮಾ ಕಥಾಹಂದರವನ್ನು ಹೊಂದಿದೆ. ರಾಮ್ ಚರಣ್‌ಗೆ ಜಾಹ್ನವಿ ಕಪೂರ್ ನಾಯಕಿಯಾಗಿದ್ದು, ಜಗಪತಿ ಬಾಬು ಮತ್ತು ದಿವೇಂದು ಶರ್ಮಾ ಪ್ರಮುಖ ಪಾತ್ರಗಳಲ್ಲಿ ನಟಿಸಲಿದ್ದಾರೆ. 2026ರ ಮಾರ್ಚ್ 27ಕ್ಕೆ 'ಪೆದ್ದಿ' ಸಿನಿಮಾ ಬಿಡುಗಡೆ ಆಗಲಿದೆ. ಚಿತ್ರಕ್ಕೆ ಎ.ಆರ್. ರೆಹಮಾನ್ ಸಂಗೀತ ನೀಡುತ್ತಿದ್ದು, ವೆಂಕಟ ಸತೀಶ್ ಕಿಲಾರು ಬಂಡವಾಳ ಹೂಡಿದ್ದಾರೆ. ಮೈತ್ರಿ ಮೂವೀ ಮೇಕರ್ಸ್ ಮತ್ತು ಸುಕುಮಾರ್ ರೈಟಿಂಗ್ಸ್ ನಿರ್ಮಾಣದಲ್ಲಿ ಸಾಥ್ ನೀಡಿವೆ. ಚಿತ್ರಕ್ಕೆ ಆರ್. ರತ್ನವೇಲು ಛಾಯಾಚಿತ್ರಗ್ರಹಣವಿದೆ.



ಜುಲೈ 25ಕ್ಕೆ 'ಬಂದೂಕ್'

ಮಹೇಶ್ ರವಿಕುಮಾರ್ ನಿರ್ದೇಶನದ 'ಬಂದೂಕ್' ಸಿನಿಮಾ ಜುಲೈ 25ರಂದು ತೆರೆಕಾಣಲಿದೆ. ಬಾಲಾಜಿ ಮನೋಹರ್, ಗೋಪಾಲಕೃಷ್ಣ ದೇಶಪಾಂಡೆ ಮುಂತಾದ ಕಲಾವಿದರು ಇರುವ ಈ ಸಿನಿಮಾ ಕ್ರೈಮ್ ಆ್ಯಕ್ಷನ್ ಜಾನರ್‌ನಲ್ಲಿದೆ.

'ಮೂರು ವರ್ಷದ ಹಿಂದೆ ಈ ಸಿನಿಮಾದ ಕಥೆ ಹುಟ್ಟಿಕೊಂಡಿತ್ತು. ಬಂದೂಕ್‌ನಲ್ಲಿ ಆರು ಚೇಂಬರ್ ಇರುತ್ತವೆ. ನಮ್ಮ ಸಿನಿಮಾದಲ್ಲಿ ಐದು ಚೇಂಬರ್ ಇರುವ ಗನ್ ಬಳಕೆ ಮಾಡಿದ್ದೇನೆ. ಇದೇ ಗನ್ ಎಲ್ಲಾ ಪಾತ್ರಗಳಿಗೂ ಕನೆಕ್ಟ್ ಆಗುತ್ತದೆ. ಹೀಗಾಗಿ 'ಬಂದೂಕ್' ಎಂಬ ಶೀರ್ಷಿಕೆ ಇಟ್ಟಿದ್ದೇವೆ. ಒಂದಷ್ಟು ಕಿರುಚಿತ್ರಗಳನ್ನು ಮಾಡಿದ ಅನುಭವವಿರುವ ನನಗೆ ಇದು ಮೊದಲ ಸಿನಿಮಾ' ಎಂದರು ಮಹೇಶ್ ರವಿಕುಮಾರ್.

ಚಿತ್ರಕ್ಕೆ ಮಹೇಶ್ ಅವರೇ ಕಥೆ ಬರೆದಿದ್ದಾರೆ. ಪಾರ್ಥ ಚಿತ್ರದ ಮುಖ್ಯಭೂಮಿಕೆಯಲ್ಲಿದ್ದು, ಬಾಲಾಜಿ ಮನೋಹರ್, ಶ್ವೇತಾ ಪ್ರಸಾದ್, ಗೋಪಾಲಕೃಷ್ಣ ದೇಶಪಾಂಡೆ, ಶಂಕರ್ ಅಶ್ವಥ್, ಹರೀಶ್ ರೈ ತಾರಾಬಳಗದಲ್ಲಿದ್ದಾರೆ. ಸಿನಿಮಾಗೆ ಶ್ರೀನಿವಾಸ್ ಮೂರ್ತಿ ಮತ್ತು ಚಂದ್ರಶೇಖರ್ ಬಂಡವಾಳ ಹೂಡಿದ್ದಾರೆ. ಹೊನ್ನಾವರ, ಉಡುಪಿ, ಮಲ್ಪೆ, ಮಂಗಳೂರು ಸುತ್ತಮುತ್ತ ಶೂಟಿಂಗ್ ನಡೆದಿದೆ.

'ಎನ್‌ಟಿಆರ್–ಎಂಜಿಆರ್ ಸ್ಫೂರ್ತಿ'



ಪವನ್ ಕಲ್ಯಾಣ್

ನಟ ಪವನ್ ಕಲ್ಯಾಣ್ ನಟನೆಯ 'ಹರಿ ಹರ ವೀರ ಮಲ್ಲು' ಸಿನಿಮಾ ಇಂದು (ಜುಲೈ 24) ತೆರೆಕಂಡಿದೆ.

ಚಿತ್ರದಲ್ಲಿನ ಪವನ್ ಕಲ್ಯಾಣ್ ಪಾತ್ರವನ್ನು ವಿನ್ಯಾಸಗೊಳಿಸಲು ಖ್ಯಾತ ನಟರಾದ ಎನ್‌ಟಿಆರ್ ಮತ್ತು ಎಂಜಿಆರ್ ಅವರು ನಿಭಾಯಿಸಿದ ಪಾತ್ರಗಳೇ ಸ್ಫೂರ್ತಿ ಎಂದಿದ್ದಾರೆ ನಿರ್ದೇಶಕ ಜ್ಯೋತಿ ಕೃಷ್ಣ.

'ಹರಿ ಹರ ವೀರ ಮಲ್ಲು'ವಾಗಿ ಪವನ್ ಕಲ್ಯಾಣ್ ಈ ಸಿನಿಮಾದಲ್ಲಿ ಕಾಣಿಸಿಕೊಂಡಿದ್ದಾರೆ. 17ನೇ ಶತಮಾನದಲ್ಲಿ ಮೊಘಲ್ ಸಾಮ್ರಾಜ್ಯದ ವಿರುದ್ಧ ಹೋರಾಡಿದ ನಾಯಕನಾಗಿ ಪವರ್ ಸ್ಟಾರ್ ಮಿಂಚಿದ್ದಾರೆ. ಜ್ಯೋತಿ ಕೃಷ್ಣ ಮತ್ತು ಕ್ರಿಶ್ ಜಗರ್ಲಮುಡಿ ನಿರ್ದೇಶನದ ಈ ಚಿತ್ರ ತೆಲುಗು, ಕನ್ನಡ ಸೇರಿದಂತೆ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಬಿಡುಗಡೆಯಾಗಿದೆ. ಚಿತ್ರದಲ್ಲಿ ನಿಧಿ ಅಗರ್‌ವಾಲ್ ನಾಯಕಿಯಾಗಿ ಮಿಂಚಿದ್ದಾರೆ. ಬಾಬಿ ಡಿಯೋಲ್, ನರ್ಗೀಸ್ ಫಕ್ರಿ, ಆದಿತ್ಯಾ ಮೆನನ್, ಶುಭಲೇಖ ಸುಧಾಕರ್ ತಾರಾಗಣದಲ್ಲಿದ್ದಾರೆ.

ನಟ ರಾನಾ ದಗ್ಗುಭಾಟಿಗೆ ಇ.ಡಿಯಿಂದ ಮತ್ತೆ ಸಮನ್ಸ್

ಹೈದರಾಬಾದ್ (ಪಿಟಿಐ): ಆನ್‌ಲೈನ್ ವೇದಿಕೆಗಳಲ್ಲಿನ ಬೆಟ್ಟಿಂಗ್ ಮತ್ತು ಜೂಜಾಟಗಳಿಗೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನಟ ರಾನಾ ದಗ್ಗುಬಾಟಿ ವಿಚಾರಣೆಗೆ ಗೈರಾಗಿದ್ದು, ಆಗಸ್ಟ್ 11ರಂದು ಹಾಜರಾಗುವಂತೆ ಜಾರಿ ನಿರ್ದೇಶನಾಲಯ (ಇ.ಡಿ) ಹೊಸದಾಗಿ ಸಮನ್ಸ್ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಕಳೆದ ವಾರ ನಾಲ್ಕು ನಟರಿಗೆ ಇ.ಡಿ ಸಮನ್ಸ್ ಜಾರಿ ಮಾಡಿತ್ತು ಮತ್ತು ವಿವಿಧ ದಿನಾಂಕಗಳಲ್ಲಿ ಇಲ್ಲಿನ ತನ್ನ ಪ್ರಾದೇಶಿಕ ಕಚೇರಿಗೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿತ್ತು. ರಾನಾ ದಗ್ಗುಬಾಟಿ ಅವರು ಬುಧವಾರ ವಿಚಾರಣೆಗೆ ಹಾಜರಾಗಬೇಕಿತ್ತು. ಈ ನಡುವೆ, ತನ್ನ ವಿರುದ್ಧದ ವಿಚಾರಣೆಯನ್ನು ಮುಂದೂಡುವಂತೆ ರಾನಾ ದಗ್ಗುಬಾಟಿ ಮನವಿ ಮಾಡಿಕೊಂಡಿದ್ದರು ಎಂದು ಮೂಲಗಳು ಹೇಳಿವೆ.

ಇಡಿ ರಾನಾ ದಗ್ಗುಬಾಟಿಗೆ ಮಾತ್ರವಲ್ಲದೆ, ನಟ ಪ್ರಕಾಶ್ ರಾಜ್ (60) ಅವರಿಗೂ ಜುಲೈ 30ಕ್ಕೆ ಹಾಜರಾಗುವಂತೆ ಸಮನ್ಸ್ ಜಾರಿ ಮಾಡಿತ್ತು. ಜೊತೆಗೆ, ವಿಜಯ್ ದೇವರಕೊಂಡ (36) ಅವರಿಗೆ ಆಗಸ್ಟ್ 6 ಮತ್ತು ಲಕ್ಷ್ಮಿ ಮಂಚು (47) ಅವರಿಗೆ ಆಗಸ್ಟ್ 13ಕ್ಕೆ ಹಾಜರಾಗುವಂತೆ ಇ.ಡಿ ಸೂಚಿಸಿತ್ತು.

16 ಲಕ್ಷ ರೈಲ್ವೆ ಉದ್ಯೋಗಿಗಳಿಗೆ ಪ್ರಥಮ ಚಿಕಿತ್ಸೆ ತರಬೇತಿ

ನವದೆಹಲಿ (ಪಿಟಿಐ): ರೈಲು ಮತ್ತು ರೈಲು ನಿಲ್ದಾಣಗಳಲ್ಲಿ ಉಂಟಾಗುವ ವೈದ್ಯಕೀಯ ತುರ್ತು ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು 16 ಲಕ್ಷಕ್ಕೂ ಅಧಿಕ ಉದ್ಯೋಗಿಗಳಿಗೆ, ಮೂರು ವರ್ಷ ತರಬೇತಿ ನೀಡಲಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಲೋಕಸಭೆಗೆ ಬುಧವಾರ ತಿಳಿಸಿದ್ದಾರೆ.

ರೈಲು/ನಿಲ್ದಾಣಗಳಲ್ಲಿನ ತುರ್ತು ವೈದ್ಯಕೀಯ ಕೇಂದ್ರಗಳ ಕುರಿತು ಕೇಳಲಾದ ಪ್ರಶ್ನೆಯೊಂದಕ್ಕೆ ವೈಷ್ಣವ್ ಲಿಖಿತ ಉತ್ತರ ನೀಡಿದ್ದಾರೆ. 'ರೈಲು ಮತ್ತು ರೈಲು ನಿಲ್ದಾಣಗಳಲ್ಲಿನ ವೈದ್ಯಕೀಯ ಸೌಲಭ್ಯಗಳನ್ನು ಸುಪ್ರೀಂ ಕೋರ್ಟ್ ಪರಿಶೀಲಿಸಿದೆ. ನ್ಯಾಯಾಲಯದ ಆದೇಶದ ಮೇರೆಗೆ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (ಏಮ್ಸ್) ತಜ್ಞರ ಸಮಿತಿಯನ್ನು ರಚಿಸಲಾಗಿದೆ' ಎಂದಿದ್ದಾರೆ.

'ಸಮಿತಿಯ ತಜ್ಞರ ಶಿಫಾರಸಿನಂತೆ, ಜೀವ ರಕ್ಷಕ ಔಷಧಗಳು, ವೈದ್ಯಕೀಯ ಉಪಕರಣಗಳು ಹಾಗೂ ಆಮ್ಲಜನಕ ಸಿಲಿಂಡರ್‌ಗಳನ್ನು ಒಳಗೊಂಡ ಚಿಕಿತ್ಸಾ ಪೆಟ್ಟಿಗೆಯನ್ನು ಎಲ್ಲಾ ರೈಲು/ನಿಲ್ದಾಣಗಳಿಗೆ ಒದಗಿಸಲು ಸೂಚಿಸಲಾಗಿದೆ. ಗಾಯಾಳು ಅಥವಾ ಅಸ್ವಸ್ಥ ಪ್ರಯಾಣಿಕರನ್ನು ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲು ಆಂಬುಲೆನ್ಸ್ ವ್ಯವಸ್ಥೆಯೂ ಲಭ್ಯವಿದೆ' ಎಂದು ತಿಳಿಸಿದ್ದಾರೆ.

2022ರ ಏಪ್ರಿಲ್ 1ರಿಂದ 2025ರ ಜೂನ್ 30ರವರೆಗೆ 16,14,748 ಉದ್ಯೋಗಿಗಳಿಗೆ ತರಬೇತಿ ನೀಡಲಾಗಿದೆ.

ಜಾತಿವಾರು ಸಮೀಕ್ಷೆಗೆ ದಿನ ನಿಗದಿ

ಒಂದನೇ ಪುಟದಿಂದ...

ರಾಜ್ಯದ ಎಲ್ಲ ಏಳು ಕೋಟಿ ಜನರ ಸಮೀಕ್ಷೆ ನಡೆಸಲಾಗುವುದು. ಜಾತಿ ತಾರತಮ್ಯ ನಿವಾರಣೆ ಮಾಡುವುದು ಈ ಸಮೀಕ್ಷೆಯ ಮುಖ್ಯ ಉದ್ದೇಶ. ಪ್ರತಿಯೊಬ್ಬರ ಆರ್ಥಿಕ ಪರಿಸ್ಥಿತಿ, ಜಮೀನು ಇದೆಯೇ ಇಲ್ಲವೇ ಸೇರಿದಂತೆ ಎಲ್ಲ ಅಂಶಗಳ ಬಗ್ಗೆ ಸಮಗ್ರ ಸಮೀಕ್ಷೆ ನಡೆಯಲಿದೆ. ಮುಂದಿನ ಸಾಲಿನ ಬಜೆಟ್ ಸಿದ್ಧಪಡಿಸಲು ಈ ಸಮೀಕ್ಷೆಯ ವರದಿಯು ಆಧಾರ ಆಗಲಿದೆ. ರಾಜ್ಯದಲ್ಲಿ ಈ ಬಾರಿ ನಡೆಯಲಿರುವ ಸಮೀಕ್ಷೆಯು ದೇಶದಲ್ಲೇ ಮಾದರಿ ಸಮೀಕ್ಷೆ ಆಗಬೇಕು ಎಂದೂ ಮುಖ್ಯಮಂತ್ರಿ ಸಲಹೆ ನೀಡಿದರು.

ಯಾವುದೇ ದೂರುಗಳಿಗೆ ಆಸ್ಪದ ಆಗದಂತೆ, ಯಾರೂ ಹೊರಗುಳಿಯದಂತೆ ಮುನ್ನೆಚ್ಚರಿಕೆ ವಹಿಸಿ, ಅತ್ಯಂತ ಸಮರ್ಪಕವಾಗಿ ಸಮೀಕ್ಷೆ ನಡೆಯಬೇಕು ಎಂದೂ ಹೇಳಿದರು.

ಈ ಹಿಂದೆ ಎಚ್. ಕಾಂತರಾಜ ನೇತೃತ್ವದ ಆಯೋಗವು 54 ಪ್ರಶ್ನೆಗಳನ್ನು ಸಿದ್ಧಪಡಿಸಿ, ಕೈಪಿಡಿ ಮೂಲಕ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಿತ್ತು. ಈ ಬಾರಿಯ ಸಮೀಕ್ಷೆಯಲ್ಲಿ ಇನ್ನಷ್ಟು ಅಂಶಗಳನ್ನು ಸೇರಿಸುವ ಕುರಿತು ಪರಿಶೀಲಿಸಲಾಗುವುದು. ಸಮೀಕ್ಷೆ ವೈಜ್ಞಾನಿಕವಾಗಿ ಮತ್ತು ಪಾರದರ್ಶಕವಾಗಿ ನಡೆಯಬೇಕು. ಸಮೀಕ್ಷೆಯ ಪ್ರಶ್ನಾವಳಿಯನ್ನು ಅಂತಿಮಗೊಳಿಸಲು ತಜ್ಞರ ಸಮಿತಿಯ ನೆರವು ಪಡೆಯಬೇಕು ಎಂದು ತಿಳಿಸಿದರು.

ಜಮ್ಮು–ಶ್ರೀನಗರ ಹೆದ್ದಾರಿಯಲ್ಲಿ ಸಂಚಾರ ಸ್ಥಗಿತ

ಜಮ್ಮು (ಪಿಟಿಐ): ಧಾರಾಕಾರ ಮಳೆಯಿಂದಾಗಿ ಮಣ್ಣು ಕುಸಿದು ಜಮ್ಮು–ಶ್ರೀನಗರ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ಸ್ಥಗಿತಗೊಂಡಿದೆ. ಅಪಾರ ಸಂಖ್ಯೆಯ ವಾಹನಗಳು, ಅಮರನಾಥ ಯಾತ್ರಿಗಳು ರಂಬನ್ ಜಿಲ್ಲೆಯಲ್ಲಿ ಹೆದ್ದಾರಿಯಲ್ಲಿ ದಟ್ಟಣೆಯಲ್ಲಿ ಸಿಲುಕಿದ್ದಾರೆ.

'ಜಮ್ಮು ವಲಯದಲ್ಲಿ ಮೂರು ದಿನಗಳಿಂದ ಮಳೆ ಮುಂದುವರಿದಿದೆ. ಈ ಮಧ್ಯೆ, ಮುಂದಿನ 24 ಗಂಟೆಗಳಲ್ಲಿ ದಿಢೀರ್ ಪ್ರವಾಹ ಉಂಟಾಗುವ ಮುನ್ನೆಚ್ಚರಿಕೆಯನ್ನು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ನೀಡಿದೆ. ಹೀಗಾಗಿ, ಮಾರ್ಗ ಮಧ್ಯೆ ಸಿಲುಕಿರುವ ಅಮರನಾಥ ಯಾತ್ರಿಗಳನ್ನು ವಾಪಸ್ ಶ್ರೀನಗರಕ್ಕೆ ಕರೆತರಲು ಜಿಲ್ಲಾಡಳಿತ ಕಾರ್ಯಾಚರಣೆ ಆರಂಭಿಸಿದೆ.


ಮಳೆ ಕಡಿಮೆಯಾಗಿ, ಸಂಚಾರ ಪುನರಾರಂಭಗೊಂಡ ನಂತರವೇ, ಈ ಮಾರ್ಗ ಬಳಸುವಂತೆ ಜನರಿಗೆ ಜಿಲ್ಲಾಡಳಿತ ಮನವಿ ಮಾಡಿದೆ.

'ರಂಬನ್ ಜಿಲ್ಲೆಯ ಮಗರ್‌ಕೋಟೆ ಕಣಿವೆಯಲ್ಲಿನ ಸೇತುವೆ ಬಳಿ ಮಣ್ಣು ಕುಸಿದಿದೆ. ದೇಶದ ಉಳಿದ ಭಾಗಗಳಿಂದ ಕಾಶ್ಮೀರವನ್ನು ಸಂಪರ್ಕಿಸುವ ಏಕೈಕ ಹೆದ್ದಾರಿ ಇದಾಗಿದ್ದು, ಸಂಚಾರ ಸ್ಥಗಿತಗೊಂಡಿರುವುದರಿಂದ ಜನರು ಪರದಾಡುವಂತಾಗಿದೆ.

'ಮಳೆ ಮುಂದುವರಿದಿರುವುದು ಕಾರ್ಯಾಚರಣೆಗೆ ಅಡ್ಡಿಯಾಗಿದೆ. ಹವಾಮಾನ ಪೂರಕವಾಗಿದ್ದರೆ ಮುಂದಿನ ಕೆಲವು ಗಂಟೆಗಳಲ್ಲಿ ಹೆದ್ದಾರಿಯಲ್ಲಿ ಸಂಚಾರ ಪುನರಾರಂಭಗೊಳ್ಳುವ ಸಾಧ್ಯತೆ ಇದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಿಶ್ತವಾಡ್ ಜಿಲ್ಲೆಯ ಸಿಂಥನ್‌ನಲ್ಲ ಮಾರ್ಗದಲ್ಲೂ ಪ್ರವಾಹದಿಂದಾಗಿ ರಸ್ತೆ ಸಂಪರ್ಕ ಕಡಿತಗೊಂಡಿದೆ. ರಜೌರಿ, ಪೂಂಚ್, ರಿಯಾಸಿ, ಉಧಂಪುರ್, ಥೋಡ ಸೇರಿದಂತೆ ಕಣಿವೆ, ಪರ್ವತ ಶ್ರೇಣಿಯ ಮಾರ್ಗಗಳಲ್ಲಿ ಅಲ್ಲಲ್ಲಿ ಮಣ್ಣು ಕುಸಿದಿದೆ.





ಭಾರತಕ್ಕೆ ಯಶಸ್ವಿ, ಸಾಯಿ ಆಸರೆ

ನಾಲ್ಕನೇ ಟೆಸ್ಟ್: ಇಂಗ್ಲೆಂಡ್ ಬೌಲರ್‌ಗಳ ಪರಿಣಾಮಕಾರಿ ದಾಳಿ

• ಸಿದ್ಧಿ ಕಿರಣ್

ಮುಖ್ಯಾಂಶಗಳು

- ಹರಿಯಾಣದ ವೇಗಿ ಅನ್ಷುಲ್ ಕಂಬೋಜ್ ಪದಾರ್ಪಣೆ
- ಕರುಣ್ ನಾಯರ್ ಬದಲಿಗೆ ಸಾಯಿ ಸುದರ್ಶನ್‌ಗೆ ಅವಕಾಶ
- ಆಲ್‌ರೌಂಡರ್ ಶಾರ್ದೂಲ್ ಕಣಕ್ಕೆ

ಮ್ಯಾಂಚೆಸ್ಟರ್: ಭಾರತ ತಂಡದ ನಾಯಕ ಶುಭಮನ್ ಗಿಲ್ ಅವರು ಸತತ ನಾಲ್ಕನೇ ಟಾಸ್ ಸೋತರು. ಆದರೆ, ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ ಅವರು ಅನಿರೀಕ್ಷಿತ ನಿರ್ಧಾರ ಕೈಗೊಂಡರು. ತಂಪು ವಾತಾವರಣ ಮತ್ತು ಮೋಡ ಕವಿದ ಮುಂಜಾನೆಯ ಹೊತ್ತಿನಲ್ಲಿ ಬೌಲರ್‌ಗಳಿಗೆ ನೆರವು ಲಭಿಸಬಹುದೆಂಬ ನಿರೀಕ್ಷೆಯಿಂದ ಸ್ಟೋಕ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಓಲ್ಡ್ ಟ್ರಾಫರ್ಡ್ ಕ್ರೀಡಾಂಗಣದಲ್ಲಿ ಈ ಹಿಂದೆ ನಡೆದ 84 ಟೆಸ್ಟ್‌ಗಳಲ್ಲಿ ಟಾಸ್ ಗೆದ್ದವರು ಇಂತಹ ನಿರ್ಧಾರ ಮಾಡಿರಲಿಲ್ಲ. ಆದರೆ ಸ್ಟೋಕ್ಸ್ ಅದೃಷ್ಟ ಪಣಕ್ಕೊಡ್ಡಿದರು.

ಚೆಂಡು ನಿಧಾನಗತಿಯ ಚಲನೆಯೊಂದಿಗೆ ಪುಟಿಯುತ್ತಿದ್ದ ಪಿಚ್‌ನಲ್ಲಿ ದಿನದ ಮೊದಲ ಅವಧಿಯಲ್ಲಿ ಯಶಸ್ವಿ ಜೈಸ್ವಾಲ್ (58; 107ಎ) ಮತ್ತು ಕೆ.ಎಲ್. ರಾಹುಲ್ (46; 98ಎ) ತಾಳ್ಮೆಯಿಂದ ಇನಿಂಗ್ಸ್ ಕಟ್ಟಿದರು. ಆದರೆ ಊಟದ ವಿರಾಮದ ನಂತರದಲ್ಲಿ ಚುರುಕಿನ ದಾಳಿ ನಡೆಸಿದ ಇಂಗ್ಲೆಂಡ್ ಬೌಲರ್‌ಗಳು ಭಾರತದ ಬ್ಯಾಟರ್‌ಗಳು ತಡಬಡಾಯಿಸುವಂತೆ ಮಾಡಿದರು. ಇದರಿಂದಾಗಿ ಚಹಾ ವಿರಾಮದ ಹೊತ್ತಿಗೆ ಗಿಲ್ ಬಳಗವು 3 ವಿಕೆಟ್‌ಗಳಿಗೆ 149 ರನ್ ಗಳಿಸಿತು.

ನಂತರದ ಅವಧಿಯಲ್ಲಿ ಸಾಯಿ ಜೊತೆಗೂಡಿದ ರಿಷಭ್ ಪಂತ್ ತಮ್ಮ ಎಂದಿನ ಲವಲವಿಕೆಯ ಆಟದಿಂದ ಇನಿಂಗ್ಸ್‌ಗೆ ಜೀವ ತುಂಬಿದರು. 4ನೇ ವಿಕೆಟ್ ಜತೆಯಾಟದಲ್ಲಿ 72 (112ಎಸೆತ) ರನ್ ಸೇರಿಸಿದರು. ಆದರೆ ಈ ಹಂತದಲ್ಲಿ ರಿಷಭ್ ಗಾಯಗೊಂಡು ನಿವೃತ್ತಿಯಾದರು. ಅರ್ಧ ಶತಕ ಗಳಿಸಿದ ಸಾಯಿ (61; 151ಎ, 4X7) ಅವರ ವಿಕೆಟ್ ಗಳಿಸಿದ ಸ್ಟೋಕ್ಸ್ ಮತ್ತೊಂದು ಪೆಟ್ಟು ಕೊಟ್ಟರು.

ಕ್ರೀಸ್‌ನಲ್ಲಿ ಜೊತೆಗೂಡಿದ ಆಲ್‌ರೌಂಡರ್ ಜೋಡಿ ರವೀಂದ್ರ ಜಡೇಜ (ಬ್ಯಾಟಿಂಗ್ 19) ಮತ್ತು ಶಾರ್ದೂಲ್ ಠಾಕೂರ್ (ಬ್ಯಾಟಿಂಗ್ 19) ವಿಕೆಟ್ ಪತನ ತಡೆದರು. ದಿನದಾಟದ ಮುಕ್ತಾಯಕ್ಕೆ ತಂಡವು 83 ಓವರ್‌ಗಳಲ್ಲಿ 4 ವಿಕೆಟ್‌ಗೆ 264 ರನ್ ಗಳಿಸಿತು.

ತಾಳ್ಮೆಯ ಆರಂಭ: ದಿನದಾಟದ ಆರಂಭದ ಕೆಲವು ಓವರ್‌ಗಳಲ್ಲಿ ರಾಹುಲ್ ಮತ್ತು ಜೈಸ್ವಾಲ್ ಅವರು ತಮ್ಮ ನಾಯಕನ ಆಣತಿಯನ್ನು ಅಚ್ಚುಕಟ್ಟಾಗಿ ಪಾಲಿಸುವಂತೆ ಕಂಡಿತ್ತು.

ಇಂಗ್ಲೆಂಡ್ ವೇಗಿಗಳಾದ ಕ್ರಿಸ್ ವೋಕ್ಸ್, ಜೋಫ್ರಾ ಆರ್ಚರ್, ಬ್ರೈಡನ್ ಕಾರ್ಸ್ ಮತ್ತು ಸ್ಟೋಕ್ಸ್ ಅವರು ಆಫ್ ಸ್ಟಂಪ್ ಗುರಿಯಾಗಿಸಿಕೊಂಡೇ ನಿರಂತರ ದಾಳಿ ಸಂಘಟಿಸಿದರು. ವೇಗ, ಸ್ವಿಂಗ್ ಮತ್ತು ಪರಿಣಾಮಕಾರಿ ಚಲನೆಯಿಂದ ಕೂಡಿದ ಎಸೆತಗಳ ಸವಾಲನ್ನು ಬ್ಯಾಟರ್‌ಗಳು ಎದುರಿಸಿ ನಿಲ್ಲಬೇಕಾಯಿತು. ಅಪಾರ ಏಕಾಗ್ರತೆಯಿಂದ ಎಸೆತಗಳ ಚಲನೆಯನ್ನು ಗುರುತಿಸಿದರು. ಆಫ್‌ಸ್ಟಿಕ್‌ನಿಂದ ಹೊರಗೆ ತಿರುಗುವ ಎಸೆತಗಳನ್ನು ಬಿಟ್ಟರು. ರನ್ ಸಿಗಬಹುದಾದ ಎಸೆತಗಳನ್ನು ಆಡಿದರು.

ಭೋಜನ ವಿರಾಮದ 18 ನಿಮಿಷಗಳ ನಂತರ ರಾಹುಲ್ ಅವರು ವೋಕ್ಸ್ ಎಸೆತ ಪಂಚ್ ಮಾಡಲು ಹೋಗಿ, ಸ್ಲಿಪ್‌ನಲ್ಲಿದ್ದ ಜ್ಯಾಕ್ ಕ್ರಾಲಿಗೆ ಕ್ಯಾಚ್ ನೀಡಿದರು.

ಅರ್ಧಶತಕ ಗಳಿಸಿದ ಎಡಗೈ ಬ್ಯಾಟರ್ ಜೈಸ್ವಾಲ್ ಅವರು ಎಡಗೈ ಸ್ಪಿನ್ನರ್, 35 ವರ್ಷದ ಲಿಯಾಮ್ ಡಾಸನ್ ಎಸೆತವನ್ನು ಫಾರ್ವರ್ಡ್ ಡಿಫೆನ್ಸ್ ಮಾಡಲು ಹೋಗಿ ಸ್ಲಿಪ್‌ನಲ್ಲಿದ್ದ ಹ್ಯಾರಿ ಬ್ರೂಕ್ ಅವರಿಗೆ ಕ್ಯಾಚ್ ಕೊಟ್ಟರು. ಎಂಟು ವರ್ಷಗಳ ನಂತರ ಇಂಗ್ಲೆಂಡ್ ತಂಡಕ್ಕೆ ಮರಳಿರುವ ಲಿಯಾಮ್ ಹಿರಿಹಿರಿ ಹಿಗ್ಗಿದರು.

ಆದರೆ ಇನ್ನೊಂದು ಬದಿಯಲ್ಲಿದ್ದ ಸಾಯಿ ಸುದರ್ಶನ್ ಪೂರ್ಣ ಏಕಾಗ್ರತೆ ಮತ್ತು ಭರ್ತಿ ತಾಳ್ಮೆಯ ಆಟದ ಮೂಲಕ ಇನಿಂಗ್ಸ್ ಬೆಳೆಸುವ ಭರವಸೆ ಮೂಡಿಸಿದರು. ಕರುಣ್ ನಾಯರ್ ಬದಲಿಗೆ ಅವರಿಗೆ ಇಲ್ಲಿ ಸ್ಥಾನ ಲಭಿಸಿದೆ. ಅವರೊಂದಿಗೆ ಸೇರಿಕೊಂಡ ನಾಯಕ ಗಿಲ್ ಕೂಡ ಭರವಸೆ ಮೂಡಿಸಿದರು. ಆದರೆ ಚಹಾ ವಿರಾಮಕ್ಕೂ 14 ನಿಮಿಷಗಳ ಮುನ್ನ ಬೆನ್ ಸ್ಟೋಕ್ಸ್ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಗಿಲ್ ಬಿದ್ದರು.

ಆಫ್‌ಸ್ಟಂಪ್ ಲೈನ್ ಅಂಚಿನಲ್ಲಿ ಪುಟಿದ ಚೆಂಡು ಸ್ವಿಂಗ್ ಆಗಿ ಒಳನುಗ್ಗಿತು. ಇದನ್ನು ನಿರೀಕ್ಷೆ ಮಾಡದ ಗಿಲ್ ರಕ್ಷಣಾತ್ಮಕ ಹೊಡೆತ ಪ್ರಯೋಗಿಸುವಲ್ಲಿ ವಿಳಂಬ ಮಾಡಿ ದಂಡ ತೆತ್ತರು.

ಟಾಸ್‌ಗೆದ್ದು ಫೀಲ್ಡಿಂಗ್; ಜಯ ಕಷ್ಟ: ಈ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಯಾವ ತಂಡವೂ ಈವರೆಗೆ ಜಯಿಸಿಲ್ಲ. 11 ಪಂದ್ಯಗಳಲ್ಲಿ ಮೊದಲು ಟಾಸ್ ಗೆದ್ದು ಫೀಲ್ಡಿಂಗ್ ಮಾಡಿದ ತಂಡಗಳು ಗೆದ್ದಿಲ್ಲ. ಈ ಪೈಕಿ ಟಾಸ್ ಗೆದ್ದವರು 3 ಪಂದ್ಯ ಗಳಲ್ಲಿ ಸೋತಿದ್ದಾರೆ. ಎಂಟು ಪಂದ್ಯ ಡ್ರಾ ಆಗಿವೆ.



ಸಾಯಿ ಸುದರ್ಶನ್ ಚಿತ್ರಗಳು: ಪಿಟಿಐ

ರಿಷಭ್ ಪಂತ್‌ಗೆ ಗಾಯ

ಮ್ಯಾಂಚೆಸ್ಟರ್: ಭರವಸೆಯ ಆಟಗಾರ ರಿಷಭ್ ಪಂತ್ ಅವರು ಬ್ಯಾಟಿಂಗ್ ಮಾಡುವಾಗ ಗಾಯಗೊಂಡು ಪೆವಿಲಿಯನ್‌ಗೆ ಮರಳಿದರು.

48 ಎಸೆತಗಳಲ್ಲಿ 37 ರನ್ ಗಳಿಸಿದ ರಿಷಭ್ ಅವರು ಕ್ರಿಸ್ ವೋಕ್ಸ್ ಹಾಕಿದ ಯಾರ್ಕರ್ ಎಸೆತದಲ್ಲಿ ಗಾಯಗೊಂಡರು. ವೇಗವಾಗಿ ಸಾಗಿಬಂದ ಚೆಂಡನ್ನು ರಿವರ್ಸ್ ಸ್ವೀಪ್ ಮಾಡಲು ಪಂತ್ ಪ್ರಯತ್ನಿಸಿದರು. ಆದರೆ ಚೆಂಡು ಅವರ ಬಲ ಅಂಗಾಲಿಗೆ ಬಡಿಯಿತು. ಪಂತ್ ತೀವ್ರ ನೋವಿನಿಂದ ಮುಖ ಕಿವುಚಿದರು. ಧಾವಿಸಿ ಬಂದ ಫಿಸಿಯೊ ಪ್ರಥಮ ಚಿಕಿತ್ಸೆ ನೀಡಿದರು. ಆದರೆ ಪೆಟ್ಟು ಬಿದ್ದ ಜಾಗದಲ್ಲಿ ಬಾವು ಹೆಚ್ಚಿತು. ರಕ್ತಸ್ರಾವ ಕೂಡ ಆಗುತ್ತಿತ್ತು. ಆದ್ದರಿಂದ ಅವರನ್ನು ಹೆಚ್ಚಿನ ಚಿಕಿತ್ಸೆಗೆ ಗಾಲ್ಫ್ ಕಾರ್ಟ್ ವಾಹನದಲ್ಲಿ ಕೂರಿಸಿಕೊಂಡು ಡ್ರೆಸಿಂಗ್ ರೂಮ್‌ಗೆ ಕರೆದೊಯ್ಯಲಾಯಿತು.

ಲಾರ್ಡ್ಸ್ ಟೆಸ್ಟ್‌ನಲ್ಲಿಯೂ ಅವರು ವಿಕೆಟ್‌ಕೀಪಿಂಗ್ ಮಾಡುವಾಗ ಗಾಯಗೊಂಡಿದ್ದರು. ಧ್ರುವ್ ಜುರೇಲ್ ಅವರು ಕೀಪಿಂಗ್ ನಿರ್ವಹಿಸಿದ್ದರು.



ಗಾಯಗೊಂಡ ರಿಷಭ್ ಪಂತ್ ಅವರನ್ನು ಗಾಲ್ಫ್ ಕಾರ್ಟ್‌ನಲ್ಲಿ ಮೈದಾನದಿಂದ ಹೊರಗೆ ಕರೆದೊಯ್ಯಲಾಯಿತು ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್:
ಭಾರತ: 4 ವಿಕೆಟ್‌ಗೆ 264 (83 ಓವರ್‌ಗಳಲ್ಲಿ) (ಮೊದಲ ದಿನದ ಅಂತ್ಯಕ್ಕೆ)

ಯಶಸ್ವಿ ಸಿ ಬ್ರೂಕ್ ಬಿ ಡಾಸನ್ 58 (107ಎ, 4x10, 6x1)
ರಾಹುಲ್ ಸಿ ಕ್ರಾಲಿ ಬಿ ವೋಕ್ಸ್ 46 (98ಎ, 4x4)
ಸಾಯಿ ಸುದರ್ಶನ್ ಸಿ ಕಾರ್ಸ್ ಬಿ ಸ್ಟೋಕ್ಸ್ 61 (151ಎ, 4x7)
ಗಿಲ್ ಎಲ್‌ಬಿಡಬ್ಲ್ಯು ಬಿ ಸ್ಟೋಕ್ಸ್ 12 (23ಎ, 4x1)
ಪಂತ್ (ಗಾಯದಿಂದ ನಿವೃತ್ತಿ) 37 (48ಎ, 4x2, 6x1)
ಜಡೇಜ ಔಟಾಗದೆ 19 (37ಎ, 4x3)
ಶಾರ್ದೂಲ್ ಔಟಾಗದೆ 19 (36ಎ, 4x2)

ಇತರೆ: 12 (ಲೆಗ್‌ಬೈ 6, ನೋಬಾಲ್ 2, ವೈಡ್ 4)

ವಿಕೆಟ್ ಪತನ: 1-94 (ರಾಹುಲ್, 29.6), 2-120 (ಜೈಸ್ವಾಲ್, 40.1), 3-140 (ಗಿಲ್, 49.1)), 4-235 (ಸಾಯಿ ಸುದರ್ಶನ್, 73.5)

ಬೌಲಿಂಗ್: ಕ್ರಿಸ್ ವೋಕ್ಸ್ 17-4-43-1; ಜೋಫ್ರಾ ಆರ್ಚರ್ 16-2-44-0; ಬ್ರೈಡನ್ ಕಾರ್ಸ್ 16-1-60-0; ಬೆನ್ ಸ್ಟೋಕ್ಸ್ 14-2-47-2; ಲಿಯಾಮ್ ಡಾಸನ್ 15-1-45-1; ಜೋ ರೂಟ್ 5-0-19-0.

ಕ್ರಿಸ್ ವೋಕ್ಸ್ ಎಸೆತಕ್ಕೆ ಮುರಿದ ಜೈಸ್ವಾಲ್ ಬ್ಯಾಟ್

ಮ್ಯಾಂಚೆಸ್ಟರ್: ಭಾರತದ ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರ ಬ್ಯಾಟ್ ಮುರಿದ ಪ್ರಸಂಗ ಬುಧವಾರ ನಡೆಯಿತು.

ಇನಿಂಗ್ಸ್‌ನಲ್ಲಿ ಇಂಗ್ಲೆಂಡ್ ವೇಗಿ ಕ್ರಿಸ್ ವೋಕ್ಸ್ ಅವರು ಹಾಕಿದ 9ನೇ ಓವರ್‌ನಲ್ಲಿ 127 ಕಿ.ಮೀ ವೇಗದ ಎಸೆತವನ್ನು ಯಶಸ್ವಿ ರಕ್ಷಣಾತ್ಮಕವಾಗಿ ಆಡಿದರು. ಚೆಂಡು ಅಪ್ಪಳಿಸಿದ ವೇಗಕ್ಕೆ ಜೈಸ್ವಾಲ್ ಅವರ ಬ್ಯಾಟಿನ ಹಿಡಿಕೆಯ ಜೋಡಣೆ ಮುರಿಯಿತು. ಆಗ, ಪೆವಿಲಿಯನ್‌ನಲ್ಲಿದ್ದ ಭಾರತ ತಂಡದ ಕರುಣ್ ನಾಯರ್ ಅವರು ಹೊಸ ಬ್ಯಾಟ್ ತಂದು ಕೊಟ್ಟರು. ಕರುಣ್ ಈ ಪಂದ್ಯದಲ್ಲಿ ಹನ್ನೊಂದು ಅಟಗಾರರ ಬಳಗದಲ್ಲಿ ಸ್ಥಾನ ಪಡೆದಿಲ್ಲ.



ಯಶಸ್ವಿ ಜೈಸ್ವಾಲ್ ಅವರ ಮುರಿದ ಬ್ಯಾಟ್ ಪರಿಶೀಲಿಸಿದ ಅಂಪೈರ್ ರಾಡ್ ಟಕರ್

ಭಾರತದ ಆಟಗಾರ್ತಿಗೆ ಮತ್ತೊಂದು ಅಚ್ಚರಿಯ ಗೆಲುವು

ವಿಶ್ವಕಪ್ ಫೈನಲ್‌ಗೆ ದಿವ್ಯಾ ಲಗ್ಗೆ



ದಿವ್ಯಾ ದೇಶಮುಖ್ ಫಿಡೆ ವೆಬ್‌ಸೈಟ್ ಚಿತ್ರ

ಬಟುಮಿ (ಜಾರ್ಜಿಯಾ): ಮತ್ತೊಂದು ಅಚ್ಚರಿಯ ಫಲಿತಾಂಶದಲ್ಲಿ ಭಾರತದ ಐಎಂ ಆಟಗಾರ್ತಿ ದಿವ್ಯಾ ದೇಶಮುಖ್ ಅವರು ಮೂರನೇ ಶ್ರೇಯಾಂಕದ ತಾನ್ ಝೊಂಗ್‌ಯಿ ಅವರಿಗೆ ಆಘಾತ ನೀಡಿದರು. ಐದು ಗಂಟೆಗಳ ದೀರ್ಘ ಹೋರಾಟದಲ್ಲಿ ಚೀನಾದ ಗ್ರ್ಯಾಂಡ್‌ಮಾಸ್ಟರ್ ಆಟಗಾರ್ತಿಯನ್ನು ಮಣಿಸಿ ಫಿಡೆ ಮಹಿಳಾ ಚೆಸ್ ವಿಶ್ವಕಪ್ ಟೂರ್ನಿಯ ಫೈನಲ್ ತಲುಪಿದರು. ಅವರು ಈ ಸಾಧನೆಗೆ ಪಾತ್ರರಾದ ಮೊದಲ ಆಟಗಾರ್ತಿ ಎನಿಸಿದರು.

ಭಾರತದ ಇನ್ನೊಬ್ಬ ಆಟಗಾರ್ತಿ ಹಂಪಿ ಮತ್ತು ಚೀನಾದ ಟಿಂಗ್ಜೀ ಲೀ ನಡುವಣ ಮತ್ತೊಂದು ಸೆಮಿಫೈನಲ್‌ನ ಎರಡನೇ ಆಟ ಡ್ರಾ ಆಯಿತು. ಸ್ಕೋರ್ 1-1 ಆಗಿದ್ದು ಗುರುವಾರ ಅಲ್ಪಾವಧಿಯ ಟೈಬ್ರೇಕ್ ಆಟಗಳ ಮೂಲಕ ವಿಜೇತರ ನಿರ್ಧಾರ ಆಗಲಿದೆ. ಸೆಮಿಫೈನಲ್‌ನಲ್ಲಿ ನಾಗ್ಪುರದ 19 ವರ್ಷ ವಯಸ್ಸಿನ ದಿವ್ಯಾ 1.5-0.5 ರಿಂದ ಝೊಂಗ್‌ಯಿ ವಿರುದ್ಧ ಜಯ ಗಳಿಸಿದರು. ಬುಧವಾರ ನಡೆದ ಸೆಮಿಫೈನಲ್ ಪಂದ್ಯದ ಎರಡನೇ ಕ್ಲಾಸಿಕಲ್ ಆಟದಲ್ಲಿ, ಬಿಳಿ ಕಾಯಿಗಳಲ್ಲಿ ಆಡಿದ ದಿವ್ಯಾ 101 ನಡೆಗಳ ನಂತರ ಮಾಜಿ ಮಹಿಳಾ ವಿಶ್ವ ಚಾಂಪಿಯನ್ ಆಟಗಾರ್ತಿಯನ್ನು ಸೋಲಿಸಿದರು. ಮಂಗಳವಾರ ನಡೆದ ಮೊದಲ ಕ್ಲಾಸಿಕಲ್ ಆಟ ಡ್ರಾ ಆಗಿತ್ತು.

ಆಟ ಅಂತಿಮ ಹಂತ ತಲುಪುತ್ತಿದ್ದಂತೆ ಎರಡು ಪಾನ್‌ಗಳನ್ನು (ಕಾಲಾಳು) ಹೆಚ್ಚುವರಿಯಾಗಿ ಹೊಂದಿದ್ದ ದಿವ್ಯಾ ಅದರ ಲಾಭ ಪಡೆದು ಎದುರಾಳಿಯ ಮೇಲೆ ಒತ್ತಡ ಹೇರುವಲ್ಲಿ ಯಶಸ್ವಿಯಾದರು.

ಈ ಗೆಲುವಿನ ಮೂಲಕ ದಿವ್ಯಾ ಮುಂದಿನ ವರ್ಷದ ಮಹಿಳಾ ಕ್ಯಾಂಡಿಡೇಟ್ಸ್ ಟೂರ್ನಿಗೂ ಸ್ಥಾನ ಕಾದಿರಿಸಿದರು. ಜೊತೆಗೆ ಗ್ರ್ಯಾಂಡ್‌ಮಾಸ್ಟರ್ ನಾರ್ಮ್ ಸಹ ಸಂಪಾದಿಸಿದರು.

ಈ ಟೂರ್ನಿಯಲ್ಲಿ 15ನೇ ಶ್ರೇಯಾಂಕದ ದಿವ್ಯಾ, ಸರ್ಬಿಯಾದ ಇಂಜಾಕ್ ಥಿಯೊಡರಾ ವಿರುದ್ಧ, ಆರನೇ ಕ್ರಮಾಂಕದ ಚೀನಾ ಆಟಗಾರ್ತಿ ಝು ಜಿನೆರ್ ವಿರುದ್ಧ, 10ನೇ ಶ್ರೇಯಾಂಕದ ಸ್ವದೇಶದ ಗ್ರ್ಯಾಂಡ್‌ಮಾಸ್ಟರ್ ದ್ರೋಣವಲ್ಲಿ ಹಾರಿಕ ವಿರುದ್ಧ ಜಯಗಳಿಸಿ ಗಮನ ಸೆಳೆದಿದ್ದಾರೆ.

ಹಾಲಿ ವಿಶ್ವ ಚಾಂಪಿಯನ್ ಆಟಗಾರ್ತಿಗೆ (ಈಗ ಚೀನಾದ ಜು ವೆನ್ಜುನ್) ಸವಾಲು ಹಾಕುವ ಆಟಗಾರ್ತಿಯನ್ನು ನಿರ್ಧರಿಸಲು ನಡೆಯುವ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಎಂಟು ಮಂದಿ ಮಾತ್ರ ಆಡುವ ಅವಕಾಶ ಪಡೆಯುತ್ತಾರೆ. ಈ ವಿಶ್ವಕಪ್‌ನಿಂದ ಮೊದಲ ಮೂರು ಸ್ಥಾನ ಪಡೆದವರು ಅವಕಾಶ ಪಡೆಯುತ್ತಾರೆ.

ನಾಲ್ಕನೇ ಶ್ರೇಯಾಂಕದ ಹಂಪಿ ಮತ್ತು ಅಗ್ರ ಶ್ರೇಯಾಂಕದ ಟಿಂಗ್ಜಿ ಲೀ ನಡುವಣ ಇನ್ನೊಂದು ಸೆಮಿಫೈನಲ್ ಪಂದ್ಯದ ಎರಡನೇ ಆಟ 75 ನಡೆಗಳ ನಂತರ ಡ್ರಾ ಆಯಿತು. ಮಂಗಳವಾರ ಮೊದಲ ಆಟವೂ ಡ್ರಾ ಆಗಿತ್ತು.

ಬಿಳಿ ಕಾಯಿಗಳಲ್ಲಿ ಆಡಿದ ಹಂಪಿ ಒಂದು ಹೆಚ್ಚುವರಿ ಕಾಲಾಳೂ ಹೊಂದಿದ್ದು ಗೆಲುವಿಗೆ ಯತ್ನಿಸಿದರೂ ಹೆಚ್ಚೇನೂ ಸಾಧಿಸಲಾಗಲಿಲ್ಲ.

ಡೋಪಿಂಗ್ ತಡೆಗೆ ಪರಿಷ್ಕೃತ ಮಸೂದೆ

ಕ್ರೀಡಾ ಸಚಿವ ಮಾಂಡವೀಯ ಲೋಕಸಭೆಯಲ್ಲಿ ಮಂಡನೆ

ನವದೆಹಲಿ (ಪಿಟಿಐ): ಭಾರತದ ಕ್ರೀಡಾ ಕ್ಷೇತ್ರದಲ್ಲಿ ಡೋಪಿಂಗ್ ಪಿಡುಗಿಗೆ ಕಡಿವಾಣ ಹಾಕಲು ರಾಷ್ಟ್ರೀಯ ಉದ್ದೀಪನ ಮದ್ದು ತಡೆ (ಪರಿಷ್ಕೃತ) ಮಸೂದೆಯನ್ನು ಬುಧವಾರ ಲೋಕಸಭೆಯಲ್ಲಿ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರು ಮಂಡಿಸಿದರು.

ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕ (ನಾಡಾ)ಕ್ಕೆ 'ಮುಕ್ತ ಕಾರ್ಯಾಚರಣೆ' ಅವಕಾಶ ನೀಡಲು ಈ ಮಸೂದೆ ಸಹಕಾರಿಯಾಗಲಿದೆ ಎಂದು ಹೇಳಲಾಗಿದೆ. ವಾಡಾ (ವಿಶ್ವ ಉದ್ದೀಪನ ಮದ್ದು ತಡೆ ಘಟಕ)ದ ನಿಯಮಾವಳಿಗೆ ತಕ್ಕಂತೆ ಈ ಮಸೂದೆ ರೂಪಿಸಲಾಗಿದೆ.

ಈ ಮಸೂದೆಯಲ್ಲಿ ವಿವಾದಾತ್ಮಕ ಉದ್ದೀಪನ ಮದ್ದು ತಡೆ ರಾಷ್ಟ್ರೀಯ ಮಂಡಳಿಯನ್ನು ಉಳಿಸಿಕೊಳ್ಳಲಾಗಿದೆ. ಆದರೆ 2022ರ ಮೂಲ ಕಾಯಿದೆಯಲ್ಲಿದಂತೆ ನಾಡಾದ ಪ್ರಕರಣಗಳು ಈ ಮಂಡಳಿಯ ವ್ಯಾಪ್ತಿಗೆ ಬರುವುದಿಲ್ಲ.

ಅಲ್ಲದೇ 2022ರ ಕಾಯಿದೆಯನ್ನು ಜಾರಿಗೊಳಿಸಲೂ ಸಾಧ್ಯವಿಲ್ಲ. ಏಕೆಂದರೆ; ಇದರಲ್ಲಿ 'ಸರಕಾರದ ಹಸ್ತಕ್ಷೇಪ' ಇದೆ ಎಂದು ವಾಡಾ ತಕರಾರು ಮಾಡಿತ್ತು.

'2022ರ ಕಾಯಿದೆಯನ್ನು ಜಾರಿಗೊಳಿಸಿದ್ದರೆ ವಾಡಾದಿಂದ ನಿಷೇಧಕ್ಕೊಳಗಾಗುವ ಆತಂಕವಿತ್ತು. ನಮ್ಮ ಉದ್ದೀಪನ ಮದ್ದು ಪರೀಕ್ಷಾ ಪ್ರಯೋಗಾಲಯದ ಮಾನ್ಯತೆಯೂ ರದ್ದಾಗುತ್ತಿತ್ತು. ಆದ್ದರಿಂದ ಕಾಯಿದೆಯಲ್ಲಿ ಪರಿಷ್ಕರಣೆಗಳು ಅಗತ್ಯವಾಗಿದ್ದವು' ಎಂದು ಕ್ರೀಡಾ ಇಲಾಖೆಯ ಮೂಲಗಳು ತಿಳಿಸಿವೆ.

ಹೋದ ವರ್ಷ ವಾಡಾ ಪ್ರಕಟಿಸಿದ್ದ ಪಟ್ಟಿಯಲ್ಲಿ ಅತಿ ಹೆಚ್ಚು ಡೋಪಿಂಗ್ ಪ್ರಕರಣಗಳು ವರದಿಯಾದ ದೇಶಗಳಲ್ಲಿ ಭಾರತ ಅಗ್ರಸ್ಥಾನದಲ್ಲಿತ್ತು. ಆ ಸಂದರ್ಭದಲ್ಲಿ ಭಾರತದಲ್ಲಿ ಈ ಪಿಡುಗಿಗೆ ಕಡಿವಾಣ ಹಾಕಲು 'ಕಠಿಣ ಕ್ರಮ'ಗಳನ್ನು ತೆಗೆದುಕೊಳ್ಳಲಾಗುವುದು ಎಂದು ಕ್ರೀಡಾ ಸಚಿವಾಲಯ ವಾಗ್ದಾನ ಮಾಡಿತ್ತು.

2023ರ ಅಂಕಿ ಸಂಖ್ಯೆಗಳ ಪ್ರಕಾರ; ಭಾರತದ 5606 ಮಾದರಿಗಳಲ್ಲಿ ಅಥ್ಲೀಟ್‌ಗಳಲ್ಲಿ ನಿಷೇಧಿತ ಉದ್ದೀಪನ ಮದ್ದು ಬಳಕೆಯು ಶೇ 3.8ರಷ್ಟಿದೆ ಎಂದು ಅಡ್ವರ್ಸ್ ಅನಾಲಿಟಿಕಲ್ ಫೈಂಡಿಗ್ಸ್ (ಎಎಎಫ್) ಪ್ರಕಟಿಸಿತ್ತು. ಇದು 2022ರಲ್ಲಿದ್ದ 3865 ಪ್ರಕರಣಗಳಿಗಿಂತಲೂ ಹೆಚ್ಚು. ಎಎಎಫ್ ರೇಟ್ ಕೂಡ ಆ ವರ್ಷ ಶೇ 3.2ರಷ್ಟಿತ್ತು.

5606 ಮಾದರಿಗಳ ಪೈಕಿ 2748 ಮಾದರಿಗಳನ್ನು ಸ್ಪರ್ಧೆಗಳ ಸಂದರ್ಭಗಳಲ್ಲಿ ಸಂಗ್ರಹಿಸಲಾಗಿತ್ತು.

ನಿಷೇಧಿತ ಉದ್ದೀಪನ ಮದ್ದು ಬಳಕೆ ಪ್ರಮಾಣದಲ್ಲಿ ಭಾರತವು, ಚೀನಾ (28,197 ಮಾದರಿ; 0.2 ಎಎಫ್ ರೇಟ್), ಅಮೆರಿಕ (6798 ಮಾದರಿ, ಶೇ 1), ಫ್ರಾನ್ಸ್ (11,368 ಮಾದರಿ, ಶೇ 0.9), ಜರ್ಮನಿ (15,153 ಮಾದರಿಗಳಲ್ಲಿ; ಶೇ 0.4) ಮತ್ತು ರಷ್ಯಾ (10,395 ಮಾದರಿ, ಶೇ1) ದೇಶಗಳನ್ನೂ ಹಿಂದಿಕ್ಕಿದೆ.

ಬ್ಯಾಡ್ಮಿಂಟನ್ ತಂಡದ ಆಟಗಾರರ ನಿರ್ಬಂಧ ಪ್ರಕರಣ

ಎಐಯು ಪದಾಧಿಕಾರಿ ವಿರುದ್ಧ ಕ್ರಮ

ನವದೆಹಲಿ (ಪಿಟಿಐ): ಬರ್ಲಿನ್‌ನಲ್ಲಿ ನಡೆಯುತ್ತಿರುವ ವಿಶ್ವ ಯೂನಿವರ್ಸಿಟಿ ಕ್ರೀಡೆಗಳಲ್ಲಿ ಭಾರತ ಬ್ಯಾಡ್ಮಿಂಟನ್ ತಂಡದ ಆರು ಮಂದಿಯ ನಿರ್ಬಂಧ ಪ್ರಕರಣಕ್ಕೆ ಸಂಬಂಧಿಸಿ ಭಾರತೀಯ ವಿಶ್ವವಿದ್ಯಾಲಯಗಳ ಒಕ್ಕೂಟವು (ಎಐಯು) ತನ್ನ ಜಂಟಿ ಕಾರ್ಯದರ್ಶಿ ಬಲ್ಜಿತ್ ಸಿಂಗ್ ಸೆಖೊನ್ ಅವರನ್ನು ಅಮಾನತು ಮಾಡಿದೆ.

ಈ ಎಡವಟ್ಟಿಗೆ ಕಾರಣರಾದ ಅಧಿಕಾರಿಗಳ ವಿಚಾರಣೆ ನಡೆಸಲು ಮೂವರು ಸದಸ್ಯರ ತನಿಖಾ ತಂಡವನ್ನೂ ರಚಿಸಲಾಗಿದೆ.

ಭಾರತ ಬ್ಯಾಡ್ಮಿಂಟನ್ ತಂಡ ವಿಶ್ವ ಯುನಿವರ್ಸಿಟಿ ಕೂಟದಲ್ಲಿ ಕಂಚಿನ ಪದಕ ಗೆದ್ದುಕೊಂಡಿತ್ತು. ಆದರೆ ಆಯ್ಕೆಯಾದ 12 ಮಂದಿಯಲ್ಲಿ ಆರು ಮಂದಿಯ ಹೆಸರುಗಳನ್ನು ತಂಡದ ಸಿಬ್ಬಂದಿ ಜುಲೈ 16ರಂದು ಮ್ಯಾನೇಜರುಗಳ ಸಭೆಯಲ್ಲಿ ಸರಿಯಾಗಿ ನೀಡಿರಲಿಲ್ಲ. ಇದರಿಂದ ಆ ಆರು ಮಂದಿಯನ್ನು ನಿರ್ಬಂಧಿಸಿದ್ದು ಭಾರತ ತಂಡಕ್ಕೆ ಮುಜುಗರದ ಸನ್ನಿವೇಶ ಉಂಟುಮಾಡಿತು.

ಅಂತರರಾಷ್ಟ್ರೀಯ ವಿಶ್ವವಿದ್ಯಾಲಯಗಳ ಕ್ರೀಡಾ ಸಂಸ್ಥೆ (ಎಫ್‌ಐಎಸ್‌ಯು) ಜೊತೆ ಮಾತುಕತೆ ನಡೆಸಿದ ಪರಿಣಾಮ ತಂಡದ ಎಲ್ಲ 12 ಮಂದಿಗೆ ಪದಕಗಳನ್ನು ಮತ್ತು ಪ್ರಮಾಣಪತ್ರಗಳನ್ನು ನೀಡಲಾಗಿದೆ.

ರೋಹನ್ ಕುಮಾರ್, ದರ್ಶನ್ ಪೂಜಾರಿ, ಅದಿತಿ ಭಟ್, ಅವಿನಾಶ್ ಮೊಹಾಂತಿ, ವಿರಾಜ್ ಕುವಳೆ ಮತ್ತು ಅಲಿಶಾ ಖಾನ್ ಅವರು ತಂಡದಲ್ಲಿದ್ದರೂ, ಅಧಿಕಾರಿಗಳ ಅಚಾತುರ್ಯದಿಂದ ಆಡುವ ಅವಕಾಶ ಪಡೆದಿರಲಿಲ್ಲ.

ಸೆಮಿಗೆ ವೈಷ್ಣವಿ: ಭಾರತಕ್ಕೆ ಪದಕ ಖಚಿತ



ಬರ್ಲಿನ್ (ಪಿಟಿಐ): ಮಹಾರಾಷ್ಟ್ರದ ವೈಷ್ಣವಿ ಅಡ್ಕರ್ ಅವರು ಜರ್ಮನಿಯಲ್ಲಿ ನಡೆಯುತ್ತಿರುವ ವಿಶ್ವ ಯೂನಿವರ್ಸಿಟಿ ಗೇಮ್ಸ್‌ನ ಟೆನಿಸ್ ಸ್ಪರ್ಧೆಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಸೆಮಿಫೈನಲ್ ತಲುಪಿದ್ದು, ಭಾರತಕ್ಕೆ ಪದಕ ಖಚಿತವಾಗಿದೆ.

20 ವರ್ಷ ವಯಸ್ಸಿನ ವೈಷ್ಣವಿ ಅವರು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 6-1, 6-4ರಿಂದ ಆತಿಥೇಯ ರಾಷ್ಟ್ರದ ಸೀನಾ ಹರ್ಮನ್ ಎದುರು ಜಯ ಸಾಧಿಸಿದರು.

ಸ್ಲೊವಾಕಿಯಾದ ಈಸ್ಟರ್ ಮೇರಿ ಅವರು ಗುರುವಾರ ನಡೆಯಲಿರುವ ಸೆಮಿಫೈನಲ್ ಪಂದ್ಯದಲ್ಲಿ ವೈಷ್ಣವಿ ಅವರಿಗೆ ಎದುರಾಳಿಯಾಗಲಿದ್ದಾರೆ.

ಈ ಟೂರ್ನಿಯ ಟೆನಿಸ್ ಸ್ಪರ್ಧೆಯಲ್ಲಿ ಭಾರತಕ್ಕೆ ಪದಕ ತಂದುಕೊಟ್ಟ ಎರಡನೇ ಆಟಗಾರ್ತಿ ಎಂಬ ಗೌರವಕ್ಕೂ ವೈಷ್ಣವಿ ಪಾತ್ರರಾಗಿದ್ದಾರೆ. ಈ ಮೊದಲು, 1979ರಲ್ಲಿ ನಂದಲ್ ಬಾಳ್ ಅವರು ಪುರುಷರ ಸಿಂಗಲ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು.

ಸಿಂಧುಗೆ ಮಣಿದ ಮಿಯಾಜಾಕಿ

ಚಾಂಗ್‌ಝೌ (ಪಿಟಿಐ): ವಿಶ್ವದ ಆರನೇ ಕ್ರಮಾಂಕದ ಆಟಗಾರ್ತಿ ಟೊಮೊಕಾ ಮಿಯಾಜಾಕಿ ಅವರನ್ನು ಸೋಲಿಸುವ ಮೂಲಕ ಭಾರತದ ಪಿ.ವಿ.ಸಿಂಧು ಚೀನಾ ಓಪನ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬುಧವಾರ ಭರವಸೆಯ ಆರಂಭ ಮಾಡಿದರು.

ಎರಡು ಒಲಿಂಪಿಕ್ಸ್‌ಗಳಲ್ಲಿ ಪದಕ ಗೆದ್ದಿರುವ ಸಿಂಧು 21-15, 8-21, 21-17 ರಿಂದ ಮಾಜಿ ವಿಶ್ವ ಜೂನಿಯರ್ ಚಾಂಪಿಯನ್ ಮಿಯಾಜಾಕಿ ಅವರನ್ನು ಸೋಲಿಸಿದರು. 62 ನಿಮಿಷಗಳಲ್ಲಿ ಗೆದ್ದ ಹೈದರಾಬಾದಿನ ಆಟಗಾರ್ತಿ ಪ್ರಿಕ್ವಾರ್ಟರ್‌ಫೈನಲ್ ತಲುಪಿದರು.

'ಇದು ನಾನು ಬಹುಕಾಲದಿಂದ ಕಾಯುತ್ತಿದ್ದ ಗೆಲುವು. ಮೊದಲ ಸುತ್ತು ದಾಟುವುದು ನನಗೆ ಬಹಳ ಮಹತ್ವದ್ದಾಗಿತ್ತು' ಎಂದು 30 ವರ್ಷ ವಯಸ್ಸಿನ ಸಿಂಧು ಪ್ರತಿಕ್ರಿಯಿಸಿದರು. 'ನಾನು ಉತ್ತಮ ಆರಂಭ ಮಾಡಿದೆ. ಆದರೆ ಎರಡನೇ ಗೇಮ್‌ನಲ್ಲಿ ನಿಯಂತ್ರಣ ಸಾಧಿಸುವುದು ಕಠಿಣವಾಯಿತು. ಮೂರನೇ ಗೇಮ್‌ನಲ್ಲಿ ಆರಂಭದಲ್ಲೇ ಲೀಡ್ ಪಡೆದು ಅದನ್ನು ಕಾಪಾಡಿಕೊಳ್ಳುವುದು ನನಗೆ ಮುಖ್ಯವಾಗಿತ್ತು' ಎಂದರು.

ಭಾರತದ ಆಟಗಾರ್ತಿ ಮುಂದಿನ ಸುತ್ತಿನಲ್ಲಿ ಸ್ವದೇಶದ ಉದಯೋನ್ಮುಖ ಆಟಗಾರ್ತಿ ಉನ್ನತಿ ಹೂಡಾ ಅವರನ್ನು ಎದುರಿಸಲಿದ್ದಾರೆ.

17 ವರ್ಷ ವಯಸ್ಸಿನ ಉನ್ನತಿ 21-11, 21-16 ರಿಂದ ಎರಡನೆಯ ಬಾರಿ ಕಾಮನ್‌ವೆಲ್ತ್ ಕ್ರೀಡೆಗಳ ಪದಕ ವಿಜೇತೆ, ಸ್ಕಾಟ್ಲೆಂಡ್‌ನ ಕ್ರಿಸ್ಟಿ ಗಿಲ್ಮೊರ್ ಅವರಿಗೆ ಆಘಾತ ನೀಡಿದರು.

ಸಾತ್ವಿಕ್-ಚಿರಾಗ್ ಮುನ್ನಡೆ: ವಿಶ್ವದ 15ನೇ ಕ್ರಮಾಂಕದ ಡಬಲ್ಸ್ ಜೋಡಿಯಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಕೂಡ ಉತ್ತಮ ಆರಂಭ ಮಾಡಿದರು. ಮೊದಲ ಸುತ್ತಿನಲ್ಲಿ ಜಪಾನ್‌ನ ಕೆನ್ಯಾ ಮಿತ್ಸುಹಶಿ- ಹಿರೋಕಿ ಒಕಾಮುರಾ ಅವರನ್ನು 21-13, 21-9 ರಿಂದ ಸೋಲಿಸಿದರು.

ಆದರೆ ಮಹಿಳೆಯರ ಡಬಲ್ಸ್‌ನಲ್ಲಿ ರುತುಪರ್ಣಾ ಪಂಡಾ- ಶ್ವೇತಪರ್ಣಾ ಪಂಡಾ ಜೋಡಿ 12-21, 13-21 ರಲ್ಲಿ ಹಾಂಗ್‌ಕಾಂಗ್‌ನ ಗಾ ಟಿಂಗ್ ಇಯುಂಗ್- ಪುಯಿ ಲಾಮ್ ಇಯುಂಗ್ ಜೋಡಿಯನ್ನು ಸೋಲಿಸಿತು. ಎರಡೂ ಜೋಡಿಗಳಲ್ಲಿದ್ದವರು ಅಕ್ಕ-ತಂಗಿಯರು ಎನ್ನುವುದು ವಿಶೇಷ.

ಸಂಕ್ಷಿಪ್ತ ಸುದ್ದಿ

ತನ್ವಿ ಶರ್ಮಾ, ವೆನ್ನಲ ಮುನ್ನಡೆ

ಸೋಲೊ (ಇಂಡೊನೇಷ್ಯಾ), (ಪಿಟಿಐ): ಭಾರತದ ಉದಯೋನ್ಮುಖ ಆಟಗಾರ್ತಿ ತನ್ವಿ ಶರ್ಮಾ ಅವರು ಏಷ್ಯಾ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಸಿಂಗಲ್ಸ್ ಮೂರನೇ ಸುತ್ತಿಗೆ ಮುನ್ನಡೆದರು.

ಎರಡನೇ ಶ್ರೇಯಾಂಕದ ತನ್ವಿ ಬುಧವಾರ ಎರಡನೇ ಸುತ್ತಿನಲ್ಲಿ 21-6, 21-6 ರಿಂದ ಯುಎಇಯ ವೈದೇಹಿ ಕಾಳಿದಾಸನ್ ಅವರನ್ನು ಸೋಲಿಸಿದರು. 16 ವರ್ಷ ವಯಸ್ಸಿನ ತನ್ವಿ ಮೊದಲ ಸುತ್ತಿನಲ್ಲಿ ಬೈ ಪಡೆದಿದ್ದರು.

ವೆನ್ನಲ ಕಲಗೊಟ್ಲ ಮತ್ತು ತನ್ವಿ ರೆಡ್ಡಿ ಅಂದ್ಲೂರಿ ಸಹ ಮೂರನೇ ಸುತ್ತಿಗೆ ಮುನ್ನಡೆದರು. ಕಲಗೊಟ್ಲ 21-6, 21-10 ರಿಂದ ಕಜಕಸ್ತಾನದ ಅಲಿಸಾ ಕುಲಶೋವಾ ಅವರನ್ನು, ಅಂದ್ಲೂರಿ 21-9, 21-10 ರಿಂದ ಮಕಾವುವಿನ ಉಂಗ್ ಚಿಯೊಕ್ ಇಯಾನ್ ಅವರನ್ನು ಮಣಿಸಿದರು.

ಪುರುಷರ ಸಿಂಗಲ್ಸ್‌ನಲ್ಲಿ ಅನ್ಷ್ ನೇಗಿ ಮತ್ತು ಪ್ರಣವ್ ರಾಮ್ ನಾಗಲಿಂಗ್ ಸಹ ನೇರ ಸೆಟ್‌ಗಳ ಗೆಲುವಿನೊಡನೆ ಮೂರನೇ ಸುತ್ತಿಗೆ ತಲುಪಿದರು. ನೇಗಿ 21-16, 21-15 ರಿಂದ ಸಿಂಗಪುರದ ಡಿಂಗ್ ಹಾನ್ ಜಿನ್ ಅವರನ್ನು, ಪ್ರಣವ್ 21-15, 21-7 ರಿಂದ ಮ್ಯಾನ್ಮಾರ್‌ನ ಲಾಲ್ ಝುಯಿಡಿಕ ಅವರನ್ನು ಹಿಮ್ಮೆಟ್ಟಿಸಿದರು. ಭಾರತದ ಇಬ್ಬರಿಗೂ ಮೊದಲ ಸುತ್ತಿನಲ್ಲಿ ಬೈ ದೊರಕಿತ್ತು.

ಪುನರಾಗಮನದಲ್ಲಿ ಗೆದ್ದ ವೀನಸ್



ವೀನಸ್

ವಾಷಿಂಗ್ಟನ್ (ಎಪಿ): 16 ತಿಂಗಳ ನಂತರ ಸ್ಪರ್ಧಾತ್ಮಕ ಟೆನಿಸ್‌ಗೆ ಮರಳಿದ ವೀನಸ್ ವಿಲಿಯಮ್ಸ್ ಅವರು ಡಬ್ಲ್ಯುಟಿಎ ಡಿಸಿ ಓಪನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನ ಪಂದ್ಯ ಗೆದ್ದರು. 45 ವರ್ಷ ವಯಸ್ಸಿನ ವೀನಸ್, 2004ರ ನಂತರ ಡಬ್ಲ್ಯುಟಿಎ ಸಿಂಗಲ್ಸ್ ಪಂದ್ಯ ಗೆದ್ದ ಅತಿ ಹಿರಿಯ ಆಟಗಾರ್ತಿ ಎನಿಸಿದರು.

ಏಳು ಗ್ರ್ಯಾನ್‌ಸ್ಲಾಮ್ ಸಿಂಗಲ್ಸ್ ಪ್ರಶಸ್ತಿ ಗೆದ್ದಿರುವ ಅಮೆರಿಕದ ಅನುಭವಿ ಆಟಗಾರ್ತಿ ಮಂಗಳವಾರ ನಡೆದ ಪಂದ್ಯದಲ್ಲಿ 6-3, 6-4 ರಿಂದ ಸ್ವದೇಶದ ಪೇಟನ್ ಸ್ಟಿಯರ್ನ್ಸ್ ಅವರನ್ನು ಮಣಿಸಿದರು. 21 ವರ್ಷಗಳ ಹಿಂದೆ ಅಮೆರಿಕದ ಮಾರ್ಟಿನಾ ನವ್ರಾಟಿಲೋವಾ 47ನೇ ವಯಸ್ಸಿನಲ್ಲಿ ವಿಂಬಲ್ಡನ್‌ನಲ್ಲಿ ಪಂದ್ಯ ಗೆದ್ದಿದ್ದು ಈ ಹಿಂದಿನ ದಾಖಲೆಯಾಗಿದೆ.

ಈ ಪಂದ್ಯ ಗೆಲ್ಲಲು ವೀನಸ್ 97 ನಿಮಿಷ ತೆಗೆದುಕೊಂಡರು. ಇದು ಡಬ್ಲ್ಯುಟಿಎ ಸಿಂಗಲ್ಸ್‌ನಲ್ಲಿ ಅವರಿಗೆ 819ನೇ ಗೆಲುವು. ಭರ್ಜರಿ ಸರ್ವ್‌ಗಳ ಜೊತೆ ಪ್ರಬಲ ಗ್ರೌಂಡ್‌ಸ್ಟ್ರೋಕ್‌ಗಳನ್ನು ಅವರು ಆಡಿದರು. ವಿಶೇಷ ಎಂದರೆ ಪೇಟನ್ (23 ವರ್ಷ) ಹುಟ್ಟುವ ಮೊದಲೇ ವೀನಸ್ 4 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಜಯಿಸಿದ್ದರು.

2024ರ ಮಾರ್ಚ್ ನಂತರ ವಿಲಿಯಮ್ಸ್ ಯಾವುದೇ ಡಬ್ಲ್ಯುಟಿಎ ಪಂದ್ಯ ಆಡಿರಲಿಲ್ಲ.



ಆಂಡ್ರೆ ರಸೆಲ್ ಅವರಿಗೆ ನಿವೃತ್ತಿಯ ನೆನಪಿನ ಕಾಣಿಕೆ ನೀಡಲಾಯಿತು. ಅವರಿಗೆ ವೆಸ್ಟ್ ಇಂಡೀಸ್– ಆಸ್ಟ್ರೇಲಿಯಾ ತಂಡಗಳ ಆಟಗಾರರು ಗೌರವ ರಕ್ಷೆ ನೀಡಿದರು ಎಎಫ್‌ಪಿ ಚಿತ್ರ

ಆಸ್ಟ್ರೇಲಿಯಾಕ್ಕೆ ಸುಲಭ ಜಯ

ಕಿಂಗ್‌ಸ್ಟನ್ (ಜಮೈಕಾ), (ಎಎಫ್‌ಪಿ): ಆಲ್‌ರೌಂಡರ್ ಆಂಡ್ರೆ ರಸೆಲ್ ತಮ್ಮ ನಿವೃತ್ತಿ ಮೊದಲಿನ ಅಂತಿಮ ಇನಿಂಗ್ಸ್‌ನಲ್ಲಿ 15 ಎಸೆತಗಳಲ್ಲಿ 36 ರನ್ ಗಳಿಸಿ ಮಿಂಚಿದರು. ಆದರೆ ವೆಸ್ಟ್ ಇಂಡೀಸ್ ತಂಡಕ್ಕೆ ಟಿ20 ಸರಣಿಯ ಎರಡನೇ ಪಂದ್ಯದಲ್ಲಿ ಮಂಗಳವಾರ ಆಸ್ಟ್ರೇಲಿಯಾ ಎದುರು ಸೋಲು ತಪ್ಪಲಿಲ್ಲ.

ತಮ್ಮ ತವರು ಸಬಿನಾ ಪಾರ್ಕ್ ಕ್ರೀಡಾಂಗಣದಲ್ಲಿ 37 ವರ್ಷ ವಯಸ್ಸಿನ ರಸೆಲ್ ನಾಲ್ಕು ಸಿಕ್ಸರ್, ಎರಡು ಬೌಂಡರಿಗಳನ್ನು ಬಾರಿಸಿದರು. ಇದು ಟಿ20ಯಲ್ಲಿ ಅವರ 85ನೇ ಇನಿಂಗ್ಸ್. ಅವರು ಒಂದು ಟೆಸ್ಟ್ ಮಾತ್ರ ಆಡಿದ್ದಾರೆ.

ವೆಸ್ಟ್ ಇಂಡೀಸ್ 8 ವಿಕೆಟ್‌ಗೆ 172 ರನ್ ಗಳಿಸಿತು. ಆರಂಭ ಆಟಗಾರ ಬ್ರಾಂಡನ್ ಕಿಂಗ್ ಮತ್ತು ಏಳನೇ ಕ್ರಮಾಂಕದಲ್ಲಿ ರಸೆಲ್ ಬಿಟ್ಟರೆ ಉಳಿದವರು ವಿಫಲರಾದರು. ಆ್ಯಡಂ ಜಂಪಾ 29 ರನ್ನಿಗೆ 3 ವಿಕೆಟ್ ಪಡೆದರು.

ಜೋಸ್ ಇಂಗ್ಲಿಸ್ (ಔಟಾಗದೇ 78, 33ಎ) ಮತ್ತು ಕ್ಯಾಮರೂನ್ ಗ್ರೀನ್ (ಔಟಾಗದೇ 56) ಮುರಿಯದ ಮೂರನೇ ವಿಕೆಟ್‌ಗೆ 131 ರನ್ ಸೇರಿಸಿ, ಆಸ್ಟ್ರೇಲಿಯಾ ತಂಡ 4.4 ಓವರುಗಳಿರುವಂತೆ ಎಂಟು ವಿಕೆಟ್‌ಗಳಿಂದ ಪಂದ್ಯ ಗೆಲ್ಲಲು ನೆರವಾದರು. 5 ಪಂದ್ಯಗಳ ಸರಣಿಯಲ್ಲಿ ಕಾಂಗರೂ ಪಡೆ 2-0 ಮುನ್ನಡೆ ಪಡೆಯಿತು.

ಇಂಗ್ಲಿಸ್ ಬಿರುಸಿನ ಆಟವಾಡಿ ಏಳು ಬೌಂಡರಿ, ಐದು ಸಿಕ್ಸರ್ ಬಾರಿಸಿದರು. ಪಂದ್ಯದ ಆಟಗಾರ ಪ್ರಶಸ್ತಿ ಅವರಿಗೆ ಒಲಿಯಿತು.

ಪಂದ್ಯಕ್ಕೆ ಮೊದಲು ಎರಡೂ ತಂಡಗಳ ಆಟಗಾರರು ರಸೆಲ್ ಅವರಿಗೆ ಗೌರವ ರಕ್ಷೆ ನೀಡಿದರು. ಟಿ20 ಪರಿಣತರೆನಿಸಿದ ಅವರು 2012 ಮತ್ತು 2016ರಲ್ಲಿ ಟಿ20 ವಿಶ್ವಕಪ್ ಗೆದ್ದ ವೆಸ್ಟ್ ಇಂಡೀಸ್ ತಂಡದಲ್ಲಿ ಆಡಿದ್ದರು.

Hero

NEW Splendor+ XTEC 2.0

ಅತ್ಯುತ್ತಮವು ಇನ್ನೂ ಅತ್ಯುತ್ತಮವಾಗಿದೆ

ಕಡಿಮೆ ಡೌನ್‌ಪೇಮೆಂಟ್ ₹1,999ರಿಂದ ಪ್ರಾರಂಭ



73 km/l ಸಾಟಿಯಿಲ್ಲದ ಮೈಲೇಜ್**

	HF 100	HF Dlx Self	Spl + Self	Spl + Xtec 2.0
Ex-showroom price	49999	70568	79476	85501
Road Tax & Charges	7612	11462	12648	13451
Insurance	6389	6845	7042	7176
On-Road Price	**64000**	**88875**	**99166**	**106128**

**Mileage of Splendor xtec 2.0 as per internal testing under standard conditions and may vary as per road & riding conditions.

Toll Free Number: 1800 266 0018

INDIA'S FIRST 5 YEAR WARRANTY* *Conditions apply

$ADDITIONAL CASH DISCOUNT AVAILABLE ON Flipkart | amazon

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. **As per the cumulative dispatch number till March 2023. ≠Highest sales for any 2 Wheeler Corporate Entity in the world for Calendar Year 2022 - Data source: DNA Consult & Advisory's report Assessment of Global Two Wheelers Market (CY22). ^^Based on offers from empanelled dealers on Wheels of Trust platform. ^Finance offer is at the sole discretion of the Financier, subject to its respective T&Cs. Available at select dealerships. *Offer amount and combination of offer may vary for model/variant and states and it is applicable on select models only. For more details, please visit your nearest authorised Hero outlet. ##Available on purchase of Hero Good Life membership. Applicable on select models only. $Flipkart offer is subject to the sole discretion & T&Cs of Flipkart. $Amazon offers are subject to the sole discretion & T&Cs of Amazon.

AUTHORISED DEALER - BENGALURU - HOSUR ROAD: RT KRISHNA HERO - PH: 9289923177. LALBAGH ROAD: PRAKASH HERO - PH: 9289922117. BYATARAYANAPURA: BIMAL HERO - PH: 9289922863. PEENYA: SAI HERO - PH: 9289922830. HOSUR ROAD: RT KRISHNA HERO - PH: 9289923177. BANASHANKARI: SAI HERO - PH: 9289922476. BANASWADI: BHAGATH HERO - PH: 9289922738. MAGADI ROAD: POORNA HERO - PH: 9289923212. MARATHALLI: VAAYURATHA HERO - PH: 9289923811. RAJAJI NAGAR: MAX HERO - PH: 9289923023. KOLAR: SAI BALAJI HERO - PH: 9821745024. CHIKKABALLAPUR: MANJUNATH HERO - PH: 9821751332. TUMKUR: SAI HERO - PH: 9289922986. B.H.ROAD - SAI HERO - PH: 7022752841. KAMAKSHIPALYA: POORNA MOTORS - PH: 9606922534. JP NAGAR: SAI HERO - PH: 99002 36280. KANAKPURA ROAD: SAI HERO - PH: 8904677394. HOSKOTE: BHAGATH HERO - PH: 8884600051. K R PURAM: BHAGATH HERO - PH: 7829488706. JIGANI: RT KRISHNA HERO - PH: 8762860999. RT NAGAR: BIMAL HERO - PH: 9535327710. TIPTUR: SAI HERO - PH: 9164840456. KUNIGAL: SAI HERO - PH: 7022752858. DODDABALLAPURA: BIMAL HERO - PH: 9742202125.

ASSOCIATE DEALER: BELATHUR - 9902649569. MADIWALA - 9731660639. BANASHANKARI 3RD STAGE - 9513353864. BANNERGHATTA ROAD - 41209619. KENGERI - 9739275523. YELAHANKA - 28462524, 9341025589. MYSORE ROAD:9611997733. DEVANAHALLI - 9964560599. KANAKAPURA - 9880212346. BAGEPALLI - 282828. SRINIVASPUR - 9738504002. SIDLAGHATTA - 254827. NELAMANGALA - 27723395. PAVAGADA - 9740324639. MADHUGIRI - 9972278989. VIJAYAPURA: 9449619920. SIRA: 9448417393. CHANDAPURA: 9481329064. VIDYARANYAPURA: 9606934533. MAGADI: 9482090890